ಶ್ರೀಮದಯ್ಯಣ್ಣದೀಕ್ಷಿತ ವಿರಚಿತ

# ವ್ಯಾಸತಾತ್ಪರ್ಯನಿರ್ಣಯ

(ಕನ್ನಡ ಅನುವಾದ)

ಅನುವಾದ :
ವಿದ್ವಾನ್ ಎನ್. ರಂಗನಾಥಶರ್ಮಾ

ಉದಯ ಪ್ರಕಾಶನ
ರಾಜಾಜಿನಗರ, ಬೆಂಗಳೂರು-560 010.

ಶ್ರೀಮದಯ್ಯಣ್ಣದೀಕ್ಷಿತ ವಿರಚಿತ

# ವ್ಯಾಸತಾತ್ಪರ್ಯನಿರ್ಣಯ

(ಕನ್ನಡ ಅನುವಾದ)

ಅನುವಾದ :
**ವಿದ್ವಾನ್ ಎನ್. ರಂಗನಾಥಶರ್ಮಾ**

**ಉದಯ ಪ್ರಕಾಶನ**
ನಂ. 984, 11ನೇ 'ಎ' ಮುಖ್ಯರಸ್ತೆ,
3ನೇ ವಿಭಾಗ, ರಾಜಾಜಿನಗರ
ಬೆಂಗಳೂರು- 10. ದೂರವಾಣಿ : 3389143

VYĀSA TĀTPARYA NIRṆAYA
of Śrī Ayyanna Dīkṣita,
Translated into Kannada by
Vidwan N. Ranganatha Sharma,

Published by M.S. Srinivasa Rao,
Udaya Prakashana,
No.984, 11th 'A' Main Road,
3rd Block, Rajajinagar, Bangalore - 10.
Phone : 3389143

No. of Pages : XXII + 132

First Edition : 1995

Typeset & Printed at : **Vāgartha Printonics**
Bangalore-4, Ph.: 627677

# ಭಗವಾನ್ ವೇದವ್ಯಾಸರು



ಅಭ್ರಶ್ಯಾಮಃ ಪಿಂಗಜಟಾಬದ್ಧಕಲಾಪಃ ಪ್ರಾಂಶುರ್ದಂಡೀ ಕೃಷ್ಣಮೃಗತ್ವಕ್ಪರಿಧಾನಃ ।
ಸಾಕ್ಷಾಲ್ಲೋಕಾನ್ ಪಾವಯಮಾನಃ ಕವಿಮುಖ್ಯಃ ಪಾರಾಶರ್ಯಃ ಸರ್ವಸ್ವರೂಪಂ ವಿವೃಣೋತು ॥

# ಪ್ರಸ್ತಾವನೆ

ವೈದಿಕಷಡ್‌ದರ್ಶನಗಳಲ್ಲಿ ವೇದಾಂತದರ್ಶನವು ಪ್ರಮುಖವಾದದ್ದು. ವೇದಾಂತಭೇದಗಳೆನಿಸಿದ ಅದ್ವೈತ, ದ್ವೈತ, ವಿಶಿಷ್ಟಾದ್ವೈತಾದಿಗಳಲ್ಲಿ ಭಾರತೀಯರಿಗಿರುವ ಶ್ರದ್ಧಾಪೂರ್ವಕವಾದ ಆದರವು ಇತರ ಸಾಂಖ್ಯಾದಿದರ್ಶನಗಳಲ್ಲಿಲ್ಲ. ಇತರ ದರ್ಶನಗಳು ಜ್ಞಾನಭಂಡಾರವನ್ನು ಶ್ರೀಮಂತಗೊಳಿಸಿದರೂ ಪಾರಮಾರ್ಥಿಕವಾದ ಶ್ರೇಯಸ್ಸು ವೇದಾಂತ-ದಿಂದಲೇ ನಮಗೆ ಲಭಿಸುತ್ತದೆಯೆಂಬ ನಂಬಿಕೆ ಜನರಲ್ಲಿ ದೃಢವಾಗಿ ನಿಂತಿದೆ. ಆದ್ದರಿಂದಲೇ ಭಗವದ್ಗೀತೆ ಮತ್ತು ಉಪನಿಷತ್ತುಗಳ ಅಧ್ಯಯನದಲ್ಲಿ ಜನರು ವಿಶೇಷವಾದ ಆಸಕ್ತಿಯನ್ನು ತಳೆದಿದ್ದಾರೆ.

**ತಾವದ್ ಗರ್ಜಂತಿ ಶಾಸ್ತ್ರಾಣಿ ಜಂಬುಕಾ ವಿಪಿನೇ ಯಥಾ ।**
**ನ ಗರ್ಜತಿ ಮಹಾಶಕ್ತಿರ್ಯಾವದ್ ವೇದಾಂತಕೇಸರೀ ॥**

''ಕಾಡಿನಲ್ಲಿ ನರಿಗಳು ಕೂಗುವಂತೆ ಇತರ ಶಾಸ್ತ್ರಗಳು ಕೂಗಾಡುತ್ತವೆ. ಮಹಾಶಕ್ತಿಶಾಲಿಯಾದ ವೇದಾಂತಕೇಸರಿಯು ಎಲ್ಲಿಯವರೆಗೆ ಗರ್ಜಿಸುವು-ದಿಲ್ಲವೋ ಅಲ್ಲಿಯವರೆಗೆ ಮಾತ್ರ ಅವುಗಳ ಕೂಗು'' ಎಂಬ ಮಾತು ಅಕ್ಷರಶಃ ಸತ್ಯವಾದದ್ದು.

ವೇದಾಂತವೆಂದರೆ ಉಪನಿಷತ್ ಎಂದರ್ಥ. ಸಂಹಿತೆ, ಬ್ರಾಹ್ಮಣ, ಆರಣ್ಯಕ ಎಂಬ ವೇದವಿಭಾಗಗಳಲ್ಲಿ ಕಡೆಯದಾದ ಆರಣ್ಯಕದ ಅಂತ್ಯದಲ್ಲಿ ಉಪನಿಷತ್ತುಗಳು ಬರುತ್ತವೆ. ವೇದಗಳ ಅಂತ್ಯದಲ್ಲಿ ಪಠಿತವಾದ್ದರಿಂದ ಉಪನಿಷತ್ತಿಗೆ ವೇದಾಂತವೆಂದು ಹೆಸರು. ಅಂತಶಬ್ದಕ್ಕೆ ಸಿದ್ಧಾಂತ-ವೆಂದೂ ಅರ್ಥವಿದೆ. ನಿಖಿಲವೇದಗಳ ಪರಮಸಿದ್ಧಾಂತವೇ ಉಪನಿಷತ್. ಆದ್ದರಿಂದ ವೇದಾಂತವೆಂಬ ಹೆಸರು ಬಂದಿರಬಹುದು. ವೇದಾಂತಿಗಳಿಗೆ ಉಪನಿಷದ್ವಾದಿಗಳೆಂದೂ ಔಪನಿಷದರೆಂದೂ ಶಾಸ್ತ್ರಗಳಲ್ಲಿ ವ್ಯವಹಾರ-ವಿದೆ. ಸಾಂಖ್ಯ , ವೈಶೇಷಿಕ, ನ್ಯಾಯದರ್ಶನಗಳು ಯುಕ್ತಿಪ್ರಧಾನವಾದವು. ಅವು ವೇದವನ್ನು ಪ್ರಮಾಣವೆಂದು ಅಂಗೀಕರಿಸುತ್ತವೆಯಾದರೂ ತಮಗೆ

ಸೂಕ್ತವೆನಿಸಿದ ಒಂದೆರಡು ವೇದವಾಕ್ಯಗಳನ್ನು ಉದಾಹರಿಸುತ್ತವೆಯೇ ಹೊರತು ಸಮಗ್ರ ವೇದವಾಕ್ಯಗಳನ್ನು ಪರಿಶೀಲಿಸುವುದಿಲ್ಲ. ಈ ದರ್ಶನಗಳು ತರ್ಕವನ್ನೇ ಮುಖ್ಯವಾಗಿ ಅವಲಂಬಿಸಿರುವುದರಿಂದ ಈ ದಾರ್ಶನಿಕರಿಗೆ ತಾರ್ಕಿಕರೆಂದು ಹೆಸರು ಬಂದಿದೆ. ಯೋಗಶಾಸ್ತ್ರವು ಕೈವಲ್ಯದ ಸಾಧನೋಪಾಯಗಳನ್ನು ತಿಳಿಸಿಕೊಡುತ್ತದೆ. ಇದರ ಪ್ರಕ್ರಿಯೆ ಸಾಂಖ್ಯವನ್ನವಲಂಬಿಸಿರುವುದರಿಂದ ಇದು ಸಾಂಖ್ಯದ ಪೂರಕದರ್ಶನ-ವೆಂದರೆ ತಪ್ಪಾಗದು. ಜೈಮಿನಿಮುನಿಗಳ ಮೀಮಾಂಸೆಯು ಕರ್ಮ-ಕಾಂಡದ ವೇದವಾಕ್ಯಗಳನ್ನೇ ವಿಚಾರಿಸುತ್ತಾ ಧರ್ಮಕರ್ಮಗಳ ಜಿಜ್ಞಾಸೆ-ಯನ್ನು ಮಾಡುತ್ತದೆ. ಅದ್ವೈತಪರವಾದ ಉಪನಿಷದ್ವಾಕ್ಯಗಳು ಕ್ರಿಯಾ-ಜನಕವಾಕ್ಯಗಳಲ್ಲವಾದ್ದರಿಂದ ಅರ್ಥವಾದಗಳೆಂದು ಹೇಳುತ್ತದೆ. ಜ್ಞಾನ ಕಾಂಡವನ್ನು ಗೌಣಪಕ್ಷಕ್ಕೆ ತಳ್ಳಿಬಿಡುತ್ತದೆ. ವೇದಾಂತದರ್ಶನವಾದರೋ ಜ್ಞಾನಕಾಂಡವೇ ಮುಖ್ಯವಾದ್ದೆಂದೂ ಕರ್ಮಕಾಂಡವು ಚಿತ್ತಶುದ್ಧಿ ಸಂಪಾದನದ್ವಾರಾ ತತ್ತ್ವಜ್ಞಾನಕ್ಕೆ ಸಹಕಾರಿಯೇ ಹೊರತು ಪ್ರಧಾನವಲ್ಲ-ವೆಂದೂ ನಿಶ್ಚಯಿಸುತ್ತದೆ. ವೇದದ ಪೂರ್ವಭಾಗವಾದ ಕರ್ಮಕಾಂಡದ ಮೀಮಾಂಸೆ ಇರುವುದರಿಂದ ಜೈಮಿನೀಯದರ್ಶನಕ್ಕೆ ಪೂರ್ವಮೀಮಾಂಸೆ-ಯೆಂದೂ ಉತ್ತರಭಾಗವಾದ ಉಪನಿಷತ್ತುಗಳ ಮೀಮಾಂಸೆ ಇರುವುದರಿಂದ ಬಾದರಾಯಣಾಚಾರ್ಯರ ಶಾರೀರಕಸೂತ್ರಗಳಿಗೆ ಉತ್ತರಮೀಮಾಂಸೆ-ಯೆಂದೂ ವ್ಯವಹಾರವಿದೆ. ವೇದಾಂತದರ್ಶನದ ಅಡಿಗಲ್ಲು ಶಾರೀರಕ-ಸೂತ್ರಗಳು. ಇವುಗಳಿಗೆ ಬ್ರಹ್ಮಸೂತ್ರಗಳೆಂದೂ ಹೆಸರಿದೆ. ಗಮನಾರ್ಹ-ವಾದ ವಿಶೇಷವೇನೆಂದರೆ, ಬಾದರಾಯಣಾಚಾರ್ಯರ ಶಾರೀರಕ ಸೂತ್ರಗಳು ಕೇವಲಾದ್ವೈತವನ್ನು ಪ್ರತಿಪಾದಿಸುತ್ತವೆಯೆಂದು ಶ್ರೀ ಶಂಕರಾ ಚಾರ್ಯರ ಸಿದ್ಧಾಂತ. ಉಳಿದ ಸಾಂಖ್ಯಾದಿ ವೈದಿಕದರ್ಶನಗಳೂ ಜೈನದರ್ಶನವೇ ಮೊದಲಾದ ಅವೈದಿಕದರ್ಶನಗಳೂ ದ್ವೈತವನ್ನು ಅಂಗೀಕರಿಸುತ್ತವೆ.

ಬ್ರಹ್ಮಸೂತ್ರಗಳನ್ನು ರಚಿಸಿದವರು ಬಾದರಾಯಣರೆಂದು ಶ್ರೀ ಶಂಕರಭಾಷ್ಯದಲ್ಲಿ ಸ್ಪಷ್ಟವಾಗಿ ಬರೆದಿದೆ. ಬಾದರಾಯಣರೇ ವ್ಯಾಸರೆಂದು

ವ್ಯಾಖ್ಯಾನಕಾರರೂ ಮತ್ತಿತರ ಕೆಲವು ಭಾಷ್ಯಕಾರರೂ ಹೇಳುತ್ತಾರೆ. ಆಚಾರ್ಯರ ಪ್ರಸ್ಥಾನತ್ರಯಭಾಷ್ಯವನ್ನು ಪರಿಶೀಲಿಸಿದರೂ ಬಾದ-ರಾಯಣ, ವ್ಯಾಸ- ಈ ಎರಡು ಹೆಸರುಗಳೂ ಒಬ್ಬರದೇ ಎನ್ನುವುದಕ್ಕೆ ಆಧಾರವೇನೂ ದೊರೆಯುವುದಿಲ್ಲ. ಬ್ರಹ್ಮಸೂತ್ರಕಾರರು ವ್ಯಾಸರೆಂದೇ ಅನಂತರದ ಗ್ರಂಥಕಾರರು ಹೇಳುತ್ತಾರೆ. ವೈಯಾಸಿಕನ್ಯಾಯಮಾಲಾ ಎಂದು ಪ್ರಸಿದ್ಧವಾದ ಶ್ರೀವಿದ್ಯಾರಣ್ಯರ ಗ್ರಂಥವೇ ಇದಕ್ಕೆ ಸಾಕ್ಷಿ. ಪ್ರಕೃತ-ದಲ್ಲಿ 'ವ್ಯಾಸತಾತ್ಪರ್ಯನಿರ್ಣಯ'ವೆಂಬ ಈ ಗ್ರಂಥವನ್ನು ವಿರಚಿಸಿರುವ ಅಯ್ಯಣ್ಣ ದೀಕ್ಷಿತರಿಗೆ ಬ್ರಹ್ಮಸೂತ್ರಗಳನ್ನು ಬರೆದವರು ವ್ಯಾಸರೆಂಬ ವಿಷಯದಲ್ಲಿ ಯಾವ ಶಂಕೆಯೂ ಇರಲಿಲ್ಲವೆಂಬುದು ಸ್ಪಷ್ಟವಾಗಿದೆ.

ವ್ಯಾಸಮುನಿಗಳ ಈ ಸೂತ್ರಗಳು ನಮ್ಮ ಶರೀರದಲ್ಲಿರುವ ಆತ್ಮನ ಸ್ವರೂಪವನ್ನು ನಿರ್ಧರಿಸುವುದರಿಂದ ಶಾರೀರಕಸೂತ್ರಗಳೆಂದೂ ಈ ಆತ್ಮನೇ ಬ್ರಹ್ಮವೆಂದು ಪ್ರತಿಪಾದಿಸುವುದರಿಂದ ಬ್ರಹ್ಮಸೂತ್ರಗಳೆಂದೂ ವಿಖ್ಯಾತವಾಗಿವೆ. ವೇದಾಂತದರ್ಶನಕ್ಕೆ ಉಪನಿಷದ್ವಾಕ್ಯಗಳೇ ಪ್ರಮಾಣಭೂತ-ವಾದವು. ಈ ವಾಕ್ಯಗಳಿಗೆ ಆಪಾತದಲ್ಲಿ ಪ್ರತೀತವಾಗುವ ಪರಸ್ಪರ ವಿರೋಧವನ್ನು ಪರಿಹರಿಸಿ ಏಕವಾಕ್ಯತೆಯನ್ನುಂಟುಮಾಡುವುದೂ ವೇದ-ವಿರುದ್ಧವಾದ ಸಾಂಖ್ಯಾದಿ ಸಿದ್ಧಾಂತಗಳನ್ನು ಖಂಡಿಸಿ ವೇದಾಂತ-ದರ್ಶನವನ್ನು ಸ್ಥಾಪಿಸುವುದೂ ಬ್ರಹ್ಮಸೂತ್ರಗಳ ಧ್ಯೇಯವಾಗಿದೆ. ವೇದಾಂತಸಿದ್ಧಾಂತವೇನೆಂಬುದು ಈ ವ್ಯಾಸಸೂತ್ರಗಳನ್ನವಲಂಬಿಸಿದೆ.

ಆದರೆ, ನಮ್ಮ ದುರ್ದೈವವೋ ಎಂಬಂತೆ, ಈ ಸೂತ್ರಗಳ ಅರ್ಥವು ನಮಗೆ ದುರ್ಬೋಧವಾಗಿದೆ. 'ಸ್ಮೃತೇಶ್ಚ', 'ಶ್ರುತೇಶ್ಚ' 'ದರ್ಶಯತಿ ಚ' 'ಪೃಥಗುಪದೇಶಾತ್' 'ಪ್ರತಿಷೇಧಾಚ್ಚ' - ಇತ್ಯಾದಿ ಸೂತ್ರಗಳ ಅರ್ಥವನ್ನು ನಿರ್ಣಯಿಸುವುದು ಕಠಿಣವೇ ಸರಿ. ಅಲ್ಲದೆ ಬ್ರಹ್ಮ, ಆತ್ಮ, ಅನುಮಾನ - ಮುಂತಾದ ಶಬ್ದಗಳನ್ನು ಯಾವ ಅರ್ಥದಲ್ಲಿ ಸೂತ್ರಕಾರರು ಬಳಸುತ್ತಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುವುದಿಲ್ಲ. ಗುರುಶಿಷ್ಯ ಸಂಪ್ರದಾಯದಿಂದ ಬಂದ ವ್ಯಾಖ್ಯಾನಗಳಿಂದಲೇ ಇವುಗಳ ಅರ್ಥವನ್ನು ನಿಶ್ಚಯಿಸಿ,

ಸೂತ್ರಕಾರರ ಹೃದ್ಗತವನ್ನು ಕಂಡುಕೊಳ್ಳಬೇಕಾಗಿದೆ. ಬೇರೆಮಾರ್ಗ ಯಾವುದೂ ಇಲ್ಲ.

ಈ ಸೂತ್ರಗಳಿಗೆ ಅನೇಕ ಭಾಷ್ಯಗಳುಂಟು. ಇವುಗಳಿಂದಲೂ ವ್ಯಾಸತಾತ್ಪರ್ಯವನ್ನು ನಿರ್ಣಯಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ, ಶಂಕರ, ಭಾಸ್ಕರ, ರಾಮಾನುಜ, ಶ್ರೀಕಂಠ, ನಿಂಬಾರ್ಕ, ಮಧ್ವ, ವಿಜ್ಞಾನಭಿಕ್ಷು, ವಲ್ಲಭ ಮೊದಲಾದ ಭಾಷ್ಯಕಾರರು ಸೂತ್ರಗಳಿಗೆ ಬೇರೆ ಬೇರೆ ಅರ್ಥಗಳನ್ನು ಬರೆದು ತಾವು ಹೇಳುವುದೇ ಸರಿಯಾದ ಸೂತ್ರಾರ್ಥವೆಂದು ತಿಳಿಸುತ್ತಾರೆ. ವೇದಾಂತಸಿದ್ಧಾಂತವನ್ನು ಪರಸ್ಪರ ವಿರುದ್ಧವಾದ ನಾನಾ ಪ್ರಕಾರಗಳಲ್ಲಿ ತೋರಿಸುತ್ತಾರೆ. ಈ ಪಂಥಗಳನ್ನನು-ಸರಿಸುವ ವ್ಯಾಖ್ಯಾನಕಾರರು ತಮ್ಮ ತಮ್ಮ ಭಾಷ್ಯಕಾರರು ಬರೆದದ್ದೇ ವೇದಾಂತದರ್ಶನವೆಂದು ಸಾರುತ್ತಾರೆ. ಹೀಗಿರುವಾಗ ವಿಚಾರಶೀಲರಾದ ಮುಮುಕ್ಷುಗಳು ನಿಜವಾದ ವೇದಾಂತದರ್ಶನವು ಯಾವುದೆಂದು ನಿಶ್ಚಯಿಸಲಾರದೆ ಮುಗ್ಧರಾಗುವುದು ಆಶ್ಚರ್ಯವೇನಲ್ಲ. ಈ ಪರಿಸ್ಥಿತಿ-ಯಲ್ಲಿ ವೇದಾಂತದರ್ಶನವೆಂದರೆ ಯಾವುದು ? ವ್ಯಾಸತಾತ್ಪರ್ಯವು ಯಾವ ಸಿದ್ಧಾಂತದಲ್ಲಿದೆ ? ಎಂಬುದನ್ನು ನಿಶ್ಚಯಿಸಲು ಅಯ್ಯಣ್ಣದೀಕ್ಷಿತರೆಂಬ ಘನವಿದ್ವಾಂಸರು ವ್ಯಾಸತಾತ್ಪರ್ಯನಿರ್ಣಯವೆಂಬ ಈ ಗ್ರಂಥವನ್ನು ರಚಿಸಿದ್ದಾರೆ.

## ವ್ಯಾಸತಾತ್ಪರ್ಯನಿರ್ಣಯ

ಇದರಲ್ಲಿ ಎರಡು ಪರಿಚ್ಛೇದಗಳಿವೆ. ಶ್ರೀ ಶಂಕರಾಚಾರ್ಯರು ತಮ್ಮ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಪ್ರತಿಪಾದಿಸಿರುವ ನಿರ್ವಿಶೇಷಾದ್ವೈತವೇ ಬ್ರಹ್ಮ-ಸೂತ್ರಗಳಿಗೆ ಸಂಮತವಾದ ಸಿದ್ಧಾಂತವೆಂದೂ ವೇದಾಂತವೆಂದರೆ ಅದ್ವೈತದರ್ಶನವೇ ಎಂದೂ ಈ ಗ್ರಂಥಕರ್ತರು ಸ್ಥಾಪಿಸಿರುತ್ತಾರೆ. ಶಾರೀರಕಸೂತ್ರಗಳಿರುವ ಭಾಷ್ಯಗಳಲ್ಲಿ ಶಾಂಕರಭಾಷ್ಯವೇ ಸಂಪ್ರದಾ-ಯಾನುಸಾರಿಯಾಗಿರುವುದರಿಂದ ಪ್ರಾಮಾಣಿಕವೆಂದೂ ವ್ಯಾಸತಾತ್ಪರ್ಯ-

ವನ್ನು ಶಂಕರಭಾಷ್ಯವೇ ವ್ಯವಸ್ಥಿತವಾಗಿ ನಿರೂಪಿಸಿದೆಯೆಂದೂ ನಿರ್ಣಯಿಸಿರುತ್ತಾರೆ. ಇದಕ್ಕಾಗಿ ಗ್ರಂಥಕರ್ತರು ಆಶ್ರಯಿಸಿದ ಮಾರ್ಗೋಪಾಯವು ವಿನೂತನವೂ ಅಸಾಧಾರಣವೂ ಅಭೇದ್ಯವೂ ಆಗಿದೆ. ಯುಕ್ತಿಗಳಿಗೆ ಪಾರವೇ ಇಲ್ಲವಾದ್ದರಿಂದ ವಾದಮಾಡಿ ವ್ಯಾಸತಾತ್ಪರ್ಯವನ್ನು ನಿರ್ಣಯಿಸುವುದು ಶಕ್ಯವೇ ಅಲ್ಲ. ವೇದಾಂತವು ವ್ಯಾಕರಣಾದಿಶಾಸ್ತ್ರಗಳಂತಲ್ಲ. ವೇದಾಂತಗಳಲ್ಲಿ ಒಂದು ಬಗೆಯ ಮತೀಯ-ವಾದ ಆಗ್ರಹವು ತುಂಬಿಕೊಂಡಿರುತ್ತದೆ. ತಮ್ಮ ತಮ್ಮ ಆಚಾರ್ಯರು ಹೇಳಿದ್ದೇ ಸರಿಯೆಂಬ ಪೂರ್ವಗ್ರಹವಿರುತ್ತದೆ. ಆದ್ದರಿಂದ ವ್ಯಾಸ-ತಾತ್ಪರ್ಯಭೂತವಾದ ವೇದಾಂತದ ಸ್ವರೂಪವೇನೆಂದು ನಿರ್ಣಯಿಸಲು ಪಕ್ಷಪಾತರಹಿತನಾಗಿ ತಟಸ್ಥನಾದ ಸಾಕ್ಷಿ ಬೇಕು. ಅಂತಹ ಸಾಕ್ಷಿ ಯಾರು ?

ಸಾಂಖ್ಯಾದಿದರ್ಶನಗಳು ತಮ್ಮ ಸಿದ್ಧಾಂತವನ್ನು ಸ್ಥಾಪಿಸುವುದಕ್ಕಾಗಿ ಅನ್ಯದರ್ಶನಗಳನ್ನು ಖಂಡಿಸುತ್ತವೆ. ಈ ದರ್ಶನಕಾರರಿಗೆ ಅನ್ಯದರ್ಶನ-ಗಳನ್ನು ಖಂಡಿಸುವುದರಲ್ಲಿ ತಾತ್ಪರ್ಯವೇ ಹೊರತು ಅವುಗಳ ಸಿದ್ಧಾಂತ ವೇನೆಂಬುದರಲ್ಲಿ ಆಗ್ರಹವೇನೂ ಇರುವುದಿಲ್ಲ. ಆಗ್ರಹವಿರುವುದಕ್ಕೆ ಕಾರಣವೂ ಇಲ್ಲ. ಇತರ ದರ್ಶನಗಳ ಸಿದ್ಧಾಂತವೇನೆಂಬುದನ್ನು ಅವರು ನಿಷ್ಪಕ್ಷಪಾತವಾಗಿ ತಿಳಿದುಕೊಂಡು, ಅದನ್ನು ಅನುವಾದಿಸಿ ದೂಷಿಸುತ್ತಾರೆ. ಹಾಗೆಯೇ ಜೈನರೂ ಬೌದ್ಧರೂ ಸಹ ವೇದಾಂತದರ್ಶನವನ್ನು ಅನುವಾದಿಸಿ ದೂಷಿಸುತ್ತಾರೆ. ಹೀಗೆ ದೂಷಿಸುವಾಗ ವೇದಾಂತದ ಸ್ವರೂಪವೇನೆಂಬುದನ್ನು ಅವರು ತಿಳಿದುಕೊಂಡೇ ಇರುತ್ತಾರೆ. ಏವಂಚ ಕಪಿಲಾದಿ ಮುನಿಗಳು ಯಾವ ರೀತಿಯಲ್ಲಿ ವೇದಾಂತವನ್ನು ತಿಳಿದುಕೊಂಡಿದ್ದರು ? ಅದನ್ನು ಯಾವ ಸ್ವರೂಪದಲ್ಲಿ ಅನುವಾದಮಾಡಿ ದೂಷಿಸಿದ್ದಾರೆ ? ಎಂಬುದನ್ನು ಪರೀಕ್ಷಿಸಿದಾಗ ವ್ಯಾಸಸಂಮತವಾದ ವೇದಾಂತವು ಯಾವುದೆಂದು ನಿಶ್ಚಿತವಾಗಿ ತಿಳಿದು ಬರುತ್ತದೆ. ಅಯ್ಯಣ್ಣ-ದೀಕ್ಷಿತರು ಹುಡುಕಿ ತೆಗೆದ ಈ ಮಾರ್ಗೋಪಾಯವು ಅಪೂರ್ವವಾದದ್ದು. ಸತ್ಯಾನ್ವೇಷಿಗಳೆಲ್ಲರೂ ಒಪ್ಪಲೇಬೇಕಾದದ್ದು.

ಪ್ರಥಮಪರಿಚ್ಛೇದದಲ್ಲಿ ಈ ಮಾರ್ಗವನ್ನನುಸರಿಸಿ ಶ್ರೀಶಂಕರಾಚಾರ್ಯರ ಸೂತ್ರಭಾಷ್ಯವೇ ಪ್ರಾಮಾಣಿಕವೆಂದೂ ಕೇವಲಾದ್ವೈತವೇ ವೇದಾಂತ ಸಿದ್ಧಾಂತವೆಂದೂ ನಿಶ್ಚಯಿಸಿ, ಎರಡನೆಯ ಪರಿಚ್ಛೇದದಲ್ಲಿ ಸಾಧಕನಿಗೆ ಆವಶ್ಯಕವಾದ ಸಗುಣಬ್ರಹ್ಮದ ಸ್ವರೂಪವನ್ನು ನಿರೂಪಿಸಲಾಗಿದೆ. ಸಚ್ಚಿದಾನಂದ ಸ್ವರೂಪವಾದ ನಿರ್ಗುಣಪರಬ್ರಹ್ಮವೇ ಮಾಯೋಪಹಿತವಾಗಿ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗುತ್ತದೆ. ಈತನೇ ಪರಮೇಶ್ವರ. ಇವನು ಬ್ರಹ್ಮ-ವಿಷ್ಣು-ರುದ್ರ-ರಾಮ-ಕೃಷ್ಣಾದಿ ರೂಪದಿಂದ ಮುಮುಕ್ಷುಗಳಿಗೆ ಉಪಾಸ್ಯನಾಗಿದ್ದಾನೆ. ಈತನ ಅನುಗ್ರಹದಿಂದ ಬ್ರಹ್ಮಜ್ಞಾನವು ಪ್ರಾಪ್ತವಾಗುತ್ತದೆ - ಎಂದು ಸ್ಪಷ್ಟಪಡಿಸಲಾಗಿದೆ.

## ಗ್ರಂಥಕರ್ತರ ಪರಿಚಯ

ಕ್ರಿ.ಶ. ೧೯೧೦ ರಲ್ಲಿ ಶ್ರೀರಂಗದ ವಾಣೀವಿಲಾಸ ಮುದ್ರಣಾಲಯದಿಂದ ಈ ವ್ಯಾಸತಾತ್ಪರ್ಯನಿರ್ಣಯವು ದೇವನಾಗರೀಲಿಪಿಯಲ್ಲಿ ಮುದ್ರಿತವಾಗಿ ಪ್ರಕಾಶಗೊಂಡಿದೆ. ಮುದ್ರಣಾಲಯದ ಮಾಲಿಕರಾದ ಶ್ರೀಮಾನ್ ಟಿ.ಕೆ. ಬಾಲಸುಬ್ರಹ್ಮಣ್ಯಂ ಅವರು ಇದಕ್ಕೆ ಒಂದು ಚಿಕ್ಕ ಪೀಠಿಕೆಯನ್ನು ಬರೆದಿದ್ದಾರೆ. ಅದರಲ್ಲಿ ಗ್ರಂಥಕರ್ತರಾದ ಅಯ್ಯಣ್ಣದೀಕ್ಷಿತರು ವೆಂಕಟಪತಿ ಎಂಬುವರ ಪುತ್ರರೆಂದೂ ತಂಜಾವೂರು ಜಿಲ್ಲೆಯ ತಿರುವಸನಲ್ಲೂರು ಎಂಬ ಗ್ರಾಮದಲ್ಲಿ ವಾಸವಾಗಿದ್ದರೆಂದೂ ಶ್ರೀಸದಾಶಿವಬ್ರಹ್ಮೇಂದ್ರರ ಸಮಕಾಲಿಕರೆಂದೂ ತಿಳಿಸಿರುತ್ತಾರೆ.

ಕನ್ನಡದಲ್ಲಿ ಅದ್ವೈತವೇದಾಂತವನ್ನು ಅನುಸರಿಸಿ ಹಲವಾರು ಪ್ರಬಂಧಗಳನ್ನು ಬರೆದು, ಸಂಸ್ಕೃತದ ನಾನಾ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ ವಿಖ್ಯಾತರೂ ವಿದ್ವನ್ಮಾನ್ಯರೂ ಆಗಿರುವ ವೇ॥ ಬ್ರ. ಶ್ರೀ. ಶೃಂಗಗಿರಿ ಕವಿ ನರಸಿಂಹಶರ್ಮರು ಈ ವ್ಯಾಸತಾತ್ಪರ್ಯನಿರ್ಣಯದ ಮೊದಲನೆಯ ಪರಿಚ್ಛೇದವನ್ನು ಕ್ರಿ.ಶ. ೧೯೬೬ರಲ್ಲಿ ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದ್ದರೆಂದು ತಿಳಿದುಬರುತ್ತದೆ. ನಾನು ಆ ಅನುವಾದವನ್ನು

ನೋಡಿಲ್ಲ. ಅದು ಈಗ ದೊರೆಯುತ್ತಿಲ್ಲ. ಸಂಸ್ಕೃತದ ಶಾಸ್ತ್ರೀಯ ಸರಣಿಯಂತೆಯೇ ಅನುವಾದವು ಬಂದದ್ದರಿಂದ ಓದುಗರಿಗೆ ಅರ್ಥ-ಮಾಡಿಕೊಳ್ಳಲು ಕಷ್ಟವಾಗುತ್ತದೆಯೆಂದು, ಶ್ರೀಮಾನ್ ಕವಿ ನರಸಿಂಹ-ಶರ್ಮರೇ ಅದರ ತಾತ್ಪರ್ಯವನ್ನು ತಿಳಿಗನ್ನಡದಲ್ಲಿ ವಿವರಿಸಿ, ಇನ್ನೊಂದು ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದನ್ನು ಸಹ ನಾನು ನೋಡಿದ್ದು, ನನ್ನ ಅನುವಾದವನ್ನು ಮುದ್ರಣಕ್ಕೆ ಕೊಟ್ಟ ಮೇಲೆ. ಶ್ರೀ ಕವಿ ನರಸಿಂಹ-ಶರ್ಮರು ಈ ಗ್ರಂಥದ ಪ್ರಾಸ್ತಾವಿಕದಲ್ಲಿ ಕೆಲವು ಹೊಸ ವಿಷಯಗಳ ಕಡೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಇದರಿಂದ ಅಯ್ಯಣ್ಣದೀಕ್ಷಿತರ ವಿಷಯವಾಗಿ ಇನ್ನೂ ಹೆಚ್ಚಿನ ಬೆಳಕು ಬಿದ್ದಿದೆ. ಅದು ಹೀಗಿದೆ-

ಕ್ರಿ.ಶ. ೧೯೦೯ರಲ್ಲಿ ತಿರುಪತಿ ಶ್ರೀ ವೆಂಕಟೇಶ್ವರ ಮುದ್ರಣಾಲಯವು ಮೂಲಗ್ರಂಥವನ್ನು ಆಂಧ್ರಲಿಪಿಯಲ್ಲಿ ಮುದ್ರಿಸಿತ್ತು. ಇದು ಒಂದು ತಾಳಪತ್ರದ ಪರಿಶೋಧಿತ ಮುದ್ರಣವಾಗಿದ್ದು, ತಾಳಪತ್ರದ ಪ್ರಕಾರ ಗ್ರಂಥದಲ್ಲಿ ಈ ಶ್ಲೋಕವಿದೆ -

**ಶ್ರೀ ವೆಂಕಟಪತೇಃ ಸೂನುರಳ್ಗಿರೇರನುಜಃ ಕವಿಃ ।**
**ಅಯ್ಯಣ್ಣೋ ವೈಣಿಕಃ ಕುರ್ವೇ ವ್ಯಾಸತಾತ್ಪರ್ಯನಿರ್ಣಯಮ್ ॥**

''ಶ್ರೀ ವೆಂಕಟಪತಿಯೆಂಬವರ ಪುತ್ರನೂ ಅಳ್ಗಿರಿಯೆಂಬುವರ ತಮ್ಮನೂ ವೀಣಾವಾದನಚತುರನೂ ಕವಿಯೂ ಆದ ಅಯ್ಯಣ್ಣನೆಂಬ ನಾನು ವ್ಯಾಸತಾತ್ಪರ್ಯನಿರ್ಣಯವನ್ನು ರಚಿಸುತ್ತಿದ್ದೇನೆ.''

ಈ ಗ್ರಂಥದ ಎರಡು ಪರಿಚ್ಛೇದಗಳ ಕಡೆಯಲ್ಲಿಯೂ ಹೀಗೆ ಬರೆದಿದೆಯಂತೆ-

''ಇತಿ ಶ್ರೀರಾಧಮಾಧವ ಸಂವಾದಾದ್ಯನೇಕ ಪ್ರಬಂಧ ನಿರ್ಮಾಣ ಧುರೀಣಸ್ಯ ಶ್ರೀವೆಂಕಟಪತಿಕವಿಸಾರ್ವಭೌಮಸ್ಯ ತನೂಭವೇನ, ಸುಭದ್ರಾ ಕಲ್ಯಾಣಾದ್ಯನೇಕ ಪ್ರಬಂಧರಚನಾಧೌರೇಯಸ್ಯ ಅಳಗಿರಿ ಕವೇರನುಜೇನ, ವೀಣಾವಾದನ ಪ್ರವೀಣೇನ, ಶ್ರೀಮದಯ್ಯನ್ನ ವಿದ್ವನ್ಮಣಿನಾ ವಿರಚಿತೇ ವ್ಯಾಸತಾತ್ಪರ್ಯನಿರ್ಣಯೇ.''

ಈ ಮಾತಿನ ತಾತ್ಪರ್ಯವಿಷ್ಟು - ''ಗ್ರಂಥಕರ್ತರ ಹೆಸರು ಅಯ್ಯನ್ನಶಾಸ್ತ್ರಿಗಳು, ರಾಧಾಮಾಧವಸಂವಾದ- ಮೊದಲಾದ ಅನೇಕ ಪ್ರಬಂಧಗಳನ್ನು ರಚಿಸಿ ವಿಖ್ಯಾತರಾದ ಶ್ರೀವೆಂಕಟಪತಿಕವಿ ಸಾರ್ವಭೌಮರು ಇವರ ತಂದೆಯವರು. ಸುಭದ್ರಾಕಲ್ಯಾಣವೇ ಮೊದಲಾದ ಪ್ರಬಂಧಗಳನ್ನು ರಚಿಸಿ ಪ್ರಸಿದ್ಧರಾದ ಅಳಗಿರಿ ಕವಿಗಳು ಇವರ ಅಣ್ಣಂದಿರು. ಅಯ್ಯನ್ನಶಾಸ್ತ್ರಿಗಳು ವೀಣಾವಾದನಚತುರರು. ವೇದಾಂತಸಿದ್ಧಾಂತದ ರಹಸ್ಯವನ್ನು ಪ್ರಕಾಶಪಡಿಸುವುದರಲ್ಲಿ ಗಟ್ಟಿಗರು, ವಿದ್ವದ್ವರೇಣ್ಯರು'' ಎಂದು.

(ಶ್ರೀ ನರಸಿಂಹ ಶರ್ಮರ ಪುಸ್ತಕದ ಸಂಸ್ಕೃತವಾಕ್ಯದಲ್ಲಿ ಅಳಗಿರಿ ಕವಿಗಳಿಗೆ ವಿಶೇಷಣವಾದ ಶಬ್ದಪುಂಜದಲ್ಲಿ **'ಸುದಂತಾ ಕಲ್ಯಾಣಾದ್ಯನೇಕ ಪ್ರಬಂಧರಚನಾಧೌರೇಯಸ್ಯ'** ಎಂದಿದೆ. ಕನ್ನಡದಲ್ಲಿ 'ಸುಭದ್ರಾ ಕಲ್ಯಾಣ' ಎಂದೇ ಇದೆ. 'ಸುದಂತಾ' ಎಂಬುದು ಮುದ್ರಣದೋಷದಿಂದ ಆಗಿರಬಹುದು.)

ರಾಧಾಮಾಧವಸಂವಾದವು ತೆಲುಗುಭಾಷೆಯಲ್ಲಿರುವುದರಿಂದಲೂ 'ಅಯ್ಯನ್ನವಿದ್ವನ್ಮಣಿನಾ' ಎಂಬಲ್ಲಿ ಅಯ್ಯನ್ನ ಎಂದು ನಕಾರವನ್ನು ಪ್ರಯೋಗಿಸಿರುವುದರಿಂದಲೂ ಇವರೆಲ್ಲರೂ ತೆಲುಗು ಮಾತನಾಡುವ ವಿಪ್ರಕುಟುಂಬದವರೆಂದು ಊಹಿಸಬಹುದು. ತಂಜಾವೂರು ಪ್ರಾಂತದಲ್ಲಿ ನೆಲೆಸಿದ್ದರಿಂದ ತಮಿಳುಭಾಷೆಯನ್ನೂ ಅಯ್ಯಣ್ಣದೀಕ್ಷಿತರು ಬಲ್ಲವರಾಗಿದ್ದಿರಬೇಕು.

ಈ ತಾಳಪತ್ರದ ಪ್ರತಿಯ ಕಡೆಯಲ್ಲಿ 'ವ್ಯಾಸತಾತ್ಪರ್ಯನಿರ್ಣಯ' ಗ್ರಂಥಕಾರರಾದ ಶ್ರೀಮದಣ್ಣಯ್ಯಶಾಸ್ತ್ರಿಗಳ ಹಸ್ತಾಕ್ಷರ ಸಹಿತವಾದ, ಆಂಧ್ರಭಾಷೆಯ ಪ್ರತಿಜ್ಞಾಪತ್ರಿಕೆಯೊಂದು ಇದೆ. ಇದರ ಸಾರಾಂಶ ಹೀಗಿದೆ-

''ಮಹಾರಾಜರಾಜ ಶ್ರೀ ಪ್ರಭುಗಳೇ''

ಕಾಶೀರಾಮೇಶ್ವರಗಳ ಮಧ್ಯದಲ್ಲಿರುವ ವಿದ್ವಾಂಸರಲ್ಲಿ ಯಾರಾದರೂ, ನಾನು ಬರೆದಿರುವ ''ವ್ಯಾಸತಾತ್ಪರ್ಯನಿರ್ಣಯ'' ಗ್ರಂಥಕ್ಕೆ ಖಂಡನೆ-

ಯನ್ನು ಬರೆದು, ಮಧ್ಯಸ್ಥರಾದ ವಿದ್ವಾಂಸರ ಸಂಮತಿಯನ್ನು ಪಡೆದರೆ, ನಾನು ಇಂಥ ಪ್ರತಿವಾದಿಯ ಶಿಷ್ಯನಾಗುತ್ತೇನೆ, ಇದು ನಿಶ್ಚಿತ.

''ಆದ್ದರಿಂದ ಶ್ರೀಪ್ರಭುಗಳು ಮಧ್ಯಸ್ಥರಾದ ದ್ವೈತಾದ್ವೈತವಿಶಿಷ್ಟಾ-ದ್ವೈತಮತಗಳ ವಿದ್ವಾಂಸರ ಸಭೆಯನ್ನು ಕರೆಯಿಸಿ, ನನ್ನ ಗ್ರಂಥವನ್ನು ಅವರಿಗೆ ಕೊಟ್ಟು, ಎಂಟು ದಿವಸಗಳೊಳಗೆ ಈ ಗ್ರಂಥದ ವಿಮರ್ಶೆ ಮಾಡಿ ನಿರ್ಣಯವನ್ನು ಕೊಡುವಂತೆ ಇವರಿಗೆ ಅಪ್ಪಣೆ ಮಾಡಬೇಕು'' ಎಂದು.

ಇದರೊಡನೆ......

''ಮಹಾರಾಜ ಶ್ರೀ ಪ್ರಭುಗಳೆ, ಶ್ರೀಮದಯ್ಯಣ್ಣಶಾಸ್ತ್ರಿಗಳ 'ವ್ಯಾಸ-ತಾತ್ಪರ್ಯನಿರ್ಣಯ' ಗ್ರಂಥಕ್ಕೆ ಯಾರಾದರೂ ಖಂಡನೆಯನ್ನು ಬರೆದು ವಿದ್ವಾಂಸರ ಸಮ್ಮತಿಯನ್ನು ಪಡೆದರೆ, ನಾನೂ ಅಂಥ ಪ್ರತಿವಾದಿಯ ಶಿಷ್ಯನಾಗುತ್ತೇನೆ, ಇದು ನಿಶ್ಚಿತ.''

ಎಂಬ ಪ್ರತಿಜ್ಞಾಪತ್ರವು ಪಿನಾಕಿನೀತೀರಂ ವೇಂಕಟಾದ್ರಿಶಾಸ್ತ್ರಿ ಎಂಬ ಹಸ್ತಾಕ್ಷರ ಸಹಿತವಾಗಿದೆ.

ಕಡೆಯಲ್ಲಿ ಕೆಳಗಿನ ಈ ಮೂರು ಪದ್ಯಗಳಿವೆಯಂತೆ. ಅವುಗಳನ್ನಿಲ್ಲಿ ಅರ್ಥಸಹಿತವಾಗಿ ಬರೆದಿದೆ.

**ಮಾಧ್ವಾ ಮಾಽಧ್ವಂ ಪುರೇಽಸ್ಮಿನ್ ಅಪಸರತ ಜನಾಲಕ್ಷಿತಾ**
**ಲಕ್ಷ್ಮಣೀಯಾಃ**
**ಶ್ರೀಕಂಠೀಯಾ ನ ಕಂಠಾನ್ ಧ್ವನಯತ ಭವತಾಽಭಾಸುರಾ**
**ಭಾಸ್ಕರೀಯಾಃ ।**
**ಅಯ್ಯಣ್ಣಯ್ಯಾಭಿಧಾನಃ ಕಪಿಲಕಣಭುಗಾದ್ಯುಕ್ತನಾನಾನುವಾದ-**
**ಬ್ರಹ್ಮಾಸ್ತ್ರೋಲ್ಲಾಸಿಹಸ್ತೋ ಜಗತಿ ವಿಜಯತೇ ದ್ವೈತಮತ್ತೇಭಸಿಂಹಃ ॥**

''ಎಲೈ ಮಾಧ್ವರೆ, ಈ ನಗರದಲ್ಲಿರಬೇಡಿರಿ, ಹೊರಟುಹೋಗಿರಿ. ರಾಮಾನುಜೀಯರೆ - (ಲಕ್ಷ್ಮಣೀಯರೆ) ಜನರಿಗೆ ಕಾಣಿಸದಂತೆ ತೊಲಗಿರಿ, ಶ್ರೀಕಂಠಮತದವರೆ, ನಿಮ್ಮ ಕಂಠಧ್ವನಿಯನ್ನು ನಿಲ್ಲಿಸಿರಿ. ಎಲೈ

ಭಾಸ್ಕರಶಿಷ್ಯರೆ, ಬೆಳಕಿಗೆ ಬರದೆ ಮರೆಯಲ್ಲಿರಿ ! ಏಕೆಂದರೆ, ದ್ವೈತವಾದ-ವೆಂಬ ಮದ್ದಾನೆಗಳನ್ನು ಭೇದಿಸುವ ಅಯ್ಯಣ್ಯಶಾಸ್ತ್ರಿಯೆಂಬ ಸಿಂಹವು ಜಯಶಾಲಿಯಾಗಿ ಜಗತ್ತಿನಲ್ಲಿ ವಿಜೃಂಭಿಸುತ್ತಿದೆ ! ಕಪಿಲ, ಕಣಾದ - ಮೊದಲಾದ ಮಹರ್ಷಿಗಳು ಅನೇಕ ಸ್ಥಳಗಳಲ್ಲಿ ಮಾಡಿರುವ ಅದ್ವೈತಾನುವಾದವೆಂಬ ಬ್ರಹ್ಮಾಸ್ತ್ರವನ್ನು ಈ ಸಿಂಹವು ಧರಿಸಿದೆ.''

**ಕಪಿಲಕಣಾದಾದಿಕೃತೈಃ ಸೂತ್ರೈರ್ದ್ವೈತಾಭಿಮಾನಿಮತ್ತೇಭಾನ್ ।**
**ಅಯ್ಯಣ್ಣಸುಧೀರಬಂಧೀತ್ ಅದ್ವೈತಾಖ್ಯೇ ಜಯಸ್ತಂಭೇ ॥**

''ಅಯ್ಯಣ್ಣನೆಂಬ ಪಂಡಿತವರೇಣ್ಯನು ಕಪಿಲಕಣಾದಾದಿಮುನಿಗಳು ರಚಿಸಿದ ಸೂತ್ರಗಳೆಂಬ ಹಗ್ಗಗಳಿಂದ, ದ್ವೈತಾಭಿಮಾನಿಗಳಾದ ಮದ-ಗಜಗಳನ್ನು, ಅದ್ವೈತವೆಂಬ ವಿಜಯಸ್ತಂಭಕ್ಕೆ ಕಟ್ಟಿಬಿಗಿದಿದ್ದಾನೆ.''

**ಶ್ರೀಕಂಠ-ಮಧ್ವ-ಯಾದವ-ಭಾಸ್ಕರ-ರಾಮಾನುಜಾದಿಭಾಷ್ಯಾಣಾಮ್ ।**
**ಮೂಲೋಚ್ಛೇದನಮಕರೋತ್ ವ್ಯಾಸಮತಸ್ಥಾಪನಾಚಾರ್ಯಃ ॥**

''ವ್ಯಾಸಸಂಮತವಾದ ಅದ್ವೈತಮತದ ಸ್ಥಾಪನಾಚಾರ್ಯನಾದ ಅಯ್ಯಣ್ಣವಿದ್ವದಗ್ರೇಸರನು ಶ್ರೀಕಂಠ, ಮಧ್ವ, ಯಾದವ, ಭಾಸ್ಕರ, ರಾಮಾನುಜರೇ ಮೊದಲಾದವರು ಬರೆದ ಭಾಷ್ಯಗಳ ಮೂಲವನ್ನೇ ಕತ್ತರಿಸಿ ಹಾಕಿದ್ದಾನೆ.''

ಅದ್ವೈತಗ್ರಂಥಕೋಶ- ಎಂಬ ಗ್ರಂಥದ ೫೫ನೆಯ ಪುಟದಲ್ಲಿ 'ಅಯ್ಯಣ್ಣ ದೀಕ್ಷಿತ'ರ ವಿಷಯವನ್ನೆತ್ತಿಕೊಂಡು-

At Venkatagiri a Vidwath Sadas seems to have been held, where he threw a challange to the pandits and established the correctness of his view- ಎಂದು ಬರೆದಿದೆಯಂತೆ.

''ವೆಂಕಟಗಿರಿಯಲ್ಲಿ ಒಂದು ವಿದ್ವತ್ ಸಭೆಯು ಸೇರಿಸಲ್ಪಟ್ಟಿತೆಂದೂ ಅದರಲ್ಲಿ ಅಯ್ಯಣ್ಣದೀಕ್ಷಿತರು ಪಂಡಿತರಿಗೆ (ಅದ್ವೈತವೇ ವ್ಯಾಸ-

ತಾತ್ಪರ್ಯ) ವೆಂಬ ವಿಚಾರವಾಗಿ ಸವಾಲನ್ನೊಡ್ಡಿ ತಮ್ಮ ವಿಚಾರ-ಸರಣಿಯೇ ಸರಿಯಾದ್ದೆಂದು ಸ್ಥಾಪಿಸಿದರೆಂದೂ ತೋರುತ್ತದೆ.''

ಗ್ರಂಥಕರ್ತರ ವಿಷಯವಾಗಿ ಇಷ್ಟು ಅಂಶಗಳನ್ನು ತಮ್ಮ ಗ್ರಂಥದ ಮೂಲಕ **ವೇ॥ ಬ್ರ॥ ಶ್ರೀ ಶೃಂಗಗಿರಿ ಕವಿ ನರಸಿಂಹಶರ್ಮರು** ಒದಗಿಸಿಕೊಟ್ಟುದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಅಯ್ಯಣ್ಣದೀಕ್ಷಿತರ ಪ್ರತಿಜ್ಞಾಪತ್ರಿಕೆಯಲ್ಲಿ 'ಮಹಾರಾಜರಾಜ ಶ್ರೀ ಪ್ರಭುಗಳೇ' ಎಂದು ಸಂಬೋಧನೆ ಇದೆಯಷ್ಟೆ. ಇದು ಯಾವ ರಾಜನನ್ನು ಉದ್ದೇಶಿಸಿದ ಸಂಬೋಧನೆಯೆಂದು ತಿಳಿಯುವುದಿಲ್ಲ. ಅಯ್ಯಣ್ಣ-ದೀಕ್ಷಿತರು ಶ್ರೀ ಸದಾಶಿವ ಬ್ರಹ್ಮೇಂದ್ರರ ಸಮಕಾಲಿಕರೆಂಬುದು ದೃಢವಾದರೆ ಗ್ರಂಥ ಕರ್ತರ ಕಾಲ ಕ್ರಿ.ಶ. ೧೮ನೆಯ ಶತಮಾನ ಎಂದು ಹೇಳಬಹುದು.

ಬ್ರಹ್ಮಸೂತ್ರಭಾಷ್ಯಕಾರರ ಹೆಸರುಗಳನ್ನೂ ಕಾಲಾದಿಗಳನ್ನೂ ಹೀಗೆ ಪಟ್ಟಿ ಮಾಡಬಹುದು.

| | ಹೆಸರು | ಕ್ರಿಸ್ತ ಶಕ | ಭಾಷ್ಯನಾಮ | ಸಿದ್ಧಾಂತ |
|---|---|---|---|---|
| ೧. | ಶಂಕರ | ೭೮೮-೮೨೦ | ಶಾರೀರಕಭಾಷ್ಯ | ಕೇವಲಾದ್ವೈತ |
| ೨. | ಭಾಸ್ಕರ | ೧೦೦೦ | ಭಾಸ್ಕರಭಾಷ್ಯ | ಭೇದಾಭೇದ |
| ೩. | ರಾಮಾನುಜ | ೧೧೪೦ | ಶ್ರೀಭಾಷ್ಯ | ವಿಶಿಷ್ಟಾದ್ವೈತ |
| ೪. | ಮಧ್ವ | ೧೨೩೮ | ಪೂರ್ಣಪ್ರಜ್ಞಭಾಷ್ಯ | ದ್ವೈತ |
| ೫. | ನಿಂಬಾರ್ಕ | ೧೨೫೦ | ವೇದಾಂತಪಾರಿಜಾತ | ದ್ವೈತಾದ್ವೈತ |
| ೬. | ಶ್ರೀಕಂಠ | ೧೨೭೦ | ಶೈವಭಾಷ್ಯ | ಶೈವವಿಶಿಷ್ಟಾದ್ವೈತ |
| ೭. | ಶ್ರೀಪತಿ | ೧೪೦೦ | ಶ್ರೀಕರಭಾಷ್ಯ | ಶಕ್ತಿವಿಶಿಷ್ಟಾದ್ವೈತ |
| ೮. | ವಲ್ಲಭ | ೧೪೭೯-೧೫೪೪ | ಅಣುಭಾಷ್ಯ | ಶುದ್ಧಾದ್ವೈತ |
| ೯. | ವಿಜ್ಞಾನಭಿಕ್ಷು | ೧೬೦೦ | ವಿಜ್ಞಾನಾಮೃತಭಾಷ್ಯ | ಅವಿಭಾಗಾದ್ವೈತ |
| ೧೦. | ಬಲದೇವ | ೧೭೨೫ | ಗೋವಿಂದಭಾಷ್ಯ | ಅಚಿಂತ್ಯಭೇದಾಭೇದ |

ಇವರಲ್ಲಿ ಶ್ರೀ ಶಂಕರಾಚಾರ್ಯರ ಕಾಲವು ಕ್ರಿ.ಶ. ೬೫೦ ಎಂದು ಈಚೆಗೆ ಇತಿಹಾಸಕಾರರು ಹೇಳುತ್ತಿದ್ದಾರೆ. ಹೇಗಿದ್ದರೂ ನಮಗೆ

ದೊರಕಿರುವ ಭಾಷ್ಯಗಳಲ್ಲಿ ಅವರದೇ ಮೊದಲನೆಯದು. ಅವರಿಗೂ ಮೊದಲು ಬೇರೆ ಕೆಲವರು ಭಾಷ್ಯಗಳನ್ನು ಬರೆದಿರಬಹುದು. ನಮಗೆ ದೊರಕಿಲ್ಲ.

ವ್ಯಾಸಮುನಿಗಳ ವೇದಾಂತದರ್ಶನಕ್ಕೆ ಪ್ರತಿದ್ವಂದ್ವಿಗಳಾದ ವೈದಿಕ-ದರ್ಶನಗಳು ಐದು ಮಾತ್ರ. ಅವೆಲ್ಲವನ್ನು ಖಂಡಿಸಿ ಉಪನಿಷದ್ದರ್ಶನ-ವನ್ನು ಸ್ಥಾಪಿಸುವುದು ಬ್ರಹ್ಮಸೂತ್ರಕಾರರ ಪರಮೋದ್ದೇಶ. ಈಗ ಉಪನಿಷದ್ದರ್ಶನವೇ ಹತ್ತುಭೇದಗಳಾಗಿ ಕವಲೊಡೆದು ಪರಸ್ಪರ ಕಾದಾಡುವ ಪ್ರಸಂಗ ಉಂಟಾದದ್ದು ಶಾಸ್ತ್ರಗಳ ಇತಿಹಾಸದಲ್ಲಿಯೇ ಒಂದು ಅದ್ಭುತವೆನಿಸುತ್ತದೆ. ಉಳಿದ ದರ್ಶನಗಳಲ್ಲಿ ವ್ಯಾಖ್ಯಾನಕಾರರ ಮತಭೇದದಿಂದ ಸೂಕ್ಷ್ಮವಾದ ಅಂತರ್ಭೇದಗಳಿದ್ದರೂ, ಈ ಪ್ರಕಾರವಾಗಿ ಮೂಲತತ್ತ್ವದಲ್ಲಿಯೇ ಮತಿಭೇದದಿಂದ ಪೃಥಗ್ದರ್ಶನ-ಗಳೆಂಬಷ್ಟು ವೈವಿಧ್ಯದಿಂದ ವೇದಾಂತದರ್ಶನವು ಒಡೆದು ಹೋಗಿದೆ-ಯೆಂಬುದೇ ಇಲ್ಲಿ ವಿಶೇಷ.

ಭಾಸ್ಕರ, ರಾಮಾನುಜಾದಿ ಭಾಷ್ಯಗಳಿಗೆ ಶಂಕರಾಚಾರ್ಯರ ಸಿದ್ಧಾಂತವಾದ ಅದ್ವೈತವೇ ಪ್ರತಿಪಕ್ಷವಾಗಿದೆ. ಅದ್ವೈತವನ್ನು ಖಂಡಿಸು-ವುದರಲ್ಲಿ ಅವುಗಳಿಗಿರುವ ಛಲ, ದ್ವೇಷ, ಪರಾಕ್ರಮಗಳು ಸಾಂಖ್ಯಾದಿ-ದರ್ಶನಗಳನ್ನು ಖಂಡಿಸುವುದರಲ್ಲಿ ವ್ಯಕ್ತವಾಗುವುದಿಲ್ಲ. ಬೌದ್ಧಾದಿಬಾಹ್ಯ-ದರ್ಶನಗಳ ವಿಷಯದಲ್ಲಾಗಲಿ ವೇದಾಂತವೆಂದುಕೊಳ್ಳುವ ಸ್ವೇತರದರ್ಶನ-ಗಳ ವಿಷಯದಲ್ಲಾಗಲಿ ಅಷ್ಟು ಖಂಡನಾಗ್ರಹವಿಲ್ಲ.

ಶ್ರೀ ಶಂಕರಭಗವತ್ಪಾದರು ತಮ್ಮ ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಸಾಂಖ್ಯಾದಿದರ್ಶನಗಳನ್ನೂ ಬೌದ್ಧಜೈನಮತಗಳನ್ನೂ ಪ್ರೌಢಯುಕ್ತಿ-ಗಳಿಂದ ಗಂಭೀರವಾದ ಭಾಷೆಯಲ್ಲಿ ಖಂಡಿಸಿದ್ದಾರೆ. ಅವೆಲ್ಲವೂ ಶುಷ್ಕ-ತಾರ್ಕಿಕರಿಂದ ರಚಿತವಾದವುಗಳೆಂದೂ ವೇದಬಾಹ್ಯಗಳಾದ್ದರಿಂದ ಗ್ರಾಹ್ಯ-ಗಳಲ್ಲವೆಂದೂ ತಿಳಿಸಿದ್ದಾರೆ. ಶಾರೀರಕಸೂತ್ರಗಳಿಂದಲೂ ಗೀತೋಪನಿಷತ್ತು-ಗಳಿಂದಲೂ ಸಿದ್ಧವಾಗುವ ಪರಿಶುದ್ಧದರ್ಶನವು ಅದ್ವೈತವೇ ಎಂದೂ

ಸಾರಿದ್ದಾರೆ. ಸಾಂಖ್ಯಾದಿಗಳೆಲ್ಲರೂ ದ್ವೈತಿಗಳೆಂದೂ ವೇದಾಂತಿಗಳು ಮಾತ್ರ ಅದ್ವೈತಿಗಳೆಂದು ಆದ್ದರಿಂದ ವೇದಾಂತವು ಇತರ ಎಲ್ಲ ದರ್ಶನಗಳಿಗೆ ಪ್ರತಿದ್ವಂದ್ವಿಯೆಂದೂ ಗೊತ್ತಾಗುತ್ತದೆ. ಈಗ ಪ್ರಸಿದ್ಧ-ವಾಗಿರುವ ದ್ವೈತ-ವಿಶಿಷ್ಟಾದ್ವೈತಾದಿದರ್ಶನಗಳ ಪ್ರಸ್ಥಾನವು ಶ್ರೀ ಶಂಕರ-ಭಾಷ್ಯದಲ್ಲಿ ಎಲ್ಲಿಯೂ ಇಲ್ಲ. ಸೂತ್ರಕಾರರು **'ಏತೇನ ಸರ್ವೇ ವ್ಯಾಖ್ಯಾತಾ ವ್ಯಾಖ್ಯಾತಾಃ'** (ವೇ. ಸೂ. ೧-೪-೨೮) ಎಂಬ ಸೂತ್ರದಿಂದ ಅಚೇತನ ಕಾರಣವಾದಿಗಳನ್ನೆಲ್ಲ ದೂಷಿಸಿದ್ದಾರೆ. ಈ ಸೂತ್ರಭಾಷ್ಯದಲ್ಲಿ ಸಹ ದ್ವೈತಿಗಳಾದ ವೇದಾಂತಿಗಳೆಂಬವರ ನಾಮ ನಿರ್ದೇಶವೂ ಇಲ್ಲ. ಈ ವೈಚಿತ್ರ್ಯಕ್ಕೆ ಕಾರಣವೇನಿರಬಹುದು ?

ಕಾರಣವೇನೆಂದರೆ, ಶ್ರೀಶಂಕರಾಚಾರ್ಯರ ಕಾಲದಲ್ಲಿ ದ್ವೈತ ವೇದಾಂತವೆಂಬುದೇ ಇರಲಿಲ್ಲ. ಇದ್ದಿದ್ದರೆ ಆ ವೇದಾಂತಿಗಳ ಪರಾಮರ್ಶವು ಶಾಂಕರಭಾಷ್ಯದಲ್ಲಿ ಎಲ್ಲಾದರೂ ಇರಲೇಬೇಕಾಗಿತ್ತು.

ಶ್ರೀಶಂಕರಾಚಾರ್ಯರ ಕಾಲದಲ್ಲಿ ವೇದಾಂತಿಗಳೆಲ್ಲರೂ ಏಕತ್ವವಾದಿ-ಗಳೇ ಆಗಿದ್ದರು ಎಂಬುದಕ್ಕೆ ಬೃಹದಾರಣ್ಯಕಭಾಷ್ಯದಲ್ಲಿರುವ ಈ ವಾಕ್ಯವು ಪ್ರಬಲವಾದ ಸಾಕ್ಷಿಯಾಗಿರುತ್ತದೆ. **''ಸರ್ವೋಪನಿಷತ್ಸು ಹಿ ವಿಜ್ಞಾನಾತ್ಮನಃ ಪರಮಾತ್ಮನಾ ಏಕತ್ವಪ್ರತ್ಯಯೋ ವಿಧೀಯತ ಇತ್ಯವಿಪ್ರತಿಪತ್ತಿಃ ಸರ್ವೇಷಾ-ಮುಪನಿಷದ್ವಾದಿನಾಮ್ ।''** - ಬೃ. ಭಾ. ೨-೧-೨೦

''ಸಮಸ್ತ ಉಪನಿಷತ್ತುಗಳಲ್ಲಿಯೂ ಜೀವಾತ್ಮನಿಗೆ ಪರಮಾತ್ಮನೊಡನೆ ಏಕತ್ವಜ್ಞಾನವನ್ನು ಪ್ರತಿಪಾದಿಸಲಾಗಿದೆ. ಎಂಬ ವಿಷಯದಲ್ಲಿ ಸಮಸ್ತ-ವೇದಾಂತಿಗಳಿಗೂ ಮತಭೇದವಿಲ್ಲ - ಇದು ಸರ್ವಸಂಪ್ರತಿ-ಪನ್ನವಾಗಿದೆಯಷ್ಟೆ.''

ದ್ವೈತಿಗಳಾದ ವೇದಾಂತಿಗಳು ಶ್ರೀಶಂಕರರಿಗಿಂತ ಪೂರ್ವದಲ್ಲಿರಲಿಲ್ಲ-ವೆಂದೂ ಅವರ ಸಿದ್ಧಾಂತಗಳೆಲ್ಲವೂ ಆಚಾರ್ಯರಿಗಿಂತ ಈಚೆಗೆ ಹುಟ್ಟಿದವುಗಳೆಂದೂ ಸ್ಪಷ್ಟವಾಗುತ್ತದೆ. ಆದ್ದರಿಂದಲೇ ಬೌದ್ಧ, ಜೈನ

ಸಾಂಖ್ಯಾದಿದರ್ಶನಗಳಲ್ಲಿ ದ್ವೈತವೇದಾಂತಿಗಳ ಪ್ರಸ್ತಾವವೇ ಬರಲಿಲ್ಲ. ಪೂರ್ವಪಕ್ಷಕ್ಕಾಗಿ ಅವರೆಲ್ಲರೂ ವೇದಾಂತಿಗಳ ಹೆಸರಿನಿಂದ ಅದ್ವೈತ ದರ್ಶನವನ್ನೇ ಅನುವಾದಿಸಿಕೊಂಡಿದ್ದಾರೆ.

ಈ ಉಪನಿಷದ್ವಾಕ್ಯಗಳನ್ನು ಪರಿಶೀಲಿಸಬಹುದು.

೧. ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ ।
ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ ॥ ಈಶಾವಾಸ್ಯ - ೭

೨. ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥ - ಕಠ. ೨-೬-೧೦

೩. ಭಿದ್ಯೇತೇ ಚಾಸಾಂ ನಾಮರೂಪೇ ಸಮುದ್ರ ಇತ್ಯೇವಂ ಪ್ರೋಚ್ಯತೇ ॥
- ಪ್ರಶ್ನ. ೬-೫

೪. ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃ ಶ್ರೋತ್ರಂ ತದಪಾಣಿಪಾದಂ ನಿತ್ಯಂ ವಿಭುಂ ಸರ್ವಗತಂ ॥ - ಮುಂಡಕ ೧-೧-೬

೫. ಓಮಿತ್ಯೇತದಕ್ಷರಮಿದಂ ಸರ್ವಂ ॥ - ಮಾಂಡೂಕ್ಯ ೧

೬. ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ । ಸ ಏಕಃ । - ಶಿಕ್ಷಾ ೬

೭. ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್ । ತದನುಪ್ರವಿಶ್ಯ । ಸಚ್ಚ ತ್ಯಚ್ಚಾಭವತ್ ॥ - ಬ್ರಹ್ಮಾನಂದವಲ್ಲೀ ೬

೮. ಆತ್ಮಾ ವಾ ಇದಮೇಕ ಏವಾಗ್ರ ಆಸೀತ್ ।
ನಾನ್ಯತ್ ಕಿಂಚನ ಮಿಷತ್ ॥ - ಐತರೇಯ. ೧

೯. ಯ ಏಷ ಚಂದ್ರಮಸಿ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮಿ ॥ - ಛಾಂ. ೪-೧೨-೧

೧೦. ಅಮೃತಮಿದಂ ಬ್ರಹ್ಮೇದಂ ಸರ್ವಂ ॥
(ಈ ವಾಕ್ಯವು ಹನ್ನೊಂದು ಸಲ ಬಂದಿದೆ.) - ಬೃಹ. ೨-೫-೨

ಪ್ರಸಿದ್ಧವಾದ ದಶೋಪನಿಷತ್ತುಗಳಿಂದ ನಿದರ್ಶನಕ್ಕಾಗಿ ಒಂದೊಂದು ವಾಕ್ಯವನ್ನು ಮಾತ್ರ ಮೇಲೆ ಉದಾಹರಿಸಲಾಗಿದೆ. ಇಂತಹ ಐಕಾತ್ಮ್ಯ

ಬೋಧಕ ಶ್ರುತಿವಾಕ್ಯಗಳನ್ನು ಅಸಂಖ್ಯಾತವಾಗಿ ಉದಾಹರಿಸಬಹುದು. ಜೀವಾತ್ಮ ಪರಮಾತ್ಮರಿಗೆ ಅಭೇದವನ್ನು ಉಪದೇಶಿಸುವ 'ತತ್ತ್ವಮಸಿ ಶ್ವೇತಕೇತೋ' ಎಂಬುದು ಛಾಂದೋಗ್ಯದಲ್ಲಿ ಒಂಬತ್ತು ಸಲ ಬಂದಿದೆ. ಭೇದವನ್ನು ನಿಂದಿಸುವ ಶ್ರುತಿವಾಕ್ಯಗಳಿವೆ. ಅಭೇದವನ್ನು ನಿಂದಿಸುವ ಒಂದಾದರೂ ಶ್ರುತಿವಾಕ್ಯವಿದೆಯೇನು ? ಅಥವಾ ಜೀವಾತ್ಮನು ಬೇರೆ ಪರಮಾತ್ಮನು ಬೇರೆ ಎಂದು ವಾಚ್ಯಮರ್ಯಾದೆಯಿಂದ ನೇರವಾಗಿ ಹೇಳುವ ಒಂದು ಶ್ರುತಿವಾಕ್ಯವಾದರೂ ದೊರೆಕೀತೇನು ?

ಪರಿಸ್ಥಿತಿ ಹೀಗಿದ್ದರೂ ದ್ವೈತಾಚಾರ್ಯರ ಶಿಷ್ಯರು ತಮ್ಮ ವ್ಯಾಖ್ಯಾನಗಳಲ್ಲಿ ಶ್ರುತಿವಾಕ್ಯಗಳನ್ನು ತಿರುಚಿ ತಿರುಚಿ ಅರ್ಥಮಾಡಿ ವಾದ ಕೋಲಾಹಲವನ್ನೆಬ್ಬಿಸಿ ಅದ್ವೈತವಾದವನ್ನು ನಿಂದಿಸಿದರು. ಅಲ್ಪಾಕ್ಷರ-ಗಳಿರುವ ವಿಶ್ವತೋಮುಖವಾದ ಬ್ರಹ್ಮಸೂತ್ರಗಳನ್ನು ಎಳೆದು ತಿರುಗಿಸಿ ತಮಗೆ ಅನುಕೂಲವಾದ ರೀತಿಯಲ್ಲಿ ಅರ್ಥಮಾಡುವುದು ಅವರಿಗೆ ಏನೂ ಕಷ್ಟವೆನಿಸಲಿಲ್ಲ. ಈ ವಾದಗಳಿಂದ ರೋಸಿಹೋದ ಅಯ್ಯಣ್ಣ-ದೀಕ್ಷಿತರು ನೂತನ ಮಾರ್ಗವೊಂದನ್ನು ಹುಡುಕಿ ತೆಗೆದು ಯಾವ ಕುತರ್ಕಕ್ಕೂ ಅವಕಾಶವೇ ಇಲ್ಲದಂತೆ, ಮಧ್ಯಸ್ಥರ ಸಾಕ್ಷ್ಯವನ್ನವಲಂಬಿಸಿ, ಅದ್ವೈತವೇ ವ್ಯಾಸತಾತ್ಪರ್ಯವೆಂದು ನಿರ್ಣಯಿಸಿದ್ದಾರೆ. ಗ್ರಂಥವು ವಿಸ್ತೃತವಾದೀತೆಂದು ದೀಕ್ಷಿತರು ಇಲ್ಲಿ ದಿಙ್ಮಾತ್ರವನ್ನು ಪ್ರದರ್ಶಿಸಿದ್ದಾ-ರೆಂದು ಹೇಳಬಹುದಾಗಿದೆ. ಇದೇ ದಿಕ್ಕಿನಲ್ಲಿ ಹೊರಟರೆ ಶ್ರೀ ಶಂಕರಾ ಚಾರ್ಯರಿಗಿಂತ ಪೂರ್ವದಲ್ಲಿದ್ದ ವಿವಿಧ ಪುರಾಣಗಳ, ತಂತ್ರಾಗಮಗಳ, ಶಾಸ್ತ್ರವ್ಯಾಖ್ಯಾನಕಾರರ, ಕವಿಗಳ ವಚನಗಳನ್ನು ಸಾಕ್ಷ್ಯವಾಗಿ ಉದಾಹರಿಸಿ ಈ ಗ್ರಂಥವನ್ನು ಇನ್ನೂ ದೊಡ್ಡದಾಗಿ ವಿಸ್ತರಿಸಬಹುದು.

## ಪ್ರಕೃತಗ್ರಂಥಾನುವಾದ

ದ್ವಾರಕಾಪೀಠಾಧೀಶರಾಗಿದ್ದ ಬ್ರಹ್ಮೀಭೂತ ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಮಹಾಸ್ವಾಮಿಗಳು ಈ ವ್ಯಾಸತಾತ್ಪರ್ಯನಿರ್ಣಯದ ಪ್ರಥಮ ಪರಿಚ್ಛೇದವನ್ನು ಕನ್ನಡಕ್ಕೆ ಅನುವಾದಿಸಿದರೆ, ಉತ್ತಮವಾದ

ಅನುವಾದಕ್ಕೆ ಒಂದು ಪಾರಿತೋಷಿಕವನ್ನು ನೀಡುವುದಾಗಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಆದರಿಂದ ಕುತೂಹಲಾವಿಷ್ಟನಾದ ನಾನು ಈ ಸಂಸ್ಕೃತ-ಗ್ರಂಥವನ್ನು ಓದಿ ನೋಡಿದೆನು. ಇದು ಕನ್ನಡದಲ್ಲಿ ಬರುವುದು ಯೋಗ್ಯ-ವೆನಿಸಿದ್ದರಿಂದ ಅನುವಾದ ಕಾರ್ಯದಲ್ಲಿ ತೊಡಗಿದೆನು. ಈ ಅನುವಾದ-ವನ್ನು ಮಾಡಿದ್ದು ಕ್ರಿ.ಶ. ೧೯೫೩ ರಲ್ಲಿ. ಈ ಅನುವಾದಕ್ಕೆ ಸೂಕ್ತವಾದ ಪಾರಿತೋಷಿಕವೂ ಲಭಿಸಿದೆ. ಅನಂತರ ಈ ಹಸ್ತಪ್ರತಿಯು ನನ್ನ ಹಳೆಯ ಕಡತಗಳಲ್ಲಿ ಸೇರಿಹೋಯಿತು. ಮುದ್ರಣವಾಗಲಿಲ್ಲ. ಬೆಂಗಳೂರಿನಲ್ಲಿ **'ಉದಯಪ್ರಕಾಶನ'** ಎಂಬ ಗ್ರಂಥಪ್ರಕಾಶನ ಸಂಸ್ಥೆಯನ್ನು ನಡೆಸುತ್ತಿರುವ **ಶ್ರೀ|| ಮ.ಸು. ಶ್ರೀನಿವಾಸರಾಯರಿಗೆ** ಈ ಅನುವಾದದ ವಿಚಾರವು ಈಚೆಗೆ ಗೊತ್ತಾದಾಗ, ತಾವು ಇದನ್ನು ಪ್ರಕಟಿಸುವುದಾಗಿ ಸ್ವತಃ ಮುಂದೆ ಬಂದರು. ಶ್ರೀ ಶ್ರೀನಿವಾಸರಾಯರು ನನ್ನ ಆಪ್ತ ಮಿತ್ರರು. ಉದಾರ-ಸ್ವಭಾವದವರು. ನನ್ನ ಶ್ರುತಿಸಾರಸಮುದ್ಧರಣವೆಂಬ ಅನುವಾದ-ಗ್ರಂಥವನ್ನು ಅವರೇ ಬೆಳಕಿಗೆ ತಂದಿದ್ದಾರೆ. ಬಹಳ ವರ್ಷಗಳಿಂದ ಕತ್ತಲೆಯಲ್ಲಿ ಅಡಗಿದ್ದ ವ್ಯಾಸತಾತ್ಪರ್ಯನಿರ್ಣಯದ ಅನುವಾದವನ್ನೀಗ ಪ್ರಕಾಶಿಸಿ, ನನ್ನ ವಿಶೇಷವಾದ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಬಹಳ ಹಿಂದೆ ಮಾಡಿದ ಈ ಅನುವಾದವನ್ನು ಮತ್ತೆ ಪರಿಶೋಧಿಸಲು ನನಗೆ ಅವಕಾಶ-ವಾಗಲಿಲ್ಲ. ಆದರೆ ಇದರಲ್ಲಿ ಉದಾಹರಿಸಿರುವ ಸಾಂಖ್ಯ ಸೂತ್ರಗಳಿಗೆ ಗ್ರಂಥಕರ್ತರು ಅರ್ಥವನ್ನು ಬರೆದಿರಲಿಲ್ಲ. ವಾಚಕರ ಸೌಕರ್ಯಕ್ಕಾಗಿ ಆ ಸೂತ್ರಗಳಿಗೆ ನಾನು ಕನ್ನಡದಲ್ಲಿ ಅರ್ಥವನ್ನು ಬರೆದು ಅನುಬಂಧದಲ್ಲಿ ಈಗ ಸೇರಿಸಿದ್ದೇನೆ. ದ್ವಿತೀಯ ಪರಿಚ್ಛೇದವನ್ನು ಸಂಕ್ಷೇಪಿಸಿದ್ದೇವೆ. ಶಿವ ಹೆಚ್ಚು - ವಿಷ್ಣು ಹೆಚ್ಚು ಎಂದು ಜಗಳವಾಡತಕ್ಕವರು ಈ ಭಾಗವನ್ನು ಓದಬೇಕು. ಈ ಗ್ರಂಥದ ಅನುವಾದದಲ್ಲಿ ಪ್ರಮಾದವೇನಾದರೂ ಆಗಿದ್ದರೆ ವಿದ್ವಾಂಸರ ಕ್ಷಮೆಯನ್ನು ಬೇಡುತ್ತೇನೆ. ಜಿಜ್ಞಾಸುಗಳು ಈ ಗ್ರಂಥವನ್ನು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಬೆಂಗಳೂರು — -ಎನ್. ರಂಗನಾಥಶರ್ಮಾ

ತಾ: ೧೨-೧೨-೧೯೯೫

# ಪ್ರಕಾಶಕರ ಎರಡು ಮಾತು

ಸಂಸ್ಕೃತದಲ್ಲಿರುವ ಶಾಸ್ತ್ರೀಯಗ್ರಂಥಗಳನ್ನು, ಪ್ರಧಾನವಾಗಿ ಅದ್ವೈತ ಸಿದ್ಧಾಂತದ ಗ್ರಂಥಗಳನ್ನು ಕನ್ನಡಕ್ಕೆ ಪರಿಣತರಾದ ವಿದ್ವಾಂಸರಿಂದ ಅನುವಾದ ಮಾಡಿಸಿ ಪ್ರಕಾಶಮಾಡಬೇಕೆಂಬ ಉದ್ದೇಶದಿಂದ ಈ ಪ್ರಕಾಶನ ಸಂಸ್ಥೆ ಪ್ರಾರಂಭವಾಗಿದೆ. ಕಥೆ, ಕಾದಂಬರಿ, ಇತ್ಯಾದಿ ಇತರ ಪ್ರಕಾರದ ಗ್ರಂಥಗಳನ್ನು ಪ್ರಕಾಶನ ಮಾಡುವ ನೂರಾರು ಸಂಸ್ಥೆಗಳಿವೆ. ಆದರೆ, ಶಾಸ್ತ್ರೀಯ ಗ್ರಂಥಗಳನ್ನು ಪ್ರಕಾಶನ ಮಾಡುವ ಸಂಸ್ಥೆ ಕನ್ನಡನಾಡಿನಲ್ಲಿ ಇಲ್ಲವೆಂದೇ ಹೇಳಬಹುದು. ಈ ದಿಸೆಯಲ್ಲಿ ಈ ಪ್ರಯತ್ನ.

ಈಗಾಗಲೇ, ನಮ್ಮ ನಾಡಿನ ಪ್ರಸಿದ್ಧ ವಿದ್ವಾಂಸರಾದ ವಿದ್ವಾನ್ ಎನ್. ರಂಗನಾಥಶರ್ಮರು ಅನುವಾದ ಮಾಡಿದ ಅದ್ವೈತ ಸಿದ್ಧಾಂತದ ಪ್ರಕರಣ ಗ್ರಂಥವಾದ ಶ್ರೀ ತೋಟಕಾಚಾರ್ಯರ ''ಶ್ರುತಿಸಾರಸಮುದ್ಧರಣಂ'' ಎಂಬ ಗ್ರಂಥವನ್ನು ಪ್ರಕಾಶನ ಮಾಡಲಾಗಿದೆ. ಆ ಗ್ರಂಥಕ್ಕೆ ನಮ್ಮ ನಾಡಿನ ವಿದ್ವಾಂಸರುಗಳಿಂದ ಸಿಕ್ಕಿದ ಅಭಿಮಾನ ಮತ್ತು ಪ್ರೋತ್ಸಾಹಗಳಿಂದ ಉತ್ತೇಜಿತನಾಗಿದ್ದೇನೆ. ಇಂತಹ ಶಾಸ್ತ್ರೀಯ ಗ್ರಂಥದ ಮಾರಾಟವೂ ಒಂದು ಸಾಧನೆಯೇ ಸರಿ. ಹಾಗಿದ್ದರೂ, ಸಹ ಈ ದಿಸೆಯಲ್ಲಿ ಇದೇ ಪ್ರಕಾರದ ಮತ್ತೊಂದು ಪ್ರಕಟನೆಗೆ ಕೈ ಹಾಕಿದ್ದೇನೆ.

ಶ್ರೀ ಬಾದರಾಯಣರ ಬ್ರಹ್ಮಸೂತ್ರಗಳು ಕೇವಲ ಅದ್ವೈತ ಸಿದ್ಧಾಂತವನ್ನೇ ಪ್ರತಿಪಾದಿಸುತ್ತವೆ ಎಂದು ನಿರ್ಣಯಾತ್ಮಕವಾಗಿ ನಿರೂಪಣೆ ಮಾಡಿರುವ ಶ್ರೀ ಅಯ್ಯಣ್ಣ ದೀಕ್ಷಿತರ ''ವ್ಯಾಸತಾತ್ಪರ್ಯನಿರ್ಣಯ'' ಎಂಬ ಗ್ರಂಥದ ಕನ್ನಡ ಅನುವಾದವನ್ನು ವಿದ್ವಾನ್ ಎನ್. ರಂಗನಾಥ ಶರ್ಮರು ಮಾಡಿಕೊಟ್ಟಿರುತ್ತಾರೆ. ಇದನ್ನು ಈಗ ಪ್ರಕಟನೆ ಮಾಡಲು ನಮಗೆ ಹರ್ಷವಾಗುತ್ತದೆ. ಈ ಗ್ರಂಥವನ್ನೂ ಸಹ ಎಲ್ಲ ಸಹೃದಯರೂ ಆದರಾಭಿಮಾನಗಳಿಂದ ಸ್ವೀಕರಿಸಿ, ಇದೇ ರೀತಿ ಮುಂದಿನ ಗ್ರಂಥಗಳ ಪ್ರಕಾಶನೆಗೆ ಉತ್ತೇಜನೆ ನೀಡುತ್ತಾರೆಂದು ಆಶಿಸಲಾಗಿದೆ. ಈ ಸಂಸ್ಕೃತ ಗ್ರಂಥವನ್ನು ಕನ್ನಡಕ್ಕೆ ಅನುವಾದ ಮಾಡಿ ನಮ್ಮ ಸಂಸ್ಥೆಯ ಮೂಲಕ

ಪ್ರಕಾಶನ ಮಾಡಲು ಅನುಮತಿ ನೀಡಿರುವ ವಿದ್ವಾನ್ ಎನ್. ರಂಗನಾಥಶರ್ಮಾ ಅವರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಗ್ರಂಥದ ಪ್ರಕಟನೆಗೆ ಉತ್ತೇಜನವನ್ನು ನೀಡಿ ಸಹಕರಿಸಿದ ಪ್ರೊ. ಎಸ್. ರಾಮಚಂದ್ರಶಾಸ್ತ್ರಿಗಳಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ಈ ಪುಸ್ತಕದ ಅಕ್ಷರದೋಷವನ್ನು ತಿದ್ದಿ ಸಹಕರಿಸಿದ ಡಾ|| ಎಸ್. ಆರ್. ಲೀಲಾ ಪಿ.ಹಚ್‌ಡಿ. ರವರಿಗೂ ನಾನು ಕೃತಜ್ಞನಾಗಿದ್ದೇನೆ. ಅಲ್ಲದೆ ವೇದವ್ಯಾಸಮಹರ್ಷಿಗಳ ಭಾವಚಿತ್ರವನ್ನು ಇಲ್ಲಿ ಪ್ರಕಾಶಿಸಲು ಅನುಮತಿಯನ್ನು ನೀಡಿದ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆ, ನರಸಿಂಹರಾಜಕಾಲೋನಿ - ಇದರ ವ್ಯವಸ್ಥಾಪಕರ ಉಪಕಾರವನ್ನು ಸ್ಮರಿಸಿ ಕೊಳ್ಳುತ್ತೇನೆ.

ಮ. ಸು. ಶ್ರೀನಿವಾಸರಾಯ

ಪ್ರಕಾಶಕರು

ಶ್ರೀಮದಯ್ಯಣ್ಣದೀಕ್ಷಿತ ವಿರಚಿತ

# ವ್ಯಾಸತಾತ್ಪರ್ಯನಿರ್ಣಯ

ರಮೆಯರಸನಾಗಿ ರಜನೀ
ರಮಣಾಂಕಿತಮೌಳಿಯಾಗಿ ಜಗದುಪಸೇವ್ಯಮ್ ।
ವಿಮಲಾತ್ಮನಾಗಿ ಸೇವಕ
ಸಮಜೀವರ ಭಾವಮಾಂತು ಮಾಯೆಯ ವಶದಿಮ್ ॥ ೧

ಜೀವರ್ಗೆ ಭೋಗ್ಯಪದಮ-
ಪ್ಪೀ ವಿಶ್ವದ ರೂಪದಿಂದೆ ಮೆರೆಯುತೆ ನಿಜದಿಮ್ ।
ತೀವಿದ ಸಚ್ಚಿತ್ಸುಖಗಳ
ಭಾವಮನಾ ಬ್ರಹ್ಮವಸ್ತುವಂ ಸಂಸ್ತುತಿಪೆಮ್ ॥ ೨

ಸಕಲ ಪ್ರಪಂಚ ನಿಕುರುಂ-
ಬಕೆ ತಾನಾಧಾರಮಾಗಿ ಕಲ್ಯಾಣಗುಣಾ-
ತ್ಮಕದ ಬ್ರಹ್ಮದ ನಿಲುವಂ
ಪ್ರಕಟಿಸುವೆಂ ಪೂಜ್ಯಶಂಕರಾರ್ಯರ ಮತದಿಮ್ ॥ ೩

## ಪ್ರಥಮ ಪರಿಚ್ಛೇದ

ಪರಮಕಾರುಣಿಕನಾದ ಭಗವಾನ್ ನಾರಾಯಣನು ಸಕಲ ಜನರನ್ನೂ ಅನುಗ್ರಹಿಸುವುದಕ್ಕಾಗಿ ವ್ಯಾಸಮಹರ್ಷಿಯಾಗಿ ಅವತರಿಸಿದನು. ವ್ಯಾಸ ಮಹರ್ಷಿಗಳು 'ಅಥಾತೋ ಬ್ರಹ್ಮಜಿಜ್ಞಾಸಾ' ಎಂದು ಪ್ರಾರಂಭಿಸಿ

**'ಅನಾವೃತ್ತಿಃ ಶಬ್ದಾತ್'** ಎಂಬ ಸೂತ್ರದಿಂದ ಮುಗಿಯುವ ಬ್ರಹ್ಮಸೂತ್ರ-ಗಳನ್ನು ವಿರಚಿಸಿದರು. ಏಕೆಂದರೆ, ಉಪನಿಷತ್ತಿನ ವಾಕ್ಯಗಳು ಸಾಮಾನ್ಯವಾಗಿ ಒಂದಕ್ಕೊಂದು ವಿರುದ್ಧವಾದ ಅರ್ಥವನ್ನು ಹೇಳು-ತ್ತಿರುವಂತೆ ತೋರುತ್ತವೆ. ಇಂತಹ ವಾಕ್ಯಗಳನ್ನು ವಿರೋಧವಿಲ್ಲದಂತೆ ಸಮನ್ವಯಮಾಡಿಕೊಂಡು ಸರಿಯಾಗಿ ಅರ್ಥಮಾಡಿಕೊಳ್ಳುವುದು ಎಲ್ಲರಿಗೂ ಸಾಧ್ಯವಲ್ಲ. ಆದ್ದರಿಂದ ಇವುಗಳನ್ನು ಸಮನ್ವಯಗೊಳಿಸಿ ವೇದಾಂತ ನಿರ್ಣಯವನ್ನು ಬೋಧಿಸುವುದೇ ಬ್ರಹ್ಮಸೂತ್ರಗಳ ಉದ್ದೇಶ. ಮನುಷ್ಯನಿಗೆ ಮೋಕ್ಷವು ಪರಮಪುರುಷಾರ್ಥ. ಪರಮಾತ್ಮನ ಜ್ಞಾನವು ಮೋಕ್ಷಕ್ಕೆ ಸಾಧನ. ಬ್ರಹ್ಮಸೂತ್ರಗಳಿಂದ ಪರಮಾತ್ಮ ಜ್ಞಾನವುಂಟಾಗುತ್ತದೆ. ಏಕಾದಶರುದ್ರ ಸಂಹಿತೆಯ ಶೈವಕಾಂಡದಲ್ಲಿ ಹೀಗೆ ಹೇಳಿದೆ: ''ವೇದವ್ಯಾಸ ಮಹರ್ಷಿಗಳು ಶ್ರೀಮನ್ನಾರಾಯಣನ ಅಂಶಾವತಾರ. ಅವರು ವೇದಾಂತ-ವಾಕ್ಯಗಳ ಅರ್ಥವನ್ನು ಅರಿತುಕೊಳ್ಳಲಾರದ ಜನರ ಮೇಲೆ ಕರುಣೆಯಿಟ್ಟು ವೇದಾಂತಶಾಸ್ತ್ರವನ್ನು ಸೂತ್ರರೂಪವಾಗಿ ರಚಿಸಿದರು. ಹೀಗೆ ರಚಿಸುವಂತೆ ಶಿವನು ಅವರಿಗೆ ಆಜ್ಞೆಯಿತ್ತನು.''

ವೇದವ್ಯಾಸರು ಬರೆದ ಬ್ರಹ್ಮಸೂತ್ರಗಳ ಅರ್ಥವನ್ನೂ ಸಾಮಾನ್ಯ ಜನರು ಸ್ಪಷ್ಟವಾಗಿ ತಿಳಿದುಕೊಳ್ಳಲಾರದೆ ಹೋದರು. ಆದುದರಿಂದ ಭಗವತ್ಪಾದ ಶ್ರೀಶಂಕರಾಚಾರ್ಯ - ಭಟ್ಟಭಾಸ್ಕರ - ಶ್ರೀಕಂಠಾಚಾರ್ಯ - ಯಾದವಪ್ರಕಾಶ - ರಾಮಾನುಜ - ಮಧ್ವ - ಚಿತ್ಪ್ರಕಾಶ - ವಲ್ಲಭ ಮೊದಲಾದ ಭಾಷ್ಯಕಾರರು ಈ ಬ್ರಹ್ಮಸೂತ್ರಗಳಿಗೆ ತಮ್ಮ ತಮ್ಮ ಅಭಿಪ್ರಾಯಗಳಿಗೆ ಅನುಸಾರವಾಗಿ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಅವುಗಳಲ್ಲಿ ''ಜೀವಾತ್ಮರಿಗೂ ಪರಬ್ರಹ್ಮಕ್ಕೂ ಅಭೇದವಿದೆ. ಈ ಅಭೇದವು ಸ್ವಾಭಾವಿಕವೂ ಹೌದು, ಪಾರಮಾರ್ಥಿಕವೂ ಹೌದು. ಭೇದವು ಉಪಾಧಿಯಿಂದ ತೋರುತ್ತದೆ. ಅದು ಪಾರಮಾರ್ಥಿಕವಲ್ಲ'' ಎಂದು ಭಗವತ್ಪಾದಶಂಕರಾಚಾರ್ಯರ ಮತ. ''ಜೀವಾತ್ಮರಿಗೂ ಪರಬ್ರಹ್ಮಕ್ಕೂ ಅಭೇದವಿದೆ. ಈ ಅಭೇದವು ಸ್ವಾಭಾವಿಕವೂ ಹೌದು; ಪಾರಮಾರ್ಥಿಕವೂ

ಹೌದು. ಭೇದವು ಉಪಾಧಿಯಿಂದ ತೋರುತ್ತದೆ. ಆದರೂ ಜೀವ-ಸ್ಥಿತಿಯಲ್ಲಿ ಭೇದವು ಪಾರಮಾರ್ಥಿಕವೇ ಸರಿ'' ಎಂದು ಭಟ್ಟ ಭಾಸ್ಕರರ ಮತ. ''ಜೀವಾತ್ಮರಿಗೂ ಪರಬ್ರಹ್ಮಕ್ಕೂ ಸ್ವಾಭಾವಿಕವಾದ ಭೇದವೂ ಇದೆ. ಅಭೇದವೂ ಇದೆ'' ಎಂದು ಯಾದವ ಪ್ರಕಾಶರ ಮತ. ಶ್ರೀಕಂಠಾಚಾರ್ಯ ಮತ್ತು ರಾಮಾನುಜಾಚಾರ್ಯರ ಮತದಲ್ಲಿ ''ಜೀವಾತ್ಮ ಪರಬ್ರಹ್ಮರಿಗೆ ಸ್ವಾಭಾವಿಕವಾದ ಭೇದವೂ ವಿಶಿಷ್ಟಾದ್ವೈತವೂ ಇದೆ.'' ಆದರೆ ಶ್ರೀಕಂಠಾಚಾರ್ಯರಿಗೆ ಶಿವನೇ ಪರಮದೇವತೆ. ರಾಮಾನುಜಾಚಾರ್ಯರಿಗೆ ವಿಷ್ಣುವೇ ಪರಮದೇವತೆ ಎಂಬುದಿಷ್ಟೇ ವ್ಯತ್ಯಾಸ. ಮಧ್ವಾಚಾರ್ಯರ ಮತದಲ್ಲಿ ಜೀವಾತ್ಮಪರಬ್ರಹ್ಮರಿಗೆ ಸ್ವಾಭಾವಿಕವಾದ ಭೇದವೇ ಇದೆ. (ಅವರು ವಿಶಿಷ್ಟಾದ್ವೈತವನ್ನು ಒಪ್ಪುವುದಿಲ್ಲ) ಸ್ಕಾಂದ ಪುರಾಣದಲ್ಲಿ ''ಎಲೈ ದ್ವಿಜರೆ, ಈ ವೈದಿಕಮಾರ್ಗವನ್ನು ಪ್ರಯತ್ನಪೂರ್ವಕವಾಗಿ ಸ್ಥಾಪಿಸಿರಿ. ಈ ಮಾರ್ಗವು ಸ್ಥಾಪಿತವಾದರೆ ಸಕಲವೂ ಸುಸ್ಥಿರವಾಗಿ ಉಳಿಯುವುದು. ಯಾವ ಮನುಷ್ಯನು ವೈದಿಕ ಮಾರ್ಗವನ್ನು ಸ್ಥಾಪಿಸಲು ಶಕ್ತನಾಗಿದ್ದರೂ ಮೋಹವಶನಾಗಿ ಆ ಕಾರ್ಯದಲ್ಲಿ ತೊಡಗುವುದಿಲ್ಲವೋ ಅವನು ವೇದಮಾರ್ಗದ ನಾಶಕನೂ ಪಾಪಿಯೂ ಆಗುವನು. ತಾನು ಅಶಕ್ತ-ನಾಗಿದ್ದರೂ ಈ ಮಾರ್ಗವನ್ನು ಸ್ಥಾಪಿಸಲು ಪ್ರಯತ್ನಿಸುವವನು ಸರ್ವಪಾಪದಿಂದಲೂ ಬಿಡುಗಡೆ ಹೊಂದಿ ತತ್ತ್ವಜ್ಞಾನವನ್ನು ಪಡೆಯುವನು. ವೇದಮಾರ್ಗದ ಪ್ರವರ್ತಕನನ್ನು ಯಾವನು ವಿದ್ಯಾಮದದಿಂದ ಕಪಟೋಪಾಯಗಳ ಮೂಲಕ ಗೆಲ್ಲುತ್ತಾನೋ ಅವನು ಮಹಾಪಾತಕಿಯಾಗುವನು''[೧] ಎಂದು ಉಕ್ತವಾಗಿದೆ. ಆದುದರಿಂದ ಉಪನಿಷತ್ತುಗಳ ತಾತ್ಪರ್ಯವು ಇದೇ ಎಂದು ನಿರ್ಣಯಿಸುವುದು ನಮಗೆ ಅವಶ್ಯ ಕರ್ತವ್ಯವೇ ಆಗಿರುತ್ತದೆ. ಹಿಂದೆ ಹೇಳಿದಂತೆ ಅನೇಕ ಭಾಷ್ಯಕಾರರು ನಾನಾ ವಿಧವಾಗಿ ತಮ್ಮ ಅಭಿಪ್ರಾಯಗಳನ್ನು ವಿವರಿಸುವಾಗ ಅವುಗಳಲ್ಲಿ

(೧) ಸೂತ. ಜ್ಞಾನ. ೨೦-(೫೪-೫೭) ॥

ವ್ಯಾಸರಿಗೆ ಸಂಮತವಾದ ಅರ್ಥ ಯಾವುದು ಎಂದು ಸಂದೇಹವುಂಟಾಗುವುದು. ಆದ್ದರಿಂದ ನಾವು ಈಗ ಒಂದು ನಿರ್ಣಯವನ್ನು ಮಾಡಬೇಕಾಗಿದೆ. ಕೇವಲಾದ್ವೈತವೇ ವ್ಯಾಸರಿಗೆ ಸಂಮತವಾದ ಅರ್ಥವೆಂದು ನಾವು ಸಿದ್ಧಾಂತ ಮಾಡುತ್ತೇವೆ.

ಇಲ್ಲಿ ಒಂದು ಶಂಕೆಯುಂಟಾಗಬಹುದು. ಏನೆಂದರೆ,

> ದ್ವಾಪರೇ ದ್ವಾಪರೇ ವಿಷ್ಣುರ್ವ್ಯಾಸರೂಪೀ ಮಹಾಮುನೇ ।
> ಚತುರ್ಭಿಃ ಸಹ ಶಿಷ್ಯೈಸ್ತು ಶಂಕರೋಽವತರಿಷ್ಯತಿ ॥

"ಪ್ರತಿಯೊಂದು ದ್ವಾಪರ ಯುಗದಲ್ಲಿಯೂ ವಿಷ್ಣುವು ವ್ಯಾಸರೂಪದಿಂದ ಅವತರಿಸುತ್ತಾನೆ. ಶಿವನು ನಾಲ್ಕು ಮಂದಿ ಶಿಷ್ಯರೊಡನೆ ಶಂಕರಾಚಾರ್ಯ ರೂಪದಿಂದ ಅವತರಿಸುವನು" ಇತ್ಯಾದಿ ಪುರಾಣ ವಾಕ್ಯಗಳಿಂದ ಶ್ರೀ ಶಂಕರಭಗವತ್ಪಾದರು ಸಾಕ್ಷಾತ್ ಶಿವನ ಅವತಾರವೆಂದು ತಿಳಿದು ಬರುತ್ತದೆ. ಮತ್ತು

> ತಾಮಷ್ಟಾದಶಧಾ ದೃಷ್ಟ್ವಾ ಶಂಕರಃ ಸೂತಸಂಹಿತಾಮ್ ।
> ಚಕ್ರೇ ಶಾರೀರಕಂ ಭಾಷ್ಯಂ ಸರ್ವಶ್ರುತಿಮನೋಹರಮ್ ॥

"ಶಂಕರಾಚಾರ್ಯರು ಸೂತಸಂಹಿತೆಯನ್ನು ಹದಿನೆಂಟು ಸಲ ಓದಿ ನೋಡಿ ಸಕಲವೇದವಾಕ್ಯಗಳಿಗೂ ಸಂಮತವಾದ ಶಾರೀರಕ ಭಾಷ್ಯವನ್ನು ವಿರಚಿಸಿದರು" ಇತ್ಯಾದಿ ವಚನಗಳಿಂದ ಶಂಕರಾಚಾರ್ಯರ ಭಾಷ್ಯವು ಸೂತಸಂಹಿತಾಮೂಲಕವೆಂದು ವ್ಯಕ್ತವಾಗುತ್ತದೆ. ಆದ್ದರಿಂದ ಶಂಕರಾಚಾರ್ಯರಿಗೆ ಸಂಮತವಾದ ಕೇವಲಾದ್ವೈತವೇ ವ್ಯಾಸಸಂಮತವೆಂದು ಸ್ಪಷ್ಟವಾಗುತ್ತದೆ. ಹೀಗಿರಲಾಗಿ ಪುನಃ ವ್ಯಾಸತಾತ್ಪರ್ಯವನ್ನು ನಿರ್ಣಯಿಸುವುದಕ್ಕೋಸ್ಕರ ಈ ಗ್ರಂಥವನ್ನು ಬರೆಯುವುದು ವ್ಯರ್ಥವಲ್ಲವೇ ? ನಿಜ; ಆದರೂ

> ಅನಂತಃ ಪ್ರಥಮಂ ರೂಪಂ ಲಕ್ಷ್ಮಣಸ್ತು ತತಃ ಪರಮ್ ।
> ಬಲಭದ್ರಸ್ತೃತೀಯಶ್ಚ ಕಲೌ ಕಶ್ಚಿದ್ ಭವಿಷ್ಯತಿ ॥

"ಆದಿಶೇಷನು ಮೊದಲನೆಯವನು. ಅವನ ಎರಡನೆಯ ರೂಪವೇ ಲಕ್ಷ್ಮಣ. ಮೂರನೆಯವನೇ ಬಲರಾಮ. ಕಲಿಯುಗದಲ್ಲಿ ಅವನೇ ಬೇರೊಂದು ರೂಪದಿಂದ ಅವತರಿಸುವನು" ಇತ್ಯಾದಿ ವಚನಗಳಿಂದ ರಾಮಾನುಜಾಚಾರ್ಯರು ಆದಿಶೇಷನ ಅವತಾರವೆಂದು ಗೊತ್ತಾಗುತ್ತದೆ. ಮತ್ತು ರಾಮಾನುಜ ಭಾಷ್ಯಾರಂಭದಲ್ಲಿ "ಭಗವಾನ್ ಬೋಧಾಯನರು ಬರೆದ ವಿಸ್ತಾರವಾದ ಬ್ರಹ್ಮಸೂತ್ರವೃತ್ತಿಯನ್ನು ಪೂರ್ವಾಚಾರ್ಯರು ಸಂಕ್ಷೇಪವಾಗಿ ಬರೆದರು. ಅವರ ಮತಾನುಸಾರವಾಗಿ ಬ್ರಹ್ಮಸೂತ್ರಗಳನ್ನು ವ್ಯಾಖ್ಯಾನ ಮಾಡುತ್ತೇವೆ. **ಅಥಾತೋ ಬ್ರಹ್ಮಜಿಜ್ಞಾಸಾ**" ಹೀಗೆಂದು ಬರೆದಿರುವುದರಿಂದ ರಾಮಾನುಜಭಾಷ್ಯವು ಬೋಧಾಯನ ವೃತ್ತಿಮೂಲಕ ಆದದ್ದೆಂದು ತಿಳಿದು ಬರುತ್ತದೆ. ಆದ್ದರಿಂದ ರಾಮಾನುಜಾಚಾರ್ಯರ ಮತವೇ ವ್ಯಾಸಸಂಮತವೆಂದೂ ಹೇಳಬಹುದಾಗುತ್ತದೆ. ಹೀಗೆಯೇ-

**ಪ್ರಥಮೋ ಹನುಮಾನ್ನಾಮ ದ್ವಿತೀಯೋ ಭೀಮಸೇನಕಃ ।**
**ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ ॥**

"ವಾಯುದೇವನು ಮೊದಲು ಹನುಮಂತನಾಗಿಯೂ, ಆಮೇಲೆ ಭೀಮಸೇನನಾಗಿಯೂ, ಮೂರನೆಯ ಸಲ ಪೂರ್ಣಪ್ರಜ್ಞಾಚಾರ್ಯನಾಗಿಯೂ ಅವತರಿಸಿ ಭಗವಂತನ ಕಾರ್ಯವನ್ನು ಸಾಧಿಸಿದ್ದಾನೆ" ಇತ್ಯಾದಿ ವಚನಗಳಿಂದ ಮಧ್ವಾಚಾರ್ಯರು ವಾಯುದೇವನ ಅವತಾರವೆಂದು ತಿಳಿದು ಬರುತ್ತದೆ. ಮಧ್ವಭಾಷ್ಯವು ಆ ಮತದಲ್ಲಿ ಪ್ರಸಿದ್ಧವಾದ ಬ್ರಹ್ಮತರ್ಕ, ಮೂಲರಾಮಾಯಣ ಮೊದಲಾದ ಗ್ರಂಥಗಳ ಆಧಾರದಿಂದ ರಚಿಸಲ್ಪಟ್ಟಿದೆಯೆಂದು ಪ್ರತೀತಿ ಇದೆ. ಆದ್ದರಿಂದ ಮಧ್ವಾಚಾರ್ಯಮತವೇ ವ್ಯಾಸಸಂಮತವೆಂದೂ ಹೇಳಬಹುದಾಗಿದೆ. ಹಾಗೆಯೇ ಭಟ್ಟ ಭಾಸ್ಕರ, ಯಾದವಪ್ರಕಾಶ, ಶ್ರೀಕಂಠಾಚಾರ್ಯ, ಚಿತ್ಸುಖ, ಚಿದ್ವಿವರಣ, ವಲ್ಲಭ ಮೊದಲಾದ ಭಾಷ್ಯಕಾರರೂ ಬೇರೆ ಬೇರೆ ದೇವತೆಗಳ ಅವತಾರ ಸ್ವರೂಪರೆಂದು ಅವರ ಮತಗ್ರಂಥಗಳಲ್ಲಿ ಪ್ರಸಿದ್ಧವಾಗಿದೆ. ಅವರ

ಭಾಷ್ಯಗಳು ಪ್ರಾಮಾಣಿಕಗಳೆಂದು ಆಯಾ ಮತಗ್ರಂಥಗಳಲ್ಲಿ ಹೇಳಿದೆ. ಆದ್ದರಿಂದ ಅವರಿಗೆ ಅಭಿಮತವಾದ ಅರ್ಥದಲ್ಲಿಯೇ ವ್ಯಾಸತಾತ್ಪರ್ಯ-ವಿದೆಯೆಂದೂ ತೋರುತ್ತದೆ. ಪರಿಸ್ಥಿತಿಯು ಹೀಗಿರಲಾಗಿ ಪರಸ್ಪರ ವಿರುದ್ಧ ವಿಷಯವನ್ನು ಪ್ರತಿಪಾದಿಸುವ ಈ ಭಾಷ್ಯಗಳನ್ನು ಓದುವ ಸಾಮಾನ್ಯ ಜನರಿಗೆ ನಿಜವಾಗಿಯೂ ವ್ಯಾಸಸಂಮತವಾದ ಅರ್ಥವು ಯಾವುದು ಎಂದು ಸಂಶಯ ಉಂಟಾಗುತ್ತದೆ. ಆ ಸಂಶಯವನ್ನು ಪರಿಹರಿಸಿ ನಿರ್ಣಯವನ್ನು ತಿಳಿಸುವುದಕ್ಕಾಗಿ ಈ ಗ್ರಂಥವು ಆವಶ್ಯಕವೇ ಆಗಿದೆ. ಇದು ವ್ಯರ್ಥವಲ್ಲ.

ವಸ್ತುಸ್ಥಿತಿ ಹೀಗಿರಲು ಇನ್ನು ವಿಚಾರಮಾಡೋಣ-

ವ್ಯಾಸತಾತ್ಪರ್ಯವನ್ನು ನಿರ್ಣಯಿಸುವುದಕ್ಕೆ ಸೂತಸಂಹಿತೆ, ಬೋಧಾಯನ ವೃತ್ತಿ ಮೊದಲಾದ ಗ್ರಂಥಗಳೂ, ಅವುಗಳನ್ನು ಆಧಾರವಾಗಿಟ್ಟುಕೊಂಡು ಬರೆದ ಭಾಷ್ಯಗಳೂ ಪ್ರಮಾಣವೆಂದು ತಿಳಿಯಬೇಕೆ? ಅಥವಾ ಇವುಗಳಲ್ಲಿ ಯಾವುದಾದರೂ ಒಂದು ಪ್ರಮಾಣವೆಂದು ಸ್ವೀಕರಿಸಬೇಕೆ? ಅಥವಾ ಇವುಗಳೆಲ್ಲವೂ ಅಪ್ರಮಾಣವೆಂದೂ ತಳ್ಳಿಹಾಕಬೇಕೆ? ಎಲ್ಲಾ ಗ್ರಂಥಗಳೂ ಪ್ರಮಾಣವೆಂದು ಹೇಳುವುದಾದರೆ ಒಂದು ವಸ್ತು ನಾನಾ ವಿಧವಾಗಿದೆಯೆಂದು ಒಪ್ಪಬೇಕಾಗುವುದು. ಏಕೆಂದರೆ, ಈ ಗ್ರಂಥಗಳಲ್ಲಿ ಒಂದೇ ವಸ್ತುವನ್ನು ತಮಗೆ ತೋರಿದಂತೆ ಬೇರೆ ಬೇರೆ ವಿಧವಾಗಿ ವರ್ಣಿಸಿದ್ದಾರೆ. ಇದು ಸರಿಯಲ್ಲ. ಒಂದೇ ವಸ್ತು ವಿರುದ್ಧವಾದ ನಾನಾ ಸ್ವರೂಪವನ್ನು ಹೊಂದಿರಲಾರದು. ಈ ಗ್ರಂಥಗಳೆಲ್ಲವನ್ನೂ ಅಪ್ರಮಾಣ-ವೆಂದು ತಳ್ಳಿ ಹಾಕುವುದೂ ಸರಿಯಲ್ಲ. ಇವುಗಳಲ್ಲಿ ಪ್ರತಿಪಾದಿಸಿರುವ ಭೇದವನ್ನೋ, ಅಭೇದವನ್ನೋ ಅಥವಾ ಇನ್ನೊಂದು ಅಂಶವನ್ನೋ ಶ್ರುತಿಗಳೂ, ಬ್ರಹ್ಮಸೂತ್ರಗಳೂ ಅವಶ್ಯವಾಗಿ ಪ್ರತಿಪಾದಿಸಿರಲೇ-ಬೇಕಾದ್ದರಿಂದ ಅವುಗಳೂ ಅಪ್ರಮಾಣವೆಂದು ಹೇಳಬೇಕಾಗುವುದು. ಆಗ ವೇದಾಂತಶಾಸ್ತ್ರವೇ ನಿರ್ಮೂಲವಾಗಬೇಕಾದೀತು. ಆದುದರಿಂದ

ಇವುಗಳಲ್ಲಿ ಯಾವುದೋ ಒಂದು ಗ್ರಂಥವೇ ಪ್ರಮಾಣವೆಂದು ಅಂಗೀಕರಿಸಬೇಕು. ಆ ಭಾಷ್ಯ ಗ್ರಂಥ ಯಾವುದು ಎಂದು ನಿರ್ಣಯಿಸಲು ಯಾರಿಗೂ ಶಕ್ಯವಿಲ್ಲ.

ಈ ಸಂದರ್ಭದಲ್ಲಿ ಒಂದು ಶಂಕೆ ಮೂಡಬಹುದು. ''ಶ್ರೀ ಶಂಕರಾಚಾರ್ಯ - ಭಟ್ಟಭಾಸ್ಕರ - ಯಾದವ ಪ್ರಕಾಶ - ಶ್ರೀಕಂಠ - ರಾಮಾನುಜ - ಮಧ್ವ - ಚಿದ್ವಿವರಣ - ವಲ್ಲಭ ಮೊದಲಾದವರ ಭಾಷ್ಯಗಳನ್ನು ವಿದ್ವಾಂಸರು ಪರ್ಯಾಲೋಚಿಸಲಿ. ತಾತ್ಪರ್ಯನಿರ್ಣಯಕ್ಕೆ ಉಪಕ್ರಮೋಪಸಂಹಾರಾದಿ ಷಡ್ವಿಧಲಿಂಗಗಳು ಬೇಕಷ್ಟೆ. ಈ ಲಿಂಗಗಳನ್ನು ಯಾವ ಭಾಷ್ಯದಲ್ಲಿ ಪೂರ್ವಮೀಮಾಂಸಾ ನ್ಯಾಯಗಳಿಂದ ಉಪೋದ್ಬಲಿಸಿ ಸರಿಯಾದ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ ? ಎಂದು ವಿಚಾರಿಸಬೇಕು. ಉಪನಿಷತ್ತುಗಳು ಮತ್ತು ಬ್ರಹ್ಮಸೂತ್ರಗಳ ಸ್ವಾರಸ್ಯ ಬಲಾಬಲಗಳನ್ನು ಪರಿಶೀಲಿಸಬೇಕು. ಹೀಗೆ ವಿಮರ್ಶೆಮಾಡಿ ಈ ಅರ್ಥವೇ ವ್ಯಾಸಸಂಮತ-ವೆಂದೂ, ಇದನ್ನು ಪ್ರತಿಪಾದಿಸುವ ಭಾಷ್ಯವೇ ಪ್ರಮಾಣವೆಂದೂ ನಿರ್ಧರಿಸಲು ಸಾಧ್ಯವಿಲ್ಲವೇ ?''

ಸಾಧ್ಯವಿಲ್ಲ; ಹಿಂದೆ ಹೇಳಿದ ಉಪಕ್ರಮಾದಿಲಿಂಗಗಳಿಂದಲೇ ಶ್ರುತಿ ಸೂತ್ರಗಳ ಸ್ವಾರಸ್ಯ ಬಲಾಬಲಗಳನ್ನು ವಿಮರ್ಶೆಮಾಡಿ ಎಲ್ಲಾ ಭಾಷ್ಯಗಳಲ್ಲಿಯೂ ತಮ್ಮ ತಮ್ಮ ಅಭಿಪ್ರಾಯಗಳೇ ವ್ಯಾಸಸಂಮತವೆಂದು ನಿರ್ಣಯಿಸಿರುತ್ತಾರೆ. ಆದ್ದರಿಂದ ವಿಶೇಷ ರೀತಿಯಲ್ಲಿ ಬಲಾಬಲಗಳನ್ನು ನಿಶ್ಚಯಿಸಲು ಸಾಧ್ಯವಾಗುವುದಿಲ್ಲ. ಇನ್ನು ಯುಕ್ತಿಗಳಿಂದಲೂ ಶ್ರುತಿಗಳ ಸ್ವಾರಸ್ಯ ಬಲಾಬಲಗಳಿಂದಲೂ ನಾವೇ ವ್ಯಾಸತಾತ್ಪರ್ಯವನ್ನು ನಿರ್ಣಯಿಸಿ ಬಿಡೋಣವೆಂದರೆ, ಅದೂ ಆಗದ ಮಾತು. ಏಕೆಂದರೆ, ಯುಕ್ತಿ ಮಾತ್ರ ಬಲದಿಂದ ವ್ಯಾಸತಾತ್ಪರ್ಯವನ್ನು ನಿರ್ಣಯಿಸಬೇಕೆ ? ಶ್ರುತಿಮಾತ್ರ-ಬಲದಿಂದಲೆ ? ಅಥವಾ ಶ್ರುತಿಯೊಡಗೂಡಿದ ಯುಕ್ತಿಯಿಂದಲೇ ? ಎಂಬುದಾಗಿ ಆಗ ಮೂರು ವಿಕಲ್ಪಗಳಾಗುತ್ತವೆ. ಇವುಗಳಲ್ಲಿ ಮೊದಲನೆಯ ವಿಕಲ್ಪ ಸರಿಯಲ್ಲ. ಯುಕ್ತಿಯಿಂದಲೇ ಏಕೆ

ನಿರ್ಣಯಿಸಬೇಕು ? ಎರಡು ಮತ್ತು ಮೂರನೆಯ ಪಕ್ಷಗಳಿಂದ ಏಕೆ ನಿರ್ಣಯಿಸಬಾರದು ? ಎಂದು ಕೇಳಿದರೆ ಉತ್ತರವಿಲ್ಲದೆ ಹೋದೀತು. ಮತ್ತು ಉಪಕ್ರಮೋಪಸಂಹಾರಾದಿ ಯುಕ್ತಿಯೂ ಇಲ್ಲವಾಗಿ ಇದು ಮೂರನೆಯ ವಿಕಲ್ಪದಲ್ಲಿ ಕೂಡಿಹೋಗುತ್ತದೆ. ಮತ್ತು ಮೂರನೆಯ ವಿಕಲ್ಪಕ್ಕೆ ನಾವು ಮುಂದೆ ಹೇಳುವ ದೂಷಣೆಗಳಿಂದ ಇದೂ ನಿರಾಕೃತ-ವಾಗುತ್ತದೆ. ಇನ್ನು ಉಪಕ್ರಮಾದಿಲಿಂಗಗಳು ಬೇಡ, ಅನುಮಾನರೂಪ-ಯುಕ್ತಿಗಳಿಂದಲೇ ನಿರ್ಣಯಿಸಬೇಕೆಂದರೆ ಅದೂ ಸಾಧುವಲ್ಲ. **''ನೈಷಾ ತರ್ಕೇಣ ಮತಿರಾಪನೇಯಾ''** ಎಂದು ಶ್ರುತಿಯು ಹೇಳುತ್ತದೆ. 'ಯುಕ್ತಿವಾದದಿಂದ ತತ್ತ್ವಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ' ಎಂದು ಅದರ ಅರ್ಥ. 'ಯುಕ್ತಿಗೆ ಒಂದು ಮಿತಿಯೇ ಇಲ್ಲ' ಎಂಬುದಾಗಿ **''ತರ್ಕಾಪ್ರತಿಷ್ಠಾನಾತ್''** (ಬ್ರ. ಸೂ. ೨-೧-೧೧) ಎಂಬ ಬ್ರಹ್ಮಸೂತ್ರವು ಹೇಳುತ್ತದೆ.

**ಯತ್ನೇನಾನುಮಿತೋಽಪ್ಯರ್ಥಃ ಕುಶಲೈರನುಮಾತೃಭಿಃ ।**
**ಅಭಿಯುಕ್ತತರೈರನ್ಯೈರನ್ಯಥೈವೋಪಪಾದ್ಯತೇ ॥** ವಾಕ್ಯಪದೀಯ ೧-೩೪

ಎಂಬುದಾಗಿ ಬಲ್ಲವರು ಹೇಳಿದ್ದಾರೆ. ''ಅನುಮಾನದಿಂದ ಅರ್ಥವನ್ನು ನಿರ್ಣಯಿಸಬಲ್ಲ ಕುಶಲರು ಶ್ರಮದಿಂದ ಒಂದು ವಿಷಯವನ್ನು ನಿರ್ಣಯಮಾಡಬಹುದು. ಆದರೆ ಅವರಿಗಿಂತ ಕುಶಲರಾದವರು ಆ ವಿಷಯವನ್ನು ಯುಕ್ತಿಯಿಂದ ಅಲ್ಲಗಳೆದು ಬೇರೆವಿಧವಾದ ಸಿದ್ಧಾಂತ ಮಾಡಬಹುದು.'' ಆದ್ದರಿಂದ ವೇದ ಪ್ರತಿಪಾದ್ಯವಾದ ಪರತತ್ತ್ವವು ಬರಿಯ ಯುಕ್ತಿಗಳಿಗೆ ಎಂದಿಗೂ ನಿಲುಕುವುದಿಲ್ಲ. ಯುಕ್ತಿಯಿಂದ ವ್ಯಾಸತಾತ್ಪರ್ಯವನ್ನು ನಿರ್ಣಯಿಸುತ್ತೇವೆ ಎನ್ನುವುದು ಮೊಲದ ಕೊಂಬಿನಂತೆ ಸುಳ್ಳೇ ಸರಿ. 'ಶ್ರುತಿಮಾತ್ರಬಲದಿಂದ ನಿರ್ಣಯಿಸುತ್ತೇವೆ' ಎಂಬ ಎರಡನೆಯ ಪಕ್ಷವೂ ಸರಿಯಲ್ಲ. ಏಕೆಂದರೆ ಶ್ರುತಿಯಲ್ಲಿ ಅಭೇದವನ್ನು ಪ್ರತಿಪಾದಿಸುವ ವಾಕ್ಯಗಳೂ ಇವೆ; ಭೇದವನ್ನು

ಪ್ರತಿಪಾದಿಸುವ ವಾಕ್ಯಗಳು ಇವೆ. ''ಅಹಂ ಬ್ರಹ್ಮಾಸ್ಮಿ'', ''ತತ್ತ್ವಮಸಿ'', ''ಅಯಮಾತ್ಮಾ ಬ್ರಹ್ಮ'', ''ಪ್ರಜ್ಞಾನಂ ಬ್ರಹ್ಮ'', ''ಆನಂದೋಬ್ರಹ್ಮ'', ''ಏಕಮೇವಾದ್ವಿತೀಯಂ ಬ್ರಹ್ಮ'' ಮೊದಲಾದವು ಅಭೇದವನ್ನು ಪ್ರತಿಪಾದಿಸುತ್ತವೆ. ''ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ'', ''ದ್ವಾಸುಪರ್ಣಾ'' ಇತ್ಯಾದಿ ವಾಕ್ಯಗಳು ಭೇದವನ್ನು ಪ್ರತಿಪಾದಿಸುತ್ತವೆ. ಆದ್ದರಿಂದ ಶ್ರುತಿಮಾತ್ರಬಲದಿಂದ ವ್ಯಾಸತಾತ್ಪರ್ಯವನ್ನು ನಿರ್ಣಯಿಸುವುದು ಶಕ್ಯವಲ್ಲ. ಆದ್ದರಿಂದಲೇ ಏಕಾದಶ ರುದ್ರಸಂಹಿತೆಯಲ್ಲಿ ''ಉಪನಿಷತ್ತು-ಗಳ ಅರ್ಥವು ನಾನಾ ವಿಧವಾಗಿ ತೋರುತ್ತದೆ. ಒಂದೇ ವಿಧವಾಗಿ ತೋರುವುದಿಲ್ಲ. ಹೀಗಿರಲು ಅಲ್ಪಜ್ಞನಾದ ಮನುಷ್ಯನು ಬ್ರಹ್ಮವನ್ನು ತಿಳಿಯುವುದು ಹೇಗೆ?''(೨) ಎಂದು ಹೇಳಿದೆ. ಮೂರನೆಯ ಪಕ್ಷವೂ ಸರಿಯಲ್ಲ. ಆಯಾ ಭಾಷ್ಯಕಾರರು ತಮ್ಮ ಗ್ರಂಥಗಳಲ್ಲಿ ಸ್ವಮತವೇ ವ್ಯಾಸಸಂಮತವೆಂದು ನಿರ್ಣಯಿಸಿದ್ದಾರಷ್ಟೆ. ಅವರು ಉಪಕ್ರಮೋಪ-ಸಂಹಾರಾದಿ ಯುಕ್ತಿಗಳಿಂದೊಡಗೂಡಿದ ಶ್ರುತಿಬಲದಿಂದಲೇ ಹಾಗೆ ನಿರ್ಣಯಿಸಿದ್ದಾರೆ. ಆ ಗ್ರಂಥಗಳನ್ನು ಪರಿಶೀಲಿಸಿದವರೂ, ನಮಗಿಂತ ವಿದ್ಯಾವಂತರೂ ಆದ ಪ್ರಾಚೀನ ಗ್ರಂಥಕಾರರು ಯುಕ್ತಿಯಿಂದೊಡ-ಗೂಡಿದ ಶ್ರುತಿಬಲದಿಂದ ಪ್ರತಿವಾದಿಗಳ ಮಾತನ್ನು ಕಟ್ಟಿಸಿ ಎಲ್ಲರೂ ಮೆಚ್ಚುವಂತೆ ಇದೇ ವ್ಯಾಸಸಂಮತವಾದ ಅರ್ಥವೆಂದು ನಿರ್ಣಯಿಸಲು ಎಲ್ಲಿಯೂ ಸಮರ್ಥರಾಗಿಲ್ಲ. ಹೀಗಿರುವಾಗ ಕೇವಲ ಮತಾಭಿಮಾನ-ದಿಂದ ಕೂಗಾಡುವ ಅಲ್ಪಜ್ಞರಾದ ನಾವು ಯುಕ್ತಿಯಿಂದೊಡಗೂಡಿದ ಶ್ರುತಿಬಲದಿಂದ ವ್ಯಾಸತಾತ್ಪರ್ಯವನ್ನು ನಿರ್ಣಯಿಸಬಲ್ಲೆವು ಎನ್ನುವುದು ಬರಿಯ ಭ್ರಮೆ.

ಹೋಗಲಿ; ವ್ಯಾಸತಾತ್ಪರ್ಯವನ್ನು ನಿರ್ಣಯಿಸಬೇಕೆಂದು ಕುತೂಹಲ-ವುಳ್ಳ ಸಮರ್ಥನಾದ ಒಬ್ಬ ಗಣ್ಯ ಪುರುಷನು ಒಂದು ಸಭೆಯನ್ನು

---

(೨) ವೇದಾಂತಾರ್ಥಸ್ತು ಸರ್ವೇಷಾಂ ನಾನಾ ಭಾತಿ ನ ಚೈಕಥಾ ।
ಅತಸ್ತೇನ ಕಥಂ ಬ್ರಹ್ಮ ಜಾನಾತ್ಯಲ್ಪಮತಿಃ ಪುಮಾನ್ ॥

ಕೂಡಿಸಲಿ. ಒಂದು ತಿಂಗಳವರೆಗೆ ದ್ವೈತಾದ್ವೈತ ವಿಷಯದಲ್ಲಿ ವಾದ ಪ್ರತಿವಾದಗಳು ಪಂಡಿತರಿಂದ ನಡೆಯಲಿ. ಮಧ್ಯಸ್ಥರು ಅವುಗಳಲ್ಲಿ ಯಾವುದು ಸತ್ಯವಾದ ಸಿದ್ಧಾಂತವೆಂದು ನಿರ್ಧರಿಸುವರೋ ಆ ಮತಕ್ಕೆ ತಾನು ಸೇರುತ್ತೇನೆಂದು ಆ ಗಣ್ಯಪುರುಷನು ಪತ್ರದಲ್ಲಿ ಬರೆದುಕೊಟ್ಟು ಪ್ರತಿಜ್ಞೆಮಾಡಲಿ. ಅಂತಹ ಸಭೆಯಲ್ಲಿ ಮಧ್ಯಸ್ಥರಾಗಿರುವ ವಿದ್ವಾಂಸರ ಸನ್ನಿಧಿಯಲ್ಲಿ ಶ್ರುತಿ ಮತ್ತು ಯುಕ್ತಿಗಳ ಸ್ವಾರಸ್ಯದಿಂದಲೂ, ಬಲಾಬಲ ವಿಮರ್ಶೆಯಿಂದಲೂ ಈ ಅರ್ಥವೇ ವ್ಯಾಸಸಂಮತವೆಂದು ನಿರ್ಣಯಿಸಲು ನಿಮಗೆ ಸಾಧ್ಯವಾಗುವುದು - ಎಂದು ಯಾರಾದರೂ ಹೇಳಬಹುದು. ಆದರೆ ಅದು ಸಾಧ್ಯವಲ್ಲದ ಮಾತು. ಅಂತಹ ಸಮರ್ಥನಾದ ಗಣ್ಯಪುರುಷನೇ ದುರ್ಲಭ. ಒಂದು ವೇಳೆ ಲಭಿಸಿದ್ದರೂ ನಾವು ಮುಂದೆ ಹೇಳುವ ರೀತಿಯಂತೆ ಮಧ್ಯಸ್ಥರೇ ದೊರಕುವುದಿಲ್ಲ. ಆದ್ದರಿಂದ ಮಧ್ಯಸ್ಥರ ಸಂನಿಧಿಯಲ್ಲಿ ಈ ಪರತತ್ತ್ವವು ನಿರ್ಣಯಿಸಲ್ಪಡುತ್ತದೆ-ಯೆಂಬುದು ಬರಿಯ ಮಾತೇ ಸರಿ.

ಇಂತಹ ವಿಷಯದಲ್ಲಿ ಮಧ್ಯಸ್ಥನು ಹೇಗಿರಬೇಕು ? ಅವನಿಗೆ ಪಕ್ಷಪಾತವಿರಬಾರದು. ವಾದಿ ಪ್ರತಿವಾದಿಗಳಿಗೆ ಅಭಿಮತವಾದ ಎರಡು ಪಕ್ಷಗಳಲ್ಲಿಯೂ ಅವನಿಗೆ ಇದು ತನ್ನ ಪಕ್ಷವೆಂಬ ಅಭಿಮಾನವಿರಬಾರದು. ಮತ್ತು ಆ ಪಕ್ಷಗಳ ಬಲಾಬಲವನ್ನು ನಿರ್ಣಯಿಸಲು ಅವನಿಗೆ ಸಾಮರ್ಥ್ಯವಿರಬೇಕು. ಇಂತಹ ಲಕ್ಷಣಗಳಿಂದ ಕೂಡಿದ ಮಧ್ಯಸ್ಥನು ಯಾವ ಮತದವನಾಗಿರಬೇಕು ! ಬಾಹ್ಯವಾದ ಬೌದ್ಧಾದಿಮತದ ಅನುಯಾಯಿಯಾಗಿರಬೇಕೆ ? ಕಪಿಲಾದಿಗಳು ರಚಿಸಿದ ಸಾಂಖ್ಯಾದಿ-ಮತದ ಅನುಯಾಯಿಯಾಗಿರಬೇಕೆ ? ಅಥವಾ ವೇದಾಂತಿ-ಯಾಗಿರಬೇಕೆ ? ಇವುಗಳಲ್ಲಿ ಮೊದಲನೆಯ ಪಕ್ಷ ಸರಿಯಲ್ಲ. ಏಕೆಂದರೆ, ಬೌದ್ಧ, ಜೈನ, ಚಾರ್ವಾಕ ಮೊದಲಾದವರು ವೇದವನ್ನು ಪ್ರಮಾಣವೆಂದು ಅಂಗೀಕರಿಸುವುದಿಲ್ಲವಾದುದರಿಂದ ಅವರು ಉಪನಿಷತ್ತುಗಳನ್ನು ಅಧ್ಯಯನ ಮಾಡಿರುವುದಿಲ್ಲ. ಆದ್ದರಿಂದ ವೇದಕ್ಕೆ ಸಂಬಂಧಿಸಿದ

ಉಪಕ್ರಮಾದಿ ಷಡ್ವಿಧ ಲಿಂಗಗಳನ್ನೂ ಅವುಗಳ ಸ್ವಾರಸ್ಯ ಬಲಾಬಲಗಳನ್ನೂ ನಿರ್ಣಯಿಸುವ ಸಾಮರ್ಥ್ಯ ಅವರಿಗಿಲ್ಲವಾದ ಪ್ರಯುಕ್ತ ಅವರು ಮಧ್ಯಸ್ಥರಾಗಲು ಸಾಧ್ಯವೇ ಇಲ್ಲ. ವೇದವನ್ನು ಕೇಳುವುದಕ್ಕೂ ಅನಧಿಕಾರಿಗಳಾದ ಅವರೆದುರಿಗೆ ವೇದಾಂತ ವಿಚಾರವು ಅನುಚಿತ. ಗೌತಮಧರ್ಮಶಾಸ್ತ್ರದಲ್ಲಿ ಅವರು ವೇದವನ್ನು ಕೇಳಿದರೂ, ಉಚ್ಚರಿಸಿದರೂ, ಕಲಿತರೂ ಪ್ರಾಯಶ್ಚಿತ್ತವನ್ನು ಹೇಳಲಾಗಿದೆ. ಇನ್ನು ಎರಡನೆಯ ಪಕ್ಷವೂ ಸರಿಯಲ್ಲ . ಕಪಿಲ, ಕಣಾದ, ಗೌತಮ ಮೊದಲಾದ ದಾರ್ಶನಿಕರ ಮತಾನುಯಾಯಿಗಳು ಈಗ ಎಲ್ಲಿಯೂ ಇಲ್ಲವಾದ್ದರಿಂದ ಅವರನ್ನು ಮಧ್ಯಸ್ಥರನ್ನಾಗಿ ಆರಿಸಿಕೊಳ್ಳುವುದೆಂದರೆ ಗೋಡೆಯಿಲ್ಲದೆ ಚಿತ್ರವನ್ನು ಬರೆದಂತೆಯೇ ಸರಿ. ಮತ್ತು ಅವರು ಜೀವರ ಅನೇಕತ್ವ, ಪ್ರಪಂಚದ ಸತ್ಯತ್ವ, ಪರಮಾತ್ಮಜೀವಾತ್ಮರ ಭೇದ - ಮೊದಲಾದ ಪಕ್ಷಗಳಲ್ಲಿ ಅಭಿಮಾನವನ್ನಿಟ್ಟಿರುತ್ತಾರೆ. ಅವರಿಗೆ ಈ ವಿಷಯದಲ್ಲಿ ಪಕ್ಷಪಾತವಿರುವುದರಿಂದ ಅವರು ಮಧ್ಯಸ್ಥರಾಗಲಾರರು. ಮೂರನೆಯ ಪಕ್ಷವೂ ಸರಿಯಲ್ಲ, ವೇದಾಂತಿಗಳಲ್ಲಿ ಮುಖ್ಯವಾಗಿ ಶ್ರೀ ಶಂಕರಾಚಾರ್ಯ, ರಾಮಾನುಜಾಚಾರ್ಯ , ಮಧ್ವಾಚಾರ್ಯ ಮತ್ತು ಶ್ರೀಕಂಠಾಚಾರ್ಯರ ಮತವನ್ನು ಅವಲಂಬಿಸಿದವರೇ ಹೆಚ್ಚಾಗಿರುತ್ತಾರೆ. ಮತ್ತು ಅವರು ಭೇದ, ಅಭೇದ ಮೊದಲಾದ ಪರಸ್ಪರವಿರುದ್ಧವಾದ ಪ್ರಕ್ರಿಯೆಯನ್ನು ಅಂಗೀಕರಿಸು-ವುದರಿಂದ ವಾದಿ ಪ್ರತಿವಾದಿಗಳಿಬ್ಬರೂ ಒಪ್ಪುವ ಮಧ್ಯಸ್ಥರಾಗಲಾರರು. ಅವರು ಮಧ್ಯಸ್ಥರಾದರೆ ವಾದಿ ಪ್ರತಿವಾದಿಗಳ ಪಾಂಡಿತ್ಯದ ತಾರತಮ್ಯವನ್ನು ಮಾತ್ರ ತಿಳಿದುಕೊಂಡು ಸುಮ್ಮನಾಗುವರು. ಏಕೆಂದರೆ, ಪರಂಪರೆಯಿಂದ ಗುರುಗಳಿಂದ ಉಪದೇಶಿಸಲ್ಪಟ್ಟು ಬಂದಿರುವ ತಮ್ಮ ಮತವು ಎಲ್ಲಿ ಹಾನಿಗೆ ಈಡಾಗುವುದೋ ಎಂಬ ದುರಾಗ್ರಹವು ಅವರಿಗೆ ಇದ್ದೇ ಇರುವುದು. ಆದ್ದರಿಂದ ತತ್ತ್ವನಿರ್ಣಯವನ್ನು ಅವರು ಹೇಳುವುದಿಲ್ಲ. ಆದ್ದರಿಂದಲೇ ''ವಾದಿಯು ದುರ್ಬಲನಾದ ಹೊರತು ಮತವು ದುರ್ಬಲವಾಗ-ಲಾರದು''(೩) ಎಂಬ ಗಾದೆಯುಂಟಾಗಿದೆ.

---

(೩) ''ವಾದಿದೌರ್ಬಲ್ಯಂ ವಿನಾ ನ ಮತದೌರ್ಬಲ್ಯಮ್''

ಅಂತೂ ಕೇವಲ ಯುಕ್ತಿಬಲದಿಂದಾಗಲಿ, ಕೇವಲ ಶ್ರುತಿಬಲದಿಂದಾಗಲಿ, ಯುಕ್ತಿ ಸಹಿತವಾದ ಶ್ರುತಿಬಲದಿಂದಾಗಲಿ, ಮಧ್ಯಸ್ಥರಾದ ವಿದ್ವಾಂಸರ ಸಂನಿಧಾನ ಬಲದಿಂದಾಗಲಿ ವ್ಯಾಸತಾತ್ಪರ್ಯವನ್ನು ಗೊತ್ತು ಮಾಡಲು ಸಾಧ್ಯವಿಲ್ಲ. ಅಥವಾ ಶ್ರೀ ಶಂಕರಾಚಾರ್ಯ , ರಾಮಾನುಜಾಚಾರ್ಯ ಮುಂತಾದವರ ಭಾಷ್ಯಗಳನ್ನು ಪರ್ಯಾಲೋಚಿಸುವುದರಿಂದಲೂ ಸಾಧ್ಯವಿಲ್ಲ. ಏಕೆಂದರೆ, ಈ ಭಾಷ್ಯಗಳಿಗೆ ಆಧಾರವೆನಿಸಿದ ಸೂತ ಸಂಹಿತಾ, ಬೋಧಾಯನವೃತ್ತಿ ಮೊದಲಾದವುಗಳನ್ನು ಆಯಾಮತವನ್ನನುಸರಿಸುವ ವಾದಿಗಳು ಮಾತ್ರ ಒಪ್ಪುತ್ತಾರೆಯೇ ಹೊರತು ಪ್ರತಿವಾದಿಗಳು ಒಪ್ಪುವುದಿಲ್ಲ. ಅವು ಇತರರಿಗೆ ಕೂಟಸಾಕ್ಷಿಗಳಂತೆ ಭಾಸವಾಗುತ್ತವೆ. ಹಾಗಾದರೆ, ವ್ಯಾಸತಾತ್ಪರ್ಯವು ಹೀಗೆಯೇ ಇದೆಯೆಂದು ನೀವಾದರೂ ಹೇಗೆ ನಿರ್ಣಯಿಸುತ್ತೀರಿ - ಎಂದು ಕೇಳಬಹುದು. ಹೇಳುತ್ತೇವೆ :

ಹರಿಹರರಲ್ಲಿ ಸತ್ತ್ವಗುಣಸಂಪನ್ನರು ಯಾರು - ಎಂಬ ಸಂದೇಹಕ್ಕೆ ಸಮಾಧಾನ ಹೇಳುತ್ತಾ ವೇದಾಂತಾಚಾರ್ಯರು ಸ್ತೋತ್ರ ಭಾಷ್ಯದಲ್ಲಿ ಹೀಗೆ ನಿರ್ಣಯಿಸಿದ್ದಾರೆ. ''ನಾಗರ, ದ್ರಾವಿಡ, ವೇಸರಗಳೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೂ, ಹರಿ, ಬ್ರಹ್ಮ, ಹರರೂ ಕ್ರಮವಾಗಿ ಸತ್ತ್ವರಜಸ್ತಮೋಗುಣಗಳನ್ನು ಹೊಂದಿದ್ದಾರೆ.(೪) ಎಂದು ಶಿಲ್ಪ ಶಾಸ್ತ್ರದಲ್ಲಿ ಹೇಳಿದೆ.

(೪) ಸ್ಯಾನ್ನಾಗರ ದ್ರಾವಿಡವೇ ಸರಂ ಚ ಕ್ರಮೇಣ ವೈ ಸತ್ತ್ವರಜಸ್ತಮಾಂಸಿ ।
ಮಹೀಸುರೋರ್ವೀಪತಿವೈಶ್ಯಕಾಶ್ಚ ಹರಿಶ್ಚಧಾತಾಹರ ಆದಿದೇವಃ ॥

ಶ್ರೀ ಕುಮಾರ ಪ್ರಣೀತವಾದ ಶಿಲ್ಪರತ್ನದಲ್ಲಿ ಇದರ ವಿವರವನ್ನು ನೋಡಬಹುದು.

ಪ್ರಾಸಾದಃ ಸರ್ವದೇವೇಷು ಸಂದೇಶ (?) ಮಧುನೋಚ್ಯತೇ ॥
ಸಾತ್ತ್ವಿಕಂ ನಾಗರಂ ತತ್ಸ್ಯಾತ್ ರಾಜಸಂ ದ್ರಾವಿಡಂ ಸ್ಮೃತಮ್ ।
ತಾಮಸಂ ವೇಸರಂ ಚೇತಿ ತ್ರಯಂ ಬ್ರಹ್ಮಾದಿದೈವತಮ್ ॥
ಶ್ರಿಯುಗಂ ತತ್ತ್ರಿವರ್ಣಂ ಚ ತ್ರಿಚಕ್ರಂ ಚ ಕ್ರಮಾತ್ ಸ್ಮೃತಮ್ ॥

॥ ಶಿಲ್ಪರತ್ನ, ೧೬ನೆಯ ಅಧ್ಯಾಯ. ೪೦-೪) ಶ್ಲೋಕ ॥

ಇನ್ನೂ ಹೆಚ್ಚು ವಿವರಗಳನ್ನು ಆ ಗ್ರಂಥದಿಂದ ತಿಳಿಯಬಹುದು.

ಶಿಲ್ಪಶಾಸ್ತ್ರವಾದರೋ ಮಧ್ಯಸ್ಥವಾದದ್ದು. ಆದ್ದರಿಂದ ಹರಿಯೇ ಸತ್ತ್ವಗುಣ ಸಂಪನ್ನನು.'' ಹಾಗೆಯೇ ಹರಿಹರರಲ್ಲಿ ನಮಸ್ಕಾರವು ಯಾರಿಗೆ ಸಲ್ಲಬೇಕು ಎಂಬ ಸಂದೇಹವನ್ನು ಸುದರ್ಶನಾಚಾರ್ಯರು ''**ಚತುರ್ವೇದತಾತ್ಪರ್ಯ ಸಂಗ್ರಹ**''ದಲ್ಲಿ ಈ ರೀತಿ ಪರಿಹರಿಸಿದ್ದಾರೆ. ''ಭರತಶಾಸ್ತ್ರದಲ್ಲಿ ವಜ್ರಿಣೀಮುದ್ರೆಯಿಂದ ದೇವೇಂದ್ರನನ್ನೂ, ಪದ್ಮಿನೀಮುದ್ರೆಯಿಂದ ಬ್ರಹ್ಮನನ್ನೂ ಶಂಖಿನೀ ಮುದ್ರೆಯಿಂದ ಹರಿಯನ್ನೂ ಶಿರಸ್ಸಿನಲ್ಲಿ ಅಂಜಲಿಮುದ್ರೆಯಿಂದ ಹರನನ್ನೂ ಅಭಿನಯಿಸಿ ತೋರಿಸಬೇಕು.[೫] ಎಂದು ಹೇಳಿದೆ. ಭರತ ಶಾಸ್ತ್ರವು ಮಧ್ಯಸ್ಥವಾದದ್ದು. ಆದ್ದರಿಂದ ನಮಸ್ಕಾರವು ಶಿವನಿಗೇ ಸಲ್ಲತಕ್ಕದ್ದು ಎಂದು ನಿರ್ಣಯವಾಗುತ್ತದೆ'' ಹಾಗೆಯೇ ಶ್ರೀ ಶಂಕರಾಚಾರ್ಯ, ರಾಮಾನುಜಾಚಾರ್ಯ ಮೊದಲಾದವರ ಭಾಷ್ಯಗಳಲ್ಲಿ ಯಾವುದು ವ್ಯಾಸತಾತ್ಪರ್ಯವನ್ನು ಅನುಸರಿಸಿದೆ ಎಂಬ ಸಂದೇಹವನ್ನು ಮಧ್ಯಸ್ಥ ಮಾರ್ಗದಿಂದ ಪರಿಹರಿಸಿ ನಿರ್ಣಯವನ್ನು ಮಾಡಬೇಕು. ಕಪಿಲ, ಕಣಾದ, ಗೌತಮ, ಪತಂಜಲಿ ಮತ್ತು ಜೈಮಿನಿಗಳ ಶಾಸ್ತ್ರಗಳು ಸೂತ್ರ, ಭಾಷ್ಯ, ವಾರ್ತಿಕ, ವೃತ್ತಿರೂಪದಿಂದ ಐದು ಇವೆ.

---

ಲಿಂಗಪುರಾಣದಲ್ಲಿ 'ವೇಸರ' ಎಂಬುದಕ್ಕೆ ಬದಲಾಗಿ 'ಕೇಸರ' ಎಂಬ ಪಾಠ ದೊರೆಯುತ್ತದೆ. ಅದರ ವಾಖ್ಯಾನದಲ್ಲಿಯೂ 'ಕೇಸರ'ವೆಂದೇ ಇದೆ. ಆ ಪಾಠ ಪ್ರಾಮಾದಿಕ ವಿರಬಹುದು.

'ಕೇಸರಂ ನಾಗರಂ ವಾಪಿ ದ್ರಾವಿಡಂ ವಾ ತಥಾ ಪರಮ್ ।
ಕೃತ್ವಾರುದ್ರಾಲಯಂ ಭಕ್ತ್ಯಾ ಶಿವಲೋಕೇ ಮಹೀಯತೇ ॥
ಲಿಂಗ ಪುರಾಣ-ಪೂರ್ವಭಾಗ-ಅ.೭೭-ಶ್ಲೋ.೭ ॥

'ಕೇಸರಾದಿ ಭೇದಾಃ ಶಿಲ್ಪಶಾಸ್ತ್ರೇ ಜ್ಞೇಯಾಃ'
॥ ವ್ಯಾಖ್ಯಾ ಶಿವತೋಷಿಣಿ ॥

'ಸ್ಯಾನ್ನಾಗರದ್ರಾವಿಡವೇ ಸರಂ ಚ.....' ಎಂಬ ಶ್ಲೋಕವು ಯಾವ ಗ್ರಂಥದಿಂದ ಉದ್ಧೃತವಾಗಿದೆಯೋ ತಿಳಿಯದು.

(೫) ವಜ್ರಣ್ಯಾಮುದ್ರಯಾ ಶಕ್ರಂ ಪದ್ಮಿನ್ಯಾ ದರ್ಶಯೇ ದ್ವಿಧಿಮ್ ।
ಶಂಖಿನ್ಯಾ ಕೇಶವಂ ರುದ್ರಂ ಶಿರಸ್ಯಂಜಲಿಮುದ್ರಯಾ ॥

ಪಾಶುಪತ, ಪಾಂಚರಾತ್ರ, ಬೌದ್ಧ, ಜೈನ ಮತ್ತು ಚಾರ್ವಾಕರ ಶಾಸ್ತ್ರಗಳು ಐದು ಇವೆ. ಒಟ್ಟು ಈ ಹತ್ತು ಗ್ರಂಥಗಳನ್ನು ಮಧ್ಯಸ್ಥಗ್ರಂಥಗಳೆಂದು ನಾವು ಒಪ್ಪಿಕೊಳ್ಳುವುದು ಸಂಪ್ರತಿಪನ್ನವಾಗಿದೆ. ''ಪರಮತವು ನಿರಾಕೃತವಾದ ಹೊರತು ಸ್ವಮತವು ಸಿದ್ಧಾಂತವಾಗಿ ನಿಲ್ಲದು'' ಎಂಬ ನ್ಯಾಯದಂತೆ ಈ ಗ್ರಂಥಕರ್ತರು ತಮ್ಮ ತಮ್ಮ ಮತವನ್ನು ಸ್ಥಾಪಿಸುವಾಗ ಪರಮತವನ್ನು ಖಂಡಿಸಲು ಪ್ರಯತ್ನಿಸಿದ್ದಾರೆ. ಹಾಗೆ ಖಂಡಿಸುವಾಗ ಪರಮತವನ್ನು ಮೊದಲು ಅನುವಾದ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಕಪಿಲಾದಿ-ಶಾಸ್ತ್ರಕಾರರು ಕೇವಲ ಅದ್ವೈತವೇ ವ್ಯಾಸತಾತ್ಪರ್ಯವೆಂದು ಭಾವಿಸಿ ವ್ಯಾಸ-ಮತವನ್ನು ಅನುವಾದ ಮಾಡಿ ಅನಂತರ ಆ ಮತವನ್ನು ಖಂಡಿಸಲು ಪ್ರಯತ್ನಿಸಿದ್ದಾರೆ. ಆದ್ದರಿಂದ ಕೇವಲ ಅದ್ವೈತವೇ ವ್ಯಾಸರಿಗೆ ಸಂಮತ-ವಾದುದೆಂದು ನಾವು ನಿರ್ಣಯಿಸುತ್ತೇವೆ. ಆದ್ದರಿಂದಲೇ ಗೌತಮ ಮಹರ್ಷಿಗಳು -

**ವಿಪ್ರತಿಪತ್ತೌ ಸಾಕ್ಷಿನಿಮಿತ್ತಾ ಸತ್ಯವ್ಯವಸ್ಥಾ ।**

(ಗೌ. ಧರ್ಮಸೂತ್ರ, ಅ. ೧೩-ಸೂ. ೧)

ಎಂದು ಸೂತ್ರಿಸಿದ್ದಾರೆ. ''ಚರ್ಚಾಸ್ಪದವಾದ ವಿಷಯದಲ್ಲಿ ಮಧ್ಯಸ್ಥನ ಮೂಲಕ ಸತ್ಯವನ್ನು ನಿರ್ಣಯಿಸಬೇಕು'' ಎಂದು ಅದರ ಅರ್ಥ. ಸೂತಸಂಹಿತಾ ಮೂಲಕವಾದ ಭಗವತ್ಪಾದ ಶ್ರೀಶಂಕರಾಚಾರ್ಯರ ಭಾಷ್ಯವು ಕೇವಲ ಅದ್ವೈತವನ್ನು ಪ್ರತಿಪಾದಿಸುತ್ತದೆ. ಆದ್ದರಿಂದ ಈ ಭಾಷ್ಯವೇ ಪ್ರಾಮಾಣಿಕವೆಂದು ಸಿದ್ಧವಾಗುತ್ತದೆ.

ಇಲ್ಲಿ ಒಂದು ಶಂಕೆಯುಂಟಾಗಬಹುದು. ''ಕಪಿಲ, ಕಣಾದ, ಗೌತಮಪ್ರಭೃತಿಗಳು ಜೀವರ ಅನೇಕತ್ವ, ಪ್ರಪಂಚದ ಸತ್ಯತೆ, ಜೀವಾತ್ಮ-ಪರಮಾತ್ಮಭೇದ ಮೊದಲಾದ ಪಕ್ಷಗಳಲ್ಲಿ ಅಭಿಮಾನವನ್ನಿಟ್ಟಿರುವುದರಿಂದ ಅವರು ಮಧ್ಯಸ್ಥರಾಗಲಾರರು'' ಎಂದು ನೀವೇ ಹೇಳಿದ್ದೀರಿ. ಈಗ ಅವರನ್ನೇ ಮಧ್ಯಸ್ಥರೆಂದು ಒಪ್ಪಿ ಅವರ ಅನುವಾದ ಬಲದಿಂದ

ವ್ಯಾಸತಾತ್ಪರ್ಯವನ್ನು ಗೊತ್ತು ಮಾಡುತ್ತೇವೆ ಎಂದು ಹೇಳಿದರೆ ನಿಮ್ಮ ವಚನಕ್ಕೆ ವ್ಯಾಘಾತವಾಗುವುದಿಲ್ಲವೆ ? ಇಲ್ಲ. ಭೇದ, ಅಭೇದ ಮುಂತಾದ ವಿಷಯಗಳನ್ನು ಪ್ರತಿಪಾದಿಸುವಾಗ ವೇದವಾಕ್ಯಗಳಿಗೆ ಅರ್ಥವನ್ನು ಗೊತ್ತು ಹಚ್ಚುವ ಸಂದರ್ಭದಲ್ಲಿ ಕಪಿಲಾದಿಗಳು ಮಧ್ಯಸ್ಥರಾಗಲಾರರು. ಆದರೆ ನಾವು ಈಗ ಹೇಳುವ ಸಂದರ್ಭ ಬೇರೆಯದು. ವ್ಯಾಸಮತವನ್ನು ಅವರು ಮೊದಲು ಅನುವಾದ ಮಾಡಿ, ಅನಂತರ ಅದನ್ನು ಖಂಡಿಸಿ, ತಮ್ಮ ಸಿದ್ಧಾಂತವನ್ನು ಸ್ಥಾಪಿಸುವಾಗ ವ್ಯಾಸರ ಸಿದ್ಧಾಂತವನ್ನು ತಾವು ತಿಳಿದೇ ಇರಬೇಕು. ವ್ಯಾಸಸಿದ್ಧಾಂತದಲ್ಲಿ ಸ್ವಪಕ್ಷಾಭಿಮಾನವು ಇರಲು ಎಂದಿಗೂ ಕಾರಣವಿಲ್ಲ. ಆದ್ದರಿಂದ ವ್ಯಾಸತಾತ್ಪರ್ಯವನ್ನು ವಿಚಾರಿಸುವಾಗ ಅವರು ಮಧ್ಯಸ್ಥರಾಗಬಹುದು. ಇದರಿಂದ ನಮ್ಮ ವಚನಕ್ಕೆ ವ್ಯಾಘಾತವೇನೂ ಇಲ್ಲ.

ಹಾಗಾದರೆ ಕಪಿಲಾದಿಗಳು ಮಾಡಿರುವ ಅನುವಾದವೆಂಬ ಯುಕ್ತಿಯ ಬಲದಿಂದ ವ್ಯಾಸರ ತಾತ್ಪರ್ಯವನ್ನು ಈ ಗ್ರಂಥದಲ್ಲಿಯೇ ನಿಶ್ಚಯಿಸುತ್ತೇವೆ ಎಂದು ಹೇಳಿದಂತಾಯಿತು. ಆಗ ಭಾಷ್ಯಾದಿಗ್ರಂಥಗಳನ್ನು ಓದ ತೊಡಗುವುದು ಎಲ್ಲರಿಗೂ ಅನಾವಶ್ಯಕವಾಯಿತಲ್ಲವೆ ? ಈ ಪ್ರಶ್ನೆಗೆ ಸಮಾಧಾನವಿದು - **ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ,**[೧] **ನಾವೇದವಿನ್ಮನುತೇ ತಂ ಬೃಹಂತಮ್,**[೨] ಇತ್ಯಾದಿ ಶ್ರುತಿಗಳಿಂದ ಉಪಕ್ರಮಾದಿಷಡ್ವಿಧಲಿಂಗಗಳಿಂದ ಯುಕ್ತವಾದ ಶ್ರುತಿಯ ಬಲದಿಂದಲೇ ಪರತತ್ತ್ವವನ್ನು ನಿರ್ಣಯಿಸಬೇಕೆಂಬುದು ವ್ಯಾಸರ ಅಭಿಪ್ರಾಯ. ಆ ವಿಷಯವನ್ನು ಪ್ರತಿಪಾದಿಸುವ ಆಯಾ ಭಾಷ್ಯಗ್ರಂಥಗಳನ್ನು ಪರಿಶೀಲಿಸು-ವುದರಿಂದಲೇ ಅಂತಹ ನಿರ್ಣಯವನ್ನು ಮಾಡಬೇಕಾಗಿದೆ. ಅದರಲ್ಲಿ ಶ್ರೀ ಶಂಕರಾಚಾರ್ಯರ ಭಾಷ್ಯದ ರೀತಿಯಂತೆ ನಿರ್ಣಯವನ್ನು ಮಾಡುವುದು ಯುಕ್ತವೋ ಅಥವಾ ಶ್ರೀಕಂಠಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ ಮುಂತಾದವರ ಭಾಷ್ಯದ ರೀತಿಯಂತೆಯೋ ? ಎಂದು ಸಂದೇಹ ವುಂಟಾಗುವುದು. ಅಂತಹ ಸಂದರ್ಭದಲ್ಲಿ ಕಪಿಲಾದಿಗಳ ಅನುವಾದ ಬಲದಿಂದ ಶ್ರೀ ಶಂಕರಾಚಾರ್ಯರ ಭಾಷ್ಯದಲ್ಲಿ ಹೇಳಲ್ಪಟ್ಟ ಉಪಕ್ರಮಾದಿ

ಷಡ್ವಿಧ ಲಿಂಗಗಳು ಪ್ರಬಲವೆಂದೂ, ಅವುಗಳಿಂದ ಸಮೇತವಾದ ಶ್ರುತಿಯ ಬಲದಿಂದಲೇ ಪರತತ್ತ್ವವನ್ನು ನಿರ್ಣಯಿಸಬೇಕೆಂದೂ ನಮ್ಮ ಗ್ರಂಥವು ಪ್ರತಿಪಾದಿಸುತ್ತದೆ. ಆದ್ದರಿಂದ ಜಿಜ್ಞಾಸುಗಳೆಲ್ಲರೂ ಭಾಷ್ಯಾದಿಗ್ರಂಥಗಳನ್ನು ಅಧ್ಯಯನಮಾಡಲು ತೊಡಗುವರು.

ವೇದಾಂತಶಾಸ್ತ್ರದಲ್ಲಿ ಭಗವಾನ್ ವ್ಯಾಸಮಹರ್ಷಿಗಳು **'ರಚನಾನುಪಪತ್ತೇಶ್ಚ ನಾನುಮಾನಮ್'** (ಬ್ರ.ಸೂ. ೨-೨-೧) ಇತ್ಯಾದಿ ಸ್ಥಳಗಳಲ್ಲಿ ಸಾಂಖ್ಯ ಮತವನ್ನು ನಿರಾಕರಿಸಿದ್ದಾರೆ. ಹಾಗೆಯೇ ಭಗವಾನ್ ಕಪಿಲ ಮಹರ್ಷಿಗಳು ಸಾಂಖ್ಯಶಾಸ್ತ್ರದಲ್ಲಿ ವೇದಾಂತ ಶಾಸ್ತ್ರಸಂಮತವಾದ ಕೇವಲಾದ್ವೈತ, ಭೇದದ ಉಪಾಧಿತ್ವ, ಪ್ರಪಂಚದ ಅನಿರ್ವಚನೀಯತೆ ಮೊದಲಾದ ವಿಷಯಗಳನ್ನು ಅನುವಾದ ಮಾಡಿ ನಿರಾಕರಿಸಿದ್ದಾರೆ. ಹೇಗೆಂದರೆ; ಈ ಸಾಂಖ್ಯಸೂತ್ರಗಳನ್ನು ಗಮನಿಸಬೇಕು-

೧. ನಾವಿದ್ಯಾತೋಽಪ್ಯವಸ್ತುನಾ ಬಂಧಾಯೋಗಾತ್ ॥
(ಅಧ್ಯಾಯ ೧; ಸೂತ್ರ ೨೦)

೨. ವಸ್ತುತ್ತ್ವೇ ಸಿದ್ಧಾಂತಹಾನಿಃ ॥ (೧-೨೧)

೩. ವಿಜಾತೀಯದ್ವೈತಾಪತ್ತಿಶ್ಚ । (೧-೨೨)

೪. ವಿರುದ್ಧೋಭಯರೂಪಾಚೇತ್ ॥ (೧-೨೩)

೫. ನ ತಾದೃಕ್ ಪದಾರ್ಥಾಪ್ರತೀತೇ ॥ (೧-೨೪)

೬. ಉಪಾಧಿಭೇದೇಽಪ್ಯೇಕಸ್ಯ ನಾನಾಯೋಗಃ ಆಕಾಶಸ್ಯೇವ ಘಟಾದಿಭಿಃ ॥
(೧-೧೫೦)

೭. ಉಪಾಧಿರ್ಭಿದ್ಯತೇ ನ ತು ತದ್ವಾನ್ ॥ (೧-೧೫೧)

೮. ಏವಮೇಕತ್ವೇನ ಪರಿವರ್ತಮಾನಸ್ಯ ನ ವಿರುದ್ಧ ಧರ್ಮಾಧ್ಯಾಸಃ
(೧-೧೫೨)

೯. ಅನ್ಯಧರ್ಮತ್ತ್ವೇಽಪಿ ನಾರೋಪಾತ್ ತತ್ಸಿದ್ಧಿರೇಕತ್ವಾತ್ ॥
(೧-೧೫೩)

೧೦. ನಾದ್ವೈತಶ್ರುತಿವಿರೋಧೋ ಜಾತಿಪರತ್ವಾತ್ ॥ (೧-೧೫೪)

೧೧. ವಿದಿತಬಂಧಕಾರಣಸ್ಯ ದೃಷ್ಟ್ಯಾಽತದ್ರೂಪಮ್ ॥ (೧-೧೫೫)

೧೨. ನಾಂಧಾದೃಷ್ಟ್ಯಾ ಚಕ್ಷುಷ್ಮತಾಮನುಪಲಂಭಃ ॥ (೧-೧೫೬)

೧೩. ವಾಮದೇವಾದಿರ್ಮುಕ್ತೋ ನಾದ್ವೈತಮ್ ॥ (೧-೧೫೭)

೧೪. ಅನಾದಾವದ್ಯ ಯಾವದಭಾವಾದ್ಭವಿಷ್ಯದಪ್ಯೇವಮ್ ॥ (೧-೧೫೮)

೧೫. ಇದಾನೀಮಿವ ಸರ್ವತ್ರ ನಾತ್ಯಂತೋಚ್ಛೇದಃ ॥ (೧-೧೫೯)

೧೬. ನಾವಿದ್ಯಾಶಕ್ತಿಯೋಗೋ ನಿಃಸಂಗಸ್ಯ ॥ (೫-೧೩)

೧೭. ತದ್ಯೋಗೇ ತತ್ಸಿದ್ಧಾವನ್ಯೋನ್ಯಾಶ್ರಯತ್ತ್ವಮ್ ॥ (೫-೧೪)

೧೮. ನ ಬೀಜಾಂಕುರವತ್, ಸಾದಿಸಂಸಾರಶ್ರುತೇಃ ॥ (೫-೧೫)

೧೯. ವಿದ್ಯಾತೋಽನ್ಯತ್ತ್ವೇ ಬ್ರಹ್ಮಬಾಧಪ್ರಸಂಗಃ ॥ (೫-೧೬)

೨೦. ಅಬಾಧೇ ನೈಷ್ಫಲ್ಯಮ್ ॥ (೫-೧೭)

೨೧. ವಿದ್ಯಾಬಾಧ್ಯತ್ತ್ವೇ ಜಗತೋಽಪ್ಯೇವಮ್ ॥ (೫-೧೮)

೨೨. ತದ್ರೂಪತ್ತ್ವೇ ಸಾದಿತ್ತ್ವಮ್ ॥ (೫-೧೯)

೨೩. ನಾನಿರ್ವಚನೀಯಸ್ಯ ತದಭಾವಾತ್ ॥ (೫-೫೪)

೨೪. ನಾದ್ವೈತಮಾತ್ಮನೋ ಲಿಂಗಾತ್ ತದ್ಭೇದ ಪ್ರತೀತೇಃ ॥ (೫-೬೧)

೨೫. ನಾನಾತ್ಮನಾಪಿ ಪ್ರತ್ಯಕ್ಷಬಾಧಾತ್ ॥ (೫-೬೨)

೨೬. ನೋಭಾಭ್ಯಾಂ ತೇನೈವ ॥ (೫-೬೩)

೨೭. ಅನ್ಯಪರತ್ತ್ವಮವಿವೇಕಾನಾಂ ತತ್ರ ॥ (೫-೬೪)

೨೮. ನಾತ್ಮಾವಿದ್ಯಾ ನೋಭಯಂ ಜಗದುಪಾದಾನಕಾರಣಂ ನಿಃಸಂಗತ್ತ್ವಾತ್ ॥ (೫-೬೫)

೨೯. ನೈಕಸ್ಯಾನಂದಚಿದ್ರೂಪತ್ತ್ವೇ ದ್ವಯೋರ್ಭೇದಾತ್ ॥ (೫-೬೬)

೩೦. ನಾನಂದಾಭಿವ್ಯಕ್ತಿರ್ಮುಕ್ತಿರ್ನಿರ್ಧರ್ಮತ್ತ್ವಾತ್ ॥ (೫-೭೪)

೩೧. ಉಪಾಧಿಶ್ಚೇತ್ ತತ್ಸಿದ್ಧೌ ಪುನರ್ದ್ವೈತಮ್ ॥ (೬-೪೬)

೩೨. ದ್ವಾಭ್ಯಾಮಪಿ ಪ್ರಮಾಣವಿರೋಧಃ ॥ (೬-೪೭)

೩೩. ದ್ವಾಭ್ಯಾಮಪ್ಯವಿರೋಧಾನ್ನ ಪೂರ್ವಮುತ್ತರಂ ಚ ಸಾಧಕಾಭಾವಾತ್ ॥ (೬-೪೮)

೩೪. ಪ್ರಕಾಶತಸ್ತತ್ಸಿದ್ಧೌ ಕರ್ಮಕರ್ತೃ ವಿರೋಧಃ ॥ (೬-೪೯)
೩೫. ಜಡವ್ಯಾವೃತ್ತೋ ಜಡಂ ಪ್ರಕಾಶಯತಿ ಚಿದ್ರೂಪಃ ॥ (೬-೫೦)
೩೬. ನ ಶ್ರುತಿವಿರೋಧೋ ರಾಗಿಣಾಂ ವೈರಾಗ್ಯಾಯ ತತ್ಸಿದ್ಧೇಃ ॥ (೬-೫೧)
೩೭. ಜಗತ್ಸತ್ಯತ್ವಮದುಷ್ಟಕಾರಣಜನ್ಯತ್ವಾದ್ಬಾಧಕಾಭಾವಾತ್ ॥
(೬-೫೨)★

ಪರಮತವನ್ನು ಖಂಡಿಸುವುದಕ್ಕೋಸ್ಕರ ಹೊರಟಿರುವ ಈ ಕಪಿಲ ಸೂತ್ರಗಳಲ್ಲಿ ಹಿಂದೆ ಹೇಳಿದ ಕೇವಲಾದ್ವೈತ ಮೊದಲಾದ ವಿಷಯವು ಅತ್ಯಂತ ಸ್ಪಷ್ಟವಾಗಿ ತೋರುತ್ತದೆ. ಈ ಅದ್ವೈತಮತವನ್ನು ಪ್ರತಿಪಾದಿಸುವ ವಾದಿಯು ಯಾರು ಎಂದು ವಿಮರ್ಶೆ ಮಾಡಬೇಕಾಗುವುದು. ಪತಂಜಲಿ, ಜೈಮಿನಿ, ಗೌತಮ, ಕಣಾದ ಮೊದಲಾದ ಸೂತ್ರಕಾರರೂ, ಪಾಶುಪತಾದಿ ತಾಂತ್ರಿಕಮತವನ್ನು ಅವಲಂಬಿಸಿದವರೂ ಚಾರ್ವಾಕಾದಿ ಬಾಹ್ಯಮತವನ್ನು ಅವಲಂಬಿಸಿದವರೂ ಅದ್ವೈತವನ್ನು ಅಂಗೀಕರಿಸುವುದಿಲ್ಲವಾದ್ದರಿಂದ ಅವರು ವಾದಿಯಾಗಲಾರರು. ಆದ ಕಾರಣ ಇನ್ನು ದಾರ್ಶನಿಕರಲ್ಲಿ ವ್ಯಾಸರೊಬ್ಬರೇ ಉಳಿಯುವುದರಿಂದ ಅವರೇ ಇಲ್ಲಿ ವಾದಿಯೆಂದು ಪರ್ಯವಸಾನವಾಗುತ್ತದೆ. ವ್ಯಾಸಸೂತ್ರಗಳಿಗೆ ಪರಸ್ಪರ ವಿರುದ್ಧವಾದ ನಾನಾ ಭಾಷ್ಯಗಳಿರುವುದರಿಂದ ನಿಜವಾದ ವ್ಯಾಸತಾತ್ಪರ್ಯವು ಯಾವುದು ಎಂಬ ಆಕಾಂಕ್ಷೆಗೆ ಇದರಿಂದ ಉತ್ತರ ದೊರೆಯುವುದು. ಹಾಗಲ್ಲದೆ, ವ್ಯಾಸಮಹರ್ಷಿಗಳನ್ನು ಬಿಟ್ಟು ಅಪ್ರಸಿದ್ಧನಾದ ಯಾವನೋ ಒಬ್ಬನು ಕಪಿಲ ಸೂತ್ರಗಳಲ್ಲಿ ವಾದಿಯಾಗಿರಬೇಕೆಂದು ಹೇಳಿದರೆ, ಆ ವಾದಿಯು ಹೇಳುವ ಅದ್ವೈತಮತವು ವ್ಯಾಸಸಂಮತವಲ್ಲವೆಂದು ಹೇಳಿದಂತಾಗುತ್ತದೆ. ಆದರೂ ಭಟ್ಟಭಾಸ್ಕರ, ಯಾದವಪ್ರಕಾಶ, ಶ್ರೀಕಂಠ, ರಾಮಾನುಜ, ಮಧ್ವ ಮೊದಲಾದ ಆಚಾರ್ಯರ ಭಾಷ್ಯಗಳಲ್ಲಿ ಯಾವುದು ವ್ಯಾಸರ ತಾತ್ಪರ್ಯವನ್ನು ಅನುಸರಿಸಿದೆ ಎಂದು ನಿರ್ಣಯಿಸುವುದಕ್ಕೆ ಯಾರಿಂದಲೂ ಸಾಧ್ಯವಾಗದೇ ಹೋಗುವುದು. ಆಗ ತಮ್ಮ ಮತವು ವ್ಯಾಸಸಂಮತವಾಗಿದೆಯೆಂದು

★ ಈ ಸೂತ್ರಗಳ ಅರ್ಥವನ್ನು ಅನುಬಂಧದಲ್ಲಿ ಬರೆಯಲಾಗಿದೆ.

ಸ್ವಪಕ್ಷಸ್ಥಾಪನೆ ಮಾಡಲು ದ್ವೈತವಾದಿಗಳು ಅಸಮರ್ಥರಾಗುವರು. ಅವರು ವಿತಂಡಾವಾದಿಗಳೆಂಬ ದೂಷಣೆಯನ್ನು ಮಾತ್ರ ಹೊರಬೇಕಾಗುವುದು. ನಮಗೆ ಈಗ ಎರಡು ಆಕಾಂಕ್ಷೆಗಳು ಉದ್ಭವಿಸಿರುತ್ತವೆ. ವ್ಯಾಸತಾತ್ಪರ್ಯವು ಯಾವುದು ? ಎಂಬುದೊಂದು, ಕಪಿಲಸೂತ್ರಗಳಲ್ಲಿ ಅದ್ವೈತವಾದಿ ಯಾರು ? ಎಂಬುದಿನ್ನೊಂದು. ವ್ಯಾಸರೇ ಅದ್ವೈತವಾದಿಯೆಂದು ಒಪ್ಪಿಕೊಳ್ಳುವುದರಿಂದ ಈ ಎರಡು ಆಕಾಂಕ್ಷೆಗಳಿಗೂ ಸಮಾಧಾನ ದೊರೆಯುವುದು. ಆದ್ದರಿಂದ ವ್ಯಾಸರೇ ಇಲ್ಲಿ ವಾದಿಯೆಂಬುದಾಗಿ ಇಷ್ಟವಿಲ್ಲದವನೂ ಅವಶ್ಯವಾಗಿ ಒಪ್ಪಿಕೊಳ್ಳಲೇ ಬೇಕಾಗಿದೆ. ಈ ವಿಷಯವನ್ನು ನಿರ್ಮತ್ಸರರಾದ ಮಧ್ಯಸ್ಥರು ಮೆಚ್ಚುತ್ತಾರೆಂಬುದರಲ್ಲಿ ಸಂದೇಹವಿಲ್ಲ.

ಹೀಗೆ ಕಪಿಲ ಸೂತ್ರಗಳಲ್ಲಿ ಮಾಡಿರುವ ಅದ್ವೈತ ಮತದ ಅನುವಾದವು ದ್ವೈತವಾದಿಗಳ ಮೇಲೆ ಒಂದು ಬ್ರಹ್ಮಾಸ್ತ್ರವೇ ಸರಿ. ಅದನ್ನು ಎದುರಿಸಲು ಅವರು ಅಸಮರ್ಥರು. ಆದರೂ ಪರಂಪರಾಗತವಾದ ಭೇದವಾಸನೆಯಿಂದ ಅವರ ಮನಸ್ಸು ಕಲುಷಿತವಾಗಿದೆ. ಆದ್ದರಿಂದ ಕೆಲವು ದ್ವೈತಿಗಳು ಸ್ವಮತಾಭಿಮಾನವನ್ನು ಬಿಡಲಾರದೆ ಕಪೋಲಕಲ್ಪಿತವಾದ ಕೆಲವು ಅಸಂಗತಕಾರಣಗಳನ್ನು ಮುಂದಿಟ್ಟು ಪ್ರತಿಯಾಗಿ ವಾದಿಸುತ್ತಾರೆ. ಅವರು ಈ ಅಸಂಗತಕಾರಣಗಳೆಂಬ ಮುರುಕು ಸೂಜಿಗಳಿಂದ ಅದ್ವೈತಾನುವಾದವೆಂಬ ಬ್ರಹ್ಮಾಸ್ತ್ರವನ್ನು ಎದುರಿಸಲು ತೊಡಗುತ್ತಾರೆ. ಹೇಗೆಂದರೆ -

೧. "ಹಿರಿಯರಾದ ವಿದ್ವಾಂಸರ ಗ್ರಂಥಗಳಲ್ಲಿ ಸಾಂಖ್ಯಸೂತ್ರಗಳನ್ನು ಎಲ್ಲಿಯೂ ಉದಾಹರಿಸಿಲ್ಲ. ಆದ್ದರಿಂದ ಈ ಸೂತ್ರಗಳು ಕಪಿಲ ಪ್ರಣೀತಗಳೆಂದು ನಿಶ್ಚಯಿಸಲು ಸಾಧ್ಯವಿಲ್ಲ. ಆದ ಕಾರಣ ಸಾಂಖ್ಯಶಾಸ್ತ್ರಾನುಸಾರವಾಗಿ ಕೇವಲಾದ್ವೈತವು ವ್ಯಾಸಸಂಮತವೆಂದು ಹೇಳುವುದು ಸರಿಯಲ್ಲ.

೨. ಪ್ರಾಚೀನ ಅದ್ವೈತ ಗ್ರಂಥಗಳಲ್ಲಿ ಅದ್ವೈತವನ್ನು ಸಾಧಿಸುವುದಕ್ಕೋಸ್ಕರ ಕಪಿಲ ಸೂತ್ರಾನುವಾದವನ್ನು ಯುಕ್ತಿರೂಪವಾಗಿ ಎಲ್ಲಿಯೂ ಹೇಳಿಲ್ಲ.

೩. ಪ್ರಾಚೀನರಾದ ಕಪಿಲರು ತಮಗಿಂತಲೂ ನವೀನರಾದ ವ್ಯಾಸರ ಸೂತ್ರಾರ್ಥವನ್ನು ತಮ್ಮ ಗ್ರಂಥದಲ್ಲಿ ಅನುವಾದ ಮಾಡುವುದು ಅಸಂಭವ.

೪. ಹಿಂದೆ ಉದಾಹರಿಸಿದ ಸೂತ್ರಗಳಲ್ಲಿ ಎಲ್ಲಿಯೂ ವ್ಯಾಸರ ಮತವಿದೆಂದು ಹೇಳಿಲ್ಲವಾದ್ದರಿಂದ ಅದು ವ್ಯಾಸಮತದ ಅನುವಾದ-ವೆಂಬುದು ಗಗನಕುಸುಮವೇ ಸರಿ.

೫. ಸಾಂಖ್ಯಸೂತ್ರಗಳಲ್ಲಿ ಅನುವಾದಿಸಲ್ಪಟ್ಟ ಕೇವಲಾದ್ವೈತ ಮೊದಲಾದ ವಿಷಯವು ವೇದಾಂತಸೂತ್ರಗಳಲ್ಲಿ ಎಲ್ಲಿಯೂ ಪ್ರತೀತವಾಗುವುದಿಲ್ಲವಾದ್ದರಿಂದ ಆ ಮತದ ಅನುವಾದವೇ ಇದು ಎಂದು ಪ್ರತ್ಯಭಿಜ್ಞೆ-ಯುಂಟಾಗುವುದಿಲ್ಲ.

೬. ಕಪಿಲರು ವ್ಯಾಸಮತವನ್ನು ನಿರಾಕರಿಸುವುದು ಆವಶ್ಯಕವೇ ಆದರೆ, ವ್ಯಾಸರು ಅಂಗೀಕರಿಸುವ ಜಗತ್ಕಾರಣನಾದ ಈಶ್ವರನ ಅಸ್ತಿತ್ತ್ವವನ್ನು 'ಈಶ್ವರಾಸಿದ್ಧೇಃ' ಇತ್ಯಾದಿ ಸೂತ್ರಗಳಲ್ಲಿ ಕಪಿಲರು ನಿರಾಕರಿಸಿಯೇ ಇದ್ದಾರೆಂದು ಹೇಳಿದರೆ ಸಾಕಾಗುವುದು. ಅದ್ವೈತವನ್ನು ಅನುವಾದ ಮಾಡಿರುವ ಸೂತ್ರಗಳಲ್ಲಿಯೂ ವ್ಯಾಸಸಂಮತವಾದ ಅರ್ಥವೇ ಅನುವಾದಿಸಲ್ಪಟ್ಟಿದೆಯೆಂದು ಕಲ್ಪಿಸಬೇಕಾಗಿಲ್ಲ.

೭. ಯಾವನೊಬ್ಬ ಅದ್ವೈತವಾದಿಯೇ ಇಲ್ಲದಿದ್ದರೂ ಸಾಂಖ್ಯಸೂತ್ರ-ಗಳಲ್ಲಿ ಸ್ವಮತವನ್ನು ಸ್ಥಾಪಿಸುವುದಕ್ಕೋಸ್ಕರ ಅದ್ವೈತಪಕ್ಷವನ್ನು ಊಹೆಯಿಂದ ಕಲ್ಪಿಸಿ ಅದನ್ನು ನಿರಾಕರಣ ಮಾಡಿರಬಹುದು.

೮. ಆ ಕಾಲದಲ್ಲಿದ್ದ ಬೇರೆಯಾರಾದರೊಬ್ಬ ಅದ್ವೈತವಾದಿಯ ಮತವನ್ನು ಸಾಂಖ್ಯಸೂತ್ರಗಳಲ್ಲಿ ಅನುವಾದಿಸಿ ನಿರಾಕರಿಸಿರಬಹುದು.

೯. ಸೂತಸಂಹಿತೆ, ವಿಷ್ಣುಪುರಾಣ ಮೊದಲಾದ ಗ್ರಂಥಗಳಲ್ಲಿ ಕೇವಲ ಅದ್ವೈತಿಗಳೆಂದು ಪ್ರಸಿದ್ಧರಾದ ಸೂತ, ಜಡಭರತ ಮೊದಲಾದವರ ಮತವನ್ನು ಖಂಡಿಸಿರಬಹುದು.

೧೦. ವ್ಯಾಸಸೂತ್ರಗಳಲ್ಲಿ 'ತದನನ್ಯತ್ತ್ವಮಾರಂಭಣಶಬ್ದಾದಿಭ್ಯಃ'(೨-೧-೧೪) ಇತ್ಯಾದಿ ಸೂತ್ರಗಳಲ್ಲಿ ಆಪಾತತಃ ತೋರುವ ಅದ್ವೈತಮತವನ್ನು ಅನುವಾದಿಸಿರಬಹುದು.

೧೧. 'ಆತ್ಮೇತಿ ತೂಪಗಚ್ಛಂತಿ ಗ್ರಾಹಯಂತಿ ಚ' (೪-೧-೩) ಇತ್ಯಾದಿ ಸೂತ್ರಗಳಲ್ಲಿ ವ್ಯಾಸಸಂಮತವಾದ ಅದ್ವೈತವೇ ಹೇಳಲ್ಪಟ್ಟಿದೆ-ಯೆಂದು ಭ್ರಾಂತಿಗೊಂಡ ಕಪಿಲರು ಅದ್ವೈತ ಮತವನ್ನು ತಮ್ಮ ಸೂತ್ರಗಳಲ್ಲಿ ಅನುವಾದಿಸಿರಬಹುದು.

೧೨. ಕಪಿಲರು ಸರ್ವಜ್ಞರಾದುದರಿಂದ ಮುಂದೆ ಜನ್ಮತಾಳುವ ಶಂಕರಾಚಾರ್ಯರಿಗೆ ಅಭಿಮತವಾದ ಅದ್ವೈತವನ್ನು ಪೂರ್ವಭಾವಿಯಾಗಿ ಹೇಳಿರಬಹುದು.

೧೩. ವೇದಾಂತಿಗಳಲ್ಲಿ ಏಕದೇಶಿಗಳಾದ ಆಶ್ಮರಥ್ಯ, ಔಡುಲೋಮಿ, ಕಾಶಕೃತ್ಸ್ನ ಮತ್ತು ಬಾದರಿಗಳಲ್ಲಿ ಯಾರಾದರೊಬ್ಬರ ಮತವನ್ನು ಅನುವಾದಿಸಿ ಖಂಡಿಸಿರಬಹುದು. ಆದ್ದರಿಂದ ಹಿಂದೆ ಉದಾಹರಿಸಿದ ಕಪಿಲ ಸೂತ್ರಗಳಲ್ಲಿ ಕಂಡುಬರುವ ಅದ್ವೈತ ಮತಾನುವಾದವು ಬೇರೆ ವಿಧದಲ್ಲಿ ಉಪಪನ್ನವಾಗುವುದರಿಂದ ವ್ಯಾಸರೇ ಇಲ್ಲಿ ವಾದಿ-ಗಳಾಗಿದ್ದಾರೆಂಬ ಮಾತು ಅಯುಕ್ತವಾದುದು. ಆದ ಕಾರಣ ಕೇವಲಾ-ದ್ವೈತವೇ ವ್ಯಾಸಸಂಮತವೆಂಬ ಘೋಷಣೆಯು ಗೋಡೆಯಿಲ್ಲದ ಚಿತ್ರದಂತೆ ಆಧಾರರಹಿತವಾಗಿದೆ.''

ಈ ಆಕ್ಷೇಪಣೆಗಳಿಗೆ ಇನ್ನು ಸಮಾಧಾನವನ್ನು ಹೇಳುತ್ತೇವೆ :- ''ಹಿರಿಯರಾದ ವಿದ್ವಾಂಸರ ಗ್ರಂಥಗಳಲ್ಲಿ ಸಾಂಖ್ಯಸೂತ್ರಗಳನ್ನು ಎಲ್ಲಿಯೂ ಉದಾಹರಿಸಿಲ್ಲ. ಆದ್ದರಿಂದ ಈ ಸೂತ್ರಗಳು ಕಪಿಲ ಪ್ರಣೀತಗಳೆಂದು ನಿಶ್ಚಯಿಸಲು ಸಾಧ್ಯವಿಲ್ಲ'' ಎಂಬ ಮೊದಲನೆಯ ಪಕ್ಷವು ಸರಿಯಲ್ಲ. ಏಕೆಂದರೆ, ಶ್ರೀಮತ್ ಸೂತಸಂಹಿತೆಯ ವ್ಯಾಖ್ಯಾನ-ವಾದ ತಾತ್ಪರ್ಯದೀಪಿಕೆಯಲ್ಲಿ ವಿದ್ಯಾರಣ್ಯಸ್ವಾಮಿಗಳು ''ಆದ್ದರಿಂದಲೇ ಸಾಂಖ್ಯರು ಹೇಳುತ್ತಾರೆ. 'ಸತ್ತ್ವರಜಸ್ತಮಸಾಂ ಸಾಮ್ಯಾವಸ್ಥಾ ಪ್ರಕೃತಿಃ'

(ಸಾಂ ೧-೬೧)'' ಇತ್ಯಾದಿ ವಚನಗಳಿಂದ ಸಾಂಖ್ಯಸೂತ್ರಗಳನ್ನು ಉದಾಹರಿಸಿದ್ದಾರೆ. ಅಪ್ಪಯ್ಯದೀಕ್ಷಿತರು - 'ಪರಿಮಳ'ವೆಂಬ ಗ್ರಂಥದಲ್ಲಿ **'ಆನುಮಾನಿಕಮಪ್ಯೇಕೇಷಾಮ್'** - (೧-೪-೧) ಎಂಬ ಅಧಿಕರಣದಲ್ಲಿ ಹೀಗೆ ಬರೆದಿದ್ದಾರೆ **'ಸ್ಥೂಲಾತ್ ಪಂಚತನ್ಮಾತ್ರಸ್ಯ'** (೧-೬೨) ಎಂಬ ಸೂತ್ರ ಮೊದಲುಗೊಂಡು **'ಸಂಹತಪರಾರ್ಥತ್ವಾತ್ ಪುರುಷಸ್ಯ'** (೧-೬೬) ಎಂಬ ಸೂತ್ರದವರೆಗಿರುವ ಕಪಿಲಸೂತ್ರಗಳು'' ಎಂದು. ಬಾಲಕೃಷ್ಣಾನಂದರು ಪುರುಷಾರ್ಥರತ್ನಾಕರದಲ್ಲಿಯೂ ಸಾಂಖ್ಯರು ಮೋಕ್ಷದ ಸ್ವರೂಪವನ್ನು ಹೀಗೆ ಹೇಳುತ್ತಾರೆ- **''ಅಥ ತ್ರಿವಿಧದುಃಖಾತ್ಯಂತ ನಿವೃತ್ತಿರತ್ಯಂತ ಪುರುಷಾರ್ಥಃ** (೧-೧)'' ಇತ್ಯಾದಿಯಾಗಿ ಹೇಳಿದ್ದಾರೆ.

ಇಲ್ಲಿ ಒಂದು ಶಂಕೆಯಾಗಬಹುದು. ಮೇಲ್ಕಂಡ ಆಧಾರದಿಂದ ಕಪಿಲ ಸೂತ್ರಗಳಿವೆಯೆಂದು ಸಿದ್ಧವಾದರೂ ನೀವು ಹೇಳಿದಂತೆ ಅದ್ವೈತ ಮತವನ್ನು ಅನುವಾದ ಮಾಡುವ ಸೂತ್ರಗಳನ್ನು ಕಪಿಲರೇ ರಚಿಸಿದ್ದಾರೆಂದು ಸಿದ್ಧವಾಗುವುದು ಹೇಗೆ ? ಇದಕ್ಕೆ ಸಮಾಧಾನವೇನೆಂದರೆ: ಕಪಿಲ ಸೂತ್ರಗಳಿಗೆ ವ್ಯಾಖ್ಯಾನಮಾಡಿದ ಅನಿರುದ್ಧಾಚಾರ್ಯ ಮುಂತಾದವರು **''ಅಥ ತ್ರಿವಿಧದುಃಖಾತ್ಯಂತ ನಿವೃತ್ತಿರತ್ಯಂತಪುರುಷಾರ್ಥಃ** (೧-೧)'' ಎಂಬ ಸೂತ್ರ-ದಿಂದ **'ಯದ್ವಾ ತದ್ವಾ ತದುಚ್ಛಿತ್ತಿಃ ಪುರುಷಾರ್ಥಃ'** (೬-೭೦) ಎಂಬ ಸೂತ್ರದವರೆಗಿರುವ ಎಲ್ಲಾ ಕಪಿಲ ಸೂತ್ರಗಳಿಗೂ ವ್ಯಾಖ್ಯಾನ ಮಾಡಿದ್ದಾರೆ. ಈ ಸೂತ್ರಗಳ ಮಧ್ಯದಲ್ಲಿಯೇ ನಾವು ಉದಾಹರಿಸಿದ ಸೂತ್ರಗಳೂ ಇರುವುದರಿಂದ ಅವು ಕಪಿಲ ಪ್ರಣೀತಗಳೆಂದು ನಿರ್ವಿವಾದವಾಗಿ ಹೇಳಬಹುದು.

ಎರಡನೆಯ ಪಕ್ಷವೂ ಯುಕ್ತವಲ್ಲ. ನಮ್ಮ ಭಾಷ್ಯಾದಿಪ್ರಾಚೀನ ಗ್ರಂಥಗಳಲ್ಲಿ ಗೌತಮ, ಕಪಿಲ ಮುಂತಾದವರು ಪ್ರತಿವಾದಿಗಳಾಗಿದ್ದಾರೆ. ಭಾಷ್ಯಕಾರರಾದಿಯಾಗಿ ಅಖಿಲ ಗ್ರಂಥಕರ್ತರೂ ಪ್ರತಿವಾದಿಗಳ ಮತವನ್ನು ಖಂಡಿಸಲು ತೊಡಗಿರುತ್ತಾರೆ. (ವ್ಯಾಸಸೂತ್ರಾರ್ಥದ ವಿಷಯದಲ್ಲಿ ವಾದಿ ಪ್ರತಿವಾದಿಗಳಿಗೆ ಭಿನ್ನಾಭಿಪ್ರಾಯ ಉಂಟಾಗಿಲ್ಲ) ಆದ್ದರಿಂದ ಆಧುನಿಕ-

ರಾದ ಭೇದವಾದಿಗಳನ್ನು ನಿರಾಕರಿಸುವುದಕ್ಕಾಗಿ ನಾವು ಹೇಳಿದ 'ಕಪಿಲಾನುವಾದ'ವೆಂಬ ಯುಕ್ತಿಯನ್ನು ಅವರು ಹೇಳಬೇಕಾಗಿರಲಿಲ್ಲ. ಇನ್ನು ಅಪ್ಪಯ್ಯದೀಕ್ಷಿತರೇ ಮೊದಲಾದ ಗ್ರಂಥಕರ್ತರು ಈ 'ಕಪಿಲಾನುವಾದ'ವೆಂಬ ಯುಕ್ತಿಯನ್ನು ಏಕೆ ಹೇಳಲಿಲ್ಲವೆಂದರೆ - ಅವರಿಗೆ ತಕ್ಕ ಯುಕ್ತಿಪ್ರಮಾಣಗಳಿಂದ ವಾದಿಸಬಲ್ಲ ಭೇದವಾದಿಯೇ ದೊರೆಯಲಿಲ್ಲ. ಆದ್ದ ಕಾರಣ ನಾವು ಹೇಳಿದ ಪ್ರಬಲಯುಕ್ತಿಯನ್ನು ಅವರು ಮುಂದಿಡಲಿಲ್ಲ. ಮತ್ತು ಹಿಂದಿನವರು ನಾವು ಹೇಳಿದ ಯುಕ್ತಿಯನ್ನು ಹೇಳದೇ ಹೋದರೆ ಅದು ಸರಿಯಾದ ಯುಕ್ತಿಯಾಗಲಾರದೇನು ? ವ್ಯಾಸಸೂತ್ರಗಳಿಗೆ ಅದ್ವೈತಾರ್ಥವನ್ನು ಪ್ರತಿಪಾದಿಸಲಾರದೇನು ? 'ಇಲ್ಲ' ಎಂದು ಹೇಳುವುದು ಮೂರ್ಖರಿಗೆ ಮಾತ್ರ ಯೋಗ್ಯವಾಗಿದೆ.

ಮೂರನೆಯ ಪಕ್ಷವೂ ಚೆನ್ನಾಗಿಲ್ಲ. ವ್ಯಾಸಕಪಿಲಾದಿಗಳು ಪ್ರತಿಯೊಂದು ಕಲ್ಪದಲ್ಲಿಯೂ ಲೋಕಾನುಗ್ರಹಕ್ಕಾಗಿ ಅವತರಿಸುತ್ತಾರೆ. ಅವರಲ್ಲಿ ಪ್ರಾಚೀನ ಅರ್ವಾಚೀನ ಎಂಬ ಭೇದವೇ ಇಲ್ಲ. ಆದ್ದರಿಂದ ಅವರು ತಮ್ಮ ತಮ್ಮ ಮತವನ್ನು ಸ್ಥಾಪಿಸುವುದಕ್ಕಾಗಿ ಪರಸ್ಪರಸಂಮತವಾದ ವಿಷಯವನ್ನು ಅನುವಾದ ಮಾಡಬಹುದು.

ನಾಲ್ಕನೆಯ ಪಕ್ಷವೂ ಅಸಂಗತ. ಕಪಿಲಸೂತ್ರಗಳಲ್ಲಿ ಕೇವಲಾ-ದ್ವೈತವನ್ನು ಖಂಡಿಸುವಾಗ ವ್ಯಾಸರೇ ಕೇವಲಾದ್ವೈತವಾದಿಯೆಂದು ತಿಳಿಯಲು ಸಾಧ್ಯವಿದೆ. ಹೇಗೆಂದರೆ, '**ಈಕ್ಷತೇರ್ನಾಶಬ್ದಮ್**' (೧-೧-೫) ಇತ್ಯಾದಿ ವೇದಾಂತ ಸೂತ್ರಗಳಲ್ಲಿ ಸಾಂಖ್ಯಮತವನ್ನು ನಿರಾಕರಿಸಿದ್ದಾರಷ್ಟೆ. ಅಲ್ಲಿ ಕಪಿಲರ ಹೆಸರನ್ನು ಹೇಳಿದ್ದಾರೆಯೇ ? ನಿಮ್ಮ ಮತದಂತೆ ಹೇಳಬೇಕಾಗಿತ್ತು.

ಐದನೆಯ ಪಕ್ಷವೂ ಸಮಂಜಸವಲ್ಲ. ಕಪಿಲಸೂತ್ರಗಳಲ್ಲಿ ಅದ್ವೈತ-ವನ್ನು ಅನುವಾದ ಮಾಡಿರುವುದರಿಂದಲೇ ಅದ್ವೈತವು ವ್ಯಾಸಸಂಮತವೆಂದು ನಿಶ್ಚಯಿಸಬಹುದಾಗಿದೆ. ಹೀಗಿರುವಾಗ ವ್ಯಾಸಸೂತ್ರಗಳಲ್ಲಿ ಅದ್ವೈತಮತದ

ಪ್ರತ್ಯಭಿಜ್ಞೆಯು ಅನಾವಶ್ಯಕ. ಪ್ರತ್ಯಭಿಜ್ಞೆ ಇಲ್ಲದಿದ್ದರೆ ಅದ್ವೈತವೇ ವ್ಯಾಸಸಂಮತವೆಂದು ಹೇಳುವುದು ಹೇಗೆ? ಎಂದು ಕೇಳಬಹುದು. ಇದಕ್ಕೆ "ನೀವು ಭ್ರಾಂತರಿದ್ದೀರಿ" ಎಂಬುದೇ ನಮ್ಮ ಉತ್ತರ. ಬೇರೊಬ್ಬ ಅದ್ವೈತವಾದಿ ಇಲ್ಲದುದರಿಂದ ವ್ಯಾಸರೇ ಅದ್ವೈತವಾದಿ ಎಂದು ನಾವು ಹಿಂದೆ ಹೇಳಿದ್ದೇವೆ. ವೇದಾಂತಸೂತ್ರಗಳಲ್ಲಿ ಅದ್ವೈತವಿಚಾರವು ಅತ್ಯಂತ ಸ್ಫುಟವಾಗಿ ತೋರುತ್ತಿದ್ದರೆ ನಿಮ್ಮ ದ್ವೈತಭಾಷ್ಯಗಳೇ ಹೊರಡುತ್ತಿರಲಿಲ್ಲ. ಆಗ ನಿಮಗೆ ಈ ರೀತಿಯಾಗಿ ಬುದ್ಧಿ ಕಲ್ಪಿತವಾದ ವಿರುದ್ಧ ಶಂಕೆಗಳೇ ಹುಟ್ಟುತ್ತಿರಲಿಲ್ಲ.

"ಭೇದವು ಉಪಾಧಿಯಿಂದ ತೋರುತ್ತದೆ. ಅದು ಔಪಾಧಿಕ" ಇತ್ಯಾದಿ ವಿಷಯಗಳಲ್ಲಿ ಪ್ರತ್ಯಭಿಜ್ಞೆಯು ಇದ್ದೇ ಇದೆ. ಹೇಗೆಂದರೆ, **"ಉಪಾಧಿಭೇದೇಽಪ್ಯೇಕಸ್ಯ ನಾನಾಯೋಗಃ ಆಕಾಶಸ್ಯೇವ ಯಥಾ ಘಟಾದಿಭಿಃ"** (೧-೧೫೦) ಇತ್ಯಾದಿ ಕಪಿಲಸೂತ್ರಗಳಲ್ಲಿ ಔಪಾಧಿಕಭೇದವು ಅನುವಾದಿಸಲ್ಪಟ್ಟಿದೆಯಷ್ಟೆ. ಈ ಭೇದವು, **"ಅತ ಏವ ಚೋಪಮಾ ಸೂರ್ಯಕಾದಿವತ್"** (೩-೨-೧೮), **ಆಭಾಸ ಏವಚ** (೨-೩-೫೦) ಇತ್ಯಾದಿ ವ್ಯಾಸಸೂತ್ರಗಳಲ್ಲಿ ಪ್ರತೀತವಾಗುತ್ತದೆ. ಹಾಗೆಯೇ **"ನಾತ್ಮಾವಿದ್ಯಾ ನೋಭಯಂ ಜಗದುಪಾದಾನಕಾರಣಂ, ನಿಃಸಂಗತ್ವಾತ್"** (೫-೬೫) ಎಂಬ ಕಪಿಲಸೂತ್ರವು ಜಗತ್ತಿಗೆ ಬ್ರಹ್ಮವಸ್ತು ಉಪಾದಾನ ಕಾರಣವೆಂಬುದನ್ನು ನಿರಾಕರಿಸುತ್ತದೆ. ಈ ವಿಷಯವು **ಜನ್ಮಾದ್ಯಸ್ಯ ಯತಃ** (೧-೧-೨). **'ಪ್ರಕೃತಿಶ್ಚ ಪ್ರತಿಜ್ಞಾ ದೃಷ್ಟಾಂತಾನುಪರೋಧಾತ್'** (೧-೪-೨೩) ಎಂಬ ವ್ಯಾಸಸೂತ್ರ-ಗಳಿಂದ ಪ್ರತೀತವಾಗುತ್ತದೆ. ಇಲ್ಲಿ ಒಂದು ಶಂಕೆಯುಂಟಾಗಬಹುದು. ಏನೆಂದರೆ, ಈ ಕಪಿಲಸೂತ್ರವು ಪ್ರಕೃತಿ ಸಹಿತವಾದ ಬ್ರಹ್ಮವಸ್ತು ಜಗತ್ತಿಗೆ ಉಪಾದಾನ ಕಾರಣವೆಂಬ ಮತವನ್ನು ನಿರಾಕರಿಸುತ್ತದೆ. ಈ ಮತವು ಶ್ರೀಕಂಠ, ರಾಮಾನುಜಾದಿಗಳಿಗೂ ಸಂಮತವಾಗಿರುವಾಗ **'ಜನ್ಮಾದ್ಯಸ್ಯ-ಯತಃ'** ಇತ್ಯಾದಿ ಸೂತ್ರಗಳಲ್ಲಿ ಈ ಮತವೇ ಪ್ರತೀತವಾಗುತ್ತದೆಯೆಂದು

ಹೇಳಬಹುದು. ಹೀಗಿರಲು ಕೇವಲಾದ್ವೈತವಾದಿಯ ಮತವೇ ಇಲ್ಲಿ ಹೇಳಲ್ಪಟ್ಟಿದೆಯೆಂದು ಒಪ್ಪುವುದು ಹೇಗೆ?

ಇದಕ್ಕೆ ನಮ್ಮ ಸಮಾಧಾನವಿದು. 'ನಾತ್ಮಾವಿದ್ಯಾ....' ಇತ್ಯಾದಿ ಕಪಿಲ ಸೂತ್ರದಲ್ಲಿ ಮೂರು ವಿಕಲ್ಪಗಳನ್ನು ಮಾಡಿ ನಿರಾಕರಿಸಬೇಕೆಂದು ಹೊರಟಿದ್ದಾರೆ. ವಿಕಲ್ಪಗಳು ಇವು -

೧. ಆತ್ಮನು ಮಾತ್ರವೇ ಜಗತ್ತಿಗೆ ಉಪಾದಾನ ಕಾರಣನೇ?

೨. ಅವಿದ್ಯೆಯು ಮಾತ್ರ ಕಾರಣವೇ? ಅಥವಾ

೩. ಅವಿದ್ಯಾಸಹಿತನಾದ ಆತ್ಮನು ಕಾರಣನೇ?

ಇವುಗಳಲ್ಲಿ 'ಅವಿದ್ಯೆಯು ಮಾತ್ರ ಜಗತ್ತಿಗೆ ಉಪಾದಾನ ಕಾರಣ'ವೆಂಬ ಎರಡನೆಯ ವಿಕಲ್ಪದಲ್ಲಿ ಅವಿದ್ಯೆಯೆಂದರೆ ಪರಮಾರ್ಥದಲ್ಲಿ ಅಸತ್ಯವಾದ ಅವಿದ್ಯೆಯೆಂದು ಅರ್ಥಮಾಡಬೇಕು. ಹಾಗಲ್ಲದೆ ರಾಮಾನುಜಾದಿಗಳು ಒಪ್ಪುವ ನಿತ್ಯಪ್ರಕೃತಿಯೇ ಅವಿದ್ಯೆಯೆಂದು ಅರ್ಥಮಾಡಬಾರದು. ಏಕೆಂದರೆ, ಸಾಂಖ್ಯರೂ ನಿತ್ಯಪ್ರಕೃತಿಯೇ ಜಗದುಪಾದಾನವೆಂದು ಒಪ್ಪಿರುತ್ತಾರೆ. ಅವರು ತಮ್ಮ ಸಿದ್ಧಾಂತವನ್ನೇ ತಾವು ಖಂಡಿಸಿಕೊಳ್ಳುವುದಿಲ್ಲ, ಮತ್ತು **'ನಾವಿದ್ಯಾ-ತೋಽಪ್ಯವಸ್ತುನಾ ಬಂಧಾಯೋಗಾತ್'** (೧-೨೦) ಎಂಬ ಪ್ರಥಮಾಧ್ಯಾಯದ ಸೂತ್ರದಲ್ಲಿ ಅವಿದ್ಯೆಯೆಂದರೆ ಪರಮಾರ್ಥದಲ್ಲಿ ಅಸತ್ಯವಾದ ಅವಿದ್ಯೆಯೆಂಬ ಅರ್ಥವು ನಿಶ್ಚಿತವಾಗಿದೆ. ಆ ಪ್ರತ್ಯಭಿಜ್ಞಾಬಲದಿಂದ ಈ ಸೂತ್ರದಲ್ಲಿಯೂ ಅವಿದ್ಯೆಯೆಂದರೆ ಪರಮಾರ್ಥದಲ್ಲಿ ಅಸತ್ಯವಾದ ಅವಿದ್ಯೆ ಎಂದು ಅರ್ಥ ಮಾಡುವುದು ಯೋಗ್ಯವಾಗಿದೆ. ಅಂದ ಮೇಲೆ ಮೂರನೆಯ ವಿಕಲ್ಪದಲ್ಲಿ ಈ ಬಗೆಯಾದ ಅವಿದ್ಯಾಸಹಿತನಾದ ಆತ್ಮನು ಜಗತ್ತಿಗೆ ಉಪಾದಾನ ಕಾರಣನು ಎಂಬ ಅರ್ಥವು ಸ್ಫುಟವಾಗುತ್ತದೆ. ಈ ಪಕ್ಷವನ್ನು ಈ ಸಾಂಖ್ಯಸೂತ್ರದಲ್ಲಿ ನಿರಾಕರಣ ಮಾಡಿದ್ದಾರೆಂದು ಹೇಳಬೇಕು. ಇದನ್ನು ರಾಮಾನುಜಾದಿಗಳು ಅಂಗೀಕರಿಸುವುದಿಲ್ಲ-ವಾದುದರಿಂದ ಅವರ ಮತವನ್ನು ಸಾಂಖ್ಯಸೂತ್ರದಲ್ಲಿ ಅನುವಾದ

ಮಾಡಿಲ್ಲವೆಂದು ಸಿದ್ಧವಾಗುತ್ತದೆ. ಆಗ ಬ್ರಹ್ಮಸೂತ್ರಗಳಲ್ಲಿ ಪ್ರತ್ಯಭಿಜ್ಞಾತವಾದ ಮತವು ಇವರದಲ್ಲ; ಅದು ಕೇವಲಾದ್ವೈತವಾದಿಯದೇ ಸರಿಯೆಂದು ನಿರ್ವಿವಾದವಾಗಿ ಹೇಳಬಹುದು.

ಆರನೆಯ ಪಕ್ಷವೂ ಬಲಯುತವಾಗಿಲ್ಲ. 'ಈಶ್ವರಾಸಿದ್ಧೇಃ' (೧-೯-೨) ಇತ್ಯಾದಿ ಕಪಿಲಸೂತ್ರಗಳಿಂದ ನಿರಾಕರಿಸಲ್ಪಡುವ ಅಂಶಗಳನ್ನು ಗೌತಮ ಮೊದಲಾದವರೂ ಅಂಗೀಕರಿಸಿದ್ದಾರೆ. (ಈಶ್ವರನನ್ನು ಒಪ್ಪಿದ್ದಾರೆ) ಆದ್ದರಿಂದ ಆ ಸೂತ್ರಗಳು ವ್ಯಾಸಮತವನ್ನು ಮಾತ್ರ ನಿರಾಕರಿಸುತ್ತವೆಯೆಂಬುದು ಸರಿಯಲ್ಲ. ಅಷ್ಟೇಕೆ? ಆ ಸೂತ್ರಗಳು ನೈಯಾಯಿಕ ಮತವನ್ನೇ ನಿರಾಕರಿಸಲು ಹೊರಟಿವೆಯೆಂದು ಹೇಳಬಹುದು. ಆದ್ದರಿಂದಲೇ ಅನಿರುದ್ಧಾಚಾರ್ಯನ ವ್ಯಾಖ್ಯಾನದಲ್ಲಿ ಆ ಸೂತ್ರಗಳು ನೈಯಾಯಿಕ ಮತವನ್ನು ಖಂಡಿಸುವ ಅಭಿಪ್ರಾಯದಿಂದಲೇ ಹೊರಟಿವೆಯೆಂದು ಸ್ಪಷ್ಟವಾಗಿದೆ. ಮತ್ತು ಅದ್ವೈತಮತವನ್ನು ಅನುವಾದಿಸುವ ಅನೇಕ ಸಾಂಖ್ಯ ಸೂತ್ರಗಳಲ್ಲಿ ಬೇರೆ ವಾದಿಯು ಸಂಭವಿಸುವುದಿಲ್ಲವಾದ್ದರಿಂದ ಅದು ವ್ಯಾಸಮತದ ಅನುವಾದವೆಂದೂ, ವ್ಯಾಸಮತವನ್ನೇ ಕಪಿಲರು ನಿರಾಕರಿಸಿದ್ದಾರೆಂದೂ ಒಪ್ಪಬೇಕಾದುದು ಅನಿವಾರ್ಯ. ಹೀಗಿರುವಾಗ 'ಈಶ್ವರಾಸಿದ್ಧೇಃ' ಇತ್ಯಾದಿ ಸೂತ್ರಗಳಿಂದಲೇ ವ್ಯಾಸಮತವನ್ನು ನಿರಾಕರಿಸಿದ್ದಾರೆಂದು ಏಕೆ ಹೇಳಬೇಕು? ಈ ಸೂತ್ರಗಳು ನೈಯಾಯಿಕಾದಿ ಮತಾಂತರ ಸಾಧಾರಣವಾದ ವಿಷಯವನ್ನು ಖಂಡಿಸುವುದರಿಂದ ವ್ಯಾಸಮತವನ್ನೇ ಇಲ್ಲಿ ಖಂಡಿಸಿದ್ದಾರೆಂದು ಹೇಳುವುದು ಯುಕ್ತವಲ್ಲ.

ಏಳನೆಯ ಪಕ್ಷವೂ ಅಷ್ಟೆ. 'ವಸ್ತುತ್ವೇ ಸಿದ್ಧಾಂತಹಾನಿಃ' (೧-೨೧) ಎಂಬ ಸೂತ್ರವನ್ನು ಪರಿಶೀಲಿಸಿದರೆ ಒಬ್ಬ ಪ್ರಸಿದ್ಧನಾದ ಅದ್ವೈತ ವಾದಿಯಿದ್ದನೆಂದೂ, ಆತನ ಅದ್ವೈತವೆಂಬ ಒಂದು ಸಿದ್ಧಾಂತವು ಪ್ರಚುರವಾಗಿದ್ದಿತೆಂದೂ ಗೊತ್ತಾಗುತ್ತದೆ. ಆ ಸಿದ್ಧಾಂತವನ್ನೇ ಕಪಿಲರು ಇಲ್ಲಿ ನಿರಾಕರಿಸಿದ್ದಾರೆ. ಆದ್ದರಿಂದ ಊಹಾಬಲದಿಂದ ಕಲ್ಪಿಸಿದ ಒಂದು ಪಕ್ಷವನ್ನು ನಿರಾಕರಿಸಿದ್ದಾರೆಂಬುದು ಸರಿಯಲ್ಲ.

ಎಂಟನೆಯ ಪಕ್ಷವೂ ದೋಷಯುಕ್ತವಾಗಿದೆ. ಆ ಕಾಲದಲ್ಲಿದ್ದ ಬೇರೆ ಯಾರಾದರೊಬ್ಬ ಅದ್ವೈತವಾದಿಯೆಂದರೆ, ಅವನು ಮಹರ್ಷಿಯೋ ಅಥವಾ ಸಾಮಾನ್ಯನೋ ಎಂದು ಕೇಳಬೇಕಾಗುತ್ತದೆ. ಅವನು ಮಹರ್ಷಿ-ಯಾಗಿದ್ದರೆ ಕಪಿಲಕಣಾದಾದಿಗಳ ಮತದಂತೆ ಆತನ ಮತವೂ ಗುರುಶಿಷ್ಯಪರಂಪರೆಯಿಂದ ಈಗಲೂ ಪ್ರಚಾರದಲ್ಲಿರಬೇಕಾಗಿತ್ತು. ಅದು ಖಿಲವಾಗುವುದು ಅಸಂಭವ. ಆತನು ಸಾಮಾನ್ಯ ಮನುಷ್ಯನೊಬ್ಬ-ನೆಂಬುದೂ ಸರಿಯಲ್ಲ. ಅಪ್ರಸಿದ್ಧನಾದ ಇನ್ನೊಬ್ಬ ಅದ್ವೈತವಾದಿಯು ಸಾಮಾನ್ಯ ಮನುಷ್ಯನಾಗಿದ್ದನೆಂಬುದಕ್ಕೆ ಯಾವ ಪ್ರಮಾಣವೂ ಇಲ್ಲ. ಪ್ರಸಿದ್ಧರಾದ ವ್ಯಾಸಮಹರ್ಷಿಗಳನ್ನು ಬಿಟ್ಟು ಅಪ್ರಸಿದ್ಧನೂ ಸಾಮಾನ್ಯನೂ ಆದ ಇನ್ನೊಬ್ಬ ಅದ್ವೈತವಾದಿಯನ್ನು ಹುಡುಕುವುದು ಸರಿಯಲ್ಲ.

ಒಂಬತ್ತನೆಯ ಪಕ್ಷವೂ ಕೀಳಾದದ್ದು. ಸೂತ, ಜಡಭರತ ಮುಂತಾದವರು ಸ್ವತಂತ್ರವಾಗಿ ಯಾವ ಶಾಸ್ತ್ರವನ್ನೂ ವಿರಚಿಸಿಲ್ಲ. ಸಾಂಖ್ಯ ಶಾಸ್ತ್ರವನ್ನು ಸ್ವತಂತ್ರವಾಗಿ ವಿರಚಿಸಿದ ಕಪಿಲರಿಗೆ ಅವರು ಪ್ರತಿವಾದಿಗಳಲ್ಲ. ಆದ್ದರಿಂದ ಕಪಿಲರು ಅವರ ಮತವನ್ನು ನಿರಾಕರಿಸಿದ್ದಾರೆಂಬುದು ಸಾಧುವಲ್ಲ. ಮತ್ತು ಸೂತ ಮೊದಲಾದವರು ಕಪಿಲರಿಗೆ ಪ್ರತಿವಾದಿ-ಗಳೆಂದು ನೀವು ಒಪ್ಪುವುದಾದರೆ ಆಗ ಸೂತಸಂಹಿತೆ, ವಿಷ್ಣುಪುರಾಣ ಮೊದಲಾದ ಗ್ರಂಥಗಳು ಅದ್ವೈತಪರವೆಂದು ನೀವೇ ಸಾಧಿಸ-ಬೇಕಾಗುವುದು. ಅವುಗಳಲ್ಲಿ ಪ್ರತಿಪಾದಿಸಿದ ವಿಷಯವನ್ನೇ ವೇದಾಂತ ಶಾಸ್ತ್ರವೂ ಬೋಧಿಸುವುದರಿಂದ ವೇದಾಂತಶಾಸ್ತ್ರವು ಅದ್ವೈತಪರವೆಂಬ ನಮ್ಮ ಅಭಿಮತವೇ ಸಿದ್ಧಿಸುತ್ತದೆ. ಅಷ್ಟೇ ಅಲ್ಲ. ಈ ರೀತಿಯಲ್ಲಿ ಅದ್ವೈತವನ್ನು ಪ್ರತಿಪಾದಿಸುವ ವಿಷ್ಣು ಪುರಾಣಾದಿಗಳಿಗೆ ಭೇದಪರವಾಗಿ ಅರ್ಥಮಾಡುವ ನಿಮ್ಮ ಭಾಷ್ಯಕಾರಾದಿಗಳು ಭ್ರಾಂತರೆಂದು ನೀವು ಸಂಮತಿಸಬೇಕಾಗುತ್ತದೆ. ಅದು ನಿಮಗೆ ಅನಿಷ್ಟವಾದುದು.

ಹತ್ತನೆಯ ಪಕ್ಷವೂ ವಿಷಮವೇ. ಅದು ನಮ್ಮ ವಿಕಲ್ಪವನ್ನು ತಡೆದುಕೊಳ್ಳಲಾರದು. ಹೇಗೆಂದರೆ, ಆಪಾತತಃ ತೋರುವ ಅದ್ವೈತ-

ಮತವನ್ನು ಸಾಂಖ್ಯಸೂತ್ರಗಳು ನಿರಾಕರಿಸುತ್ತವೆಯೆಂದು ಹೇಳುವಿರಷ್ಟೆ. ವ್ಯಾಸ ಸೂತ್ರಗಳಲ್ಲಿ ತೋರುವ ಈ ಅದ್ವೈತಮತವು ವ್ಯಾಸರ ಮತದಲ್ಲಿ ಪೂರ್ವ ಪಕ್ಷವೆ? ಅಥವಾ ಸಿದ್ಧಾಂತವೆ? ಅದು ಪೂರ್ವ ಪಕ್ಷವಲ್ಲ. ಏಕೆಂದರೆ, 'ವಸ್ತುತ್ವೇ ಸಿದ್ಧಾಂತಹಾನಿಃ' (೧-೨೧) ಎಂದು ಕಪಿಲರು ವ್ಯಾಸರನ್ನು ಕುರಿತು ಹೇಳುವ ದೂಷಣವು ಅಸಂಗತವಾಗುತ್ತದೆ. ಅಲ್ಲದೆ ವ್ಯಾಸ ಸಿದ್ಧಾಂತವನ್ನು ಖಂಡಿಸಲು ಹೊರಟ ಕಪಿಲರು ವ್ಯಾಸರ ಪೂರ್ವಪಕ್ಷವನ್ನು ಖಂಡಿಸುವುದು ಯುಕ್ತವಾಗಲಾರದು. ಅದು ವ್ಯಾಸರ ಸಿದ್ಧಾಂತವೆಂದು ಹೇಳುವುದಾದರೆ ನಮ್ಮ ಇಷ್ಟವೇ ನೆರವೇರಿದಂತಾಯಿತು.

ಹನ್ನೊಂದನೆಯ ಪಕ್ಷವೂ ಸರಿಯಲ್ಲ. ಸ್ವಮತವನ್ನು ಸ್ಥಾಪಿಸುವುದ-ಕ್ಕೋಸ್ಕರ ಪರಮತವನ್ನು ಖಂಡಿಸಬೇಕಾದ ಸಂದರ್ಭದಲ್ಲಿ ಸರ್ವಜ್ಞರಾದ ಕಪಿಲರು ಸಕಲಶಾಸ್ತ್ರಗಳ ಸಿದ್ಧಾಂತವನ್ನೂ ನಿರ್ಣಯಿಸುವುದರಲ್ಲಿ ಜಾಗರೂಕರಾಗಿಯೇ ಇರುತ್ತಾರೆ. ಇತರ ಮತವನ್ನು ಅನುವಾದಿಸುವಾಗ ಭ್ರಾಂತಿಗೊಳ್ಳದ ಅವರು ವ್ಯಾಸಮತವನ್ನು ಅನುವಾದಿಸುವಾಗ ಮಾತ್ರ ಭ್ರಾಂತಿಗೊಂಡಿದ್ದಾರೆಂದು ಕಲ್ಪನೆ ಮಾಡಲು ನಿಮ್ಮ ಭ್ರಾಂತಿಯೇ ಕಾರಣ.

ಹನ್ನೆರಡನೆಯ ಪಕ್ಷವೂ ಅಯುಕ್ತವೇ ಸರಿ. ಗೌತಮ, ಕಣಾದ ಮೊದಲಾದ ಸೂತ್ರಕಾರರ ಮತವನ್ನೇ ಮುಖ್ಯವಾಗಿ ನಿರಾಕರಿಸುವ ಪ್ರಕರಣದಲ್ಲಿ ಸೂತ್ರಕಾರರಾದ ವ್ಯಾಸರ ಮತವನ್ನು ನಿರಾಕರಿಸಿದ್ದಾ-ರೆಂಬುದು ಉಚಿತವಾಗುತ್ತದೆ. ಹಾಗಲ್ಲದೆ ಮುಂದೆ ಜನ್ಮತಾಳಲಿರುವ ಭಾಷ್ಯಕಾರರಾದ ಶಂಕರಾಚಾರ್ಯರ ಮತವನ್ನು ನಿರಾಕರಿಸುತ್ತಾರೆಂಬುದು ಅನುಚಿತವಾಗುತ್ತದೆ. ಅಲ್ಲದಿದ್ದರೆ ರಾಮಾನುಜ, ಮಧ್ವ, ಶ್ರೀಕಂಠಾದಿ ಭಾಷ್ಯಕಾರರ ಮತವನ್ನೂ ನಿರಾಕರಿಸಬೇಕಾದೀತು. ಅವರು ಒಪ್ಪಿದ ವಿಶಿಷ್ಟಾದ್ವೈತ ಮೊದಲಾದ ಮತವನ್ನು ಖಂಡಿಸಿರುವುದು ಸಾಂಖ್ಯ ಸೂತ್ರಗಳಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಅಥವಾ ಮುಂದೆ ಜನ್ಮ ತಾಳಲಿದ್ದ ಶಂಕರಾಚಾರ್ಯರ ಮತವನ್ನು ಖಂಡಿಸಿದ್ದಾರೆಂದು ಹೇಳಿದರೂ ಬಾಧಕವಿಲ್ಲ. ವ್ಯಾಸತಾತ್ಪರ್ಯವನ್ನು ನಿರ್ಣಯಿಸುವುದಕ್ಕೋಸ್ಕರ ಹೊರಟಿರುವ

ಅನೇಕ ಭಾಷ್ಯಕಾರರ ಮಧ್ಯದಲ್ಲಿ ಭಗವತ್ಪಾದ ಶಂಕರಾಚಾರ್ಯರ ಪಕ್ಷವನ್ನೇ ಅನುವಾದಿಸಿ ಖಂಡಿಸಿದ್ದಾರೆಂದು ಸಿದ್ಧವಾಗುತ್ತದೆ. ಆಗ ಅವರಿಗೆ ಅಭಿಮತವಾದ ಅದ್ವೈತವೇ ವ್ಯಾಸರಿಗೆ ಸಂಮತವಾದುದೆಂದು ನಿಶ್ಚಯ-ವಾಗುತ್ತದೆ. ಅದರಿಂದ ನಮ್ಮ ಅಭೀಷ್ಟವೇ ಸಿದ್ಧಿಸಿದಂತಾಯಿತು.

ಇನ್ನು ವೇದಾಂತಿಗಳಲ್ಲಿ ಏಕದೇಶಿಗಳಾದ ಆಶ್ಮರಥ್ಯ, ಔಡುಲೋಮಿ, ಕಾಶಕೃತ್ಸ್ನ ಮತ್ತು ಬಾದರಿಗಳ ಮಧ್ಯದಲ್ಲಿ ಯಾರಾದರೊಬ್ಬರ ಮತವನ್ನು ನಿರಾಕರಿಸಿರಬಹುದೆಂಬ ಹದಿಮೂರನೆಯ ಪಕ್ಷವೂ ಸರಿಯಲ್ಲ. ಸ್ವತಂತ್ರ ಶಾಸ್ತ್ರ ಪ್ರವರ್ತಕರಾದ ಗೌತಮ, ಕಣಾದ ಮೊದಲಾದವರ ಮತವನ್ನು ನಿರಾಕರಿಸುವ ಸಂದರ್ಭದಲ್ಲಿ ವೇದಾಂತಶಾಸ್ತ್ರ ಪ್ರವರ್ತಕರಾದ ವ್ಯಾಸರ ಮತವನ್ನು ನಿರಾಕರಿಸುವುದೇ ಉಚಿತ. ಏಕದೇಶಿಗಳಾದ ಆಶ್ಮರಥ್ಯ ಮುಂತಾದವರ ಮತವನ್ನು ನಿರಾಕರಿಸುವುದು ಉಚಿತವಾಗದು. ಏಕೆಂದರೆ, 'ಮುಖ್ಯನಾದ ಜಟ್ಟಿಯನ್ನು ಸೋಲಿಸಿದರೆ ಅವನ ಹಿಂಬದಿಯಲ್ಲಿರುವ ಇತರ ಸಾಮಾನ್ಯ ಜಟ್ಟಿಗಳನ್ನು ಸೋಲಿಸಿದಂತೆಯೇ ಸರಿ' ಎಂದು ತಿಳಿಸುವ 'ಪ್ರಧಾನ ಮಲ್ಲನಿಬರ್ಹಣನ್ಯಾಯ' ಉಂಟು. ಅಲ್ಲದಿದ್ದರೆ ''**ಈಕ್ಷತೇರ್ನಾ-ಶಬ್ದಮ್**'' (೧-೧-೫) ಇತ್ಯಾದಿ ವ್ಯಾಸಸೂತ್ರಗಳಲ್ಲಿ ಸಾಂಖ್ಯಮತವನ್ನು ಖಂಡಿಸುವಾಗ ಅವರಲ್ಲಿ ಏಕದೇಶಿಗಳಾದ ಪಂಚಶಿಖ, ಸನಂದನಾಚಾರ್ಯ ಮೊದಲಾದವರ ಮತವನ್ನೇ ಖಂಡಿಸಿದ್ದಾರೆಂದು ಹೇಳಬೇಕಾದೀತು. ಹಾಗೆಯೇ ಹೇಳಿ ಬಿಡೋಣವೆನ್ನುವಂತೆಯೂ ಇಲ್ಲ. ಸಕಲಮತೀಯ ಭಾಷ್ಯಗಳಲ್ಲಿಯೂ ಆ ಸೂತ್ರಗಳು ಕಪಿಲ ಮತವನ್ನೇ ಲಕ್ಷಿಸಿ ಖಂಡಿಸುತ್ತವೆ-ಯೆಂದು ವ್ಯಾಖ್ಯಾನ ಮಾಡಿರುತ್ತಾರೆ. ಆದ್ದರಿಂದ ಭಾಷ್ಯ ವಿರೋಧವುಂಟಾಗುವುದು ಮತ್ತು ಅದ್ವೈತ ಮತವನ್ನು ನಿರಾಕರಿಸುವ ಕಪಿಲ ಸೂತ್ರಗಳೆಲ್ಲವೂ ಏಕದೇಶಿಗಳಾದ ಆಶ್ಮರಥ್ಯ ಮೊದಲಾದವರ ಮತವನ್ನೇ ನಿರಾಕರಿಸುತ್ತವೆಯೆಂದು ಹೇಳುವುದಾದರೆ, ಆಗ ಕಪಿಲರು ತಮ್ಮ ಮತವನ್ನು ಸಿದ್ಧಾಂತಗೊಳಿಸಲೇ ಇಲ್ಲವೆಂದು ಹೇಳಬೇಕಾಗುವುದು. ಏಕೆಂದರೆ, ಅವರು ತಮಗೆ ಪ್ರತಿಪಕ್ಷವಾದ ವ್ಯಾಸ ಸಿದ್ಧಾಂತವನ್ನು

ಖಂಡಿಸಿದಂತೆ ಆಗಲಿಲ್ಲ. 'ಪ್ರತಿಪಕ್ಷದ ಸಿದ್ಧಾಂತವನ್ನು ಖಂಡಿಸಿದ ಹೊರತು ಸ್ವಪಕ್ಷವು ಸಿದ್ಧಾಂತವಾಗಿ ನಿಲ್ಲುವುದಿಲ್ಲ' ಎಂಬ ನ್ಯಾಯದಂತೆ ಕಪಿಲರ ಮತವು ನಿರ್ಬಾಧವಾಗಿ ಸಿದ್ಧಾಂತಗೊಳ್ಳುವುದಿಲ್ಲ.

ಇರಲಿ, ಆಶ್ಮರಥ್ಯ ಮೊದಲಾದವರಲ್ಲಿ ಯಾರ ಮತವನ್ನು ಕಪಿಲರು ನಿರಾಕರಿಸಿದ್ದಾರೆಂದು ಹೇಳುತ್ತೀರಿ ? ಆಶ್ಮರಥ್ಯನ ಮತವನ್ನು ನಿರಾಕರಿಸಿದ್ದಾ-ರೆಂಬುದು ಸರಿಯಲ್ಲ. ಆತನು ಭೇದಾಭೇದವಾದಿ. ಅಗ್ನಿಯಿಂದ ಕಿಡಿಗಳು ಹುಟ್ಟುವಂತೆ ಬ್ರಹ್ಮವಸ್ತುವಿನಿಂದ ಜೀವರು ಹುಟ್ಟಿದ್ದಾರೆ. ಜೀವಾತ್ಮರು ಬ್ರಹ್ಮವಿಕಾರಗಳು. ಜೀವಬ್ರಹ್ಮರಿಗೆ ಸ್ವಾಭಾವಿಕವಾದ ಭೇದವೂ ಇದೆ. ಅಭೇದವೂ ಇದೆ - ಎಂದು ಆತನ ಮತ. ಈ ವಿಷಯವನ್ನು **'ವಾಕ್ಯಾನ್ವ-ಯಾತ್'** (೧-೪-೧೯) ಎಂಬ ಅಧಿಕರಣದಲ್ಲಿ **'ಪ್ರತಿಜ್ಞಾಸಿದ್ಧೇರ್ಲಿಂಗ-ಮಾಶ್ಮರಥ್ಯಃ'** (೧-೪-೨೦) ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುವಾಗ ಶಂಕರಾಚಾರ್ಯರ ಭಾಷ್ಯದಲ್ಲಿಯೂ, ಶ್ರೀಕಂಠ, ರಾಮಾನುಜಭಾಷ್ಯ-ಗಳಲ್ಲಿಯೂ ಪ್ರತಿಪಾದಿಸಿದ್ದಾರೆ. ಶ್ರುತಪ್ರಕಾಶಿಕೆಯಲ್ಲಿ 'ಜೀವಬ್ರಹ್ಮರಿಗೆ ಕಾರ್ಯರೂಪದಿಂದ ಭೇದವೂ, ಕಾರಣರೂಪದಿಂದ ಅಭೇದವೂ ಸ್ವಾಭಾವಿಕ-ವಾಗಿ ಇದೆ' ಎಂಬುದಾಗಿ ಯಾದವಪ್ರಕಾಶರಿಗೆ ಸಂಮತವಾದ ಈ ಪಕ್ಷವನ್ನು ವಿವರಿಸಿದ್ದಾರೆ. ಇಂತಹ ಭೇದಾಭೇದವಾದಿಯಾದ ಆಶ್ಮರಥ್ಯನನ್ನು ಕುರಿತು **'ಉಪಾಧಿ ಭೇದೇಽಪ್ಯೇಕಸ್ಯ ನಾನಾ ಯೋಗಃ ಆಕಾಶಸ್ಯೇವ ಘಟಾದಿಭಿಃ'** (೧-೧೫೦) ಇತ್ಯಾದಿ ವಾಕ್ಯಗಳಿಂದ ಔಪಾಧಿಕಜೀವನನ್ನು ಉದ್ದೇಶಿಸಿ **'ಏವಮೇಕತ್ವೇನ ಪರಿವರ್ತಮಾನಸ್ಯ ನ ವಿರುದ್ಧ-ಧರ್ಮಾಧ್ಯಾಸಃ'** (೧-೧೫೨) ಇತ್ಯಾದಿ ವಾಕ್ಯಗಳಿಂದ ನಿರಾಕರಿಸುವುದು ಸಮಂಜಸವಲ್ಲ.[೬]

---

೬. ಇದರ ತಾತ್ಪರ್ಯ ವಿಷ್ಣು :- ಆಶ್ಮರಥ್ಯನು ಜೀವಬ್ರಹ್ಮರಿಗೆ ಭೇದ ಅಭೇದಗಳೆರಡನ್ನು ಒಪ್ಪುತ್ತಾನೆ. ಬ್ರಹ್ಮನ ವಿಕಾರಗಳೇ ಜೀವರು. ಬ್ರಹ್ಮನು ಕಾರಣ; ಜೀವರು ಕಾರ್ಯ, ಕಾರ್ಯವು ಕಾರಣದಿಂದ ಭಿನ್ನವಾಗಿರುತ್ತದೆ. ಅವರಿಗೆ ಪರಸ್ಪರವ್ಯಾವೃತ್ತಿಯಿರುವುದರಿಂದಲೂ, ಜೀವನು ಸರ್ವಜ್ಞನಲ್ಲವಾದ್ದರಿಂದಲೂ

ಹೀಗೆ ಕಪಿಲರು ಉಪಾಧಿಭೇದವನ್ನು ನಿರಾಕರಿಸಿರುವುದರಿಂದ ಔಡುಲೋಮಿಯ ಮತವನ್ನು ಖಂಡಿಸಿದ್ದಾರೆಂಬುದೂ ಸರಿಯಾಗುವುದಿಲ್ಲ. ಅದೇ ಅಧಿಕರಣದಲ್ಲಿರುವ **'ಉತ್ಕ್ರಮಿಷ್ಯತಃ ಏವಂಭಾವಾದಿತ್ಯೌಡುಲೋಮಿಃ'** (೧-೪-೨೧) ಎಂಬ ಸೂತ್ರವನ್ನು ಪರಿಶೀಲಿಸಿದರೆ, ಮುಕ್ತಿಗೆ ಪೂರ್ವದಲ್ಲಿ ಜೀವಬ್ರಹ್ಮರಿಗೆ ಸ್ವಾಭಾವಿಕವಾಗಿ ಭೇದವಿದೆಯೆಂದೂ, ಮುಕ್ತಿಯಾದ ಮೇಲೆ ಅವರೀರ್ವರಿಗೆ ಅಭೇದವೇ ಎಂದೂ ಔಡುಲೋಮಿಯ ಮತವೆಂಬುದಾಗಿ ಗೊತ್ತಾಗುತ್ತದೆ. ಈ ಔಡುಲೋಮಿಯನ್ನುದ್ದೇಶಿಸಿ **'ಏವಮೇಕತ್ವೇನ...'** (೧-೧೫೨) ಇತ್ಯಾದಿ ವಾಕ್ಯಗಳಿಂದ ಉಪಾಧಿಭೇದವನ್ನು ನಿರಾಕರಿಸುವುದಕ್ಕೆ ಕಾರಣವೇ ಇಲ್ಲ. ಈ ವಿಷಯವು ಭಾಷ್ಯಾದಿ ಗ್ರಂಥಗಳಲ್ಲಿ ಸ್ಪಷ್ಟವಾಗಿದೆ. ರಾಮಾನುಜಭಾಷ್ಯದಲ್ಲಿ 'ಈ ಜೀವಾತ್ಮನಿಗೆ ಉತ್ಕ್ರಾಂತಿಯ (ಮುಕ್ತಿಯ) ಪೂರ್ವದಲ್ಲಿ ಭೇದವು ಸ್ವಾಭಾವಿಕವೋ ? ಔಪಾಧಿಕವೋ ? ಔಪಾಧಿಕವಾದರೆ ಅದು ಪಾರಮಾರ್ಥಿಕವೋ ? ಅಪಾರಮಾರ್ಥಿಕವೋ ?' ಎಂದು ವಿಕಲ್ಪಿಸಿ ಈ ಔಡುಲೋಮಿಯ ಮತವನ್ನು ನಿರಾಕರಿಸಿದ್ದಾರೆ. ಶ್ರುತಪ್ರಕಾಶಿಕೆಯಲ್ಲಿಯಾದರೋ ಈ ಮತದಲ್ಲಿ 'ಭೇದವು ಸ್ವಾಭಾವಿಕವೋ ? ಔಪಾಧಿಕವೋ ?' ಎಂದು ಎರಡೇ ವಿಕಲ್ಪಗಳನ್ನು ಮಾಡಿದ್ದಾರೆ. ವಸ್ತುತಃ ಇಲ್ಲಿ ಎರಡೇ ವಿಕಲ್ಪಗಳು ಸಂಭವಿಸುತ್ತವೆ. ಪಾರಮಾರ್ಥಿಕವೋ ? ಅಪಾರಮಾರ್ಥಿಕವೋ ? ಎಂಬ ವಿಕಲ್ಪಗಳು ಇವುಗಳಲ್ಲಿಯೇ ಅಡಕವಾಗುತ್ತದೆ. ಹಾಗಾದರೆ ರಾಮಾನುಜಭಾಷ್ಯದಲ್ಲಿ ಇವನ್ನು ಪ್ರತ್ಯೇಕವಾಗಿ ಏಕೆ ಮಾಡಿದ್ದಾರೆ ?

---

ಜೀವಬ್ರಹ್ಮರಿಗೆ ಭೇದವನ್ನು ಒಪ್ಪಬೇಕು. ಕಿಡಿಯನ್ನು ಅಗ್ನಿಯೆಂದೂ ಭಾವಿಸಬಹುದು. ಕಾರ್ಯವನ್ನು ಕಾರಣರೂಪದಿಂದಲೂ ಗ್ರಹಿಸಬಹುದು. ಜೀವನು ಚಿದ್ರೂಪನಾದದ್ದರಿಂದಲೂ, ಕಾರಣರೂಪದಿಂದ ಗ್ರಹಿಸುವುದರಿಂದಲೂ ಜೀವಬ್ರಹ್ಮರಿಗೆ ಅಭೇದವೂ ಸಿದ್ಧಿಸುತ್ತದೆ. ಉಪಾಧಿಭೇದದಿಂದ ಜೀವಭೇದವನ್ನು ಆಶ್ಮರಥ್ಯನು ಹೇಳುವುದಿಲ್ಲ. ಆದ್ದರಿಂದ ಉಪಾಧಿಭೇದವನ್ನಿಟ್ಟುಕೊಂಡು ಕಪಿಲರು ಹೇಳುವ ದೂಷಣವು ಆಶ್ಮರಥ್ಯನಿಗೆ ಅನ್ವಯಿಸುವುದಿಲ್ಲ.

ಶ್ರುತಪ್ರಕಾಶಿಕೆಯಲ್ಲಿ ಸಮಾಧಾನವನ್ನು ಹೀಗೆ ಹೇಳಿದ್ದಾರೆ - 'ಜೀವಾತ್ಮನ ಭೇದವು ಉಪಾಧಿನಿಮಿತ್ತವಾದದ್ದು; ಅದು ಪಾರಮಾರ್ಥಿಕ' ಎಂದು ಭಟ್ಟಭಾಸ್ಕರರ ಮತ. 'ಜೀವಾತ್ಮನ ಭೇದವು ಉಪಾಧಿನಿಮಿತ್ತವಾದದ್ದು, ಅದು ಅಪಾರಮಾರ್ಥಿಕ' ಎಂದು ಶಂಕರಾಚಾರ್ಯರ ಮತ. ಈ ಎರಡು ಮತಗಳೂ 'ಉತ್ಕ್ರಮಿಷ್ಯತಃ...' (೧-೪-೨೧) ಎಂಬ ಒಂದೇ ಸೂತ್ರದಿಂದ ನಿರಾಕರಿಸಲ್ಪಡುತ್ತವೆ ಎಂಬ ಅಭಿಪ್ರಾಯದಿಂದ ರಾಮಾನುಜಾಚಾರ್ಯರು ತಮ್ಮ ಭಾಷ್ಯದಲ್ಲಿ 'ಪಾರಮಾರ್ಥಿಕವೋ? ಅಪಾರಮಾರ್ಥಿಕವೋ?' ಎಂದು ಮತ್ತೆ ಎರಡು ವಿಧವಾಗಿ ವಿಕಲ್ಪಿಸಿದ್ದಾರೆ. ಈ ಔಪಾಧಿಕವಾದ ಎರಡು ಬಗೆಯ ಭೇದಗಳು ಭಟ್ಟಭಾಸ್ಕರರಿಗೂ, ಶಂಕರಾಚಾರ್ಯರಿಗೂ ಸಂಮತವೆಂದಮೇಲೆ ಇನ್ನು ಪರಿಶೇಷದಿಂದ ಸ್ವಾಭಾವಿಕ ಭೇದವೇ ಔಡುಲೋಮಿಗೆ ಸಂಮತವೆಂದು ಸಿದ್ಧವಾಗುತ್ತದೆ.

ಆದ್ದರಿಂದಲೇ ನಮ್ಮ ಭಗವತ್ಪಾದ ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ''ಔಡುಲೋಮಿಯ ಪಕ್ಷದಲ್ಲಿ ಅವಸ್ಥಾದ್ವಯವನ್ನನುಸರಿಸಿ ಭೇದಾಭೇದ-ಗಳೆರಡೂ ಇವೆಯೆಂಬುದು ಸ್ಪಷ್ಟವಾಗಿದೆ'' ಎಂದು ಹೇಳಿದ್ದಾರೆ. ವಾಚಸ್ಪತಿಮಿಶ್ರರು ತಮ್ಮ ವ್ಯಾಖ್ಯಾನವಾದ ಭಾಮತಿಯಲ್ಲಿ ಈ ಔಡುಲೋಮಿಯ ಪಕ್ಷವನ್ನು ಹೀಗೆ ವಿವರಿಸಿದ್ದಾರೆ - ''ಜೀವನು ಪರಮಾತ್ಮನಿಗೆ ಅತ್ಯಂತವಾಗಿ ಭಿನ್ನನೇ ಸರಿ. ಅವನು ದೇಹೇಂದ್ರಿಯ ಮನೋಬುದ್ಧಿಗಳೆಂಬ ಉಪಾಧಿಯ ಸಂಪರ್ಕದಿಂದ ಯಾವಾಗಲೂ ಮಲಿನನಾಗಿದ್ದಾನೆ. ಅವನು ಜ್ಞಾನ, ಧ್ಯಾನಾದಿ ಸಾಧನಗಳನ್ನು ಅನುಷ್ಠಾನ ಮಾಡಿ ಪರಿಶುದ್ಧನಾಗಿ ದೇಹೇಂದ್ರಿಯ ಸಂಘಾತವನ್ನು ಬಿಟ್ಟು ಉತ್ಕ್ರಮಣ ಮಾಡಿದಾಗ ಪರಮಾತ್ಮನೊಡನೆ ಅಭೇದವುಂಟಾಗುವುದು'' ಭಾಮತಿಯ ವ್ಯಾಖ್ಯಾನವಾದ ಕಲ್ಪತರುವಿನಲ್ಲಿ ''ಜೀವನು ಮಲಿನನಾಗಲು ಉಪಾಧಿ ಸಂಪರ್ಕವೇ ಕಾರಣ; ಜೀವ ಪರಮಾತ್ಮರ ಭೇದವು ಕಾರಣವಲ್ಲ'' ಎಂದು ಹೇಳಿದೆ. ಹೀಗೆ ಭಾಷ್ಯ, ವಾಚಸ್ಪತ್ಯ, ಕಲ್ಪತರು ಗ್ರಂಥಗಳನ್ನು ಪರಿಶೀಲಿಸಿದರೆ ಔಡುಲೋಮಿಯ ಮತದಲ್ಲಿ ಜೀವನಿಗೆ ಮುಕ್ತಿಗಿಂತ

ಪೂರ್ವದಲ್ಲಿ ಸ್ವಾಭಾವಿಕವಾದ ಭೇದವಿದೆಯೆಂದೂ, ಮುಕ್ತಿಯಾದ ಮೇಲೆ ಪರಮಾತ್ಮನೊಂದಿಗೆ ಅಭೇದವೆಂಬುದೂ ಗೊತ್ತಾಗುತ್ತದೆ. 'ಉತ್ಕ್ರಮಿ-ಷ್ಯತಃ...' (೧-೪-೨೧) ಎಂಬ ಸೂತ್ರದಲ್ಲಿ ಶ್ರೀಕಂಠಾಚಾರ್ಯರ ಭಾಷ್ಯಕ್ಕೆ ಅವತರಣಿಕೆಯನ್ನು ಬರೆಯುತ್ತಾ, ಅಪ್ಪಯ್ಯ ದೀಕ್ಷಿತರು ಶಿವಾರ್ಕಮಣಿ ದೀಪಿಕೆಯಲ್ಲಿ ಹೀಗೆ ಹೇಳಿದ್ದಾರೆ - ''ಸಂಸಾರದೆಶೆಯಲ್ಲಿ ಜೀವನಿಗೆ ಪರಮೇಶ್ವರನಿಂದ ಭೇದವಿದೆ. ಆದರೂ ಮೋಕ್ಷದೆಶೆಯಲ್ಲಿ ಜೀವನಿಗೆ ಪರಮಾತ್ಮಸ್ವರೂಪವು ಪ್ರಾಪ್ತವಾಗುವುದರಿಂದ ಜೀವಶಬ್ದಗಳು ಪರಮಾತ್ಮ-ನನ್ನೇ ಬೋಧಿಸುತ್ತವೆಯೆಂಬುದು ಔಡುಲೋಮಿಯ ಮತ ಎಂಬ ಅಭಿಪ್ರಾಯದಿಂದ ಈ ಸೂತ್ರವನ್ನು ವ್ಯಾಖ್ಯಾನ ಮಾಡುತ್ತಲಿದ್ದಾರೆ.'' ಒಟ್ಟಿನಲ್ಲಿ ಅವಸ್ಥಾಭೇದದಿಂದ ಸ್ವಾಭಾವಿಕ ಭೇದಾಭೇದವು ಔಡುಲೋಮಿಗೆ ಸಂಮತವೆಂದು ಸಿದ್ಧವಾಗುತ್ತದೆ. ಕಪಿಲರು ಔಪಾಧಿಕ ಭೇದಪಕ್ಷದಲ್ಲಿ ಹೇಳುವ ದೂಷಣೆಗೆ ಔಡುಲೋಮಿಯ ಮತದಲ್ಲಿ ಅವಕಾಶವಿಲ್ಲ.

ಇನ್ನು ಕಾಶಕೃತ್ಸ್ನನ ಮತವನ್ನು ಖಂಡಿಸಿದ್ದಾರೆಂಬುದೂ ಸರಿಯಲ್ಲ. ಆತನ ಮತವನ್ನು ಶ್ರೀಕಂಠ, ರಾಮಾನುಜ ಭಾಷ್ಯಗಳಲ್ಲಿ ಪ್ರತಿಪಾದಿಸಿದ ರೀತಿಯೇ ಬೇರೆ. ಶಂಕರಾಚಾರ್ಯರ ಭಾಷ್ಯದಲ್ಲಿ ಪ್ರತಿಪಾದಿಸಿದ ರೀತಿಯೇ ಬೇರೆ. ಅದರಲ್ಲಿ ಕಾಶಕೃತ್ಸ್ನನ ಮತವನ್ನು ಕಪಿಲರು ಯಾವ ರೀತಿಯಲ್ಲಿ ಅನುವಾದಿಸಿದ್ದಾರೆಂದು ಹೇಳುತ್ತೀರಿ? ಕಾಶಕೃತ್ಸ್ನನು ವಿಶಿಷ್ಟಾದ್ವೈತ ವಾದಿಯೆಂದು ಶ್ರೀಕಂಠ, ರಾಮಾನುಜ ಭಾಷ್ಯಗಳಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಈ ವಿಷಯವು ಅದೇ ಅಧಿಕರಣದಲ್ಲಿ **'ಅವಸ್ಥಿತೇರಿತಿ ಕಾಶಕೃತ್ಸ್ನಃ'** (೧-೪-೨೨) ಎಂಬ ಸೂತ್ರದ ಭಾಷ್ಯಗಳಲ್ಲಿ ಸ್ಪಷ್ಟವಾಗಿದೆ. ಆ ಸೂತ್ರದ ಶ್ರೀಕಂಠ ಭಾಷ್ಯದಲ್ಲಿ ಹೀಗೆ ಹೇಳಿದೆ. ''ಸರ್ವ ಶ್ರುತಿಗಳನ್ನೂ ಸಮನ್ವಯ ಮಾಡಿ ವಿಚಾರಿಸಿದಲ್ಲಿ ಎಲ್ಲಾ ಚಿದಚಿದ್ವಸ್ತುಗಳಲ್ಲಿಯೂ ಅಂತರ್ಯಾಮಿಯಾಗಿ ಪ್ರವೇಶಿಸಿ ಸರ್ವಶರೀರನೂ, ಸರ್ವಶಬ್ದಗಳಿಗೂ ವಾಚ್ಯನೂ ಪರಮೇಶ್ವರನೂ ಆದವನು ಶಿವನೆಂದು ತಿಳಿದು ಬರುತ್ತದೆ. ಆದ್ದರಿಂದ ಕಾಶಕೃತ್ಸ್ನ ಮತವೇ ಸರ್ವಶ್ರುತಿಗಳಿಗೂ, ಸೂತ್ರಗಳಿಗೂ,

ಮಹಾತ್ಮರಾದ ಅಭಿಯುಕ್ತರಿಗೂ ಸಂಮತವಾಗಿದೆ.'' ರಾಮಾನುಜ ಭಾಷ್ಯದಲ್ಲಿ ಹೀಗೆ ಹೇಳಿದೆ ''ಜೀವನು ಪರಮಾತ್ಮನ ಶರೀರ. ತನ್ನ ಶರೀರಭೂತನಾದ ಜೀವನಲ್ಲಿ ಅಂತರಾತ್ಮನಾಗಿರುವುದರಿಂದ ಜೀವನೆಂಬ ಶಬ್ದವು ಪರಮಾತ್ಮನೆಂಬ ಅರ್ಥವನ್ನು ಕೊಡುತ್ತದೆ ಎಂದು ಕಾಶಕೃತ್ಸ್ನ ಆಚಾರ್ಯನ ಮತ. ಜೀವ ಶಬ್ದವು ಜೀವಾಂತರ್ಗತ ಪರಮಾತ್ಮನನ್ನು ಬೋಧಿಸುತ್ತದೆ; ಕೇವಲ ಜೀವನೆಂದು ಅದಕ್ಕೆ ಅರ್ಥವಲ್ಲ.'' ಇನ್ನು ನಮ್ಮ ಭಗವತ್ಪಾದರ ಭಾಷ್ಯದಂತೆ ಕಾಶಕೃತ್ಸ್ನನು ಕೇವಲಾದ್ವೈತವಾದಿ ಹೌದು. ಆತನ ಮತದಂತೆ ಕಪಿಲರ ದೂಷಣೆಗೆ ಅವಕಾಶವಿದೆ. ಆದರೆ ಕಾಶಕೃತ್ಸ್ನ ಮತವೇ ವ್ಯಾಸಮತವೆಂದು ಸಕಲ ಭಾಷ್ಯಕಾರರೂ ಅಂಗೀಕರಿಸಿರುವುದರಿಂದ ಆ ಮತವನ್ನು ನಿರಾಕರಿಸಿದರೆ ವ್ಯಾಸಮತವನ್ನೇ ನಿರಾಕರಿಸಿದಂತೆ ಆಯಿತು. ಆಗ ವ್ಯಾಸರು ಅದ್ವೈತವಾದಿಯೆಂದು ನಮ್ಮ ಅಭೀಷ್ಟವೇ ಸಿದ್ಧಿಸುವುದು. ಮಧ್ವಭಾಷ್ಯದಲ್ಲಿಯಾದರೂ 'ವ್ಯಾಸಮತದಲ್ಲಿ ಏಕದೇಶಿಗಳಾದ ಇತರರು ತಮ್ಮ ಪ್ರಜ್ಞಾನುಸಾರವಾಗಿ ಹೇಳುತ್ತಾರೆ. ವಿರೋಧವೇನೂ ಇಲ್ಲ' ಇತ್ಯಾದಿ ವಾಕ್ಯಗಳನ್ನು ಹೇಳಿ ಆಶ್ಮರಥ್ಯ, ಔಡು-ಲೋಮಿ, ಕಾಶಕೃತ್ಸ್ನರು ಭೇದವಾದಿಗಳೆಂದು ಅಂಗೀಕರಿಸಿದ್ದಾರೆ. ಆಗ ಕಪಿಲರ ದೂಷಣೆಗೆ ಅವಕಾಶವೇ ಇಲ್ಲವಾದ್ದರಿಂದ ಆಶ್ಮರಥ್ಯ ಮೊದಲಾದವರು ವಾದಿಗಳೇ ಆಗುವುದಿಲ್ಲ. ಇನ್ನು ಬಾದರಿಯ ಮತವನ್ನು ನಿರಾಕರಿಸಿದ್ದಾರೆಂದು ಹೇಳಲೂ ಸಾಧ್ಯವಿಲ್ಲ. '**ಅಭಾವಂ ಬಾದರಿರಾಹ ಹ್ಯೇವಮ್**' (೪-೪-೧೦) ಎಂಬ ಸೂತ್ರದಲ್ಲಿ ದೇಹೇಂದ್ರಿಯಾದಿಗಳು ಮುಕ್ತಿ ದೆಶೆಯಲ್ಲಿ ಇರುವುದಿಲ್ಲವೆಂಬುದು ಮಾತ್ರ ಬಾದರಿಯ ಮತವೆಂದು ಭಗವತ್ಪಾದ, ಶ್ರೀಕಂಠ, ರಾಮಾನುಜ, ಮಧ್ವಭಾಷ್ಯಗಳಲ್ಲಿ ಹೇಳಿದ್ದಾರೆ. ಅದ್ವೈತವನ್ನು ಪ್ರತಿಪಾದಿಸಿಲ್ಲ. ಮುಕ್ತಿ ದೆಶೆಯಲ್ಲಿ ಶರೀರವಿರುವುದಿಲ್ಲ-ವೆಂದ ಮಾತ್ರಕ್ಕೆ ಜೀವಬ್ರಹ್ಮರ ಅದ್ವೈತವು ಸಿದ್ಧಿಸಲಾರದು. ಸಿದ್ಧಿಸುವು-ದಾದರೆ ನೈಯಾಯಿಕಾದಿಗಳೂ ಮುಕ್ತಿದೆಶೆಯಲ್ಲಿ ಶರೀರವಿರುವುದಿಲ್ಲ-ವೆಂದು ಪ್ರತಿಪಾದಿಸಿರುವುದರಿಂದ ಅವರೂ ಕೂಡ ಜೀವಬ್ರಹ್ಮರಿಗೆ

ಅದ್ವೈತವನ್ನು ಹೇಳುತ್ತಾರೆಂದು ಒಪ್ಪಬೇಕಾದೀತು. ಆದ್ದರಿಂದ ಬಾದರಿ-ಯನ್ನು ಕುರಿತು ಕಪಿಲರ ದೂಷಣವು ಸಮಂಜಸವೇ ಆಗುವುದಿಲ್ಲ.

ಆದ್ದರಿಂದ ನಾವು ಹೇಳಿದಂತೆ ಕಪಿಲಸೂತ್ರಗಳಲ್ಲಿ ಅದ್ವೈತ ಮತಾನುವಾದವು ಸ್ಪಷ್ಟವಾಗಿ ತೋರುವುದರಿಂದ ಅದನ್ನು ಅಲ್ಲಗಳೆಯಲು ಅಶಕ್ಯವಾದ್ದರಿಂದಲೂ, ಅಂತಹ ಇನ್ನೊಬ್ಬ ಅದ್ವೈತವಾದಿ ಇಲ್ಲದೆ ಇರುವುದರಿಂದಲೂ, ಈ ಸಾಂಖ್ಯಶಾಸ್ತ್ರದಲ್ಲಾಗಲಿ ಅಥವಾ ಇತರ ಶಾಸ್ತ್ರ-ಗಳಲ್ಲಾಗಲಿ ವ್ಯಾಸರನ್ನು ಭೇದವಾದಿಯೆಂದು ಅಂಗೀಕರಿಸಿ ಅಂತಹ ಭೇದವನ್ನು ಅನುವಾದ ಮಾಡಿ ನಿರಾಕರಿಸುವ ಸೂತ್ರಗಳಿಲ್ಲದಿರುವುದ-ರಿಂದಲೂ, ವ್ಯಾಸಸೂತ್ರಗಳಲ್ಲಿ ವಿಶೇಷವಾಗಿ ಕಪಿಲರನ್ನೇ ಲಕ್ಷಿಸಿ ಮಹಾಪ್ರಯತ್ನದಿಂದ ಅವರ ಮತವನ್ನು ಖಂಡಿಸಿರುವುದರಿಂದ ಹಾಗೆಯೇ ಕಪಿಲಸೂತ್ರಗಳಲ್ಲಿಯೂ ವ್ಯಾಸರನ್ನೇ ಲಕ್ಷಿಸಿ ಅವರ ಮತವನ್ನು ಖಂಡಿಸುವುದು ಆವಶ್ಯಕವಾದ್ದರಿಂದಲೂ ಕಪಿಲಸೂತ್ರಗಳಲ್ಲಿ ಅದ್ವೈತಮತ ವನ್ನು ಪ್ರತಿಪಾದಿಸುವ ವಾದಿ ವ್ಯಾಸರೇ ಎಂದು ಸಿದ್ಧವಾಗುತ್ತದೆ. ಈ ನಮ್ಮ ಹೇಳಿಕೆ ಯಾವ ವಿಧದಲ್ಲಿ ವಿಮರ್ಶಿಸಿದರೂ ಸಮಂಜಸವಾಗಿಯೇ ಇದೆ.

ಅನಿರುದ್ಧಾಚಾರ್ಯರು ಸಾಂಖ್ಯಸೂತ್ರಗಳಿಗೆ ವೃತ್ತಿಯನ್ನು ಬರೆಯುವಾಗ ಪ್ರಥಮಾಧ್ಯಾಯದಲ್ಲಿ ಹೀಗೆ ಹೇಳಿದ್ದಾರೆ. ಒಬ್ಬನೇ ಆತ್ಮನಿರುವನೆಂದು ವೇದಾಂತಿಗಳು ಹೇಳುತ್ತಾರೆ :-

**ನಿತ್ಯಃ ಸರ್ವಗತೋಹ್ಯಾತ್ಮಾ ಕೂಟಸ್ಥೋ ದೋಷವರ್ಜಿತಃ ।**
**ಏಕಃ ಸನ್ ಭಿದ್ಯತೇ ಭ್ರಾಂತ್ಯಾ ಮಾಯಯಾ ನ ಸ್ವಭಾವತಃ ॥**

ಸೂತಸಂಹಿತಾ ॥ (ಜ್ಞಾನ-೨೦; ೩.೪)

"ಆತ್ಮನೂ ನಿತ್ಯನೂ, ಸರ್ವವ್ಯಾಪಿಯೂ, ಕೂಟಸ್ಥನೂ, ದೋಷ-ರಹಿತನೂ ಆಗಿದ್ದಾನೆ. ಅವನು ಒಬ್ಬನೇ ಆಗಿದ್ದರೂ ಮಾಯೆಯಿಂದ ಉಂಟಾದ ಭ್ರಮೆಯಿಂದ ಅನೇಕ ಆತ್ಮರಿರುವಂತೆ ತೋರುವುದು. ವಸ್ತುತಃ ಅನೇಕ ಆತ್ಮರಿಲ್ಲ" ಇತ್ಯಾದಿ. ಈ ರೀತಿಯಲ್ಲಿ ಆತ್ಮೈಕ್ಯವೇ ವೇದಾಂತಿ-

ಸಂಮತವೆಂದು ಅವರು ಪ್ರತಿಪಾದಿಸಿದ್ದಾರೆ. ಐದನೆಯ ಅಧ್ಯಾಯದಲ್ಲಿ **'ನಾನಿರ್ವಚನೀಯಸ್ಯ ತದಭಾವಾತ್'** (೫-೫೪) ಎಂಬ ಸೂತ್ರಕ್ಕೆ ಅವತರಣಿಕೆಯನ್ನು ಬರೆಯುವಾಗ 'ವೇದಾಂತಿ ಮತವನ್ನು ದೂಷಿಸುತ್ತಾರೆ' ಎಂದು ಹೇಳಿದ್ದಾರೆ. ಇದರಿಂದ ಶುಕ್ತಿರಜತಾದಿ ಸ್ಥಳದಲ್ಲಿ ಅನಿರ್ವಚನೀಯತ್ವವೇ ವೇದಾಂತಿಸಂಮತವೆಂದು ಜ್ಞಾಪಿಸಿದಂತಾಗುತ್ತದೆ.

ಅಷ್ಟೇ ಅಲ್ಲ; ಭಗವಾನ್ ವ್ಯಾಸರು **'ಮಹದ್ದೀರ್ಘವದ್ವಾಹ್ರಸ್ವಪರಿಮಂಡಲಾಭ್ಯಾಮ್'** (೨-೨-೧೧) ಎಂಬ ಅಧಿಕರಣದಲ್ಲಿ ಕಣಾದಮತವನ್ನು ನಿರಾಕರಿಸಿದ್ದಾರಷ್ಟೆ. ಹಾಗೆಯೇ ಭಗವಾನ್ ಕಣಾದರು ತಮ್ಮ ವೈಶೇಷಿಕಶಾಸ್ತ್ರದಲ್ಲಿ ವ್ಯಾಸಸಂಮತವಾದ ಕೇವಲಾದ್ವೈತವನ್ನು ನಿರಾಕರಿಸಿದ್ದಾರೆ. ಹೇಗೆಂದರೆ, ತೃತೀಯಾಧ್ಯಾಯದ ದ್ವಿತೀಯಾಹ್ನಿಕದಲ್ಲಿ ಆತ್ಮನನ್ನು ಅನುಮಾನ ಪ್ರಮಾಣದಿಂದ ಸಾಧಿಸಿದ್ದಾರೆ. ಅನಂತರ ಆತ್ಮ ವಿಷಯದಲ್ಲಿ ವೇದಾಂತಿಗಳ ಮತವನ್ನು ಖಂಡಿಸುವುದಕ್ಕೋಸ್ಕರ **'ತಸ್ಮಾದಾಗಮಿಕಮ್'** ಎಂಬ ಸೂತ್ರದಿಂದ ಆತ್ಮನು ವೇದಮಾತ್ರಗಮ್ಯನು ಎಂಬುವಾಗ ವೇದಾಂತಿಗಳ ಮತವನ್ನು ಅನುವಾದ ಮಾಡಿದ್ದಾರೆ. ಆಮೇಲೆ **'ಸುಖ ದುಃಖ ಜ್ಞಾನ ನಿಷ್ಪತ್ತ್ಯ ವಿಶೇಷಾದೈಕಾತ್ಮ್ಯಂ ಸರ್ವಶರೀರಾಣಾಮ್'**(೭) (೩-೨-೧೯) ಎಂಬ ಸೂತ್ರದಿಂದ ವೇದಾಂತಿಗಳ ಏಕಾತ್ಮವಾದವನ್ನು ಅನುವಾದಿಸಿ **'ನಾನಾತ್ಮಾನೋಽವ್ಯವಸ್ಥಾತಃ'**(೮) (೩-೨-೨೦) **'ಶಾಸ್ತ್ರ ಸಾಮರ್ಥ್ಯಾಚ್ಚ'** (೩-೨-೨೧) ಎಂಬ ಎರಡು ಸೂತ್ರಗಳಿಂದ ಏಕಾತ್ಮವಾದವನ್ನು ಖಂಡಿಸಿ ಆತ್ಮರು ಅನೇಕರೆಂದು ಸಿದ್ಧಾಂತ ಮಾಡಿದ್ದಾರೆ. ಈ ವಿಷಯವು ಕಣಾದಸೂತ್ರ, ವ್ಯಾಖ್ಯಾನಗಳಲ್ಲಿ ಸ್ಪಷ್ಟವಾಗಿದೆ. ಹೇಗೆಂದರೆ, ಹೀಗೆ ಪ್ರಮಾಣದಿಂದ ಸಿದ್ಧನಾಗುವ ಆತ್ಮನು ಒಬ್ಬನೇ ? ಅಥವಾ ಅನೇಕ

---

೭. ನಿರ್ಣಯಸಾಗರದಲ್ಲಿ ಮುದ್ರಿತವಾದ ಗ್ರಂಥದಲ್ಲಿ ಈ ಸೂತ್ರವು 'ಸುಖದುಃಖ ಜ್ಞಾನನಿಷ್ಪತ್ತ್ಯ ವಿಶೇಷಾದೈಕಾತ್ಮ್ಯಮ್' ಎಂದಿದೆ. 'ಸರ್ವಶರೀರಾಣಾಮ್' ಎಂಬ ಅಂಶವು ದೊರೆಯುವುದಿಲ್ಲ.

೮. ಮೇಲ್ಕಂಡ ಗ್ರಂಥದಲ್ಲಿ 'ವ್ಯವಸ್ಥಾತೋ ನಾನಾ' ಎಂಬುದಾಗಿ ಸೂತ್ರವಿದೆ.

ಆತ್ಮರಿದ್ದಾರೆಯೆ ? ಎಂಬುದಾಗಿ ಸಂದೇಹವುಂಟಾಗುತ್ತದೆ. ಆಗ ಪೂರ್ವ ಪಕ್ಷವನ್ನು ಹೇಳುತ್ತಾರೆ :-

**ಸುಖದುಃಖಜ್ಞಾನ ನಿಷ್ಪತ್ತ್ಯವಿಶೇಷಾದೈಕಾತ್ಮ್ಯಂ ಸರ್ವಶರೀರಾಣಾಮ್ ॥**
೩-೨-೧೯

ಸರ್ವಶರೀರಗಳಲ್ಲಿಯೂ ಒಬ್ಬನೇ ಆತ್ಮನಿದ್ದಾನೆ. ಏಕೆಂದರೆ, ಆತ್ಮನ ಚಿಹ್ನೆಗಳಾದ ಸುಖ, ದುಃಖ, ಜ್ಞಾನ ಮೊದಲಾದವುಗಳು ಎಲ್ಲರಲ್ಲಿಯೂ ಉಂಟಾಗುತ್ತವೆ. ವಿಶೇಷವೇನೂ ತೋರುವುದಿಲ್ಲ. ಆದ್ದರಿಂದಲೇ **'ತಲ್ಲಿಂಗಾವಿಶೇಷಾ ದ್ವಿಶೇಷ ಲಿಂಗಾಭಾವಾಚ್ಚೈಕೋ ಭಾವಃ' ॥** ಎಂದು ಹೇಳಿದೆ. ಆಗ ಸಿದ್ಧಾಂತವನ್ನು ಹೇಳುತ್ತಾರೆ :-

**ನಾನಾತ್ಮಾನೋ ವ್ಯವಸ್ಥಾತಃ ॥** ೩-೨-೨೦ ॥ (ವ್ಯವಸ್ಥಾತೋ ನಾನಾ)

ಪ್ರತಿಶರೀರದಲ್ಲಿಯೂ ಬೇರೆ ಬೇರೆ ಆತ್ಮರಿದ್ದಾರೆ. ಅದೇಕೆ ? ವ್ಯವಸ್ಥೆಯಿರುವುದರಿಂದ, ಸುಖ, ದುಃಖ ಜ್ಞಾನಾದಿಗಳು ಪ್ರತಿಶರೀರದಲ್ಲಿಯೂ ಬೇರೆ ಬೇರೆ ವಿಧವಾಗಿ ವ್ಯವಸ್ಥೆ ಹೊಂದಿದೆ. ಒಂದೇ ಶರೀರದಲ್ಲಿ ಎಲ್ಲರ ಸುಖದುಃಖಾದಿಗಳೂ ಕಂಡು ಬರುವುದಿಲ್ಲ. ಒಬ್ಬನೇ ಆತ್ಮನಾದರೆ, ಒಂದೇ ಶರೀರದಲ್ಲಿ ಇವೆಲ್ಲವೂ ಅನುಭವಕ್ಕೆ ಬರಬೇಕಾದೀತು. ಇನ್ನೊಂದು ಕಾರಣವನ್ನು ಹೇಳುತ್ತಾರೆ :-

**ಶಾಸ್ತ್ರಸಾಮರ್ಥ್ಯಾಚ್ಚ ॥** ೩-೨-೨೧

ಶಾಸ್ತ್ರವೂ ಈ ವಿಷಯವನ್ನು ಸಮರ್ಥಿಸುತ್ತದೆ. **'ಜ್ಞಾಜ್ಞೌದ್ವಾವಜಾವೀಶಾನೀಶೌ', 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ', 'ದ್ವಾಸುಪರ್ಣಾಸಯುಜಾ ಸಖಾಯಾ', 'ಯಥಾಗ್ನೇಃ ಕ್ಷುದ್ರಾ ವಿಸ್ಫುಲಿಂಗಾಃ ವ್ಯುಚ್ಚರಂತ್ಯೇವಮಸ್ಮಾದಾತ್ಮಾನೋ ವ್ಯುಚ್ಚರಂತಿ'** ಇತ್ಯಾದಿ ಶ್ರುತಿಗಳು ಜೀವಾತ್ಮರು ಅನೇಕರಿದ್ದಾರೆಂಬುದನ್ನು ಬೋಧಿಸುತ್ತವೆ. **'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಮ್', 'ಏಕೋ ವಶೀ ಸರ್ವಭೂತಾಂತರಾತ್ಮಾ', 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮ್'** ಇತ್ಯಾದಿ ಶ್ರುತಿಗಳು

ಪರಮಾತ್ಮನು ಒಬ್ಬನೇ ಎಂಬುದನ್ನು ಬೋಧಿಸುತ್ತವೆ. ಅವು ಜೀವಾತ್ಮರ ವಿಷಯವನ್ನು ಹೇಳುತ್ತಲಿಲ್ಲ. ಆದ್ದರಿಂದ ಪ್ರತಿ ಶರೀರದಲ್ಲಿರುವ ಆತ್ಮರೂ ಬೇರೆ ಬೇರೆಯೇ ಸರಿ. ಈ ರೀತಿಯಿಂದ ಕಣಾದಸೂತ್ರಗಳಲ್ಲಿಯೂ, ಅವುಗಳ ವ್ಯಾಖ್ಯಾನಗಳಲ್ಲಿಯೂ ಒಬ್ಬನೇ ಆತ್ಮನೆಂಬ ವೇದಾಂತಿಗಳ ಮತವನ್ನು ಅನುವಾದಿಸಿ ನಿರಾಕರಿಸಿದ್ದಾರೆ.

ವ್ಯಾಸರು ತಮ್ಮ ವೇದಾಂತಶಾಸ್ತ್ರದಲ್ಲಿ **'ತರ್ಕಾಪ್ರತಿಷ್ಠಾನಾತ್'** (೨-೧-೧೧) ಎಂಬ ಅಧಿಕರಣದಲ್ಲಿ ಗೌತಮರ ಮತವನ್ನು ನಿರಾಕರಿಸಿದ್ದಾರೆ. ಹಾಗೆಯೇ ಗೌತಮರು ತಮ್ಮ ನ್ಯಾಯಶಾಸ್ತ್ರದಲ್ಲಿ ವೇದಾಂತ ಶಾಸ್ತ್ರದ ಮತವನ್ನು ಅನುವಾದಿಸಿ ನಿರಾಕರಿಸಿರುವುದನ್ನು ನೋಡಬಹುದು.

ವ್ಯಾಸರು **'ಏತೇನ ಯೋಗಃ ಪ್ರತ್ಯುಕ್ತಃ'** ॥ (೨-೧-೩) ಎಂಬ ಅಧಿಕರಣದಲ್ಲಿ ಪತಂಜಲಿ ಮಹರ್ಷಿಗಳ ಯೋಗಮತವನ್ನು ಖಂಡಿಸಿ-ರುವಂತೆ ಯೋಗಶಾಸ್ತ್ರದಲ್ಲಿಯೂ ಕೇವಲಾದ್ವೈತವೇ ವೇದಾಂತಿಗಳ ಮತವೆಂಬುದಾಗಿ ಅನುವಾದಿಸಿ ಖಂಡಿಸಿದ್ದಾರೆ. ಹೇಗೆಂದರೆ, **'ಸ್ವರೂಪ-ಪ್ರತಿಷ್ಠಾ ವಾ ಚಿತಿಶಕ್ತಿಃ'** ॥ (೪-೩೪) ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುವಾಗ ಭೋಜವೃತ್ತಿಯಲ್ಲಿ ಹೀಗೆ ಹೇಳಿದೆ. 'ವೇದಾಂತಿಗಳು ಮೋಕ್ಷವೆಂದರೆ ಜೀವಾತ್ಮನು ಚಿದಾನಂದ ಸ್ವರೂಪನಾಗುವುದೆಂದು ಭಾವಿಸುತ್ತಾರೆ. ಆ ಪಕ್ಷವು ಸರಿಯಲ್ಲ. ಹೇಗೆಂದರೆ, ಆನಂದವೆಂದರೆ ಸುಖ. ಅದು ಯಾವಾಗಲೂ ಅನುಭವಗಮ್ಯವಾಗಿಯೇ ತೋರುತ್ತದೆ. ಅನುಭವವಿಲ್ಲದೆ ಅನುಭವಗಮ್ಯವಾದ ವಸ್ತುವಿರಲು ಸಾಧ್ಯವಿಲ್ಲ. ಆಗ ಅನುಭವ ಮತ್ತು ಅನುಭವಗಮ್ಯ ಎಂಬ ಎರಡು ವಸ್ತುಗಳನ್ನು ಒಪ್ಪಿಕೊಳ್ಳ-ಬೇಕಾಗುವುದರಿಂದ ಅದ್ವೈತಕ್ಕೆ ಭಂಗ ಬರುತ್ತದೆ.' ಇವೇ ಮುಂತಾದ ವಾಕ್ಯಗಳಿಂದ, ಅದರಲ್ಲಿ ವೇದಾಂತಿ ಸಂಮತವೆಂದು ಕೇವಲಾದ್ವೈತವನ್ನೇ ಅನುವಾದಿಸಿ ನಿರಾಕರಿಸಿದ್ದಾರೆ.

ವ್ಯಾಸರು **'ಫಲಮತ ಉಪಪತ್ತೇಃ'** (೩-೨-೩೮) ಎಂಬ ಅಧಿಕರಣದಲ್ಲಿ ಜೈಮಿನಿಮತವನ್ನು ದೂಷಿಸಿದ್ದಾರೆ. ಹಾಗೆಯೇ ಜೈಮಿನಿಮಹರ್ಷಿಗಳ

ಮೀಮಾಂಸಾಶಾಸ್ತ್ರದಲ್ಲಿ ಅದ್ವೈತವನ್ನೇ ವೇದಾಂತಮತವೆಂದು ಅನುವಾದಿಸಿ ದೂಷಿಸಲಾಗಿದೆ. ಹೇಗೆಂದರೆ, ಕುಮಾರಿಲಭಟ್ಟರು ತಮ್ಮ ಶ್ಲೋಕವಾರ್ತಿಕ-ದಲ್ಲಿ ಅದ್ವೈತವನ್ನೇ ವೇದಾಂತ ಶಾಸ್ತ್ರಸಂಮತವೆಂದು ಹೀಗೆ ಅನುವಾದಿಸಿ ನಿರಾಕರಿಸಿದ್ದಾರೆ. ''ಪರಬ್ರಹ್ಮನು ನಿಮ್ಮ ಮತದಲ್ಲಿ ಶುದ್ಧ ಜ್ಞಾನಸ್ವರೂಪ-ನಾಗಿದ್ದಾನೆ. ಆದ್ದರಿಂದ ಭ್ರಾಂತಿಯೆಂಬ ಅವಿದ್ಯೆಯ ಪ್ರವೃತ್ತಿಗೆ ಆತನು ಕಾರಣನಾಗುವುದಿಲ್ಲ. ಕಾರಣವಾದ ಇನ್ನೊಂದು ವಸ್ತುವೇ ನಿಮ್ಮ ಮತದಲ್ಲಿ ಇಲ್ಲ. ಸ್ವಪ್ನದಲ್ಲಿ ಆಗುವಂತೆ ಅವಿದ್ಯೆಯ ಪ್ರವೃತ್ತಿಗೆ ಕಾರಣವಾದರೂ ಯಾವುದು ? ಕಾರಣವಾದ ಇನ್ನೊಂದು ವಸ್ತುವನ್ನು ಒಪ್ಪುವುದಾದರೆ ಆಗ ಅದ್ವೈತಕ್ಕೆ ಭಂಗ ಬರುವುದು. ಇನ್ನು ಅವಿದ್ಯೆಯು ಸ್ವಾಭಾವಿಕವಾದದ್ದು. ಅದಕ್ಕೆ ಇನ್ನೊಂದು ಕಾರಣವು ಬೇಕಾಗಿಲ್ಲವೆಂದು ಹೇಳುವುದಾದರೆ ಅದೂ ಸರಿಯಲ್ಲ. ಸ್ವಾಭಾವಿಕವಾದ ಅವಿದ್ಯೆಯು ಯಾವುದರಿಂದಲೂ ವಿನಷ್ಟವಾಗುವುದಿಲ್ಲ. ಆಗ ಯಾರಿಗೂ ಮೋಕ್ಷವೇ ಆಗದೆ ಹೋದೀತು. ಇಲ್ಲಿ ಒಂದು ಶಂಕೆ ಮೂಡಬಹುದು. ಗಡಿಗೆಯ ಕಪ್ಪುಬಣ್ಣವು ಸ್ವಾಭಾವಿಕವಾದದ್ದು. ಅಗ್ನಿಸಂಯೋಗದಿಂದ ಸ್ವಾಭಾವಿಕ-ವಾದ ಕಪ್ಪುಬಣ್ಣವು ವಿನಷ್ಟವಾಗುವುದಲ್ಲವೆ ? ಇದಕ್ಕೆ ಸಮಾಧಾನ-ವೇನೆಂದರೆ, ವಿಲಕ್ಷಣವಾದ ಬೇರೆ ವಸ್ತುವಿನಿಂದ ಅದು ವಿನಷ್ಟವಾಗ-ಬಹುದು. ಆದರೆ ಆತ್ಮಾತಿರಿಕ್ತವಾದ ಇನ್ನೊಂದು ವಸ್ತು ಅದ್ವೈತಿಗಳಾದ ನಿಮ್ಮ ಮತದಲ್ಲಿ ಇಲ್ಲವಷ್ಟೇ'' (ಶ್ಲೋಕವಾರ್ತಿಕ, ತರ್ಕಪಾದ, ಸಂಬಂಧಾಕ್ಷೇಪ ಪರಿಹಾರ ಪ್ರಕರಣ).

ಪಾರ್ಥಸಾರಥಿಮಿಶ್ರರು ಶಾಸ್ತ್ರದೀಪಿಕೆಯ ತರ್ಕಪಾದದಲ್ಲಿ ಹೀಗೆ ಬರೆಯುತ್ತಾರೆ- ''ಜಗತ್ ಸೃಷ್ಟಿಗೆ ಪೂರ್ವದಲ್ಲಿ ಒಬ್ಬನೇ ಆತ್ಮನಿದ್ದನು. ಆತನು ತನ್ನ ಇಚ್ಛಾವಶದಿಂದ ಆಕಾಶಾದಿಪ್ರಪಂಚರೂಪನಾಗಿ ಪರಿಣಾಮ ಹೊಂದುತ್ತಾನೆ. ಚೈತನ್ಯ ಸ್ವರೂಪನಾದ ಆತ್ಮನು ಜಡರೂಪನಾಗಿ ಹೇಗೆ ಪರಿಣಮಿಸುತ್ತಾನೆಂದರೆ, ಇಲ್ಲಿ ನಿಜವಾದ ಪರಿಣಾಮವನ್ನು ನಾವು ಹೇಳುವುದಿಲ್ಲ. ಪರಿಣಾಮ ಹೊಂದದೇ ಇದ್ದರೂ ಆತ್ಮನು ಪರಿಣಾಮ

ಹೊಂದಿದಂತೆ ತೋರುವನು. ಒಂದೇ ಮುಖವು ಕನ್ನಡಿಗಳಲ್ಲಿ ಅನೇಕ ಮುಖಗಳಾಗಿ ಕಾಣುವಂತೆ ಒಬ್ಬನೇ ಆತ್ಮನು ಅವಿದ್ಯಾವಶದಿಂದ ವಿವರ್ತ-ವನ್ನು ಹೊಂದುತ್ತಾ ಅನೇಕ ವಿಧವಾಗಿ ತೋರುತ್ತಾನೆ. ಚೈತನ್ಯ ಸ್ವರೂಪನೂ, ಅದ್ವಿತೀಯನೂ ಆದ ಆತ್ಮನು ತನ್ನನ್ನೇ ಜಡನನ್ನಾಗಿಯೂ, ಸದ್ವಿತೀಯ-ನನ್ನಾಗಿಯೂ ನೋಡುತ್ತಾನೆ. ಅವಿದ್ಯೆ ಎಂಬ ಕಾರಣದಿಂದಾದ ಈ ಮಹದಾದಿ ಪ್ರಪಂಚ ಸೃಷ್ಟಿಯು ಸ್ವಪ್ನ ಪ್ರಪಂಚದಂತೆ ಆಗಿದೆ. ಆದ್ದರಿಂದಲೇ **'ಸರ್ವಂಖಲ್ವಿದಂ ಬ್ರಹ್ಮ'**, **'ಆತ್ಮೈವೇದಂ ಸರ್ವಮ್'**, **'ನೇಹ ನಾನಾಸ್ತಿ ಕಿಂಚನ'** ಇತ್ಯಾದಿಯಾಗಿ ಬಹಳ ಅದ್ವೈತ ವಾಕ್ಯಗಳು ಹೊರಟಿವೆ. **'ಇಂದ್ರೋ ಮಾಯಾಭಿಃ ಪುರರೂಪ ಈಯತೇ'** ಎಂಬ ವಾಕ್ಯವು ಭೇದಜ್ಞಾನವೆಲ್ಲಾ ಮಾಯಾಕಲ್ಪಿತವೆಂದು ತೋರಿಸಿ ಕೊಡುತ್ತದೆ. **'ಲೋಕಾಸ್ತಂ ಪ್ರಾದುರ್ಯೋಽನ್ಯತ್ರಾತ್ಮನೋ ಲೋಕಾನ್ ವೇದ'** ಇತ್ಯಾದಿ ಶ್ರುತಿಗಳು ಅನಾತ್ಮ ಜ್ಞಾನದ ನಿಂದೆಯನ್ನೂ, **'ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ'** ಎಂಬ ಶ್ರುತಿವಾಕ್ಯವು ಆತ್ಮನು ನಾನಾ ಎಂಬ ಜ್ಞಾನದ ನಿಂದೆಯನ್ನೂ ಮಾಡಿವೆ. ಇವುಗಳೆಲ್ಲವೂ ಪರಮಾರ್ಥದಲ್ಲಿ ಬ್ರಹ್ಮವಸ್ತುವು ಅದ್ವಿತೀಯವೆಂಬುದನ್ನೂ, ಭೇದ-ಜ್ಞಾನವು ಅನರ್ಥಕಾರಿಯೆಂಬುದನ್ನೂ, ಜಗತ್ ಸೃಷ್ಟಿಗೆ ಅವಿದ್ಯೆಯೇ ಕಾರಣವೆಂಬುದನ್ನೂ ಸ್ಪಷ್ಟಪಡಿಸುತ್ತವೆ.'' ಇವೇ ಮುಂತಾದ ವಾಕ್ಯಗಳಿಂದ ಅದ್ವೈತವೇ ವೇದಾಂತಶಾಸ್ತ್ರಸಂಮತವೆಂದು ಅನುವಾದಿಸಿ ನಿರಾಕರಿಸಿದ್ದಾರೆ.

ಪಾಣಿನಿಶಾಸ್ತ್ರದಲ್ಲಿಯೂ ಭರ್ತೃಹರಿಯು ಹೀಗೆ ಹೇಳಿದ್ದಾನೆ -

**ಯತ್ರ ದ್ರಷ್ಟಾ ಚ ದೃಶ್ಯಂ ಚ ದರ್ಶನಂ ಚಾಪಿ ಕಲ್ಪಿತಮ್ ।**
**ತಸ್ಯೈವಾರ್ಥಸ್ಯ ಸತ್ಯತ್ವಮಾಹುಸ್ತ್ರಯ್ಯಂತವಾದಿನಃ ॥ ಇತ್ಯಾದಿ**

ವಾಕ್ಯಪದೀಯ ಕಾಂ. ೩; ಶ್ಲೋ. ೧೯೨ ॥

''ಯಾವುದರಲ್ಲಿ ಜ್ಞಾತೃ, ಜ್ಞೇಯ, ಜ್ಞಾನಗಳೆಂಬ ತ್ರಿಪುಟಿಯು ಕಲ್ಪಿಸ-ಲ್ಪಟ್ಟಿದೆಯೋ ಆ ವಸ್ತುವೇ ಸತ್ಯವಾದ ಬ್ರಹ್ಮವಸ್ತುವೆಂದು ವೇದಾಂತಿಗಳು ಹೇಳುತ್ತಾರೆ.''

ವ್ಯಾಸರು 'ಪತ್ಯುರಸಾಮಂಜಸ್ಯಾತ್' ॥ ೨-೨-೩೭

ಎಂಬ ಅಧಿಕರಣದಲ್ಲಿ ಶೈವಾಗಮೋಕ್ತವಾದ ಪಾಶುಪತಮತವನ್ನು ನಿರಾಕರಿಸಿದ್ದಾರೆ. ಹಾಗೆಯೇ ಶೈವಾಗಮದಲ್ಲಿ ಶಿವನು ಅದ್ವೈತವನ್ನೇ ವೇದಾಂತಶಾಸ್ತ್ರಸಂಮತವೆಂದು ಅನುವಾದಿಸಿ ನಿರಾಕರಿಸಿದ್ದಾನೆ. ಹೇಗೆಂದರೆ, ಮೃಗೇಂದ್ರಸಂಹಿತೆಯಲ್ಲಿ ಜ್ಞಾನಪಾದದ ದ್ವಿತೀಯ ಪಟಲದಲ್ಲಿ ಇಂದ್ರ-ಭರದ್ವಾಜ ಸಂವಾದವು ಬರುತ್ತದೆ.

ಭರದ್ವಾಜ : ವೇದಾಂತ, ಸಾಂಖ್ಯ ಮೊದಲಾದ ಶಾಸ್ತ್ರಗಳಲ್ಲಿಯೂ ಮೋಕ್ಷ ಸ್ವರೂಪವನ್ನೂ ಅದನ್ನು ಪಡೆಯಲು ಬೇಕಾದ ಸಾಧನಗಳನ್ನೂ ಉಪದೇಶಿಸಿದ್ದಾರೆ. ಹೀಗಿರಲು ಶೈವಾಗಮದಲ್ಲಿರುವ ವಿಶೇಷವಾದರೂ ಏನು ?

ಇಂದ್ರ : ವೇದಾಂತ, ಸಾಂಖ್ಯ ಮೊದಲಾದ ಶಾಸ್ತ್ರಗಳನ್ನು ಬರೆದವರು ಸರ್ವಜ್ಞರಲ್ಲ. ಆದ್ದರಿಂದ ಅವರು ಪದಾರ್ಥವಿವೇಚನೆಯನ್ನು ಸರಿಯಾಗಿ ಮಾಡಿಲ್ಲ. ಅವರು ಮೋಕ್ಷಸಾಧನಗಳನ್ನೂ ಸ್ಫುಟವಾಗಿ ವಿವರಿಸಿಲ್ಲ. ಶೈವಾಗಮದಲ್ಲಿ ಇದೆಲ್ಲವೂ ಸ್ಫುಟವಾಗಿದೆ. ವೇದಾಂತಿಗಳ ಮತದಲ್ಲಿ ''ಚೇತನಾಚೇತನ ವಸ್ತುಗಳಿಗೆ ಮೂಲ ಸ್ವರೂಪನಾದ ಒಬ್ಬನೇ ಆತ್ಮನಿದ್ದಾನೆ. ಈ ಸರ್ವಜಗತ್ತೂ ಆತ್ಮನೇ ಸರಿ. ಆತ್ಮನಿಗೆ ಅತಿರಿಕ್ತವಾದ ಯಾವ ವಸ್ತುವೂ ಇಲ್ಲ'' ಎಂದಿದೆ. ಈ ವೇದಾಂತಿಮತವು ಸರಿಯಲ್ಲ. ಇದು ಬರಿಯ ಮಾತೇ ಹೊರತು ನಿಶ್ಚಯಮಾಡಲು ಇರುವ ಆಧಾರವೇನು? ಶ್ರುತಿಯು ಇದಕ್ಕೆ ಪ್ರಮಾಣವೆಂದು ಹೇಳುವುದಾದರೆ ಆಗ ಆತ್ಮನು ಪ್ರಮಾಣಗಮ್ಯನೆಂದು ಸಿದ್ಧವಾಯಿತು. ಪ್ರಮಾಣ ಪ್ರಮೇಯಗಳೆರಡು ವಸ್ತುಗಳಿದ್ದ ಮೇಲೆ ಪ್ರಮಾತೃ ಪ್ರಮಿತಿಗಳೆರಡು ಇರಲೇಬೇಕು. ಎಂದ ಮೇಲೆ ಈ ನಾಲ್ಕೂ ಪದಾರ್ಥಗಳನ್ನು ಸಿದ್ಧಪಡಿಸುವುದರಿಂದ ಅದ್ವೈತಕ್ಕೆ ಹಾನಿಯೊದಗುವುದು. ಅದಿಲ್ಲದೆ ಆತ್ಮನ ವಿಷಯದಲ್ಲಿ ಪ್ರಮಾಣವಿಲ್ಲವೆಂದು ಹೇಳಿದರೆ ವೇದಾಂತಿಮತವು

ಪ್ರಮಾಣರಹಿತವೆಂದು ಸಿದ್ಧವಾಗುತ್ತದೆ ಮತ್ತು ಆತ್ಮನು ಒಬ್ಬನೇ ಆದ್ದರಿಂದ ಎಲ್ಲರಿಗೂ ಒಂದೇ ವಿಧವಾದ ಸುಖ, ದುಃಖಗಳು ಉಂಟಾಗಬೇಕಾಗುತ್ತದೆ. ಮತ್ತು ಯಾರಿಗೂ ಮೋಕ್ಷವೇ ಆಗದೆ ಹೋದೀತು. ಮೋಕ್ಷವಾದರೆ ಎಲ್ಲರಿಗೂ ಆಗಬೇಕು ಇಲ್ಲದಿದ್ದರೆ ಯಾರಿಗೂ ಇಲ್ಲ ಎಂಬ ಪರಿಸ್ಥಿತಿಯುಂಟಾಗುವುದು. ಈ ವಿಷಯವನ್ನು ಮಾತ್ರ ವೇದಾಂತಿಗಳು ಒಪ್ಪುವುದಿಲ್ಲ. ಆದ್ದರಿಂದ ವೇದಾಂತಮತವು ಯುಕ್ತವಲ್ಲ.

ಇದೇ ರೀತಿಯಲ್ಲಿ ಮೃಗೇಂದ್ರ ಸಂಹಿತೆಗೆ ವ್ಯಾಖ್ಯಾನವನ್ನು ಬರೆದ ಭಟ್ಟನಾರಾಯಣ ಪಂಡಿತರೂ (ಶ್ರೀಕಂಠಾಚಾರ್ಯರೂ) ಅವರ ವ್ಯಾಖ್ಯಾನಕ್ಕೆ ವ್ಯಾಖ್ಯಾನವನ್ನು ಬರೆದ ಅಘೋರ ಶಿವಾಚಾರ್ಯರೂ ವೇದಾಂತಮತವನ್ನು ವಿಸ್ತಾರವಾಗಿಯೂ ಬಹುವಿಧವಾಗಿಯೂ ಅನುವಾದಿಸಿ ನಿರಾಕರಿಸಿದ್ದಾರೆ. ಗ್ರಂಥವು ವಿಸ್ತರವಾದೀತೆಂಬ ಭಯದಿಂದ ಅದೆಲ್ಲವನ್ನೂ ಇಲ್ಲಿ ಬರೆಯುವುದಿಲ್ಲ. ಆದರೂ ವಿಷಯ ಜ್ಞಾಪನೆಗಾಗಿ ಸ್ವಲ್ಪ ಬರೆಯುತ್ತೇವೆ. ಭಟ್ಟ ನಾರಾಯಣರು ಬರೆದ ವೃತ್ತಿಯಲ್ಲಿ ಈ ರೀತಿ ಹೇಳಿದ್ದಾರೆ. ''**ಏಕೋ ವಶೀ ಸರ್ವಭೂತಾಂತರಾತ್ಮಾ ಏಕಂ ವಿಶ್ವಂ ಬಹುಧಾ ಯಃ ಕರೋತಿ**'' ಇತ್ಯಾದಿ ಶ್ರುತಿಗಳಿಂದ ಹೀಗೆ ಸಿದ್ಧವಾಗುತ್ತದೆ. ''ಪರಮಾತ್ಮನೇ ಸಕಲ-ಚೇತನಾಚೇತನಾತ್ಮಕ ಪದಾರ್ಥಗಳ ಉತ್ಪತ್ತಿವಿನಾಶಗಳಿಗೆ ಪ್ರಕೃತಿಭೂತ-ನಾಗಿದ್ದಾನೆ. ಅವನು ಷಡ್ಗುಣೈಶ್ವರ್ಯ ಸಂಪನ್ನನೂ, ಸ್ವತಂತ್ರನೂ, ಅದ್ವಿತೀಯನೂ ಆಗಿದ್ದರೂ ಸಂಸಾರಿಯಾಗುವುದಕ್ಕೋಸ್ಕರ ನಾನಾ ವಿಧವಾದ ಅಂತಃಕರಣೋಪಾಧಿಗಳಲ್ಲಿ ನಾನಾ ಸ್ವಭಾವಗಳನ್ನು ಹೊಂದಿರುತ್ತಾನೆ. ಆ ಪರಮಾತ್ಮನ ಸತ್ಯಸ್ವರೂಪವನ್ನರಿತರೆ ಮೋಕ್ಷ-ವಾಗುವುದು. ಪರಮಾತ್ಮನೇ ನಾನಾ ರೀತಿಯಲ್ಲಿ ವಿಚಿತ್ರನಾಗಿ ತೋರುವನು. ಆದ್ದರಿಂದ ಅದ್ವೈತವೇ ಸತ್ಯವಾದುದು. ಭ್ರಮೆಯಿಂದ ಇಬ್ಬರು ಚಂದ್ರರು ತೋರುವಂತೆ ಭ್ರಮೆಯಿಂದಲೇ ದ್ವೈತವು ತೋರುವುದು. ಆದುದರಿಂದ ಮಹಾತ್ಮನಾದ ಭರ್ತೃಹರಿಯು ಹೀಗೆ ಹೇಳಿದ್ದಾನೆ.

ಯಥಾ ವಿಶುದ್ಧಮಾಕಾಶಂ ತಿಮಿರೋಪಪ್ಲುತೋ ಜನಃ ।
ಸಂಕೀರ್ಣಮಿವ ಮಾತ್ರಾಭಿಶ್ಚಿತ್ರಾಭಿರಭಿಮನ್ಯತೇ ॥
ತಥೇದಮಮೃತಂ ಬ್ರಹ್ಮ ನಿರ್ವಿಕಾರಮವಿದ್ಯಯಾ ।
ಕಲುಷತ್ವಮಿವಾಪನ್ನಂ ಭೇದರೂಪೇ ಪ್ರವರ್ತತೇ ॥

''ತಿಮಿರವೆಂಬ ಕಣ್ಣಿನರೋಗವುಳ್ಳವನಿಗೆ ನಿರ್ಮಲವಾದ ಆಕಾಶವು ಚಿತ್ರವರ್ಣದ ಚುಕ್ಕೆಗಳಿಂದ ಕೂಡಿದಂತೆ ಕಾಣುತ್ತದೆ. ಅಂತೆಯೇ ಅಮೃತವೂ, ನಿರ್ವಿಕಾರವೂ ಆದ ಬ್ರಹ್ಮವಸ್ತುವು ಅವಿದ್ಯೆಯಿಂದ ಕಲುಷಿತ-ವಾದಂತೆ ತೋರುತ್ತಾ ಭೇದರೂಪದಲ್ಲಿರುವಂತೆ ಕಾಣತೊಡಗುವುದು.''

ಅಂತೂ ಈ ಪರಬ್ರಹ್ಮವಸ್ತುವು ಭೇದರಹಿತವಾದದ್ದು. ಸಂಸಾರ ಧರ್ಮಗಳಾದ ಸುಖ, ದುಃಖ ಮೊದಲಾದವು ಮನಸ್ಸಿಗೇ ಸರಿ. ನೀರಿನಲ್ಲಿ ಪ್ರತಿಫಲಿಸಿದ ಪ್ರತಿಬಿಂಬಗಳಿಂದ ಸೂರ್ಯನು ಹೇಗೆ ಭಿನ್ನನಾಗಿ ತೋರುವನೋ ಹಾಗೆಯೇ ಪರಮಾತ್ಮನು ಒಬ್ಬನೇ ಇದ್ದರೂ ಉಪಾಧಿ-ಗಳಿಂದ ಭಿನ್ನನಾಗಿರುವಂತೆ ಕಂಡುಬರುವನು. ಈ ಶ್ರುತಿಯು ಈ ಅರ್ಥವನ್ನೇ ಬೋಧಿಸುವುದು.

ಯಥಾ ಹ್ಯಯಂ ಜ್ಯೋತಿರಾತ್ಮಾ ವಿವಸ್ವಾ
ನಪೋ ಭಿನ್ನಾ ಬಹುಧೈಕೋಽನುಗಚ್ಛನ್ ।
ಉಪಾಧಿನಾ ಕ್ರಿಯತೇ ಭೇದರೂಪೋ ।
ದೇವಃ ಕ್ಷೇತ್ರೇಷ್ವೇವಮಜೋಽಯಮಾತ್ಮಾ ॥

ಈ ವೇದಾಂತಿ ಮತವು ಸಮಂಜಸವಾದುದಲ್ಲ ಎಂದು ಬರೆದಿದ್ದಾರೆ.

ಅಘೋರಶಿವಾಚಾರ್ಯರು ಇದಕ್ಕೆ ರಚಿಸಿದ ತಮ್ಮ ವ್ಯಾಖ್ಯಾನದಲ್ಲಿ ಹೀಗೆ ಬರೆಯುತ್ತಾರೆ - ''ಇತರ ದರ್ಶನಗಳಲ್ಲಿ ಅರ್ಥನಿರ್ಣಯವು ಸ್ಫುಟವಾಗಿಲ್ಲ-ವೆಂಬುದನ್ನು ತೋರಿಸಬೇಕಾಗಿದೆ. ಮೊದಲು ವೇದಾಂತಿಗಳ ಮತವು ಹೇಗೆ ಅಸ್ಫುಟವಾಗಿದೆಯೆಂಬುದನ್ನು ತೋರಿಸುವುದಕ್ಕೋಸ್ಕರ 'ವೇದಾಂ-ತೇಷು' ಎಂಬುದಾಗಿ ಅರ್ಧಶ್ಲೋಕದಿಂದ ಅವರ ಮತವನ್ನು

ನಿರೂಪಿಸುತ್ತಾರೆ. ಅದನ್ನೇ 'ಆತ್ಮೈವೇದಂ' ಎಂದು ವಿವರಿಸುತ್ತಾರೆ. ಸತ್ಯ ಸ್ವರೂಪನಾದ ಪರಮಾತ್ಮನು ಅವಿದ್ಯಾವಶದಿಂದ ಪಶುಮೃಗಾದ್ಯನೇಕ ದೇಹಭೇದವನ್ನು ಹೊಂದಿ ಬಹುಪ್ರಕಾರನಾಗಿ ಸ್ವಪ್ನದಲ್ಲಿ ತೋರುವಂತೆ ಜೀವಾತ್ಮರಿಗೆ ತೋರುತ್ತಾನೆ.

ದ್ವಿಚಂದ್ರಜ್ಞಾನದಂತೆ ದ್ವೈತಜ್ಞಾನವು ಅಸತ್ಯವೇ ಸರಿ. ಆದ್ದರಿಂದ ಶ್ರುತಿಯಿಂದಲೂ ಯುಕ್ತಿಯಿಂದಲೂ ಒಬ್ಬನೇ ಆತ್ಮನೆಂದು ಸಿದ್ಧ-ವಾಗುತ್ತದೆ'' ಎಂದು. ಆದ ಕಾರಣ ಮೃಗೇಂದ್ರ ಸಂಹಿತೆ, ಅದರ ವೃತ್ತಿ, ಅದರ ವ್ಯಾಖ್ಯಾನಗಳಿಂದ ಕೇವಲಾದ್ವೈತವೇ ವೇದಾಂತಶಾಸ್ತ್ರ ಸಂಮತ-ವೆಂದು ಸಿದ್ಧವಾಗುತ್ತದೆ.

ಅಗಸ್ತ್ಯಮಹರ್ಷಿಗಳು ರಚಿಸಿದ ಶಿವರಹಸ್ಯದ ತೃತೀಯಾಂಶದ ಮೂವತ್ತಾರನೆಯ ಅಧ್ಯಾಯದಲ್ಲಿ ಹೀಗೆ ಉಕ್ತವಾಗಿದೆ. ''ವೇದ ವೇದಾಂತಗಳ ತತ್ತ್ವವನ್ನು ಬಲ್ಲ ಹೇ ಪರಶಿವನೇ, ಆಕಾಶವು ನಿತ್ಯವೆಂಬ ಗೌತಮನ ವಾದವೂ ನಿನಗೆ ಸಂಮತವಲ್ಲ. ಶಬ್ದವು ನಿತ್ಯವೆಂಬ ಜೈಮಿನಿಯ ವಾದವು ಸಮ್ಮತವಲ್ಲ. ವೇದಾಂತಿಗಳ ಮಿಥ್ಯಾತ್ತ್ವವಾದವೂ ನಿನಗೆ ಸಂಮತ-ವಲ್ಲ. ವೇದಾಂತಶಾಸ್ತ್ರದಲ್ಲಿ ಬಂಧವಿಲ್ಲ, ಮೋಕ್ಷವಿಲ್ಲ. (ಪರಮಾತ್ಮನ ಈಕ್ಷಣ ಮಾತ್ರದಿಂದ ಸೃಷ್ಟಿಯಾಯಿತೆಂದು ಅವರು ಹೇಳುತ್ತಾರೆ) ಅವಿದ್ಯಾವಿಲಾಸದಿಂದ ಜಗತ್ತಿನ ಸೃಷ್ಟಿಯಾಯಿತೆಂದು ಅವರು ಹೇಳುವುದು ಸರಿಯಲ್ಲ. ನಿನ್ನ ವಿಲಾಸದಿಂದಲೇ ಜಗತ್ತಿನ ಸೃಷ್ಟಿಯಾಗಿದೆ. ವೇದಾಂತ-ಶಾಸ್ತ್ರದಲ್ಲಿ - ನಾನು ಆರಾಧಕ, ಪರಶಿವನು ಆರಾಧ್ಯನೆಂಬ ಅಭಿಮಾನಕ್ಕೆ ಎಡೆಯೇ ಇಲ್ಲ. ವೇದಾಂತಮತವು ಸತ್ಯವಾಗಿದ್ದರೆ ಇಷ್ಟರಲ್ಲಿ ಕರ್ಮ-ಮಾರ್ಗವು ವಿನಷ್ಟವಾಗಿ ಶಿವಾರಾಧನೆಯ ವಾರ್ತೆಯೇ ಜಗತ್ತಿನಲ್ಲಿ ಇರುತ್ತಿರಲಿಲ್ಲ.''

ಇಲ್ಲಿ ಗೌತಮಸಂಮತವಾದ ಆಕಾಶನಿತ್ಯತ್ತ್ವ, ಜೈಮಿನಿ ಸಂಮತವಾದ ಶಬ್ದನಿತ್ಯತ್ತ್ವ, ವೇದಾಂತಸಂಮತವಾದ ಪ್ರಪಂಚ ಮಿಥ್ಯಾತ್ವ, ಬಂಧ

ಮೋಕ್ಷವ್ಯವಸ್ಥೆಯಿಲ್ಲದಿರುವಿಕೆ, ಈಕ್ಷಣ, ಸೃಷ್ಟಿ - ಇತ್ಯಾದಿ ವಿಷಯಗಳನ್ನು ಅನುವಾದಿಸಿ ಖಂಡಿಸಿದ್ದಾರೆ. ಇಲ್ಲಿ ಗೌತಮ, ಜೈಮಿನಿ ಮೊದಲಾದ ಸೂತ್ರಕಾರರ ಜೊತೆಯಲ್ಲಿ ಹೇಳಲ್ಪಟ್ಟಿರುವುದರಿಂದ 'ವೇದಾಂತಿ' ಎಂದರೆ ಬ್ರಹ್ಮಸೂತ್ರವನ್ನು ಬರೆದ ವ್ಯಾಸರೆಂದು ಸಿದ್ಧವಾಗುತ್ತದೆ. ಆದ್ದರಿಂದ ಕೇವಲಾದ್ವೈತವೇ ವ್ಯಾಸಸಂಮತ- ವೆಂದು ನಿಶ್ಚಯವಾಗುತ್ತದೆ.

ವೇದಾಂತಶಾಸ್ತ್ರದಲ್ಲಿ **'ಉತ್ಪತ್ತ್ಯಸಂಭವಾತ್'** (೨-೨-೪೨) **''ಸಮುದಾಯ ಉಭಯಹೇತುಕೇಽಪಿ ತದಪ್ರಾಪ್ತಿಃ''** (೨-೨-೧೮) **''ನೈಕಸ್ಮಿನ್ನ ಸಂಭವಾತ್''** (೨-೨-೩೩) **'ಏಕ ಆತ್ಮನಃ ಶರೀರೇ ಭಾವಾತ್'** (೩-೩-೫೩) ಎಂಬ ನಾಲ್ಕು ಅಧಿಕರಣಗಳಲ್ಲಿಯೂ ಭಗವಾನ್ ವ್ಯಾಸರು ಪಾಂಚರಾತ್ರ, ಬೌದ್ಧ, ಜೈನ ಮತ್ತು ಚಾರ್ವಾಕ ಎಂಬ ನಾಲ್ಕು ಶಾಸ್ತ್ರಗಳನ್ನು ಖಂಡಿಸಿದ್ದಾರೆ. ಹಾಗೆಯೇ ಪಾಂಚರಾತ್ರಾದಿ ನಾಲ್ಕೂ ಶಾಸ್ತ್ರಗಳಲ್ಲಿಯೂ ಕೇವಲಾದ್ವೈತವನ್ನೇ ವೇದಾಂತಶಾಸ್ತ್ರ ಸಂಮತವೆಂದು ಅನುವಾದಿಸಿ ಆಯಾ ಶಾಸ್ತ್ರಕರ್ತರು ನಿರಾಕರಿಸಿದ್ದಾರೆಂಬುದನ್ನು ಗಮನಿಸಬೇಕು.

ಅಂತೂ ಹಿಂದೆ ಹೇಳಿದ ಗ್ರಂಥಗಳಲ್ಲಿ ಅದ್ವೈತಮತವನ್ನು ಅನುವಾದಿಸಿ ನಿರಾಕರಿಸಿರುವ ಸ್ಥಳಗಳಲ್ಲೆಲ್ಲಾ ಅದ್ವೈತವನ್ನೇ ವೇದಾಂತ-ಶಾಸ್ತ್ರಸಂಮತವೆಂದು ನಿರೂಪಿಸಿರುವುದರಿಂದ ಅದ್ವೈತವೇ ವೇದಾಂತ ಶಾಸ್ತ್ರಕ್ಕೆ ಸಂಮತವಾದುದೆಂದು ಸಿದ್ಧವಾಗುತ್ತದೆ. ಅಂತಹ ವೇದಾಂತ ಶಾಸ್ತ್ರವನ್ನು ವಿರಚಿಸಿದ ವ್ಯಾಸರು ವೇದಾಂತವಾದಿಗಳಾಗಿರಲೇಬೇಕು. ಆದ್ದರಿಂದ ಅದ್ವೈತವೇ ವ್ಯಾಸಮತವೆಂದು ಸ್ಪಷ್ಟವಾಗುತ್ತದೆ. ಸಕಲವಾದಿ-ಗಳಿಗೂ ಸಂಪ್ರತಿಪನ್ನರಾದ ಕಪಿಲ, ಕಣಾದ, ಗೌತಮ, ಪತಂಜಲಿ ಮತ್ತು ಜೈಮಿನಿಗಳ ಶಾಸ್ತ್ರಗಳಲ್ಲಿರುವ ಸೂತ್ರ, ವಾರ್ತಿಕ, ಭಾಷ್ಯ ವೃತ್ತಿಗ್ರಂಥ-ಗಳಲ್ಲಿಯ ಪಾಶುಪತ, ಪಾಂಚರಾತ್ರ, ಬೌದ್ಧ, ಜೈನ ಮತ್ತು ಚಾರ್ವಾಕ ಶಾಸ್ತ್ರಗಳಲ್ಲಿಯೂ ಒಟ್ಟು ಈ ಹತ್ತು ಶಾಸ್ತ್ರಗಳಲ್ಲಿಯೂ ವೇದಾಂತ-ಮತವನ್ನು ನಿರಾಕರಿಸುವಾಗ ಅದ್ವೈತಮತವನ್ನೇ ಅನುವಾದ ಮಾಡಿರುತ್ತಾರೆ. ಆದ್ದರಿಂದ ಅದ್ವೈತಮತದಲ್ಲಿಯೇ ವ್ಯಾಸರ ತಾತ್ಪರ್ಯವಿದೆ-

ಯೆಂದು ಸಿದ್ಧಾಂತವಾಗುತ್ತದೆ. ಈ ಸಿದ್ಧಾಂತದ ಮೇಲೆ ವಿವಾದ ಮಾಡುವುದಕ್ಕೆ ಯಾವ ಪ್ರತಿವಾದಿಗೂ ಸಾಧ್ಯವಿಲ್ಲ. ಅವನಿಂದ ಮಾತೇ ಹೊರಡುವುದಿಲ್ಲ. ನಾವು ಮಾಡಿದ ಈ ನಿರ್ಣಯವು ಸರ್ವರಿಗೂ ಹೃದಯಂಗಮವಾಗಿದೆಯೆಂದು ಭಾವಿಸುತ್ತೇವೆ.

ಒಟ್ಟಿನಲ್ಲಿ ಎಲ್ಲಾ ಉಪನಿಷತ್ತುಗಳ ಅರ್ಥವನ್ನೂ ಸೂಚಿಸುವ ವ್ಯಾಸಸೂತ್ರಗಳಿಗೆ ಅದ್ವಿತೀಯ ಬ್ರಹ್ಮವಸ್ತುವಿನಲ್ಲಿ ತಾತ್ಪರ್ಯವಿದೆ-ಯೆಂದು ನಿಶ್ಚಿತವಾದ ಮೇಲೆ ಅವುಗಳಿಗೆ ಮೂಲಭೂತವಾದ ಉಪನಿಷತ್ತುಗಳಿಗೂ ಅದ್ವಿತೀಯ ಬ್ರಹ್ಮವಸ್ತುವಿನಲ್ಲಿಯೇ ತಾತ್ಪರ್ಯ-ವೆಂದು ಸಿದ್ಧಾಂತವಾಗುತ್ತದೆ. ಆದ್ದರಿಂದಲೇ ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದ ದಶಮಾಧ್ಯಾಯದಲ್ಲಿ ಹೀಗೆ ಉಕ್ತವಾಗಿದೆ. ''ಅದ್ವಿತೀಯವಾದ ಒಂದೇ ಬ್ರಹ್ಮವಸ್ತುವಿದೆಯೆಂದು'' ಒಂದು ಶ್ರುತಿ-ವಾಕ್ಯವು ಹೇಳುತ್ತದೆ. ಈ ದ್ವೈತವು ಕೇವಲ ಮಾಯಾಕಲ್ಪಿತವಾದದ್ದೆಂದು ಇನ್ನೊಂದು ಶ್ರುತಿವಾಕ್ಯವು ಹೇಳುತ್ತದೆ. 'ಒಂದೇ ವಸ್ತುವಿದೆಯೆಂದು ತಿಳಿದವನಿಗೆ ಮೋಹವೆಲ್ಲಿಯದು ? ಶೋಕವೆಲ್ಲಿಯದು ? ದ್ವಿತೀಯ ವಸ್ತುವಿನಿಂದ ಭಯವುಂಟಾಗುವುದು. ಸಾರ್ವಭೌಮಾದಿ ಪದವಿಯು ಪರಿಮಿತವಾದದ್ದರಿಂದ ಈ ಅಲ್ಪವಾದ ಪದವಿಯಲ್ಲಿ ಸುಖವಿಲ್ಲ' ಎಂದೂ ಶ್ರುತಿಯು ಸಾರುತ್ತದೆ. ಆದ್ದರಿಂದ ತರ್ಕ ಮತ್ತು ಪ್ರಮಾಣಗಳಿಂದಲೂ, ಜ್ಞಾನಿಗಳ ಅನುಭವದಿಂದಲೂ ಒಂದೇ ವಸ್ತುವಿದೆಯೆಂದು ಸುನಿಶ್ಚಿತ-ವಾಗಿದೆ.' ಯಾವ ದ್ವಿಜರು ಮಹಾವಾಕ್ಯದಿಂದ ಒಂದೇ ಬ್ರಹ್ಮವಸ್ತು-ವಿದೆಯೆಂದು ತಿಳಿಯುವರೋ ಅವರು ಎಚ್ಚರಿಕೆಯಾದ ಮೇಲೆ ಸ್ವಪ್ನದಿಂದ ಬಿಡುಗಡೆ ಹೊಂದುವಂತೆ ಈ ಸಂಸಾರದಿಂದ ಮುಕ್ತರಾಗುತ್ತಾರೆ. ಯಾರು ದ್ವೈತದೃಷ್ಟಿಯನ್ನು ಹೊಂದಿ ಮುಕ್ತಿಯನ್ನು ಬಯಸುವರೋ ಅವರು ಮಹಾ ಘೋರವಾದ ಈ ಸಂಸಾರದಲ್ಲಿಯೇ ತೊಳಲುತ್ತಾರೆ'' ಅದರಲ್ಲಿಯೇ ಮೂವತ್ತೊಂಬತ್ತನೆಯ ಅಧ್ಯಾಯದಲ್ಲಿ ಹೀಗೆ ಹೇಳಲ್ಪಟ್ಟಿದೆ - ''ಎಲೈ ಮುನೀಶ್ವರರೇ, ಸಮಸ್ತ ವೇದಗಳಿಗೂ ಅವಿರೋಧ-

ವಾದ ವಿಷಯವನ್ನು ಸಂಕ್ಷೇಪವಾಗಿ ಹೇಳುತ್ತೇನೆ. ವೇದರಾಶಿಯು ಎರಡು ವಿಭಾಗವಾಗಿದೆ. ಅದ್ವೈತವನ್ನು ಪ್ರತಿಪಾದಿಸುವ ಉಪನಿಷತ್ತುಗಳು ಒಂದು ವಿಭಾಗ. ಕಲ್ಪಿತವಾದ ದ್ವೈತವನ್ನು ಪ್ರತಿಪಾದಿಸುವ ಕರ್ಮಕಾಂಡ ಇನ್ನೊಂದು ವಿಭಾಗ. ಎಲೈ ಆಸ್ತಿಕರೆ, ಅದ್ವೈತವು ಸದಾ ಸತ್ಯವಾದುದು. ದ್ವೈತವು ಅಸತ್ಯ. ಪ್ರತ್ಯಕ್ಷಾದಿ ಪ್ರಮಾಣಗಳಿಂದ ಅದ್ವೈತವನ್ನು ತಿಳಿಯಲು ಸಾಧ್ಯವಿಲ್ಲವಾದ ಕಾರಣ, ಅದ್ವೈತ ಶ್ರುತಿಯು ಸಾಕ್ಷಾತ್ ಅದ್ವೈತ ಸ್ವರೂಪವನ್ನು ಬೋಧಿಸುತ್ತಾ ಅರ್ಥವತ್ತಾಗಿದೆ. ದ್ವೈತವಾದರೋ ಯಾವಾಗಲೋ ಲೋಕಸಿದ್ಧವಾಗಿಯೇ ಇದೆ. ಅದಕ್ಕೆ ಶ್ರುತಿಪ್ರಮಾಣವು ಬೇಕಾಗಿಲ್ಲ. ಆದ್ದರಿಂದ ಬೇರೆ ಪ್ರಮಾಣದಿಂದ ಸಿದ್ಧವಾದ ದ್ವೈತವನ್ನು ಶ್ರುತಿಯು ಬೋಧಿಸಿದರೆ ಅದು ಅರ್ಥವತ್ತಾಗುವುದಿಲ್ಲ. ಶ್ರುತಿಯು ಪ್ರತ್ಯಕ್ಷಾದಿ ಪ್ರಮಾಣಗಳಿಗೆ ನಿಲುಕದ ವಿಷಯವನ್ನು ಬೋಧಿಸುತ್ತದೆ.'' ಅಲ್ಲಿಯೇ ಬ್ರಹ್ಮಗೀತೆಯ ಐದನೆಯ ಅಧ್ಯಾಯದಲ್ಲಿ ಹೀಗೆ ಹೇಳಲ್ಪಟ್ಟಿದೆ. ''ತ್ವಂ (ನೀನು) ಶಬ್ದದ ಅರ್ಥವಾಗಿ ಯಾವುದು ತೋರುವುದೋ ಅದು ಅಹಂ (ನಾನು) ಶಬ್ದದ ಅರ್ಥವೇ ಸರಿ. ಎಲೈ ದೇವತೆಗಳೇ, ತ್ವಂ, ಅಹಂ ಎಂಬ ಶಬ್ದಗಳಿಗೆ ಯಾವುದು ಲಕ್ಷ್ಯಾರ್ಥವೋ ಅದು ಸಾಕ್ಷಾತ್ 'ಪ್ರತ್ಯಕ್' ಚೈತನ್ಯವು.

ಇಲ್ಲಿ ಸಂದೇಹವೇನೂ ಇಲ್ಲ. ಆದ್ದರಿಂದ ದೇಹಾದಿ ವಸ್ತುವು 'ತ್ವಂ' ಮತ್ತು 'ಅಹಂ' ಶಬ್ದದ ವಾಚ್ಯಾರ್ಥವಾಗುತ್ತದೆ. ಅದು ತಚ್ಛಬ್ದದ ಅರ್ಥವನ್ನು ಬೋಧಿಸುವುದಿಲ್ಲ. 'ತತ್ತ್ವಮಸಿ' ಎಂಬ ಶ್ರುತಿಯು ತತ್, ತ್ವಂ ಶಬ್ದಾರ್ಥಗಳಿಗೆ ಅಭೇದವನ್ನು ಬೋಧಿಸುತ್ತದೆ. ಅಲ್ಲಿ ಅಭೇದವನ್ನು ಹೇಳುವುದಕ್ಕೆ ಯಾವುದು ವಿರುದ್ಧಾಂಶವೋ ಅಂತಹ ವಾಚ್ಯಾರ್ಥವನ್ನು ತ್ಯಜಿಸಿ 'ತತ್' ಶಬ್ದಕ್ಕೆ ಅವಿರುದ್ಧವಾದ 'ಚೈತನ್ಯವಸ್ತು'ವೆಂಬ ಲಕ್ಷ್ಯಾರ್ಥ-ವನ್ನಿಟ್ಟುಕೊಳ್ಳಬೇಕು. 'ತ್ವಂ' ಶಬ್ದದಲ್ಲಿಯೂ ವಿರುದ್ಧವಾದ ವಾಚ್ಯಾರ್ಥ-ವನ್ನು ತ್ಯಜಿಸಿ ಅವಿರುದ್ಧವಾದ 'ಚೈತನ್ಯವಸ್ತು'ವೆಂಬ ಲಕ್ಷ್ಯಾರ್ಥವನ್ನು ಗ್ರಹಿಸಬೇಕು. ಅನಂತರ 'ತತ್', 'ತ್ವಂ' ಪದಾರ್ಥಗಳಿಗೆ ಐಕ್ಯವನ್ನು

ಹೇಳಬೇಕು. 'ತತ್ತ್ವಂ' ಶಬ್ದಗಳಿಗೆ ಅರ್ಥಭೂತನಾಗಿ ಚಿನ್ಮಾತ್ರನಾದ ಯಾವ ಪರಮಾತ್ಮನಿರುವನೋ ಆತನಿಗೆ ಸ್ವತಃ ಸಿದ್ಧವಾದ ಏಕತ್ತ್ವವೇ ಮಹಾವಾಕ್ಯಾರ್ಥವು. ಇದಕ್ಕೆ ಬೇರೆ ವಿಧದಲ್ಲಿ ಹೇಳುವ ಅರ್ಥವು ನಿಜವಾದ ವಾಕ್ಯಾರ್ಥವಲ್ಲ. ಇದರಲ್ಲಿ ಸಂದೇಹವೇ ಇಲ್ಲ'' ಎಂದು. ಆದರಲ್ಲಿಯೇ ಹನ್ನೆರಡನೆಯ ಅಧ್ಯಾಯದಲ್ಲಿ ಹೀಗೆ ಹೇಳಿದೆ. ''ಯಾವ ಮೂಢರು ವೇದಗಳಿಗೆ ಬೇರೆ ವಿಧವಾಗಿ ಅರ್ಥವನ್ನು ಹೇಳುತ್ತಾರೋ ಅವರು ಮಹಾಸಾಹಸಿಗರೇ ಸರಿ; ಸಂದೇಹವಿಲ್ಲ. ನಾನು ಹೇಳಿದ ಪ್ರಕಾರವನ್ನು ಬಿಟ್ಟು ಅನ್ಯಪ್ರಕಾರದಲ್ಲಿ ವೇದಾರ್ಥವನ್ನು ಹೇಳತಕ್ಕವರು ನಿರಾಶ್ರಯವಾದ ಅಂಧಕೂಪದಲ್ಲಿಯೇ ನಿಃಸಂಶಯವಾಗಿ ಬೀಳುತ್ತಾರೆ. ಎಲೈ ಸುರಶ್ರೇಷ್ಠರೇ, ಕೇವಲಾದ್ವೈತವೇ ವೇದಸಂಮತವು, ಬೇರೆಯದಲ್ಲ. ವೇದಸಂಮತಾರ್ಥವು ಬೇರೆಯಾದರೆ, ಇಗೋ ನನ್ನ ಶಿರಸ್ಸು ನಿಶ್ಚಯವಾಗಿ ಕತ್ತರಿಸಿಬೀಳುವುದು! ನೀವಾದರೂ ವೇದಗಳಿಗೆ ಬೇರೆ ವಿಧವಾಗಿ ಅರ್ಥವಿರಬಹುದು ಎಂಬ ಶಂಕೆಯಿಂದ ನಾನು ಹೇಳಿದ ಅರ್ಥವನ್ನು ನಿಶ್ಚಯವೆಂದು ತಿಳಿದುಕೊಳ್ಳದಿದ್ದರೆ, ನಿಮ್ಮ ಶಿರಸ್ಸು ಖಂಡಿತವಾಗಿಯೂ ಕತ್ತರಿಸಿ ಬೀಳುವುದು ! ಎಲೈ ದೇವತೆಗಳೆ, ಇನ್ನು ಮುಂದೆ ಹೇಳಬೇಕಾದುದೇನೂ ಇಲ್ಲ. ಸತ್ಯವನ್ನೇ ಹೇಳಿದ್ದೇನೆ. ಶಿವನ ಪಾದವನ್ನು ಸ್ಪರ್ಶಮಾಡಿ ಆಣೆಮಾಡುತ್ತೇನೆ.''

ಭಗವದ್ಗೀತೆಯೂ ಅದ್ವೈತಪರವೆಂದು ಅಂಗೀಕರಿಸಬೇಕು. ಹದಿಮೂರನೆಯ ಅಧ್ಯಾಯದಲ್ಲಿ-

**ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ ।**
**ಕ್ಷೇತ್ರಕ್ಷೇತ್ರಜ್ಞಯೋರ್ಜ್ಞಾನಂ ಯತ್ತಜ್ಜ್ಞಾನಂ ಮತಂ ಮಮ ॥**

(೧೨-೨)

ಇತ್ಯಾದಿ ವಚನಗಳಿಂದ ಭಗವಂತನು ಕ್ಷೇತ್ರಜ್ಞನಾದ ಜೀವನನ್ನು 'ಮಾಮ್ ವಿದ್ಧಿ = ನಾನೆಂದು ತಿಳಿದುಕೋ' ಎಂದು ಹೇಳಿ 'ಮಾಮ್'

ಎಂಬುದರಿಂದ ಜೀವನಿಗೆ ಬ್ರಹ್ಮತ್ತ್ವವನ್ನು ಪ್ರತಿಪಾದಿಸಿದ್ದಾನೆ. ಈ ವಿಷಯವನ್ನೇ ಬ್ರಹ್ಮಸೂತ್ರಗಳೂ ಬೋಧಿಸುತ್ತವೆಯೆಂದು ಹೇಳಿದ್ದಾನೆ. ಬ್ರಹ್ಮಸೂತ್ರಗಳು ಅದ್ವೈತಪರವೆಂದು ನಾವು ಹೇಳಿದ ರೀತಿಯಲ್ಲಿ ನಿರ್ಣೀತ-ವಾಗಿರುವುದರಿಂದ ಅದಕ್ಕೆ ಸಮಾನಾರ್ಥಕವಾದ ಭಗವದ್ಗೀತೆಯೂ ಅದ್ವೈತಪರವೆಂದು ನಿರ್ಣೀತವಾಗುತ್ತದೆ. ಆದ್ದರಿಂದಲೇ ಪಾಂಚರಾತ್ರಾ-ಗಮದ ಪಾದ್ಮಸಂಹಿತೆಯಲ್ಲಿ ''ಪರಮಾತ್ಮ ಮತ್ತು ಕ್ಷೇತ್ರಜ್ಞ (ಜೀವ)ರ ಅಭೇದವು ಶ್ರುತಿಯಲ್ಲಿ ಪ್ರತಿಪಾದಿತವಾಗಿದೆ. ದೇಹಗಳು ಅನೇಕ-ವಾಗಿರುವುದರಿಂದ ಜೀವರೂ ಅನೇಕರಿರುವಂತೆ ತೋರುತ್ತದೆ. ಅದು ಒಂದೇ ಬಿಂಬವು ಕನ್ನಡಿಗಳಲ್ಲಿ ಬೇರೆ ಬೇರೆಯಾಗಿ ಅನೇಕ ಬಿಂಬಗಳಿರುವಂತೆ ತೋರುವ ಹಾಗೆಯೇ ಸರಿ. ಪಂಚಭೂತಾತ್ಮಕವಾದ ಈ ಕ್ಷೇತ್ರ (ದೇಹ)ದಲ್ಲಿರುವ ಜೀವವನ್ನು ವಿದ್ವಾಂಸರು ಕ್ಷೇತ್ರಜ್ಞನೆಂದೂ, ಪರಮಾತ್ಮನೆಂದೂ ತಿಳಿದಿದ್ದಾರೆ.' ಎಂದು ಹೇಳಲ್ಪಟ್ಟಿದೆ. ಇವೇ ಮುಂತಾದ ವಾಕ್ಯಗಳಿಂದ ಅದರಲ್ಲಿ ಪರಮಾತ್ಮ ಮತ್ತು ಕ್ಷೇತ್ರಜ್ಞರಿಗೆ ಐಕ್ಯವು ಉಕ್ತವಾಗಿದೆ. ಹನುಮಂತನಿಂದ ರಚಿಸಲ್ಪಟ್ಟ ಪೈಶಾಚಭಾಷ್ಯದ ಎರಡನೆಯ ಅಧ್ಯಾಯದಲ್ಲಿ-

**ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।**
**ಉಭಯೋರಪಿ ದೃಷ್ಟೋಽಂತಸ್ತ್ವನಯೋಸ್ತತ್ತ್ವದರ್ಶಿಭಿಃ ॥**

(ಗೀತಾ ೨-೧೬)

ಎಂಬ ಶ್ಲೋಕದ ಭಾಷ್ಯವು ಹೀಗಿದೆ :-

''ಅಸತಃ = ರಜ್ಜುಸರ್ಪದಂತೆ ಕಾಣಿಸಿಕೊಂಡು ಆಮೇಲೆ ವಿನಷ್ಟ-ವಾಗುತ್ತಾ ವಸ್ತುತಃ ಅವಿದ್ಯಮಾನವಾದ ಈ ಜಗತ್ತಿಗೆ, ಭಾವಃ = ಸತ್ತೆಯು (ಇರುವಿಕೆಯು), ನ = ಇಲ್ಲ. ಹಾಗೆಯೇ, ಸತಃ = ಪರಮಾರ್ಥವಾಗಿ ಇರುವ ಆತ್ಮನಿಗೆ, ಅಭಾವಃ = ವಿನಾಶವೂ, ನ = ಇಲ್ಲ. ಈ ನಿಯಮಗಳಿಗೆ ಯಾವಾಗಲೂ ಭಂಗವಿಲ್ಲ. ಅನಯೋಃ = ಈ ಸದಸದ್ವಸ್ತುಗಳ, ಅಂತಃ =

ನಿಶ್ಚಯವು, ತತ್ತ್ವದರ್ಶಿಭಿಃ = ಆತ್ಮಜ್ಞಾನಿಗಳಿಂದ, ದೃಷ್ಟಃ = ತಿಳಿಯಲ್ಪಟ್ಟಿದೆ. ಆದ್ದರಿಂದ ಆತ್ಮಜ್ಞಾನಿಗಳ ದೃಷ್ಟಿಯನ್ನಾಶ್ರಯಿಸಿ ಶೋಕವನ್ನೂ ಮೋಹ-ವನ್ನೂ ಬಿಟ್ಟು ಶೀತೋಷ್ಣಾದಿಗಳನ್ನು ಸಹಿಸಿಕೋ ಎಂದು ಅಭಿಪ್ರಾಯ.'' ಆದರಲ್ಲಿಯೇ ಹದಿನೆಂಟನೆಯ ಅಧ್ಯಾಯದಲ್ಲಿ-

**ಭಕ್ತ್ಯಾ ಮಾಮಭಿಜಾನಾತಿ ಯಾವಾನ್ಯಶ್ಚಾಸ್ಮಿ ತತ್ತ್ವತಃ ।**
**ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್ ॥**

(೧೮-೫೫)

ಎಂಬ ಶ್ಲೋಕದ ಭಾಷ್ಯವು ಹೀಗಿದೆ - 'ಉಪಾಧಿವಶದಿಂದ ನಾನಾ ವಿಧವಾಗಿ ತೋರುವ ಈ ಪ್ರಪಂಚರೂಪದಿಂದ ನಾನು ಹೇಗೆ ಇದ್ದೇನೆ ಎಂಬುದನ್ನೂ, ಎಲ್ಲಾ ಬಗೆಯ ಉಪಾಧಿಗಳಿಂದಲೂ ರಹಿತನಾಗಿ ನಾನು ಯಾವ ರೀತಿಯಲ್ಲಿದ್ದೇನೆಂಬುದನ್ನೂ ಭಕ್ತಿಯಿಂದ ಚೆನ್ನಾಗಿ ತಿಳಿದು-ಕೊಳ್ಳುತ್ತಾನೆ. ತಿಳಿದ ಮೇಲೆ ಅವನು ನನ್ನನ್ನು ಪ್ರವೇಶಿಸುವನು ಎಂದರೆ ಬ್ರಹ್ಮವಸ್ತುವೇ ಆಗುತ್ತಾನೆ'' ಇತ್ಯಾದಿ ಭಾಷ್ಯವು ಪ್ರಪಂಚಕ್ಕೆ ಮಿಥ್ಯಾತ್ತ್ವ-ವನ್ನು ಹೇಳುವುದಲ್ಲದೆ ಜೀವಬ್ರಹ್ಮರಿಗೆ ಐಕ್ಯವನ್ನು ಪ್ರತಿಪಾದಿಸುತ್ತದೆ. ಯಾಜ್ಞವಲ್ಕ್ಯಸ್ಮೃತಿಯಲ್ಲಿ ಈ ರೀತಿ ಹೇಳಿದೆ -

**'ಆಕಾಶಮೇಕಂ ಹಿ ಯಥಾ ಘಟಾದಿಷು ಪೃಥಗ್ ಭವೇತ್ ।**
**ತಥಾತ್ಮೈಕೋ ಹ್ಯನೇಕಶ್ಚ ಜಲಾಧಾರೇಷ್ವಿವಾಂಶುಮಾನ್ ॥**

ಯತಿಧರ್ಮ ಪ್ರಕರಣ - ೧೪೪

''ಒಂದೇ ಆಕಾಶವು ಘಟಾದಿವಸ್ತುಗಳಲ್ಲಿ (ಉಪಾಧಿವಶದಿಂದ) ಹೇಗೆ ಬೇರೆ ಬೇರೆಯಾಗಿರುವುದೋ, ಹಾಗೆಯೇ ಒಬ್ಬ ಆತ್ಮನು ಜಲಾಶಯಗಳಲ್ಲಿ ಪ್ರತಿಬಿಂಬಿತವಾದ ಸೂರ್ಯನಂತೆ ಅನೇಕರೂಪ-ನಾಗಿರುವನು.'' ಇತ್ಯಾದಿ ವಚನಗಳು ಅದ್ವೈತವನ್ನೇ ಪ್ರತಿಪಾದಿಸುತ್ತವೆ.

ಹೀಗೆಯೇ ವಿಷ್ಣುಪುರಾಣದ ಆರನೆಯ ಅಂಶದಲ್ಲಿ ಅದ್ವೈತವನ್ನು ಪ್ರತಿಪಾದಿಸುವ ವಚನಗಳಿವೆ. ''ಈ ಜೀವನು ಪರಮಾತ್ಮನ

ನಿಜಸ್ವರೂಪವನ್ನು ಹೊಂದಿರುವುದರಿಂದ ಪರಮಾತ್ಮನಿಗೆ ಅಭಿನ್ನನಾಗಿದ್ದಾನೆ. ಭೇದಜ್ಞಾನವು ಅಜ್ಞಾನದಿಂದ ಉಂಟಾಗಿದೆ. ಭೇದಜ್ಞಾನಕ್ಕೆ ಕಾರಣವಾದ ಅಜ್ಞಾನವು ಸಂಪೂರ್ಣವಾಗಿ ನಷ್ಟವಾದ ಮೇಲೆ ಜೀವಾತ್ಮ ಪರಮಾತ್ಮರಿಗೆ ವಸ್ತುತಃ ಇಲ್ಲದಿರುವ ಭೇದವನ್ನು ಯಾವನು ತಾನೇ ಕಲ್ಪಿಸುತ್ತಾನೆ? ಪರಮಾರ್ಥದಲ್ಲಿ ಅತ್ಯಂತ ನಿರ್ಮಲವೂ ಜ್ಞಾನ ಸ್ವರೂಪವೂ ಆದ ಬ್ರಹ್ಮವಸ್ತುವೇ ಭ್ರಾಂತಿಯಿಂದ ನಾನಾ ಪದಾರ್ಥ ರೂಪವಾಗಿ ಕಂಡು ಬರುತ್ತದೆ. ಭೇದರಹಿತವೂ, ಸತ್ತಾಮಾತ್ರಸ್ವರೂಪವೂ, ವಾಕ್ಕುಗಳಿಗೆ ಅಗೋಚರವೂ, ಸ್ವಸಂವೇದ್ಯವೂ ಆದ ಜ್ಞಾನರೂಪವಾದ ವಸ್ತುವೇ 'ಬ್ರಹ್ಮ' ಎನಿಸಿಕೊಂಡಿದೆ. 'ನಾನು, ನನ್ನದು' ಎಂಬುದು ಅವಿದ್ಯೆ. ಈ ಅವಿದ್ಯೆಯಿಂದ ವ್ಯವಹಾರವು ನಡೆಯುತ್ತದೆ. ವಾಕ್ಕುಗಳಿಗೆ ಅಗೋಚರ-ವಾದ ಆ ಪರಮಾರ್ಥ ವಸ್ತುವು ವ್ಯವಹಾರಕ್ಕೆ ಅತೀತವಾಗಿದೆ.'' ಅದರಲ್ಲಿಯೇ ಪ್ರಥಮಾಂಶದ ಕಡೆಯಲ್ಲಿ ''ನಾನೇ ವಿಷ್ಣುವು; ಸರ್ವವೂ ವಿಷ್ಣುಸ್ವರೂಪವೇ ಸರಿ, ಅವನನ್ನುಳಿದು ಕಾರಣವೂ ಇಲ್ಲ. ಕಾರ್ಯವೂ ಇಲ್ಲ' ಎಂಬುದಾಗಿ ಯಾವನು ಮನನ ಮಾಡುವುದಿಲ್ಲವೋ ಅವನಿಗೆ ಸಂಸಾರ-ಜನ್ಯವಾದ ನಾನಾ ದ್ವಂದ್ವರೋಗಗಳು ಉದ್ಭವಿಸುತ್ತವೆ.'' ಇತ್ಯಾದಿ ವಚನಗಳು ಅದ್ವೈತವನ್ನೇ ಬೋಧಿಸುತ್ತವೆ.

ಭಾಗವತದಲ್ಲಿ ಹನ್ನೊಂದನೆಯ ಸ್ಕಂಧದ ಹನ್ನೊಂದನೆಯ ಅಧ್ಯಾಯದಲ್ಲಿ ಹೀಗೆ ಉಕ್ತವಾಗಿದೆ. ''ಶ್ರೀಕೃಷ್ಣ - ಹೇ ಉದ್ಧವ, ಆತ್ಮನು ಬದ್ಧನು, ಮುಕ್ತನು ಎಂಬ ವ್ಯವಹಾರವು ನನ್ನ ಸತ್ತ್ವಾದಿಗುಣವೆಂಬ ಉಪಾಧಿವಶದಿಂದಲೇ ಹೊರತು ವಾಸ್ತವವಾಗಿ ಅಲ್ಲ. ಆ ಸತ್ತ್ವಾದಿ ಗುಣವು ಮಾಯಾಮೂಲಕವಾದುದರಿಂದ ಅದರ ನಿಯಂತೃವಾದ ನನಗೆ ಬಂಧನವೂ ಇಲ್ಲ ಮೋಕ್ಷವೂ ಇಲ್ಲ. ಶೋಕ, ಮೋಹ, ಸುಖ, ದುಃಖ ಮತ್ತು ದೇಹೋತ್ಪತ್ತಿಗಳು ಮಾಯೆಯಿಂದ ಆಗುತ್ತವೆ. ಸ್ವಪ್ನದಲ್ಲಿ ಚಿತ್ತದ ವಿವರ್ತದಂತೆ ಈ ಸಂಸಾರವಿದೆ. ಇದು ಸತ್ಯವಲ್ಲ. ವಿದ್ಯೆ, ಅವಿದ್ಯೆಗಳು ನನ್ನ

ಎರಡು ಶಕ್ತಿಗಳು. ಇವು ಜೀವಿಗಳಿಗೆ ಮೋಕ್ಷ ಮತ್ತು ಬಂಧಗಳನ್ನುಂಟು ಮಾಡುತ್ತವೆ. ಇವು ನನ್ನ ಮಾಯೆಯಿಂದ ನಿರ್ಮಿಸಲ್ಪಟ್ಟಿವೆ. ಅದ್ವಿತೀಯನಾದ ನನ್ನ ಅಂಶಭೂತನಾದ ಜೀವನಿಗೆ ಅವಿದ್ಯೆಯಿಂದ ಅನಾದಿಯಾದ ಬಂಧವಾಗಿದೆ. ವಿದ್ಯೆಯಿಂದ ಮೋಕ್ಷವುಂಟಾಗುತ್ತದೆ.''

ಮೂರನೆಯ ಸ್ಕಂಧದ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ ದೇವಹೂತಿಕಪಿಲರ ಸಂವಾದ ಸಂದರ್ಭದಲ್ಲಿ ಹೀಗೆ ಉಕ್ತವಾಗಿದೆ. ''ಸರ್ವಭೂತಗಳಲ್ಲಿ ಆಕಾಶಾದಿ ಮಹಾಭೂತಗಳು ಹೇಗೆ ಅನನ್ಯಭಾವದಿಂದ ಇವೆಯೋ ಹಾಗೆಯೇ ಸರ್ವಭೂತಗಳಲ್ಲಿ ತಾನೂ ತನ್ನಲ್ಲಿ ಸರ್ವಭೂತಗಳೂ ಇವೆಯೆಂದು ಭಾವಿಸಬೇಕು. ಒಂದೇ ಬೆಂಕಿಯು ತನಗೆ ಆಧಾರವಾದ ಕಟ್ಟಿಗೆ ಮೊದಲಾದ ವಸ್ತುಗಳಲ್ಲಿ ದೊಡ್ಡದಾಗಿಯೂ, ಚಿಕ್ಕದಾಗಿಯೂ ನಾನಾ ವಿಧವಾಗಿ ತೋರುತ್ತದೆ. ಹಾಗೆಯೇ ಆತ್ಮನು ನಾನಾ ಬಗೆಯ ದೇಹಗಳಲ್ಲಿ ಇರುವನು. ಆದ್ದರಿಂದ ಸದಸದ್ರೂಪವೂ, ದುರ್ಜ್ಞೇಯವೂ ಆದ ದೈವೀ ಪ್ರಕೃತಿಯನ್ನು ಅದರ ಪ್ರಸಾದದಿಂದಲೇ ಜಯಿಸಿ ತನ್ನ ನಿಜಸ್ವರೂಪದಿಂದ ಇರುತ್ತಾನೆ.''

ಇಪ್ಪತ್ತೊಂಬತ್ತನೆಯ ಅಧ್ಯಾಯದಲ್ಲಿ ಈ ರೀತಿ ಹೇಳಲ್ಪಟ್ಟಿದೆ - ''ಪುರುಷನು ಪ್ರತಿಮೆ ಮೊದಲಾದವುಗಳಲ್ಲಿ ಪರಮೇಶ್ವರನಾದ ನನ್ನನ್ನು ಸ್ವಕರ್ಮನಿರತನಾಗಿ ಪೂಜಿಸಬಹುದು. ಸರ್ವಭೂತಗಳಲ್ಲಿಯೂ ನಾನು ಆವಾಸವಾಗಿ ಇದ್ದೇನೆ ಎಂಬುದನ್ನು ತಾನು ತಿಳಿದುಕೊಳ್ಳುವವರೆಗೆ ಮಾತ್ರ ಹೀಗೆ ಪೂಜಿಸಬಹುದು. ಯಾವನು ತನಗೂ ಇನ್ನೊಬ್ಬನಿಗೂ ಸ್ವಲ್ಪವಾದರೂ ಭೇದವನ್ನು ಎಣಿಸುತ್ತಾನೆಯೋ ಅಥವಾ ತನಗೂ ಇನ್ನೊಬ್ಬನಿಗೂ ಮಧ್ಯದಲ್ಲಿ ದೇಹವು ವಿಭಾಜಕವಾಗಿ ಇದೆಯೆಂದು ಭಾವಿಸುತ್ತಾನೆಯೋ, ಅಂತಹ ಭೇದದೃಷ್ಟಿಯುಳ್ಳವನಿಗೆ ಮೃತ್ಯುವು ತೀವ್ರವಾದ ಭಯವನ್ನುಂಟು ಮಾಡುತ್ತದೆ.''

ಮೂವತ್ತೆರಡನೆಯ ಅಧ್ಯಾಯದಲ್ಲಿ ಈ ಪ್ರಕಾರ ಹೇಳಿದ್ದಾರೆ - ''ಕೇವಲ ಜ್ಞಾನವು ಪರಬ್ರಹ್ಮ, ಪರಮಾತ್ಮಾ, ಈಶ್ವರ, ಪುರುಷ ಎಂದು

ಹೆಸರುಗಳನ್ನು ಪಡೆದಿದೆ. ಒಬ್ಬನೇ ಭಗವಂತನು ದೃಶ್ಯ ದ್ರಷ್ಟೃ ಮೊದಲಾದ ಭೇದಗಳಿಂದ ಕಂಡು ಬರುತ್ತಾನೆ. ಸಮಗ್ರವಾದ ಯೋಗ-ನಿಷ್ಠೆಯಿಂದ ಯೋಗಿಗೆ ದೊರಕುವ ಫಲವೆಂದರೆ ಪ್ರಪಂಚ ವಿಷಯದಲ್ಲಿ ಅನಾಸಕ್ತಿ, ಜ್ಞಾನಸ್ವರೂಪವೂ, ಅದ್ವಿತೀಯವೂ, ನಿರ್ಗುಣವೂ ಆದ ಬ್ರಹ್ಮವು ಶಬ್ದಾದಿಧರ್ಮವನ್ನು ಹೊಂದಿದ ಪದಾರ್ಥವಾಗಿ ಭ್ರಮೆಯಿಂದ ತೋರುತ್ತದೆ.''

ಮೂವತ್ತುಮೂರನೆಯ ಅಧ್ಯಾಯದಲ್ಲಿ ಹೀಗೆ ಹೇಳಿದ್ದಾರೆ - ''ಆ ದೇವಹೂತಿಯು ಭಕ್ತಿಯೋಗದಿಂದಲೂ, ಬಲವತ್ತರವಾದ ವೈರಾಗ್ಯ-ದಿಂದಲೂ, ಯುಕ್ತಾಚಾರದಿಂದಲೂ, ಬ್ರಹ್ಮಪ್ರಾಪ್ತಿಗೆ ಸಾಧನವಾದ ಜ್ಞಾನದಿಂದಲೂ, ಪರಿಶುದ್ಧವಾದ ಮನಸ್ಸಿನಿಂದ ಸರ್ವತೋಮುಖನೂ, ಸ್ವಾನುಭವದಿಂದ ಮಾಯಾಗುಣವಿನಿರ್ಮುಕ್ತನೂ, ಜೀವಾತ್ಮರಿಗೆ ಪ್ರಾಪ್ಯ-ಸ್ಥಾನವೂ ಆದ ಬ್ರಹ್ಮವಸ್ತುವನ್ನು ಧ್ಯಾನಮಾಡುತ್ತಾ ಜೀವರೂಪವನ್ನು ಬಿಟ್ಟು ಕ್ಲೇಶರಹಿತಳೂ, ಆತ್ಮಾನಂದವನ್ನು ಅನುಭವಿಸತಕ್ಕವಳೂ ಆಗಿ, ಸಮಾಧಿಯು ಸುಪ್ರತಿಷ್ಠಿತವಾದ್ದರಿಂದ ಗುಣತ್ರಯಜನ್ಯ ಭ್ರಮೆಯನ್ನು ಕಳೆದುಕೊಂಡವಳಾಗಿ, ಸ್ವಪ್ನದಲ್ಲಿ ನೋಡಿದುದನ್ನು ಎಚ್ಚರಿಕೆಯಾದ ಮೇಲೆ ಹೇಗೆ ಸ್ಮರಿಸಿಕೊಳ್ಳುವುದಿಲ್ಲವೋ ಹಾಗೆ ತನ್ನನ್ನೇ ಅವಳು ಸ್ಮರಿಸಿಕೊಳ್ಳಲಿಲ್ಲ'' ಇತ್ಯಾದಿ ವಚನಗಳು ಕೇವಲ ಅದ್ವೈತವನ್ನೇ ಪ್ರತಿಪಾದಿಸುತ್ತವೆ.

ಆದ್ದರಿಂದ ಪೂರ್ವೋಕ್ತ ರೀತಿಯಲ್ಲಿ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳು ಕೇವಲ ಅದ್ವೈತಪರವೆಂದು ಸಿದ್ಧವಾಗುತ್ತದೆ. ಏಕೆಂದರೆ, ಕಪಿಲಾದಿಗಳು ಅದ್ವೈತವನ್ನೇ ವೇದಾಂತಮತವೆಂದು ಅನುವಾದ ಮಾಡಿರುವುದರಿಂದ ಶ್ರುತ್ಯಾದಿ ಗ್ರಂಥಗಳು ಅದ್ವೈತವನ್ನೇ ಬೋಧಿಸುತ್ತವೆ-ಯೆಂಬುದಕ್ಕೆ ಬೆಂಬಲ ಸಿಗುತ್ತದೆ. ಆದ ಕಾರಣ ಶ್ರುತಿ, ಸ್ಮೃತ್ಯಾದಿಗಳಲ್ಲಿ ಅಲ್ಲಲ್ಲಿ ಕಂಡುಬರುವ ದ್ವೈತ ವಿಷಯವು ಕೇವಲ ಕಲ್ಪಿತವಾದ ದ್ವೈತವನ್ನುದ್ದೇಶಿಸಿ ಹೇಳಿದುದೆಂದು ತಿಳಿಯಬೇಕು. ಸೂತಸಂಹಿತೆಯಲ್ಲಿ-

**ಸತ್ಯಾದ್ವೈತಪರಃ ಕಶ್ಚಿದ್‌ವೇದಭಾಗಃ ಸಮಾಸತಃ ।**
**ಕಲ್ಪಿತದ್ವೈತನಿಷ್ಠಸ್ತು ವೇದಭಾಗೋಽಪರೋ ದ್ವಿಜಾಃ ॥**

ಎಂದು ಉಕ್ತವಾಗಿದೆ.

''ಸಂಕ್ಷೇಪವಾಗಿ ಹೇಳುವುದಾದರೆ, ಒಂದು ವೇದಭಾಗವು ಸತ್ಯವಾದ ಅದ್ವೈತವನ್ನು ಪ್ರತಿಪಾದಿಸುತ್ತದೆ. ಇನ್ನೊಂದು ಭಾಗವು ಕಲ್ಪಿತವಾದ ದ್ವೈತವನ್ನು ಹೇಳುತ್ತದೆ.''

ಆದುದರಿಂದ ಸಾಕ್ಷಾತ್ ಪರಮೇಶ್ವರನ ಅವತಾರ ಸ್ವರೂಪರೂ, ಸರ್ವಜ್ಞರೂ, ಸಕಲಶ್ರುತಿ, ಸೂತ್ರ, ಸ್ಮೃತಿ, ಇತಿಹಾಸ, ಪುರಾಣ, ಆಗಮ, ಸಂಹಿತೆ ಮೊದಲಾದವುಗಳ ತಾತ್ಪರ್ಯವನ್ನು ನಿರ್ಣಯಿಸು-ವುದರಲ್ಲಿ ಮಹಾಸಮರ್ಥರೂ ಆದ ಶ್ರೀಮಚ್ಛಂಕರ ಭಗವತ್ಪಾದರು ಉಪನಿಷತ್ತು, ಸೂತ್ರ, ಗೀತೆ, ಸನತ್ಸುಜಾತೀಯ, ವಿಷ್ಣುಸಹಸ್ರನಾಮ ಮೊದಲಾದವುಗಳ ಭಾಷ್ಯದಲ್ಲಿ ಕೇವಲಾದ್ವೈತವೇ ಪರಮಾರ್ಥವೆಂದು ಬಹಳ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಆದ್ದರಿಂದಲೇ ಆದಿತ್ಯ-ಪುರಾಣದಲ್ಲಿ ''ವ್ಯಾಸಸೂತ್ರಗಳಿಗೆ ವ್ಯಾಖ್ಯಾನವನ್ನು ಮಾಡುವಾಗ ಶಂಕರನು ವೇದಕ್ಕೆ ಯಾವ ಅರ್ಥವನ್ನು ಹೇಳಿದ್ದಾನೆಯೋ ಆ ಅರ್ಥವೇ ಗ್ರಾಹ್ಯವಾದುದು'' ಎಂದು ಹೇಳಲ್ಪಟ್ಟಿದೆ. ಕೂರ್ಮಪುರಾಣದಲ್ಲಿಯೂ ''ನೀಲಲೋಹಿತನಾದ ಶಂಕರನು ಭಕ್ತರ ಹಿತವನ್ನು ಬಯಸಿ ಶ್ರೌತಸ್ಮಾರ್ತಧರ್ಮಗಳನ್ನು ರಕ್ಷಿಸುವುದಕ್ಕಾಗಿ ಅವತರಿಸುವನು. ಅವನು ಬ್ರಹ್ಮಜ್ಞಾನವನ್ನು ಬೋಧಿಸುವ ಶಾಸ್ತ್ರವನ್ನು ಉಪದೇಶಿಸುವನು.'' ಎಂದು ಹೇಳಲ್ಪಟ್ಟಿದೆ. ಆದುದರಿಂದ ಸಕಲ ಶ್ರುತಿ, ಸೂತ್ರ, ಸ್ಮೃತಿ, ಇತಿಹಾಸ, ಪುರಾಣಗಳಿಗೆ ಸಂಮತವಾದ ಪರಬ್ರಹ್ಮ ವಸ್ತುವು ಎಲ್ಲಾ ವಿಧವಾದ ಸಜಾತೀಯ, ವಿಜಾತೀಯ, ಸ್ವಗತ ಭೇದರಹಿತವೂ, ನಿತ್ಯ, ಶುದ್ಧ, ಬುದ್ಧ, ಮುಕ್ತಸ್ವರೂಪವೂ, ಸಚ್ಚಿದಾನಂದಘನವೂ, ನಿರ್ವಿಶೇಷವೂ ಎಂದು ಸಿದ್ಧವಾಯಿತು.

ಈಗ ಒಂದು ಶಂಕೆಯುಂಟಾಗಬಹುದು : ''ಈ ರೀತಿಯಲ್ಲಿ ಕೇವಲಾ-ದ್ವೈತವು ವ್ಯಾಸಸಂಮತವೆಂದು ಸಿದ್ಧಾಂತ ಮಾಡಿದುದರಿಂದ ರಾಮಾನುಜ, ಮಧ್ವಾದಿಗಳ ಮತವೇನೋ ನಿರಸ್ತವಾಗುತ್ತದೆ. ಆದರೆ ವ್ಯಾಸಮಹರ್ಷಿಗಳಿಗೆ ಪ್ರತಿವಾದಿಗಳಾದ ಕಪಿಲ, ಕಣಾದಾದಿಸೂತ್ರಕಾರರು ಕೇವಲಾದ್ವೈತವನ್ನು ನಿರಾಕರಿಸಿ ಭೇದವನ್ನೇ ಅಂಗೀಕರಿಸಿರುತ್ತಾರಷ್ಟೆ. ಅವರೆಲ್ಲರ ಮತವನ್ನು ಖಂಡಿಸಿದ ಹೊರತು ಅದ್ವೈತವು ಹೇಗೆ ಸಿದ್ಧಾಂತವಾಗಿ ನಿಲ್ಲುತ್ತದೆ ?'' ಇದಕ್ಕೆ ನಮ್ಮ ಸಮಾಧಾನ ಹೀಗೆ :- ನಾವು ವ್ಯಾಸರಿಗೆ ಪ್ರತಿವಾದಿಗಳಾದ ಕಪಿಲ ಕಣಾದಾದಿಗಳ ಮತವನ್ನು ಖಂಡಿಸುವ ಉದ್ದೇಶದಿಂದ ಅದ್ವೈತಮತಕ್ಕೆ ಪ್ರಮಾಣಗಳನ್ನು ವಿವರಿಸಲು ಈಗ ತೊಡಗಿಲ್ಲ. ನಾವು ತೊಡಗಿರುವುದು ಕಪಿಲಾದಿಗಳ ಅನುವಾದ ಬಲದಿಂದ ವ್ಯಾಸಸಂಮತವಾದ ಅರ್ಥವನ್ನು ನಿರ್ಣಯಿಸುವುದಕ್ಕೋಸ್ಕರ. ಆ ನಿರ್ಣಯವನ್ನು ನಾವು ಸ್ಥಾಪಿಸಿದರೆ ನಮ್ಮ ಕಾರ್ಯವಾಯಿತು. ಎಲ್ಲಾ ವ್ಯಾಸಶಿಷ್ಯರೂ ಕಪಿಲಕಣಾದಾದಿಗಳ ಮತವನ್ನು ಖಂಡಿಸಿ ಕೇವಲಾ-ದ್ವೈತವನ್ನು ಸ್ಥಾಪಿಸಲು ಪ್ರಯತ್ನ ಮಾಡಬೇಕಲ್ಲದೆ ನಮಗೆ ಮಾತ್ರ ಅದು ನಿರ್ಬಂಧವಲ್ಲ. ಮತ್ತು ಭಾಷ್ಯ, ವಿವರಣ, ವಾಚಸ್ಪತ್ಯ, ಪರಿಮಲ, ಪಂಚದಶೀ ಗ್ರಂಥಗಳಲ್ಲಿಯೂ, ಇತರ ಪ್ರಕರಣಗ್ರಂಥಗಳಲ್ಲಿಯೂ ಶ್ರುತಿ, ಯುಕ್ತಿ ಮತ್ತು ಅನುಭವಗಳ ಬಲದಿಂದ ಕಪಿಲಾದಿಗಳ ಮತವನ್ನು ಖಂಡಿಸಿ ಕೇವಲಾದ್ವೈತವನ್ನು ಸ್ಥಾಪಿಸಿಯೇ ಇದ್ದಾರೆ. ಇಲ್ಲಿ ಒಂದು ಪ್ರಶ್ನೆಯನ್ನು ಮಾಡಬಹುದು: ಅದ್ವೈತ ವಿಷಯದಲ್ಲಿ ಶ್ರುತಿ, ಯುಕ್ತಿ ಮತ್ತು ಅನುಭವಗಳಿರುವಂತೆ ದ್ವೈತ ವಿಷಯದಲ್ಲಿಯೂ ಶ್ರುತಿ, ಯುಕ್ತಿ ಮತ್ತು ಅನುಭವಗಳಿರುವುದರಿಂದ ಅದ್ವೈತವೇ, ಶ್ರುತಿಸಂಮತವೆಂದು ಸೂತ್ರಭಾಷ್ಯಾದಿಗ್ರಂಥಗಳಲ್ಲಿ ಹೇಗೆ ತಾನೇ ಸಿದ್ಧಾಂತಿಸಿದ್ದಾರೆ ? ಇದಕ್ಕೆ ಉತ್ತರವಿದು. ಸೂತಸಂಹಿತೆಯಲ್ಲಿ ''ಎರಡನೆಯ ವಸ್ತುವಿನಿಂದ ಪ್ರಾಣಿಗೆ ಭಯವುಂಟಾಗುತ್ತದೆ. ಏಕತ್ವವನ್ನು ತಿಳಿದವನಿಗೆ ಮೋಹವೆಲ್ಲಿ ? ಶೋಕವೆಲ್ಲಿ ಎಂಬುದಾಗಿ ಶ್ರೇಷ್ಠವಾದ ಶ್ರುತಿಯು ಅದ್ವೈತವನ್ನು ಪ್ರತಿಪಾದಿಸುತ್ತದೆ. ಏಕತ್ವ' ಎಂಬುದೇ ಮಹಾವಾಕ್ಯದ ಅರ್ಥವು. ಎಲ್ಲೈ

ಮುನಿಶ್ರೇಷ್ಠರೆ, ಶ್ರುತಿಗೆ ಭೇದವು ವಿವಕ್ಷಿತವಾಗಿದ್ದರೆ 'ದ್ವಿತೀಯಾದ್ವೈ' ಎಂದು ಹೇಳಿದ ನಿಂದಾಸ್ತುತಿಗಳು ವಿರುದ್ಧವಾಗುತ್ತವೆ'' ಎಂದು ಉಕ್ತವಾಗಿದೆ. ಇದರಿಂದ ಭೇದವನ್ನು ನಿಂದಿಸಿ ಅಭೇದವನ್ನು ಶ್ರುತಿಯು ಸ್ತುತಿಸಿರುವುದೆಂದು ಗೊತ್ತಾಗುತ್ತದೆ. ಆಗ ಅಭೇದ ಶ್ರುತಿಗಳು ತಾತ್ಪರ್ಯ ನಿರ್ಣಯಕ್ಕೆ ಬೇಕಾದ ಷಡ್ವಿಧಲಿಂಗಗಳಿಂದ ಕೂಡಿರುವುದರಿಂದ ಪ್ರಬಲವಾಗುತ್ತವೆ. ಅಷ್ಟೇ ಅಲ್ಲ, ಶೈವಪುರಾಣದ ಏಕಾದಶರುದ್ರ-ಸಂಹಿತೆಯಲ್ಲಿ 'ಪರಮೇಶ್ವರನ ಆಜ್ಞಾನುಸಾರವಾಗಿ ವ್ಯಾಸರು ವೇದಾಂತಾರ್ಥ-ವನ್ನು ಬೋಧಿಸುವುದಕ್ಕಾಗಿ ಬ್ರಹ್ಮಸೂತ್ರಗಳನ್ನು ರಚಿಸಿದರು' ಎಂದು ಉಕ್ತವಾಗಿದೆ. ಈ ವಚನವನ್ನು ನಾವು ಗ್ರಂಥದ ಪ್ರಾರಂಭದಲ್ಲಿ ಉದಾಹರಿಸಿದ್ದೇವೆ. ಈ ಪುರಾಣವಚನದಿಂದ **'ಅಥಾತೋ ಬ್ರಹ್ಮ-ಜಿಜ್ಞಾಸಾ'** ಇತ್ಯಾದಿ ವ್ಯಾಸಸೂತ್ರಗಳೇ ಉಪನಿಷತ್ ಪ್ರತಿಪಾದ್ಯವಾದ ಬ್ರಹ್ಮ ಸ್ವರೂಪವನ್ನು ನಿರ್ಣಯಿಸಲು ತೊಡಗಿವೆಯೆಂದು ಸಿದ್ಧವಾಗುತ್ತದೆ. ಆದ್ದರಿಂದ ವ್ಯಾಸಸಂಮತವಾದ ಕೇವಲಾದ್ವೈತದಲ್ಲಿಯೇ ಸಕಲ ಶ್ರುತಿಗಳ ಮಹಾತಾತ್ಪರ್ಯವೆಂಬುದಾಗಿ ಮನಸ್ಸಿಲ್ಲದಿದ್ದರೂ ಅವಶ್ಯವಾಗಿ ಒಪ್ಪಿಕೊಳ್ಳಲೇ ಬೇಕಾಗುತ್ತದೆ.

ಈಗ ಒಂದು ಶಂಕೆಯನ್ನು ಮಾಡಬಹುದು: ''ಸರ್ವಜ್ಞರಾದ ಕಪಿಲ, ಕಣಾದ, ಗೌತಮ, ಪತಂಜಲಿ ಮತ್ತು ಜೈಮಿನಿಗಳು ದ್ವೈತಶಾಸ್ತ್ರವನ್ನು ರಚಿಸಿರುವುದರಿಂದ **'ಭೂಯೋಽನುಗ್ರಹ'** ನ್ಯಾಯಾನುಸಾರವಾಗಿ ಬಹಳ ಮಂದಿ ಒಪ್ಪಿರುವ ದ್ವೈತವೇ ಗ್ರಾಹ್ಯವಾಗಲಿ. ವ್ಯಾಸರೊಬ್ಬರು ಮಾತ್ರ ಅಂಗೀಕರಿಸಿರುವ ಅದ್ವೈತವನ್ನು ಒಪ್ಪುವುದು ಯುಕ್ತವೆ ?'' ಈ ಪ್ರಶ್ನೆಗೆ ಒಂದು ವೇಳೆ ಹೀಗೆ ಸಮಾಧಾನವನ್ನು ಯಾರಾದರೂ ಹೇಳಬಹುದು. ಏನೆಂದರೆ, ''**ಶತಮಪ್ಯಂಧಾನಾಂ ನ ಪಶ್ಯತಿ**'' ಎಂಬ ನ್ಯಾಯವುಂಟು. ಕುರುಡರು ನೂರುಮಂದಿ ಸೇರಿದರೂ ಒಂದು ವಸ್ತುವನ್ನು ನೋಡಲಾರರು ಎಂದು ಅದರ ಅರ್ಥ. ಹಾಗೆಯೇ ಕಪಿಲಾದಿಗಳು ಭ್ರಾಂತರಾದ್ದರಿಂದ ಬ್ರಹ್ಮಸ್ವರೂಪವನ್ನು ಅವರು ಸರಿಯಾಗಿ ತಿಳಿದು-

ಕೊಳ್ಳಲಿಲ್ಲ. ''ಈ ಸಮಾಧಾನವು ಸರಿಯಲ್ಲ. ಏಕೆಂದರೆ, ಕಪಿಲಾದಿ-ಮಹರ್ಷಿಗಳು ಸರ್ವಜ್ಞರಾದ್ದರಿಂದ ಅವರಿಗೆ ಭ್ರಮೆಯುಂಟಾಗಿದೆ-ಯೆಂಬುದು ಅನುಚಿತ.''

ಈ ಶಂಕೆಗೆ ನಮ್ಮ ಸಮಾಧಾನವಿದು: ಜಗತ್ತಿಗೆ ಪ್ರಕೃತಿಯು ಕಾರಣ, ಪರಮಾಣು ಕಾರಣ ಇತ್ಯಾದಿಯಾಗಿ ಭಿನ್ನಭಿನ್ನರೀತಿಯಲ್ಲಿ ವಾದಿಸುವ ಕಪಿಲ, ಕಣಾದಾದಿ ಋಷಿಗಳು ಪರಸ್ಪರ ವಿರುದ್ಧವಾದ ಶಾಸ್ತ್ರಗಳನ್ನು ರಚಿಸಿರುತ್ತಾರೆ. ಆದ್ದರಿಂದ ಅವರಲ್ಲಿ ಐಕಮತ್ಯವಿಲ್ಲ. ಹೀಗಿರಲು 'ಭೂಯೋಽನುಗ್ರಹನ್ಯಾಯ'ವನ್ನು ಉದಾಹರಿಸುವುದು ಸರಿಯಲ್ಲ. ಆದುದರಿಂದಲೇ ಅಭಿಯುಕ್ತರು -

**ಕಪಿಲೋ ಯದಿ ಸರ್ವಜ್ಞಃ ಕಣಾದೋ ನೇತಿ ಕಾ ಪ್ರಮಾ ।**
**ತಾವುಭೌ ಯದಿ ಸರ್ವಜ್ಞೌ ಮತಭೇದಃ ಕಥಂ ತಯೋಃ ॥**

ಎಂದು ಹೇಳಿದ್ದಾರೆ.

''ಕಪಿಲರು ಸರ್ವಜ್ಞರಾದರೆ ಕಣಾದರು ಸರ್ವಜ್ಞರಲ್ಲವೆಂಬುದಕ್ಕೆ ಪ್ರಮಾಣವೇನು ? ಇಬ್ಬರೂ ಸರ್ವಜ್ಞರಾದರೆ ಅವರಲ್ಲಿ ಭಿನ್ನಾಭಿಪ್ರಾಯ ಬರಲು ಕಾರಣವೇನು ?'' ವಸ್ತುತಃ ಕಣಾದ, ಗೌತಮ, ವ್ಯಾಸ, ಕಪಿಲ, ಪತಂಜಲಿ ಮತ್ತು ಜೈಮಿನಿಗಳೆಂದು ಪ್ರಸಿದ್ಧರಾದ ಷಡ್ದರ್ಶನಕಾರರ ಸಿದ್ಧಾಂತಗಳಲ್ಲಿ ಯಾವುದೋ ಒಂದು ಸಿದ್ಧಾಂತವು ವ್ಯಾಸ ಕಪಿಲಾದಿ ಸಕಲಮಹರ್ಷಿಗಳಿಗೂ ಸಂಮತವೆಂದು ಒಪ್ಪಿಕೊಳ್ಳಬೇಕು. ಹಾಗಲ್ಲದೆ ಅನ್ಯೋನ್ಯ ವಿರುದ್ಧವಾದ ಎಲ್ಲಾ ದರ್ಶನಗಳ ಸಿದ್ಧಾಂತಗಳೂ ಅವರಿಗೆ ಸಂಮತವೆಂಬ ಪಕ್ಷದಲ್ಲಿ ವ್ಯಾಸರೇ ಮೊದಲಾದವರೆಲ್ಲರೂ ಭ್ರಾಂತರೆಂದು ಹೇಳಬೇಕಾದೀತು. ಅವುಗಳಲ್ಲಿ ಯಾವ ಸಿದ್ಧಾಂತವನ್ನು ಒಪ್ಪಿಕೊಂಡರೆ ಸರ್ವರೂ ಭ್ರಾಂತರಲ್ಲವೆಂದು ಸಿದ್ಧಿಸುವುದೋ ಆ ಸಿದ್ಧಾಂತವೇ ಗ್ರಾಹ್ಯ-ವಾಗುತ್ತದೆ. ಕಪಿಲಾದಿಗಳ ಸಿದ್ಧಾಂತವಾದ ದ್ವೈತಾದಿ ವಿಷಯವು ವೇದ ವಿರುದ್ಧವಾದ್ದರಿಂದ ಅದನ್ನು ಒಪ್ಪಿದರೆ ಅವರು ಭ್ರಾಂತರೆಂಬ ದೋಷ-

ವುಂಟಾಗುವುದು. ಆದಕಾರಣ ಸಕಲೋಪನಿಷತ್ತುಗಳಿಗೆ ಸಂಮತವೂ, ವ್ಯಾಸಮಹರ್ಷಿಗಳ ಸಿದ್ಧಾಂತವೂ ಆದ ಕೇವಲಾದ್ವೈತವೇ ಅವರಿಗೆಲ್ಲಾ ಅಭಿಮತವಾಗಿದೆ ಎಂಬ ವಿಷಯದಲ್ಲಿ ಯಾವ ವಿವಾದವೂ ಇಲ್ಲ. ಶ್ರೀಮದ್ಭಾಗವತ ಮೊದಲಾದ ಪುರಾಣಗಳನ್ನು ಪರ್ಯಾಲೋಚಿಸಿದರೆ ಅದ್ವೈತವೇ ಕಪಿಲಾದಿಗಳಿಗೆ ಸಂಮತವೆಂಬುದು ನಿರ್ಣಯವಾಗುತ್ತದೆ. ಭಾಗವತದ ತೃತೀಯ ಸ್ಕಂಧದಲ್ಲಿ ಕಪಿಲರು ದೇವಹೂತಿಗೆ ಈ ರೀತಿ ಉಪದೇಶ ಮಾಡಿದ್ದಾರೆ. "ಕೇವಲ ಜ್ಞಾನವು ಪರಬ್ರಹ್ಮ, ಪರಮಾತ್ಮ, ಈಶ್ವರ, ಪುರುಷ ಎಂದು ಹೆಸರುಗಳನ್ನು ಪಡೆದಿದೆ. ಒಬ್ಬನೇ ಭಗವಂತನು ದ್ರಷ್ಟೃ, ದೃಶ್ಯ ಮೊದಲಾದ ಭೇದಗಳಿಂದ ಕಂಡುಬರುತ್ತಾನೆ. ಜ್ಞಾನ ಸ್ವರೂಪವೂ ಅದ್ವಿತೀಯವೂ, ನಿರ್ಗುಣವೂ ಆದ ಬ್ರಹ್ಮವು ಶಬ್ದಾದಿ ಧರ್ಮವನ್ನು ಹೊಂದಿದ ಪದಾರ್ಥವಾಗಿ ಭ್ರಮೆಯಿಂದ ತೋರುತ್ತದೆ." ಈ ವಚನಗಳನ್ನು ನಾವು ಹಿಂದೆ ಉದಾಹರಿಸಿದ್ದೇವೆ. ಇದರಿಂದ ಕಪಿಲರಿಗೆ ಅದ್ವೈತವೇ ಅಭಿಮತವೆಂದು ನಿಶ್ಚಯವಾಗುತ್ತದೆ. ಹಾಗೆಯೇ ಬ್ರಹ್ಮ-ವೈವರ್ತಪುರಾಣದಲ್ಲಿ ಗೌತಮರು ಸ್ತೋತ್ರ ಮಾಡಿದ್ದಾರೆ. "ಅದ್ವಿತೀಯನೂ, ಶಂಭುವೂ, ಪರತತ್ತ್ವವೂ, ಸ್ವಯಂಪ್ರಕಾಶನೂ, ವಿಶ್ವಕಾರಣನೂ ಆದ ಜಪ್ಯೇಶ್ವರನಿಗೆ [೯] ನಮಸ್ಕಾರವು. ಚೈತನ್ಯಶಕ್ತಿಯೂ, ಜಡಶಕ್ತಿಯೂ, ಅವುಗಳ ಕಾರ್ಯಗಳೂ, ಆ ಕಾರ್ಯಭೇದಗಳೂ ಪರಮಾರ್ಥ-ದಲ್ಲಿ ಯಾರ ಸ್ವರೂಪವೇ ಆಗಿವೆಯೋ, ಯಾರಿಂದ ಬೇರೆಯಾಗಿ ಇಲ್ಲವೋ ಅಂತಹ ಅದ್ವೈತ ಸ್ವರೂಪಿಯಾದ ಜಪ್ಯೇಶ್ವರನಿಗೆ ನಮಸ್ಕಾರವು. ಉತ್ತಮ, ಮಧ್ಯಮ, ಅಧಮರೆಂಬ ನಾನಾ ವಿಧರಾದ ಜೀವರು ಪರಮಾರ್ಥದಲ್ಲಿ ಯಾವ ಸಾಂಬನಾದ ಮಹೇಶ್ವರನಿಗಿಂತ ಅತಿರಿಕ್ತ-ರಲ್ಲವೋ ಅಂತಹ ಸರ್ವಸಾಕ್ಷಿಯಾದ ಪಂಚನದೇಶ್ವರನಿಗೆ ನಮಸ್ಕಾರವು. ಯಾರ ಅಸ್ತಿತ್ವವೇ ಜಗತ್ತಿನ ಅಸ್ತಿತ್ತ್ವವೋ, ಯಾರ ಅಸ್ತಿತ್ತ್ವವನ್ನು ಬಿಟ್ಟು

೯. ಪಂಚನದಕ್ಷೇತ್ರದಲ್ಲಿ ಈಶ್ವರನು ಜಪ್ಯೇಶ್ವರ, ಪಂಚನದೇಶ್ವರ, ಪ್ರಣತಾರ್ತಿ-ಹರ ಎಂಬ ಮೂರು ನಾಮಗಳಿಂದ ಪ್ರಸಿದ್ಧನಾಗಿದ್ದಾನೆ.

ಜಗತ್ತೇ ಇಲ್ಲವೋ, ಯಾರ ಪ್ರಕಾಶದಿಂದ ಜಗತ್ತು ಪ್ರಕಾಶಿಸುತ್ತಿದೆಯೋ, ಯಾರನ್ನು ಬಿಟ್ಟು ಅತಿರಿಕ್ತವಾದ ಜಗತ್ತೇ ಇಲ್ಲವೋ ಸೂರ್ಯ, ಚಂದ್ರ, ಅಗ್ನಿಗಳು ಯಾರ ಪ್ರಕಾಶದಿಂದ ಸದಾ ಪ್ರಕಾಶಿಸುತ್ತಿರುವರೋ ಅಂತಹ ಅದ್ವೈತ ಸ್ವರೂಪಿಯಾದ ಜಪ್ಯೇಶ್ವರನಿಗೆ ನಮಸ್ಕಾರವು. ಯಾರ ಆನಂದವು ಸಕಲರ ಆನಂದರೂಪವಾಗಿ ಸ್ವಯಂ ಪ್ರಕಾಶಿಸುತ್ತದೆಯೋ, ಯಾವ ಶಿವನು ಪರಮಾನಂದ ಸ್ವರೂಪನಾಗಿ ಸಕಲ ಪ್ರಾಣಿಗಳಲ್ಲಿಯೂ ಇರುವನೋ ಆ ಸರ್ವಸಾಕ್ಷಿಯಾದ ಜಪ್ಯೇಶ್ವರನಿಗೆ ನಮಸ್ಕಾರ'' ಈ ಸ್ತೋತ್ರದಿಂದ ಗೌತಮರಿಗೆ ಕೇವಲಾದ್ವೈತವೇ ಸಂಮತವೆಂದು ಗೊತ್ತಾಗುತ್ತದೆ.

ಶಿವಪುರಾಣದ ಏಕಾದಶರುದ್ರಸಂಹಿತೆಯಲ್ಲಿ ವ್ಯಾಸ ಜೈಮಿನಿಗಳ ಸಂವಾದವು ಬಂದಿದೆ. ಜೈಮಿನಿ - ''ಹೇ ವ್ಯಾಸಮಹರ್ಷಿಗಳೆ, ನಾನು ನಿಮಗೆ ಸಾಕ್ಷಾತ್ ಶಿಷ್ಯನಾಗಿ ಒಳ್ಳೆಯ ಶಿಕ್ಷಣವನ್ನು ಪಡೆದಿದ್ದೇನೆ. ಆದರೂ ನನಗೆ ಅಪರೋಕ್ಷಜ್ಞಾನ ಉಂಟಾಗಿಲ್ಲ, ಕರುಣೆಯಿಂದ ನನಗೆ ಮೋಕ್ಷೋಪಾಯವನ್ನು ಹೇಳಿರಿ'' ಆಗ ಪರಮ ದಯಾಳುಗಳಾದ ವ್ಯಾಸ-ಮುನಿಗಳು ಜೈಮಿನಿಯನ್ನೂ, ನನ್ನನ್ನೂ (ಸೂತರನ್ನೂ) ಕರೆದು ರಹಸ್ಯದಲ್ಲಿ ಹೀಗೆ ಹೇಳಿದರು-

ವ್ಯಾಸ- ''ಹೇ ವತ್ಸ, ನೀನು ಕೇಳಿದುದು ಒಳ್ಳೆಯದಾಯಿತು. ನಿನಗೂ, ಇತರರಿಗೂ ಹಿತಕಾರಿಯೂ, ಮೋಕ್ಷಪ್ರದವೂ ಆದ ಉಪಾಯವನ್ನು ಹೇಳುತ್ತೇನೆ. ಪರಮೇಶ್ವರನ ಅನುಗ್ರಹದಿಂದ ನನಗೆ ತಿಳಿಯದ ವಿಷಯವಿಲ್ಲ. ಜ್ಞಾನದಿಂದಲೇ ಮೋಕ್ಷವಾಗುತ್ತದೆಯೇ ಹೊರತು ಕೋಟಿಕರ್ಮಗಳಿಂದಲೂ ಆಗುವುದಿಲ್ಲ. ವೇದಾಂತಜನ್ಯವಾದ ಜ್ಞಾನವೇ ಜ್ಞಾನವೆನಿಸಿಕೊಳ್ಳುವುದು. ಉಳಿದುದು ಅಜ್ಞಾನವೇ ಸರಿ, ಜೀವಬ್ರಹ್ಮರ ಐಕ್ಯದ ಜ್ಞಾನವೇ ಜ್ಞಾನ. ಬೇರೆಯದು ಜ್ಞಾನವಲ್ಲ. ಅಂತಹ ಜ್ಞಾನವು ಪರಮೇಶ್ವರನ ಪ್ರಸಾದದಿಂದಲೂ, ಗುರುವಿನ ಅನುಗ್ರಹ-ದಿಂದಲೂ ಉಪನಿಷದ್ವಾಕ್ಯಗಳ ತಾತ್ಪರ್ಯವನ್ನು ಪರಿಶೀಲಿಸುವುದರಿಂದಲೂ

ಉತ್ಪನ್ನವಾಗುತ್ತದೆ. ಬೇರೆಯಾವ ಪ್ರಕಾರದಿಂದಲೂ ಅದು ಉತ್ಪನ್ನ-ವಾಗುವುದಿಲ್ಲ. ನಾನು ಹೇಳಿದುದು ಸತ್ಯ.'' ಇವೇ ಮುಂತಾದ ವಚನಗಳಿಂದ ಜೈಮಿನಿ ಮಹರ್ಷಿಗಳಿಗೆ ಅದ್ವೈತವೇ ಅಭಿಮತವೆಂದು ನಿಶ್ಚಯವಾಗಿ ಗೊತ್ತಾಗುತ್ತದೆ.

ಸ್ಕಾಂದಪುರಾಣದಲ್ಲಿ ಶೇಷಶಿವಸಂವಾದವು ಹೀಗೆ ಬರುತ್ತದೆ. ಶಿವ- ''ಎಲೈ ಶೇಷನೇ, ಪರಮರಹಸ್ಯವೂ, ಸ್ವಸಂವೇದ್ಯವೂ ಆದ ಮಹಾತೇಜಸ್ವಿ-ಯಾದ ನನ್ನ ಸ್ವರೂಪದ ಯಥಾರ್ಥತೆಯನ್ನು ಹೇಳುತ್ತೇನೆ, ಕೇಳು. ಮಾಯೆಯಿಂದ ಸಮುತ್ಪನ್ನನಾದ ಈ ಜೀವನು ಕರ್ಮಮಾರ್ಗದಲ್ಲಿ ಸಂತೋಷದಿಂದ ನಡೆಯುತ್ತಾನೆ. ಅವನಿಗೆ ಮರಣ, ಸುಖ, ದುಃಖ, ಭಯ ಮತ್ತು ಶತ್ರುಗಳ ನಿಜಸ್ಥಿತಿಯು ಗೊತ್ತಿಲ್ಲ. ಕುಂಬಾರನು ಮಣ್ಣಿನಲ್ಲಿ ಗಡಿಗೆಯನ್ನು ನಿರ್ಮಿಸುವಂತೆ ಮಾಯೆಯು ನನ್ನಲ್ಲಿ ಸೃಷ್ಟಿ ಮೊದಲಾದ ಕ್ರಿಯೆಗಳನ್ನು ಕಲ್ಪಿಸಿರುತ್ತದೆ. ಸಕಲ, ನಿಷ್ಕಲ ಎಂಬ ಎರಡು ರೂಪಗಳಿವೆ. ಜಿತೇಂದ್ರಿಯರಾದ ಯೋಗಿಗಳು 'ಸಕಲ'ವನ್ನು ಕಣ್ಣಿನಿಂದ ನೋಡ-ಬಹುದು ಮತ್ತು ಧ್ಯಾನಿಸಬಹುದು. 'ನಿಷ್ಕಲ'ವು ಮಾತ್ರ ನಿರಾಕಾರವೂ, ನಿರಂಜನವೂ, ಆಮಯ ರಹಿತವೂ ಆಗಿದೆ. ಅದನ್ನು ನೋಡು-ವುದಕ್ಕಾಗಲಿ, ಧ್ಯಾನಿಸುವುದಕ್ಕಾಗಲಿ, ಯೋಚಿಸುವುದಕ್ಕಾಗಲಿ ಸಾಧ್ಯವಿಲ್ಲ. ಆದರೂ ಯಾರು ನನ್ನನ್ನು ಸದಾ ಧ್ಯಾನಿಸುತ್ತಿರುವರೋ, ದ್ವಂದ್ವ ರಹಿತರೂ, ಅಹಂಕಾರ ಶೂನ್ಯರೂ, ಕಲಿದೋಷವಿಲ್ಲದವರೂ ಆಗಿರುವರೋ ಅವರು 'ನಿಷ್ಕಲ'ವನ್ನು ನೋಡಬಲ್ಲರು. ಎಲೈ ಫಣೀಂದ್ರನೇ, ಜ್ವಲಿಸುತ್ತಿರುವ ಅಗ್ನಿಯಂತೆ ನೇತ್ರವುಳ್ಳ, ಸಹಸ್ರಶೀರ್ಷನಾದ ನಿನ್ನನ್ನು ನೋಡಿದರೆ ಜನರು ಭಯದಿಂದ ಕಂಗೆಡುತ್ತಾರೆ. ಅಂತಹ ನಿನ್ನನ್ನು ಪುತ್ರನನ್ನಾಗಿ ಪಡೆಯಬೇಕೆಂದು ತಪೋಧನನಾದ ಅತ್ರಿಯೂ, ಆತನ ಪತ್ನಿಯಾದ ಅನಸೂಯೆಯೂ ವಿಷ್ಣುವನ್ನು ಬಹುಕಾಲ ಪೂಜಿಸಿದರು. ಆಗ ದಯಾನಿಧಿಯಾದ ವಿಷ್ಣುವು ನಿನ್ನನ್ನು ಪುತ್ರನನ್ನಾಗಿ ಅವರಿಗೆ ಅನುಗ್ರಹಿಸಿದನು. ನೀನು ಗರ್ಭದಿಂದ ಹುಟ್ಟಿಬರುವುದು ಕಷ್ಟವೆಂಬ

ಭಯದಿಂದ ಅತ್ರಿಪತ್ನಿಯ ಅಂಜಲಿಯಲ್ಲಿ ಒಮ್ಮೆಗೇ ಬಾಲಕನಾಗಿ ಕಾಣಿಸಿಕೊಂಡೆ. ಆಗ ಅನಸೂಯೆಯು ಋತುಸ್ನಾನದಿಂದ ಪರಿಶುದ್ಧಳಾಗಿದ್ದಳು. ನಿನಗೆ ಆಗ ಐದು ಹೆಡೆಗಳಿದ್ದವು. ಪುತ್ರಾಭಿಲಾಷಿಣಿಯಾಗಿದ್ದರೂ ಅವಳು ತನ್ನ ಕೈಯಲ್ಲಿ ಬಾಲಕನಾಗಿ ಕಾಣಿಸಿಕೊಂಡ ನಿನ್ನನ್ನು ನೋಡಿ ಭಯದಿಂದ ನೆಲದ ಮೇಲೆ ಹಾಕಿಬಿಟ್ಟಳು. ನೀನು ಅಂಜಲಿಯಿಂದ ಬಿದ್ದುದರಿಂದ ಪತಂಜಲಿಯೆಂದು ಹೆಸರಾಯಿತು. ಪತಂಜಲಿಯೆಂಬ ಹೆಸರಿನಿಂದ ಪ್ರಸಿದ್ಧನಾಗಿ ನೀನು ಸತತವೂ ನನ್ನನ್ನು ಧ್ಯಾನಿಸುತ್ತಾ ಈ ಪ್ರಜ್ಞಾಶಕ್ತಿಯನ್ನು ಪಡೆದಿರುವೆ.'' ಇವೇ ಮುಂತಾದ ವಚನಗಳಿಂದ ಪತಂಜಲಿ ಮುನಿಗಳಿಗೂ ಅದ್ವೈತವೇ ಅಭಿಮತವೆಂದು ನಿರ್ಧಾರವಾಗುತ್ತದೆ. ಹೀಗೆಯೇ ಕಣಾದರಿಗೂ ಅದ್ವೈತವೇ ಅಭಿಮತವೆಂದು ತಿಳಿಯಬೇಕು.

ಆದ್ದರಿಂದ ಕಪಿಲಾದಿಗಳಿಗೆ ಕೇವಲಾದ್ವೈತವೇ ಸಂಮತವಾದ ಕಾರಣ ಅವರಲ್ಲಿ ಯಾರಿಗೂ ಭ್ರಮೆಯಾಗಿದೆಯೆಂದು ಕಲ್ಪಿಸಬೇಕಾದದ್ದಿಲ್ಲ. ಇಲ್ಲಿ ಒಂದು ಶಂಕೆಯಾಗಬಹುದು. ''ನೀವು ಹೇಳಿದಂತೆ ಕಪಿಲಾದಿಗಳಿಗೆ ಕೇವಲಾದ್ವೈತವು ಸಂಮತವಾದಲ್ಲಿ ಅವರು ವ್ಯಾಸರಿಗೆ ಸಂಮತವಾದ ಅದ್ವೈತವನ್ನು ನಿರಾಕರಿಸುವ ಸಂಭವವಿಲ್ಲ. ಆಗ ಕೇವಲಾದ್ವೈತದ ಅನುವಾದ ಬಲದಿಂದ ವ್ಯಾಸರಿಗೆ ಅದ್ವೈತವು ಸಂಮತವೆಂದು ಸಮರ್ಥಿಸುವ ಪ್ರಯತ್ನ ವ್ಯರ್ಥವಾಗುತ್ತದೆ ಅಲ್ಲವೆ?'' ಇದಕ್ಕೆ ಸಮಾಧಾನ - ಅವರಿಗೆ ಕೇವಲಾದ್ವೈತವು ಮುಖ್ಯತಾತ್ಪರ್ಯ ವಾಗಿದ್ದರೂ ತಾವು ಸ್ಥಾಪಿಸಬೇಕೆಂದಿರುವ ಸಿದ್ಧಾಂತದಲ್ಲಿ ಬರಿಯ ಅಭಿಮಾನವನ್ನಿಟ್ಟುಕೊಂಡು ಅದ್ವೈತವನ್ನು ನಿರಾಕರಿಸುವ ಸಂಭವವಿದೆ. ಬೇರೆಯೊಂದು ಕಾರ್ಯದಲ್ಲಿ ಅಭಿನಿವೇಶವನ್ನು ಇಟ್ಟುಕೊಂಡು ಸ್ವಸಂಮತವಾದ ವಿಷಯವನ್ನೇ ನಿರಾಕರಿಸುವುದು ಅಭಿಯುಕ್ತರಲ್ಲಿಯೂ ಕಂಡುಬರುತ್ತದೆ. ಹೇಗೆಂದರೆ, ಶ್ರೀಮದ್ರಾಮಾಯಣದಲ್ಲಿ ಶ್ರೀರಾಮ ಜಾಬಾಲಿ ಸಂವಾದವು ಈ ರೀತಿ ನಡೆಯುತ್ತದೆ. ಜಾಬಾಲಿ- ''ಎಲೈ ಶ್ರೀರಾಮನೇ, ಅಷ್ಟಕಶ್ರಾದ್ಧವು ಪಿತೃದೇವತೆಗಳಿಗೆ ಸಲ್ಲುವುದೆಂದು ಆಚರಿಸುತ್ತಾರೆ. ಅನ್ನಕ್ಕೆ ಬಂದ

ಉಪದ್ರವವನ್ನು ನೋಡು. ಮೃತನು ಅನ್ನವನ್ನು ತಿನ್ನುತ್ತಾನೆಯೆ ? ಇಲ್ಲಿ ಒಬ್ಬನು ಅನ್ನವನ್ನು ಊಟಮಾಡಿದರೆ ಅದು ಇನ್ನೊಂದು ಕಡೆ ಇನ್ನೊಬ್ಬನಿಗೆ ಸೇರಿ ತೃಪ್ತಿಯನ್ನು ಉಂಟುಮಾಡುತ್ತದೆಯೇ ? ಹಾಗಿದ್ದರೆ ಪರಸ್ಥಳದಲ್ಲಿ ಸಂಚರಿಸುತ್ತಿರುವವನಿಗೋಸ್ಕರ ಅವನಿಗೆ ತೃಪ್ತಿಯಾಗಲೆಂದು ಇಲ್ಲೇಕೆ ಶ್ರಾದ್ಧವನ್ನು ಮಾಡಬಾರದು ? ಆಗ ಪ್ರವಾಸದ ದಾರಿಯಲ್ಲಿ ಬುತ್ತಿಯು ಬೇಕಾಗುವುದಿಲ್ಲ. ಬುದ್ಧಿವಂತರು ದಾನವನ್ನು ಪಡೆಯುವ ಉದ್ದೇಶದಿಂದ ಯಜ್ಞಮಾಡು, ದಾನಮಾಡು, ದೀಕ್ಷಿತನಾಗು, ತಪಸ್ಸನ್ನಾ-ಚರಿಸು, ತ್ಯಾಗಮಾಡು ! ಎಂಬುದಾಗಿ ಉಪದೇಶಿಸುವ ಗ್ರಂಥಗಳನ್ನು ಬರೆದಿದ್ದಾರೆ. ಎಲೈ ಬುದ್ಧಿಶಾಲಿಯೇ, ಪರಲೋಕವಿಲ್ಲವೆಂದೇ ತಿಳಿ, ಪ್ರತ್ಯಕ್ಷವಾದುದನ್ನೇ ಮಾಡು. ಪರೋಕ್ಷವನ್ನು ಆಚೆಗೆ ತಳ್ಳಿಹಾಕು. ಸರ್ವಲೋಕಕ್ಕೂ ಆದರ್ಶಪ್ರಾಯವಾದ ವಿದ್ವಾಂಸರ ದೃಷ್ಟಿಯನ್ನ-ವಲಂಬಿಸಿ ನೀನು ಭರತನಿಂದ ರಾಜ್ಯವನ್ನು ಸ್ವೀಕರಿಸು.''

ಶ್ರೀರಾಮ- ''ಸತ್ಯ, ಧರ್ಮ, ಪರಾಕ್ರಮ, ಭೂತದಯೆ, ಪ್ರಿಯವಾದ ಮಾತನಾಡುವಿಕೆ, ದೇವ-ಬ್ರಾಹ್ಮಣ-ಅತಿಥಿಗಳ ಪೂಜೆ ಇವುಗಳು ಸ್ವರ್ಗಕ್ಕೆ ಮಾರ್ಗವೆಂದು ವಿದ್ವಾಂಸರು ಹೇಳುತ್ತಾರೆ. ಈ ರೀತಿಯಲ್ಲಿ ಮುಖ್ಯಫಲವನ್ನು ಕೊಡುವ ಮಾರ್ಗವನ್ನು ಯಥಾವತ್ತಾಗಿ ಅರಿತು ಪ್ರಮಾದವಿಲ್ಲದಂತೆ ಸಕಲ ಧರ್ಮಾನುಷ್ಠಾನಗಳನ್ನು ಮಾಡಿ ಉತ್ತಮ ಲೋಕ ಪ್ರಾಪ್ತಿಯನ್ನು ಬಯಸುತ್ತಾರೆ. ವಿಷಮಬುದ್ಧಿಯೂ, ಇಂತಹ ನಿಂದ್ಯಬುದ್ಧಿಯಿಂದ ವ್ಯವಹರಿಸುವವನೂ, ನಾಸ್ತಿಕನೂ, ಧರ್ಮ ಮಾರ್ಗ-ಭ್ರಷ್ಟನೂ ಆದ ನಿನ್ನನ್ನು ನನ್ನ ತಂದೆಯು ಹತ್ತಿರಕ್ಕೆ ಸೇರಿಸಿದುದನ್ನು ನಾನು ನಿಂದಿಸಬೇಕಾಗಿದೆ. ಕಳ್ಳನು ಹೇಗೆ ದಂಡನೆಗೆ ಅರ್ಹನೋ ಹಾಗೆ ಬುದ್ಧ ಮತಾವಲಂಬಿಯೂ ದಂಡನೆಗೆ ಅರ್ಹನಾಗುತ್ತಾನೆ. ಏಕೆಂದರೆ, ಬೌದ್ಧನು ನಾಸ್ತಿಕನು, ಕಳ್ಳನಿಗಿಂತ ನಾಸ್ತಿಕನಿಂದ ಪ್ರಜೆಗಳಿಗೆ ಹೆಚ್ಚು ಭಯವಿದೆ. ಪಂಡಿತನು ನಾಸ್ತಿಕನೊಡನೆ ಸೇರಬಾರದು. ನಿನಗಿಂತ ಪ್ರಾಚೀನರೂ, ನವೀನರೂ ಬಹಳ ಒಳ್ಳೆಯ ಕಾರ್ಯಗಳನ್ನು ಮಾಡಿದ್ದಾರೆ. ಅವರು

ಇಹಲೋಕ ಪರಲೋಕಗಳನ್ನು ಜಯಿಸಿದವರು. ಅವರು ಶುಭ-ಕಾರ್ಯಗಳನ್ನು, ಹೋಮ, ಹವನಗಳನ್ನೂ ಮಾಡಿದ್ದಾರೆ. ಮುನಿಗಳು ಲೋಕದಲ್ಲಿ ಧರ್ಮಾಸಕ್ತರೂ, ಸಜ್ಜನ ಸಮೇತರೂ, ತೇಜಸ್ವಿಗಳೂ, ದಾನ ಮಾಡತಕ್ಕವರೂ, ಅಹಿಂಸಕರೂ, ದೋಷರಹಿತರೂ, ಪೂಜ್ಯರೂ ಆಗಿರುತ್ತಾರೆ.'' ಈ ರೀತಿಯಾಗಿ ಕೋಪದಿಂದ ಮಾತನಾಡುತ್ತಾ ಇದ್ದ ಮಹಾತ್ಮನೂ, ಮಹಾಸತ್ತ್ವನೂ ಆದ ಶ್ರೀರಾಮನನ್ನು ಕುರಿತು ಜಾಬಾಲಿಯು ಆಸ್ತಿಕ ಮತಾನುಸಾರಿಯಾದ ಸತ್ಯವಾದ ಮಾತನ್ನು ಸಮಾಧಾನ ಪಡಿಸುವುದಕ್ಕೋಸ್ಕರ ಹೀಗೆ ಹೇಳಿದನು -

ಜಾಬಾಲಿ- ''ಎಲೈ ಶ್ರೀರಾಮನೇ, ನಾನು ನಾಸ್ತಿಕರ ಮಾತನ್ನು ಹೇಳುತ್ತಿಲ್ಲ. ನಾನು ನಾಸ್ತಿಕನೂ ಅಲ್ಲ. ಪರಲೋಕಾದಿಗಳು ಇಲ್ಲ-ವೆಂಬುದೂ ಸರಿಯಲ್ಲ. ಸಮಯವನ್ನು ಪರೀಕ್ಷಿಸಿನೋಡಿ ನಾಸ್ತಿಕ-ನಾಗಿದ್ದೇನೆ! ಮುಂದೆ ಬೇರೆ ಸಮಯದಲ್ಲಿ ಪುನಃ ನಾನು ಆಸ್ತಿಕ-ನಾದೇನು. ಅಂತಹ ಸಮಯ ಈಗ ಪ್ರಾಪ್ತವಾದ್ದರಿಂದ ನಾನು ನಾಸ್ತಿಕ ವಾದವನ್ನು ಮಾಡಿದೆನು. ನಿನ್ನನ್ನು ಒಪ್ಪಿಸಿ ನಗರಕ್ಕೆ ಹಿಂದಿರುಗಿಸು-ವುದಕ್ಕೋಸ್ಕರ ನಾನು ಹೀಗೆ ಹೇಳಿದೆನು.''

ಆಗ ರಾಮನು ಕುಪಿತನಾಗಿದ್ದುದನ್ನು ತಿಳಿದು ವಸಿಷ್ಠರು ಹೇಳುತ್ತಾರೆ. ವಸಿಷ್ಠ - ''ಹೇ ರಾಮ, ಜಾಬಾಲಿ ಮುನಿಗಳಿಗೂ ಈ ಲೋಕದ ಯಾತಾ-ಯಾತಗಳು (ನಿಜಸ್ವರೂಪವು) ಗೊತ್ತಿವೆ. ನಿನ್ನನ್ನು ಹಿಂದಿರುಗಿಸುವ ಉದ್ದೇಶದಿಂದ ಹಾಗೆ ಅವರು ಹೇಳಿದ್ದಾರೆ.''

ಈ ಮೇಲ್ಕಂಡ ಸಂವಾದವನ್ನು ಪರೀಕ್ಷಿಸಿದರೆ, ಹೀಗೆ ವಸ್ತುತಃ ಧರ್ಮ ಮಾರ್ಗಪ್ರವರ್ತಕರಾದ ಜಾಬಾಲಿ ಮಹರ್ಷಿಗಳು ಶ್ರೀರಾಮನನ್ನು ಹಿಂದಿರುಗಿಸುವುದಕ್ಕೋಸ್ಕರ ನಾಸ್ತಿಕ ಪಕ್ಷವನ್ನು ಆಶ್ರಯಿಸಿ ಧರ್ಮಮಾರ್ಗ-ವನ್ನು ನಿರಾಕರಿಸಿರುತ್ತಾರೆಂದು ಗೊತ್ತಾಗುತ್ತದೆ. ಜಾಬಾಲಿಗಳಿಗೂ ನಾಸ್ತಿಕ ಮತವನ್ನು ಸ್ಥಾಪಿಸುವುದರಲ್ಲಿಯೂ, ಧರ್ಮಮಾರ್ಗವನ್ನು ಖಂಡಿಸು-

ವುದರಲ್ಲಿಯೂ ತಾತ್ಪರ್ಯವಿಲ್ಲದಿದ್ದರೂ ತಾವು ಅನುವಾದಿಸಿದ ಧರ್ಮ-ಮಾರ್ಗದಲ್ಲಿ ತಾತ್ಪರ್ಯವಿದ್ದೇ ಇದೆ. ಹಾಗೆಯೇ ಕಪಿಲಾದಿಗಳಿಗೂ ದ್ವೈತಸ್ಥಾಪನೆ, ಅದ್ವೈತ ಖಂಡನೆಗಳಲ್ಲಿ ತಾತ್ಪರ್ಯವಿಲ್ಲದಿದ್ದರೂ ತಾವು ಅನುವಾದಿಸಿದ ಕೇವಲಾದ್ವೈತದಲ್ಲಿ ತಾತ್ಪರ್ಯವಿದ್ದೇ ಇದೆ. ಆದ್ದರಿಂದ ಅವರ ಅನುವಾದ ಬಲದಿಂದ ಅದ್ವೈತವು ವ್ಯಾಸಸಂಮತವೆಂದು ಸಮರ್ಥನೆ ಮಾಡುವ ನಮ್ಮ ಪ್ರಯತ್ನವು ಸಫಲವೇ ಸರಿ.

ಹಾಗಾದರೆ ಉಪನಿಷತ್ತುಗಳಿಗೆ ವಿರುದ್ಧವಾದ ಅರ್ಥವನ್ನು ಪ್ರತಿಪಾದಿಸುವ ಕಪಿಲಾದಿಶಾಸ್ತ್ರಗಳ ಗತಿಯೇನು ? ಇದಕ್ಕೆ ಸಮಾಧಾನ-ವೇನೆಂದರೆ - ಉಪನಿಷತ್‌ಸಂಮತವಾದ ಅದ್ವೈತಮತವನ್ನು ತಿಳಿಯಲು ಬೇಕಾದ ಸಾಧನಗಳನ್ನು ಈ ಶಾಸ್ತ್ರಗಳು ಪ್ರತಿಪಾದಿಸುತ್ತವೆ. ಸಾಂಖ್ಯಶಾಸ್ತ್ರವು ಆತ್ಮನ ಅಸಂಗತ್ತ್ವ, ಉದಾಸೀನತ್ವ, ಸಾಕ್ಷಿರೂಪತ್ತ್ವಗಳನ್ನು ವಿವೇಚನೆ ಮಾಡಿಕೊಡುತ್ತದೆ, ಯೋಗಶಾಸ್ತ್ರವು ವೇದಾಂತ ಜ್ಞಾನಕ್ಕೆ ಬೇಕಾದ ಯಮಾದ್ಯಷ್ಟಾಂಗಯೋಗಗಳನ್ನು ಪ್ರತಿಪಾದಿಸುತ್ತದೆ. ಜೈಮಿನಿಯ ಮೀಮಾಂಸಾಶಾಸ್ತ್ರವು ಚಿತ್ತಶುದ್ಧಿಯನ್ನುಂಟುಮಾಡುವ ಧರ್ಮದ ಸ್ವರೂಪ-ವನ್ನು ವಿಚಾರಮಾಡುತ್ತದೆ. ಗೌತಮನ ನ್ಯಾಯಶಾಸ್ತ್ರವು ಷೋಡಶ ಪದಾರ್ಥಗಳನ್ನೂ, ಕಣಾದನ ವೈಶೇಷಿಕ ಶಾಸ್ತ್ರವೂ ಸಪ್ತಪದಾರ್ಥಗಳನ್ನೂ ಪ್ರತಿಪಾದಿಸಿ ಆತ್ಮನು ದಶೇಂದ್ರಿಯಗಳಿಗೆ ವ್ಯತಿರಿಕ್ತನು ಎಂಬುದನ್ನು ನಿರ್ಣಯಿಸುತ್ತವೆ. ಈ ಶಾಸ್ತ್ರಗಳು ಪ್ರತಿಪಾದಿಸುವ ವಿಷಯಗಳು ಅದ್ವೈತ ಜ್ಞಾನಕ್ಕೆ ಸಾಧನಗಳಾದ್ದರಿಂದ ಇವುಗಳಿಂದ ಉಪಯೋಗವುಂಟು. ಇಲ್ಲಿ ಪ್ರಶ್ನೆ ಮಾಡಬಹುದು - ಹಾಗಾದರೆ ಇವು ಅದ್ವೈತಜ್ಞಾನಕ್ಕೆ ಸಾಧನವಾದ ವಿಷಯಗಳನ್ನು ಮಾತ್ರ ಪ್ರತಿಪಾದಿಸಬೇಕು. ಅದಕ್ಕೆ ವಿರುದ್ಧವಾದ ಪ್ರಪಂಚ ಸತ್ಯತ್ತ್ವ ಮೊದಲಾದ ವಿಷಯಗಳನ್ನು ಏಕೆ ಪ್ರತಿಪಾದಿಸುತ್ತವೆ ? ಇದಕ್ಕೆ ಸಮಾಧಾನವೆಂದರೆ, ವೇದಾಂತ ಶಾಸ್ತ್ರದ ಅದ್ವೈತಮತವನ್ನು ತಿಳಿದುಕೊಳ್ಳಲಾರದ ಮಂದಬುದ್ಧಿಗಳಿಗೆ 'ಸ್ಥೂಲಾರುಂಧತೀ' ನ್ಯಾಯ-ದಿಂದ ಕ್ರಮವಾಗಿ ಬ್ರಹ್ಮಜ್ಞಾನವನ್ನುಂಟುಮಾಡಿಕೊಡಬೇಕಾಗಿದೆ. ಅದಕ್ಕೆ

ಅನುಕೂಲವಾಗಿ ಮೊದಲು ಶಾಸ್ತ್ರದಲ್ಲಿ ಪ್ರವೃತ್ತಿಯಾಗಬೇಕಾಗಿದೆ. ಜನ್ಮಾಂತರದ ವಾಸನೆಗೆ ಅನುಗುಣವಾಗಿ ಬಹುಜನರು ಪ್ರಪಂಚವನ್ನು ಸತ್ಯವೆಂದು ಭಾವಿಸಿದ್ದಾರೆ. ವಸ್ತುತಃ ಪ್ರಪಂಚವು ಅಸತ್ಯವಾದರೂ ಆಯಾ ಜನರಿಗೆ ಅನುಗುಣವಾಗಿ ಪ್ರಪಂಚವು ಸತ್ಯ ಎಂದು ಬೋಧಿಸುವುದು ಅವಶ್ಯಕವಾದ್ದರಿಂದ ಆ ರೀತಿಯಲ್ಲಿ ಪ್ರತಿಪಾದಿಸಿವೆ.

ಪಾಶುಪತ ಪಂಚರಾತ್ರ ಮೊದಲಾದ ಶಾಸ್ತ್ರಗಳ ತಾತ್ಪರ್ಯವೂ ಹೀಗೆಯೇ ಇದೆಯೆಂದು ತಿಳಿಯಬೇಕು. ಏಕೆಂದರೆ, ಇವುಗಳನ್ನು ರಚಿಸಿದ ಶಿವ ವಿಷ್ಣು ಮೊದಲಾದವರು ಶ್ರುತಿ ಪುರಾಣಾದಿಗಳಲ್ಲಿ ಅದ್ವೈತವನ್ನೇ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಆದ್ದರಿಂದ ಅವರ ಪಾಶಪತಾದಿತಂತ್ರ ಗ್ರಂಥಗಳು ಅವಿರುದ್ಧವಾಗಿ ಅದ್ವೈತವನ್ನೇ ಪ್ರತಿಪಾದಿಸುತ್ತವೆಯೆಂದು ಸಿದ್ಧವಾಗುತ್ತದೆ. ಅದರಲ್ಲಿಯೂ ಪಂಚರಾತ್ರ ಪಾಶುಪತಾದಿ ತಂತ್ರಗಳಲ್ಲಿ ಅದ್ವೈತಮತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ. **'ಪರಕ್ಷೇತ್ರಜ್ಞಯೋರೈಕ್ಯಮಾತ್ಮನಃ ಶ್ರುತಿ-ಚೋದಿತಮ್'** (ಜೀವಾತ್ಮ ಪರಮಾತ್ಮರ ಅಭೇದವು ವೇದಬೋಧಿತ-ವಾಗಿದೆ) ಇತ್ಯಾದಿ ವಚನಗಳು ಪಂಚರಾತ್ರಾಗಮದ ಪಾದ್ಮ ಸಂಹಿತೆಯಲ್ಲಿ ಬಂದಿವೆಯೆಂದು ನಾವು ಹಿಂದೆ ಹೇಳಿದ್ದೇವೆ. ಅದರ ಕಾರಣ ಅವುಗಳಲ್ಲಿ ಕಂಡುಬರುವ ಭೇದವಾಕ್ಯಗಳು ಅದ್ವೈತಜ್ಞಾನಕ್ಕೆ ಉಪಯೋಗಿಯಾದ ಶಿವ ವಿಷ್ಣು ಮುಂತಾದವರ ಉಪಾಸನೆಯನ್ನು ಹೇಳುವುದಕ್ಕಾಗಿಯೆಂದು ಭಾವಿಸಬೇಕು.

ಇನ್ನು ಬೌದ್ಧ ಚಾರ್ವಾಕಾದಿ ವೇದ ಬಾಹ್ಯ ಶಾಸ್ತ್ರಗಳ ತಾತ್ಪರ್ಯವು ಹೀಗೆಯೇ ಇದೆ. ಅವುಗಳನ್ನು ರಚಿಸಿದ ಭಗವಾನ್ ಬುದ್ಧ, ಬೃಹಸ್ಪತಿ ಮುಂತಾದವರು ಅದ್ವೈತವನ್ನೇ ಅಂಗೀಕರಿಸಿದ್ದಾರೆಂದು ಸೂತಸಂಹಿತಾದಿ ಪುರಾಣಗಳಲ್ಲಿ ಉಕ್ತವಾಗಿದೆ. ಆದ್ದರಿಂದ ಬೌದ್ಧಾದಿಗಳ ಗ್ರಂಥಗಳೂ ಅದ್ವೈತಮತದಲ್ಲಿಯೇ ತಾತ್ಪರ್ಯವನ್ನಿಟ್ಟುಕೊಂಡಿವೆಯೆಂಬುದು ಯುಕ್ತ-ವಾಗಿದೆ. ಅವು ಹೇಳುವ ಪ್ರಪಂಚ ಶೂನ್ಯವಾದ ಮುಂತಾದ ವಿಷಯಗಳು ಈ ಪ್ರಪಂಚವು ಹೇಯವೆಂಬುದನ್ನು ಸೂಚಿಸುವುದರ ಮೂಲಕ ಅದ್ವೈತ-

ಜ್ಞಾನಕ್ಕೆ ಉಪಯುಕ್ತವಾದ ವೈರಾಗ್ಯವನ್ನು ಬೋಧಿಸುತ್ತವೆ. ಅವುಗಳಿಗೆ ಪ್ರಪಂಚವು ಶೂನ್ಯವೆಂಬುದರಲ್ಲಿ ತಾತ್ಪರ್ಯವಿಲ್ಲ. ದೇಹವೇ ಆತ್ಮವೆಂದು ಅವು ಪ್ರತಿಪಾದಿಸುವುದರ ತಾತ್ಪರ್ಯ ಹೀಗೆ- ''ನಾನಾ ಜನ್ಮಗಳಲ್ಲಿ ಆರ್ಜಿಸಿದ ಪಾಪ ವಾಸನೆಗಳಿಂದ ತುಂಬಿದ ಜನರಿಗೆ ಆತ್ಮನು ದೇಹಾತಿ-ರಿಕ್ತನು ಎಂಬ ಜ್ಞಾನವು ಬೇಗನೆ ಉಂಟಾಗುವುದಿಲ್ಲ. ಅವರಿಗೆ ಸ್ಥೂಲಾರುಂಧತೀ ನ್ಯಾಯದಿಂದ ಕ್ರಮೇಣ ದೇಹಾತಿರಿಕ್ತನಾದ ಆತ್ಮವನ್ನು ಬೋಧಿಸಬೇಕು.''

ಇಲ್ಲಿ ಒಂದು ಶಂಕೆಯಾಗಬಹುದು - ಸಕಲಶ್ರುತಿಸ್ಮೃತಿಪುರಾಣಗಳಲ್ಲಿ ಅವೈದಿಕ ಶಾಸ್ತ್ರಗಳು ಗ್ರಾಹ್ಯವಲ್ಲವೆಂದು ಪ್ರತಿಪಾದಿಸಿದ್ದಾರೆ. ಹೀಗಿರಲು ಅವು ವೇದಾಂತ ಶಾಸ್ತ್ರೋಪಯೋಗಿಯೆಂದು ಹೇಳುವುದು ಹೇಗೆ ? ನಿಜ; ಆ ಶಾಸ್ತ್ರಗಳು ಬೇರೊಂದು ಅಭಿಪ್ರಾಯದಿಂದ ಪ್ರತಿಪಾದಿಸುವ ಆ ಸಿದ್ಧಾಂತಗಳನ್ನು ಪರಮಾರ್ಥದಲ್ಲಿಯೂ ಸತ್ಯವೆಂದು ಭಾವಿಸಬಾರದು. ನಾವು ಹಿಂದೆ ಹೇಳಿದಂತೆ ಪರಂಪರೆಯಿಂದ ಅವು ವೇದಾಂತ ಶಾಸ್ತ್ರಗಳಿಗೆ ಉಪಯುಕ್ತವಾಗುತ್ತವೆಯೆಂದು ತಿಳಿದು ಆ ಸಿದ್ಧಾಂತಗಳನ್ನು ಗ್ರಹಿಸ-ಬಹುದು. ಆದಕಾರಣ ಬೌದ್ಧ ಚಾರ್ವಾಕ, ಪಾಂಚರಾತ್ರ, ಪಾಶುಪತ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸಾ ಸಾಂಖ್ಯ ಮತ್ತು ಯೋಗ-ಶಾಸ್ತ್ರಗಳು ವೇದಾಂತಶಾಸ್ತ್ರಕ್ಕೆ ಉಪಯೋಗಿಯಾಗುತ್ತವೆ. ಆದ್ದರಿಂದ ಯಾವ ದೋಷವೂ ಇಲ್ಲ.

ಆದ್ದರಿಂದಲೇ ಸೂತಸಂಹಿತೆಯಲ್ಲಿರುವ ಯಜ್ಞವೈಭವಖಂಡದ ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ಹೀಗೆ ಹೇಳಿದೆ - ''ಎಲೈ ಮುನಿಗಳೇ, ಇನ್ನುಮುಂದೆ ನಾನಾ ಶಾಸ್ತ್ರೋಕ್ತ ಮಾರ್ಗಗಳು ಅಧಿಕಾರಿಭೇದದಿಂದ ಹೇಗೆ ಪ್ರಮಾಣವಾಗುತ್ತವೆ ಎಂಬುದರ ನಿರ್ಣಯವನ್ನು ಹೇಳುತ್ತೇನೆ; ಕೇಳಿರಿ. ವೇದಗಳು, ಧರ್ಮಶಾಸ್ತ್ರಗಳು, ಪುರಾಣಗಳು, ಭಾರತ, ವೇದಾಂಗಗಳು, ಉಪವೇದಗಳು, ಕಾಮಿಕಾದ್ಯಾಗಮಗಳು, ಕಾಪಾಲ ಮತ್ತು ವಾತುಲ ಎಂಬ ತಂತ್ರಗಳು, ಅವುಗಳ ಭೇದಗಳು, ಪಾಶುಪತ

ಸೋಮ ಭೈರವ ಮೊದಲಾದ ಆಗಮಗಳು, ಅವುಗಳ ಒಳಭೇದಗಳು, ಅನೇಕ ವಿಧವಾದ ವೈಷ್ಣವಾಗಮಗಳು, ಬ್ರಾಹ್ಮಾಗಮಗಳು, ಬೌದ್ಧ ಮತ್ತು ಜೈನ ಶಾಸ್ತ್ರಗಳು, ಲೋಕಾಯತ, ಬಹು ವಿಸ್ತರವಾದ ತರ್ಕಶಾಸ್ತ್ರ, ಅತ್ಯಂತ ಗಹನವಾದ ಮೀಮಾಂಸಾ ಸಾಂಖ್ಯ ಯೋಗ ಮತ್ತು ನಾನಾ ಭೇದವುಳ್ಳ ಇತರ ಶಾಸ್ತ್ರಗಳು ಇವುಗಳನ್ನೆಲ್ಲಾ ಸರ್ವಜ್ಞನಾದ ಸಾಕ್ಷಾತ್ ಶಿವನು ನಿರ್ಮಿಸಿದ್ದಾನೆ. ಶಿವನ ಅನುಗ್ರಹದಿಂದಲೇ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳೂ ಸಿದ್ಧ ವಿದ್ಯಾಧರ ಯಕ್ಷರಾಕ್ಷಸಾದಿಗಳೂ ಮುನಿಗಳೂ ಮತ್ತು ಮನುಷ್ಯರೂ ಈ ಶಾಸ್ತ್ರಗಳನ್ನೇ ವಿಸ್ತಾರವಾಗಿಯೂ ಕೆಲವು ವೇಳೆ ಸಂಗ್ರಹವಾಗಿಯೂ ಬರೆಯುತ್ತಾರೆ. ಇವು ಅಧಿಕಾರಿ ಭೇದದಿಂದ ಆಯಾ ಅಧಿಕಾರಿಗಳಿಗೆ ತಕ್ಕಂತೆ ಪ್ರಮಾಣಗಳಾಗುತ್ತವೆಯೆಂದೂ ಒಬ್ಬನಿಗೇ ಎಲ್ಲವೂ ಅನ್ವಯಿಸುವುದಿಲ್ಲವೆಂದೂ ವಿದ್ವಾಂಸರು ಹೇಳುತ್ತಾರೆ. ಈ ಶಾಸ್ತ್ರಮಾರ್ಗಗಳನ್ನು ತರ್ಕದಿಂದ ಖಂಡಿಸಬಾರದು. ನದಿಗಳಿಗೆ ಸಮುದ್ರವು ಹೇಗೆ ಪರಮಾವಧಿಯಾದ ಗಮ್ಯಸ್ಥಾನವೋ ಹಾಗೆ ಈ ಶಾಸ್ತ್ರ ಮಾರ್ಗಗಳಿಗೆ ಪರಮೇಶ್ವರನೇ ಗಮ್ಯಸ್ಥಾನ, ಎಂದರೆ ಅವನಲ್ಲಿಯೇ ಪರ್ಯವಸಾನ ಹೊಂದುತ್ತವೆ. ಜನರು ಯಾವ ಯಾವ ಮಾರ್ಗದಲ್ಲಿ ಹೇಳಿದ ಪ್ರಕಾರದಿಂದ ಪರಮೇಶ್ವರನ ಉಪಾಸನೆ ಮಾಡುತ್ತಾರೋ ಅದಕ್ಕೆ ತಕ್ಕ ಪ್ರಕಾರವನ್ನು ಎಂದರೆ ಉಪಾಧಿಯನ್ನು ಪರಮೇಶ್ವರನು ಧರಿಸುತ್ತಾನೆ. ಆತನ ಅನುಗ್ರಹದಿಂದ ಮನುಷ್ಯನು ಕ್ರಮವಾಗಿ ಉತ್ತಮ ಮಾರ್ಗವನ್ನು ಏರುತ್ತಾನೆ. ಆಯಾ ಮಾರ್ಗದಿಂದ ಗಮ್ಯನಾದ ಶಿವನು ಪ್ರಸನ್ನನಾಗಿ ಸೋಪಾನಕ್ರಮದಿಂದ ಉಪಾಸಕನನ್ನು ವೇದಮಾರ್ಗವನ್ನು ಅವಲಂಬಿಸು-ವಂತೆ ಅನುಗ್ರಹಿಸುತ್ತಾನೆ. ವೇದ ಮಾರ್ಗದಿಂದ ಸೇವಿತನಾದ ಶಿವನು ಸಾಕ್ಷಾತ್ ಮುಕ್ತಿಗೆ ಕಾರಣನಾಗುತ್ತಾನೆ. ಅದರಲ್ಲಿಯೂ ಕರ್ಮಮಾರ್ಗ-ದಿಂದ ಸೇವಿಸಲ್ಪಡುವ ಶಿವನು ಸಾಧಕನಿಗೆ ಜ್ಞಾನದಲ್ಲಿ ಶ್ರದ್ಧೆಯನ್ನು ಉಂಟುಮಾಡುತ್ತಾನೆ. ಜ್ಞಾನಮಾರ್ಗದಿಂದ ಸೇವಿಸಲ್ಪಟ್ಟರೆ ಜ್ಞಾನದ್ವಾರ-ದಿಂದ ಮೋಕ್ಷವನ್ನು ಕೊಡುತ್ತಾನೆ. ಮೋಕ್ಷವು ಏಕರೂಪವಾಗಿರುವುದ-

ರಿಂದ ಮೋಕ್ಷವನ್ನು ಕೊಡುವ ಜ್ಞಾನವೂ ಏಕರೂಪವಾಗಿರಬೇಕಲ್ಲದೆ ನಾನಾರೂಪವಾಗಿರಲಾರದು.

ವೇದಾಂತವು ಪರಮೇಶ್ವರನನ್ನು ಸಾಕ್ಷಾತ್ ಅದ್ವೈತಸ್ವರೂಪನೆಂದು ಹೇಳುತ್ತದೆ. ಅನ್ಯಶಾಸ್ತ್ರವಾವುದೂ ಹೀಗೆ ಹೇಳುವುದಿಲ್ಲವಾದ್ದರಿಂದ ವೇದಜನ್ಯವಾದ ಜ್ಞಾನವೇ ವಿದ್ಯೆ. ಇತರ ಶಾಸ್ತ್ರಗಳಿಂದಾಗುವ ಜ್ಞಾನವು ಅವಿದ್ಯೆಯೇ ಸರಿ, ಅದು ವಿದ್ಯೆಯಲ್ಲ. ಮೋಕ್ಷವನ್ನು ಬಿಟ್ಟು ಇತರ ವಿಷಯಗಳಲ್ಲಿ ಮಾತ್ರವೇ ಇತರ ಶಾಸ್ತ್ರಗಳು ಪ್ರಮಾಣವಾಗಬಹುದು. ಅವು ಪರಂಪರೆಯಿಂದ ಆತ್ಮನ ವಿಷಯದಲ್ಲಿ ಪ್ರಮಾಣವಾಗುತ್ತದೆ. ಆದ್ದರಿಂದ ವೇದಾಂತಮಾರ್ಗದಲ್ಲಿ ಸೇವಿತನಾದ ಪರಮೇಶ್ವರನು ಶೀಘ್ರದಲ್ಲಿ ಮುಕ್ತಿಯನ್ನು ಕೊಡುತ್ತಾನೆ. ಉಳಿದ ಮಾರ್ಗಗಳಲ್ಲಿ ಕ್ರಮೇಣ ಮುಕ್ತಿಯನ್ನು ಕೊಡುತ್ತಾನೆ. ಶಾಶ್ವತವಾದ ವೇದವಾಣಿಯೇ ಹೀಗಿದೆ. ಆದ್ದರಿಂದ ವೇದಮಾರ್ಗವನ್ನು ಅನುಸರಿಸುವ ಮನುಷ್ಯನು ಅನ್ಯಮಾರ್ಗವನ್ನು ಅನುಸರಿಸಬಾರದು. ವೇದಮಾರ್ಗದಲ್ಲಿ ನಡೆಯುವವರಿಗೆ ದುರ್ಲಭವಾದುದು ಯಾವುದೂ ಇಲ್ಲ. ಇದರಲ್ಲಿಯೇ ಪರಮಮುಕ್ತಿಯು ಲಭಿಸುತ್ತದೆ. ಇನ್ನು ಯಾವ ಮಾರ್ಗದಲ್ಲಿಯೂ ಲಭಿಸುವುದಿಲ್ಲ. ಆದ್ದರಿಂದ ಅಧಿಕಾರಿಭೇದವನ್ನನುಸರಿಸಿ ಶಾಸ್ತ್ರವು ಪ್ರಮಾಣವಾಗುತ್ತದೆ. ಇದರಲ್ಲಿ ಸಂದೇಹವಿಲ್ಲ. ಈಶ್ವರಸ್ವರೂಪ, ಬಂಧಹೇತು, ಜಗತ್ತಿಗೆ ಕಾರಣ, ಮುಕ್ತಿ ಮತ್ತು ಜ್ಞಾನ - ಇತ್ಯಾದಿ ವಿಷಯಗಳಲ್ಲಿ ಇತರ ಶಾಸ್ತ್ರಗಳು ವೇದಾಂತ ವಿರುದ್ಧವಾದ ಅಂಶಗಳನ್ನು ಹೇಳುತ್ತವೆ. ಅವು ಮೋಹಾವೃತರಾದ ಮಂದಬುದ್ಧಿಗಳಿಗೋಸ್ಕರ ಅವರ ಆಶಾನುರೋಧವಾಗಿ ಹೇಳಲ್ಪಟ್ಟಿವೆಯೇ ಹೊರತು ಸತ್ಯವಾದವುಗಳಲ್ಲ. ಮನುಷ್ಯನು ಓಡಿಹೋಗುತ್ತಿರುವ ಹಸುವಿಗೆ ಹುಲ್ಲನ್ನು ತೋರಿಸಿ ಹೇಗೆ ಹಿಡಿಯುತ್ತಾನೆಯೋ ಹಾಗೆ ಮಹೇಶ್ವರನು ಮಂದಬುದ್ಧಿಗಳಿಗೆ ಈ ಮಾರ್ಗವನ್ನು ತೋರಿಸಿ ಅವರ ಪುಣ್ಯಾನುಸಾರವಾಗಿ ಜ್ಞಾನವನ್ನು ಕರುಣಿಸುತ್ತಾನೆ. ಆದ್ದರಿಂದ ಹಿಂದೆ ಹೇಳಿದ ಉದ್ದೇಶದಿಂದ ಶಿವನು ಈ

ಮಾರ್ಗಗಳನ್ನು ಉಪದೇಶಿಸಿದ್ದಾನೆ. ಇವು ಅಪ್ರಮಾಣಗಳಲ್ಲ. ಎಂದಿಗಾದರೂ ಪರಮೇಶ್ವರನು ಅನೃತವಾದಿಯಾಗುವನೆ? ಆತನು ಮಹಾಕಾರುಣಿಕನೂ ಸರ್ವಜ್ಞನೂ, ನಿರ್ಮಲನೂ ಆದ ದೇವನಲ್ಲವೇ? ಆದರೂ ಈ ಮಾರ್ಗಗಳಲ್ಲಿ ವೇದವು ಶ್ರೇಷ್ಠವಾದ ಸರ್ವಸಾಧಕವಾದ ಮಾರ್ಗ. ಈ ರೀತಿಯಲ್ಲಿ ಬೇರೆಬೇರೆಯಾದ ಶಾಸ್ತ್ರ ಮಾರ್ಗಗಳ ನಿರ್ಣಯವನ್ನು ಸಂಕ್ಷೇಪವಾಗಿ ಹೇಳಿದ್ದೇನೆ. ಇದನ್ನು ತಿಳಿದು, ಎಲೈ ಬ್ರಾಹ್ಮಣರೇ, ವೇದದಲ್ಲಿ ಶ್ರದ್ಧೆಯನ್ನಿಡಿರಿ.''

ಸಕಲ ಶ್ರುತಿ, ಸೂತ್ರ, ಸ್ಮೃತಿ, ಇತಿಹಾಸ, ಪುರಾಣ, ಆಗಮ, ತಂತ್ರಗಳಿಗೂ ವ್ಯಾಸಸಂಮತವಾದ ಕೇವಲಾದ್ವೈತದಲ್ಲಿಯೇ ತಾತ್ಪರ್ಯವೆಂದು ನಿಶ್ಚಿತವಾಗುವುದು. ಅದರಿಂದ ಅದ್ವೈತವೇ ಪರಮಾರ್ಥದಲ್ಲಿ ಸತ್ಯವಾದದ್ದೆಂದು ಸಿದ್ಧವಾಗುತ್ತದೆ.

***ಪ್ರಥಮ ಪರಿಚ್ಛೇದ ಸಂಪೂರ್ಣ***

# ದ್ವಿತೀಯ ಪರಿಚ್ಛೇದ

**ಸಮಸ್ತ ಜಗದಾಧಾರ ಸಗುಣಬ್ರಹ್ಮನಿರ್ಣಯಮ್ ।**
**ಭಗವತ್ಪಾದಸಿದ್ಧಾಂತಮನುಸೃತ್ಯ ಕರೋಮ್ಯಹಮ್ ॥**

ಬ್ರಹ್ಮ, ವಿಷ್ಣು, ಶಿವ ಎಂದು ತ್ರಿಮೂರ್ತಿಗಳು ಪ್ರಸಿದ್ಧರಷ್ಟೆ. ಈ ತ್ರಿಮೂರ್ತಿಗಳಿಗೆ ಅತಿರಿಕ್ತನಾದ ತುರೀಯ ಶಿವನೆಂಬುವನಿದ್ದಾನೆಂದೂ ಈತನು ವ್ಯವಹಾರ ದೃಷ್ಟಿಯಿಂದ ಬ್ರಹ್ಮಾದಿ ತ್ರಿಮೂರ್ತಿಗಳಿಗಿಂತ ಅಧಿಕನೆಂದೂ ಕೆಲವರು ಹೇಳುತ್ತಾರೆ. ಹೀಗೆ ಹೇಳುವುದಕ್ಕೆ ಅದ್ವೈತ ವಿದ್ಯಾಚಾರ್ಯರೆನಿಸಿದ ಶ್ರೀಮದಪ್ಪಯ್ಯ ದೀಕ್ಷಿತರ ಶಿವತತ್ತ್ವವಿವೇಕ ಮೊದಲಾದ ಗ್ರಂಥಗಳೇ ಇವರಿಗೆ ಆಧಾರ. ಆದರೆ ಶ್ರೀಮದಪ್ಪಯ್ಯ ದೀಕ್ಷಿತರ ನಿಜವಾದ ಮುಖ್ಯ ಅಭಿಪ್ರಾಯವನ್ನು ಇವರು ತಿಳಿದುಕೊಂಡಿಲ್ಲ. ಈ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸುವ ಮೂಲಕ ಸಗುಣ-ಬ್ರಹ್ಮವಸ್ತುವನ್ನು ನಿರ್ಣಯಿಸುವುದಕ್ಕಾಗಿ ಈ ದ್ವಿತೀಯ ಪರಿಚ್ಛೇದವನ್ನು ಪ್ರಾರಂಭಿಸುತ್ತೇವೆ.

ಪ್ರಥಮ ಪರಿಚ್ಛೇದದಲ್ಲಿ ನಿರ್ಣಯಿಸಿದಂತೆ ವ್ಯಾಸಸಂಮತವಾದ ಪರಬ್ರಹ್ಮವಸ್ತುವು ಕೇವಲಾದ್ವೈತಸ್ವರೂಪವೂ, ಸತ್ಯಜ್ಞಾನಾನಂದ ರೂಪವೂ ನಿರ್ವಿಶೇಷವೂ ಆಗಿದೆಯೆಂದು ಒಪ್ಪಿಕೊಳ್ಳೋಣ. ಅದರ ಜ್ಞಾನವು ಪ್ರಾಪ್ತವಾಗುವುದು ಹೇಗೆ ?

ಶ್ರುತಿ, ಸ್ಮೃತಿ, ಪುರಾಣಗಳಲ್ಲಿ ಪರಮೇಶ್ವರನ ಪ್ರಸಾದದಿಂದಲೇ ಅದ್ವೈತಜ್ಞಾನ ಉಂಟಾಗುವುದೆಂದು ಪ್ರತಿಪಾದನೆ ಮಾಡಿದ್ದಾರೆ. ಹೇಗೆಂದರೆ,

**ನಾಯಮಾತ್ಮಾ ಪ್ರವಚನೇನ ಲಭ್ಯೋ ನ ಮೇಧಯಾ ನ**
**ಬಹುನಾ ಶ್ರುತೇನ ।**
**ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾವಿವೃಣುತೇ**
**ತನೂಂ ಸ್ವಾಮ್ ॥**

- ಮುಂಡಕ ೩-೨-೩

''ಉಪನ್ಯಾಸದಿಂದಲಾಗಲಿ, ಧಾರಣಾಶಕ್ತಿಯಿಂದಲಾಗಲಿ ಅಥವಾ ಬಹಳ ಶಾಸ್ತ್ರಾಭ್ಯಾಸದಿಂದಲಾಗಲಿ ಆತ್ಮನು ದೊರಕಲಾರನು. ಆತ್ಮನು ಯಾರನ್ನು ಅನುಗ್ರಹಿಸುವನೋ ಅವನಿಗೆ ಮಾತ್ರ ದೊರಕುವನು. ಅಂತಹ ಭಕ್ತನಿಗೆ ತನ್ನನ್ನು ಪ್ರಕಾಶ ಪಡಿಸುವನು.''

**ಇತಿ ಕ್ಷೇತ್ರಂ ತಥಾ ಜ್ಞಾನಂ ಜ್ಞೇಯಂ ಚೋಕ್ತಂ ಸಮಾಸತಃ ।**
**ಮದ್ಭಕ್ತ ಏತದ್ವಿಜ್ಞಾಯ ಮದ್ಭಾವಾಯೋಪಪದ್ಯತೇ ॥** - ಗೀತಾ ೧೩-೧೮

''ಈ ರೀತಿಯಲ್ಲಿ ಮಹಾಭೂತಾದಿ ಕ್ಷೇತ್ರವನ್ನೂ ಅಮಾನಿತ್ವವೇ ಮೊದಲಾದ ಜ್ಞಾನಸಾಧನವನ್ನೂ ಜ್ಞೇಯವಾದ ಬ್ರಹ್ಮವಸ್ತುವನ್ನೂ ಸಂಗ್ರಹವಾಗಿ ಹೇಳಿದ್ದೇನೆ. ನನ್ನ ಭಕ್ತನು ಇದನ್ನು ತಿಳಿದುಕೊಂಡು ನನ್ನ ಸ್ವರೂಪವನ್ನು ಹೊಂದುತ್ತಾನೆ.''

''ಮಹಾಭಯವನ್ನು ಪರಿಹರಿಸುವ ಈಶ್ವರಾನುಗ್ರಹದಿಂದಲೇ ಕೇವಲ ಎರಡು ಮೂರು ಜನರಿಗೆ ಮಾತ್ರ (ಅತ್ಯಲ್ಪ ಜನರಿಗೆ) ಅದ್ವೈತದಲ್ಲಿ ಶ್ರದ್ಧೆಯುಂಟಾಗುವುದು.'' ''ಎಲೈ ವಿಷ್ಣುವೇ, ಅತ್ಯಂತ ಪರಿಶುದ್ಧ ಭಕ್ತರಿಗೆ ನನ್ನ ಅನುಗ್ರಹದಿಂದಲೇ ಸಾಯುಜ್ಯರೂಪವಾದ ಮುಕ್ತಿಯಲ್ಲಿ ಇಚ್ಛೆಯು ಉಂಟಾಗುತ್ತದೆ. ನನ್ನ ಅನುಗ್ರಹವಿಲ್ಲದವರಿಗೆ ಆ ಇಚ್ಛೆಯು ಉಂಟಾಗುವುದಿಲ್ಲ. ವೇದ ಮಾರ್ಗತತ್ಪರರೂ ನನ್ನ ಭಕ್ತರೂ ಆದ ಮಹಾತ್ಮರಿಗೆ ಮೋಕ್ಷಕ್ಕಾಗಿ ಪ್ರವರ್ತಿಸಲೇಬೇಕೆಂದು ಶ್ರದ್ಧೆಯುಂಟಾಗುವುದು.''

''ಎಲೈ ದೇವತೆಗಳೆ, ಅನೇಕ ಜನ್ಮಗಳಲ್ಲಿ ಶ್ರೌತಸ್ಮಾರ್ತ ಕರ್ಮಗಳನ್ನು ಪಾಲಿಸಿ ಕೃತಕೃತ್ಯರಾದವರಿಗೆ ಶ್ರೇಷ್ಠವಾದ ಅದ್ವೈತಜ್ಞಾನವು ಲಭಿಸುತ್ತದೆ. ನಿಮ್ಮೆಲ್ಲರಿಗೂ ಸಹ ಪರಮಾತ್ಮನಾದ ಶಿವನ ಪ್ರಸಾದದಿಂದಲೇ ಅದ್ವೈತ ಜ್ಞಾನವು ಲಭಿಸುತ್ತದೆ. ಅದಕ್ಕೆ ಬೇರೆ ಮಾರ್ಗವಿಲ್ಲ. ಆದ ಕಾರಣ ಹಿಂದೆ ಬಹು ಜನ್ಮಗಳಲ್ಲಿ ಅರ್ಜಿಸಿದ ಪುಣ್ಯವು ಪರಿಪಾಕಹೊಂದಿ ಮನಸ್ಸು ಪರಿಶುದ್ಧವಾಗಬೇಕು. ಅನಂತರ ಈಶ್ವರನ ಅನುಗ್ರಹದಿಂದಲೇ ಶ್ರವಣ ಮನನಾದಿಗಳಲ್ಲಿ ತೊಡಗಿ ಆ ಮೂಲಕ ಬ್ರಹ್ಮಜ್ಞಾನವನ್ನು ಪಡೆಯಬೇಕು'' ಇತ್ಯಾದಿಯಾಗಿ ಶ್ರುತಿಸ್ಮೃತಿ ಪುರಾಣ ವಚನಗಳಿವೆ.

ಪರಮೇಶ್ವರನ ಪ್ರಸಾದ ಹೀನರೂ ಗೌತಮ ದಧೀಚಿಗಳ ಶಾಪಕ್ಕೆ ಒಳಗಾದವರೂ, ಮಹಾಪಾಪಸಮುದ್ರದಲ್ಲಿ ಮುಳುಗಿದವರೂ ಆದ ಇತರರಿಗೆ ಅದ್ವೈತ ಜ್ಞಾನದಲ್ಲಿ ಅಭಿರುಚಿಯು ಕೂಡ ಉತ್ಪನ್ನ-ವಾಗುವುದಿಲ್ಲ. ಅಷ್ಟೇ ಅಲ್ಲ; ಅದರ ಮೇಲೆ ದ್ವೇಷವೇ ಉತ್ಪನ್ನ-ವಾಗುತ್ತದೆ. ಸೂತಸಂಹಿತೆಯಲ್ಲಿಯೂ "**ಗೌತಮಸ್ಯ ಮುನೇಃ ಶಾಪಾತ್...**" ಇತ್ಯಾದಿ ಶ್ಲೋಕಗಳಲ್ಲಿ ಇದೇ ವಿಷಯವನ್ನು ಹೇಳಿದ್ದಾರೆ. ಆದ್ದರಿಂದ ಅದ್ವೈತ ಜ್ಞಾನವು ಪರಮೇಶ್ವರನ ಅನುಗ್ರಹದಿಂದ ಉಂಟಾಗುವುದರಿಂದ ಆತನ ಅನುಗ್ರಹವನ್ನು ಸಂಪಾದಿಸಲು ಪರಮೇಶ್ವರನ ಉಪಾಸನೆಯನ್ನು ಅವಶ್ಯ ಮಾಡಬೇಕು.

ಹೀಗೆ ಬ್ರಹ್ಮಜ್ಞಾನವನ್ನು ಅನುಗ್ರಹಿಸುವ ಈ ಪರಮೇಶ್ವರನಾದರೂ ಯಾರು? ಎಂಬುದನ್ನು ವಿಚಾರ ಮಾಡೋಣ. ವೇದಗಳನ್ನೂ ಪುರಾಣಗಳನ್ನೂ ಪರ್ಯಾಲೋಚಿಸಿದರೆ ಮಾಯೋಪಾಧಿಯಿಂದ ಸಹಿತ-ವಾದ ಚೈತನ್ಯವೇ ಪರಮೇಶ್ವರನೆಂದು ತಿಳಿದು ಬರುತ್ತದೆ. ಹೇಗೆಂದರೆ,

**ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್ ॥**

**ಶ್ವೇತ ೪-೧೦**

"ಪ್ರಕೃತಿಯು ಮಾಯೆಯೆಂದೂ ಮಾಯಾವಿಶಿಷ್ಟನು ಪರಮೇಶ್ವರ-ನೆಂದೂ ತಿಳಿಯಬೇಕು."

**ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ ॥**

ಮಾಯಾ ವಿಶಿಷ್ಟನಾದ ಈಶ್ವರನು ಈ ಪ್ರಪಂಚವನ್ನು ಸೃಷ್ಟಿಸುತ್ತಾನೆ. ಜಗತ್ತನ್ನು ಸೃಷ್ಟಿಸಿದ ಈಶ್ವರನು ಮೊದಲು ತನ್ನ ತ್ರಿಗುಣಾತ್ಮಕವಾದ ಮಾಯೆಯಿಂದೊಡಗೂಡಿ ಅಭೇದದಿಂದ ಇದ್ದನು. ಮಾಯೆಯಲ್ಲಿರುವ ಪೂರ್ವಕಲ್ಪದ ಸೃಷ್ಟಿವಾಸನೆಯಿಂದ ಅವನು ಅನ್ವಿತನಾಗಿದ್ದನು. ಪ್ರಾಣಿಗಳ ಪುಣ್ಯಪಾಪ ಕರ್ಮಗಳು ಪರಿಪಕ್ವವಾಗಲು ಆದಕ್ಕೆ ಅನುಗುಣವಾಗಿ ಈಶ್ವರನು ತಾನು ಬೇರೆ, ತನ್ನ ಶಕ್ತಿಭೂತವಾದ ಮಾಯೆಯು ಬೇರೆ

ಎಂಬುದಾಗಿ ಭೇದವನ್ನು ಕಲ್ಪಿಸಿಕೊಳ್ಳುತ್ತಾನೆ. ವಸ್ತುತಃ ಮಾಯೆಯು ಈಶ್ವರನಿಗೆ ಅಭಿನ್ನವಾದದ್ದು. ಮಾಯೆಗೆ ಈಶ್ವರನು ಅಭಿನ್ನನಾಗಿದ್ದಾನೆ. ಈ ಭೇದವು ಕಲ್ಪಿತವಾದದ್ದರಿಂದ ಅದ್ವೈತಕ್ಕೆ ಯಾವಾಗಲೂ ಬಾಧೆಯಿಲ್ಲ. ಕಲ್ಪಿತ ಪದಾರ್ಥಗಳು ವಸ್ತುತಃ ಇರುವುದಿಲ್ಲವಾದ್ದರಿಂದ ವಿರೋಧವೂ ಇಲ್ಲ. ಪೂರ್ವಕಲ್ಪದ ಮಾಯಾಗುಣಗಳಿಂದ ಉತ್ಪನ್ನವಾದ ವಾಸನೆಯಿಂದ ಕೂಡಿ ಜೀವಿಗಳನ್ನು ಮಾಯೋಪಾಧಿಕನಾದ ಪರಶಿವನು ಸೃಷ್ಟಿಸಬೇಕೆಂದು ಪೂರ್ವಕಲ್ಪದಂತೆಯೇ ಪರ್ಯಾಲೋಚಿಸುವನು.

- ಸೂತಸಂಹಿತಾ. ಯಜ್ಞವೈ. ಖಂ. ಉಪರಿಭಾಗ ೪-೪-(೧-೪)

ಈ ಪರಮೇಶ್ವರನು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನೆಂದು

'ಯತೋ ವಾ ಇಮಾನಿ ಭೂತಾನಿ ಜಾಯಂತೇ । ತೈ ॥ ೩-೧ ॥

ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ । ಛಾಂ ॥ ೯-೨ ॥

ಇತ್ಯಾದಿ ಶ್ರುತಿಗಳೂ, 'ಜನ್ಮಾದ್ಯಸ್ಯ ಯತಃ ॥' ಬ್ರ.ಸೂ ೧-೧-೧ ಪ್ರಕೃತಿಶ್ಚ ಪ್ರತಿಜ್ಞಾ ದೃಷ್ಟಾಂತಾನುಪರೋಧಾತ್ ॥ ಬ್ರ. ಸೂ ೧-೪-೨೩ ॥ ಇತ್ಯಾದಿ ಸೂತ್ರಗಳೂ ಪ್ರತಿಪಾದಿಸಿರುತ್ತವೆ. ಸೃಷ್ಟ್ಯಾದಿ ಕಾರ್ಯಗಳಿಗೆ ಮಾಯಾ ಸಂಬಂಧವೇ ಹೇತು. ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣವೆಂದರೆ ನಿಮಿತ್ತಕಾರಣವೂ ಉಪಾದಾನಕಾರಣವೂ ಅಭಿನ್ನವೆಂದು ಪರ್ಯವಸಾನವಾಗುತ್ತದೆ. ಉಪಾದಾನಕಾರಣವೆಂದರೆ ತನ್ನಲ್ಲಿ ಅಧ್ಯಸ್ತವಾದ ಸಕಲ ಪ್ರಪಂಚಕ್ಕೆ ಆಶ್ರಯನಾಗಿರುವಿಕೆ. ಈ ವಿಧವಾದ ಕಾರಣತ್ತ್ವವು ಪರಮೇಶ್ವರನಿಗೆ ಅಮೂರ್ತವೂ, ವ್ಯಾಪಕವೂ ಆದ ಸ್ವರೂಪದಿಂದ ಸಂಭವಿಸುತ್ತದೆಯೇ ಹೊರತು ಶರೀರೋಪಾಧಿಯಿಂದ ಕೂಡಿದ ಪರಿಚ್ಛಿನ್ನ ಸ್ವರೂಪದಿಂದ ಅಲ್ಲ. ಏಕೆಂದರೆ, ಶರೀರವು ಪ್ರಪಂಚದಲ್ಲಿ ಎಲ್ಲಾ ಕಡೆಯೂ ಅನುಸ್ಯೂತವಾಗಿಲ್ಲ. ಮಾಯೋಪಾಧಿಯಿಂದ ಕೂಡಿದ ಈ ಪರಮೇಶ್ವರನಿಗೇ ಸರ್ವಜ್ಞತ್ವ ಸರ್ವಶಕ್ತಿತ್ತ್ವ ಮೊದಲಾದ ಅಸಂಖ್ಯ ಕಲ್ಯಾಣಗುಣಗಳೂ ಇವೆಯೆಂದು ನಮಗೆ ಸಂಮತವಾಗಿದೆ. 'ಪರಾಸ್ಯ

**ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ'** ॥ ಶ್ವೇ. ೬-೮ ಎಂದು ವೇದವು ಹೇಳುತ್ತದೆ. ಆದ್ದರಿಂದಲೇ **ಸರ್ವೋಪೇತಾ ಚ ತದ್ದರ್ಶನಾತ್** ॥ ಬ್ರ.ಸೂ. ೨-೧-೩೦ ॥ ಎಂಬ ಅಧಿಕರಣದಲ್ಲಿರುವ **ವಿಕರಣ-ತ್ವಾನ್ನೇತಿ ಚೇತ್ತದುಕ್ತಮ್** ॥ ಬ್ರ.ಸೂ. ೨-೧-೩೧ ॥ ಎಂಬ ಸೂತ್ರದ ಭಾಷ್ಯದಲ್ಲಿ ಪರಮೇಶ್ವರನಿಗೆ ಶರೀರಾಪೇಕ್ಷೆ ಇಲ್ಲದೆಯೇ ಸರ್ವಸಾಮರ್ಥ್ಯವೂ ಇದೆಯೆಂದು ಸಿದ್ಧಾಂತಮಾಡಿದ್ದಾರೆ. ಅಲ್ಲಿ **'ಅಪಾಣಿಪಾದೋಜವನೋ ಗ್ರಹೀತಾ ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ** ॥ ಶ್ವೇ. ೩-೧೯ ॥ ಎಂಬ ಶಾಸ್ತ್ರ ವಾಕ್ಯವು ದೇಹೇಂದ್ರಿಯ ರಹಿತನಾದ ಪರಮೇಶ್ವರನಿಗೆ ಸರ್ವ-ಸಾಮರ್ಥ್ಯವೂ ಇದೆಯೆಂದೂ ತಿಳಿಸುತ್ತದೆ - ಎಂಬುದಾಗಿ ಹೇಳಿದ್ದಾರೆ.

ಅಂತೂ ಹಿಂದೆ ಹೇಳಿದಂತೆ ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣನಾಗಿ ಮಾಯೆಯಲ್ಲಿ ಬಿಂಬಭೂತನಾಗಿರುವ ಒಬ್ಬನೇ ಪರಮೇಶ್ವರನು ಸರ್ವರಿಗೂ ಉಪಾಸ್ಯನಾಗಿದ್ದಾನೆ. ಅವನ ಪ್ರತಿಬಿಂಬಭೂತನಾದ ಜೀವನು ಉಪಾಸಕನಾಗಿದ್ದಾನೆ. ಆ ಜೀವನು ಅಂತಃಕರಣ ಭೇದದಿಂದ ಅನೇಕ ರೂಪನಾಗಿ ವ್ಯವಹರಿಸಲ್ಪಡುತ್ತಿರುವನು. ಶ್ರುತಿಯು -

**ಏಕ ಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ ।**
**ಏಕಧಾ ಬಹುಧಾ ಚೈವ ದೃಶ್ಯತೇ ಜಲಚಂದ್ರವತ್** ॥ ಬ್ರ.ಬಿಂದು ೧೨॥

''ಒಬ್ಬನೇ ಆತ್ಮನು ಪ್ರತಿಯೊಂದು ಶರೀರದಲ್ಲಿಯೂ ವಾಸ-ವಾಗಿದ್ದಾನೆ. ನೀರಿನಲ್ಲಿ ಪ್ರತಿಬಿಂಬಿಸಿದ ಚಂದ್ರನಂತೆ ಒಬ್ಬನೇ ಬಹುಪ್ರಕಾರ-ವಾಗಿ ಕಾಣುತ್ತಾನೆ'' ಎಂದು ಹೇಳಿದೆ.

ಪರಮೇಶ್ವರನು ಒಬ್ಬನೇ ಆಗಿದ್ದರೂ ಭಕ್ತರನ್ನು ಅನುಗ್ರಹಿಸು-ವುದಕ್ಕೋಸ್ಕರ ಬ್ರಹ್ಮ, ವಿಷ್ಣು, ಶಿವ ಮೊದಲಾದ ಲೀಲಾಶರೀರಗಳನ್ನು ಸ್ವೇಚ್ಛೆಯಿಂದ ಸ್ವೀಕರಿಸುತ್ತಾನೆಂಬುದು ಸಂಮತವಾದ ವಿಷಯ.

ಅಮೂರ್ತೋಪಾಸನೆಯನ್ನು ಉತ್ತಮಾಧಿಕಾರಿಗಳು ಮಾಡ-ತಕ್ಕದ್ದೇನೋ ಹೌದು. ಆದರೆ ಮಾಯೋಪಾಧಿಸಹಿತನಾದ ಪರಮೇಶ್ವರನು

ಅಮೂರ್ತನಾಗಿರುವುದು ಮಂದಾಧಿಕಾರಿಗಳ ಬುದ್ಧಿಗೆ ನಿಲುಕದಂತಹ ವಿಷಯ. ಆದ್ದರಿಂದ ಅಮೂರ್ತೋಪಾಸನೆಯು ಅವರಿಗೆ ಸಾಧ್ಯವಿಲ್ಲ, ರಾಮತಾಪಿನೀ ಉಪನಿಷತ್ತಿನಲ್ಲಿ ಹೀಗೆ ಹೇಳಿದೆ- ''ಚಿನ್ಮಯನೂ, ಅದ್ವಿತೀಯನೂ, ನಿಷ್ಕಲನೂ, ಅಶರೀರಿಯೂ ಆದ ಪರಮೇಶ್ವರನಿಗೆ ಭಕ್ತರ ಉಪಾಸನೆಗೆ ಅನುಕೂಲವಾಗುವಂತೆ ರೂಪವನ್ನು ಕಲ್ಪಿಸಲಾಗಿದೆ'' ಜ್ಞಾನವಾಸಿಷ್ಠದಲ್ಲಿ ಹೀಗೆ ಹೇಳಿದೆ- ''ಪರಮಾತ್ಮನು ಪುಂಡರೀಕಾಕ್ಷನೂ ಅಲ್ಲ; ತ್ರಿಲೋಚನನೂ ಅಲ್ಲ; ಅವನು ದೇಹರೂಪನೂ ಅಲ್ಲ; ಚಿತ್ರರೂಪನೂ ಅಲ್ಲ; ಆಕೃತ್ರಿಮವೂ ಆದ್ಯಂತರಹಿತವೂ ಆದ ಜ್ಞಾನವೇ ಪರಮಾತ್ಮನು. ಆತನ ನಿಜಸ್ವರೂಪವನ್ನರಿಯದ ಸಾಮಾನ್ಯಜನರಿಗೋಸ್ಕರ ವಿಗ್ರಹಪೂಜೆಯು ವಿಹಿತವಾಗಿದೆ. ಒಂದು ಯೋಜನದ ದಾರಿಯನ್ನು ನಡೆಯಲು ಅಶಕ್ತನಾದವನು ಒಂದು ಹರದಾರಿಯನ್ನಾದರೂ ನಡೆಯಲೆಂಬುದು ಇದರ ಉದ್ದೇಶ.''

ಪಾಂಚರಾತ್ರಾಗಮದಲ್ಲಿ ಹೀಗೆ ಹೇಳಿದೆ -

''ಹೇ ದೇವ, ನಿನಗೆ ರೂಪವಿಲ್ಲ; ಆಕಾರವಿಲ್ಲ; ಆಯುಧಗಳಿಲ್ಲ; ಆಶ್ರಯವಿಲ್ಲ; ಆದರೂ ಪುರುಷರೂಪವನ್ನು ಧರಿಸಿ ಭಕ್ತರಿಗೆ ಕಾಣಿಸಿಕೊಳ್ಳುತ್ತೀಯೆ.''

ಶೈವಾಗಮದಲ್ಲಿ ಹೀಗೆ ಹೇಳಿದೆ -

''ಸಂನ್ಯಾಸಿಗಳೂ, ಮಂತ್ರಜ್ಞರೂ, ಜ್ಞಾನಿಗಳೂ ಮತ್ತು ಯೋಗಿಗಳು ಮಾಡುವ ಧ್ಯಾನಪೂಜೆಗಳಿಗೆ ಅನುಗುಣವಾಗಿ ಶಿವನು ಶರೀರವನ್ನು ಸ್ವೇಚ್ಛೆಯಿಂದ ಧರಿಸುತ್ತಾನೆ.''

ಆದ್ದರಿಂದಲೇ **'ಅಂತಸ್ತದ್ಧರ್ಮೋಪದೇಶಾತ್'** (ಬ್ರ.ಸೂ. ೧-೧-೨೦) ಮೊದಲಾದ ಅಧಿಕರಣಗಳಲ್ಲಿ ಸಾಧಕರನ್ನು ಅನುಗ್ರಹಿಸುವುದಕ್ಕಾಗಿ 'ಪರಮೇಶ್ವರನೂ ಇಚ್ಛಾವಶದಿಂದ ಮಾಯಾಮಯವಾದ ರೂಪವನ್ನು ಸ್ವೀಕರಿಸಬಹುದು' ಇತ್ಯಾದಿ ವಚನಗಳಿಂದ ಪರಮೇಶ್ವರನು ಅಶರೀರ-

ನಾಗಿದ್ದರೂ ಆದಿತ್ಯಮಂಡಲದಲ್ಲಿ ಹಿರಣ್ಮಯ ಪುರುಷಾದಿ ರೂಪದಿಂದ ಉಪಾಸನೆ ಹೊಂದುತ್ತಾನೆಂದು ಭಾಷ್ಯಕಾರರು ಸಿದ್ಧಾಂತಮಾಡಿದ್ದಾರೆ.

ಇಲ್ಲಿ ಒಂದು ಶಂಕೆಯುಂಟಾಗಬಹುದು - ''ಜಗತ್ತಿಗೆ ಕಾರಣವು ಸತ್ತೇ ? ಅಸತ್ತೇ ? ಎಂದು ವಿವಾದಗ್ರಸ್ತವಾಗಿದೆ. ಶೂನ್ಯ ವಾದವನ್ನು ತಪ್ಪಿಸುವುದಕ್ಕಾಗಿ **'ಸದೇವ ಸೌಮ್ಯೇದಮಗ್ರ ಆಸೀತ್'** ॥ ಛಾಂ. ೬-೨-೧ ॥ ಎಂಬ ಶ್ರುತಿಯು ಜಗತ್ಕಾರಣವು ಸತ್ ಎಂದು ಪ್ರತಿಪಾದಿಸುತ್ತದೆ. ಜಗತ್ಕಾರಣವಾದ ಈ ಸದ್ವಸ್ತುವು ಚೇತನವೇ ಅಚೇತನವೇ ಎಂದು ಪುನಃ ವಿವಾದವುಂಟಾಗುತ್ತದೆ. ಪ್ರಕೃತಿಯು ಜಗತ್ತಿಗೆ ಕಾರಣವೆಂದು ಸಾಂಖ್ಯರೂ, ಪರಮಾಣುವು ಕಾರಣವೆಂದು ವೈಶೇಷಿಕರೂ ಹೇಳುತ್ತಾರೆ. ಹೀಗೆಯೇ ಇತರರು ನಾನಾವಿಧವಾಗಿ ಹೇಳುವುದರಿಂದ ಈ ವಾದ-ಗಳನ್ನೆಲ್ಲಾ ವ್ಯಾವೃತ್ತಿ ಮಾಡುವುದಕ್ಕೋಸ್ಕರ **'ಆತ್ಮಾ ವಾ ಇದಮೇಕ ಏವಾಗ್ರ ಆಸೀತ್'** ॥ ಐತ. ೧-೧-೧ ॥ ಎಂಬ ಶ್ರುತಿಯು ಚೇತನವೇ ಜಗತ್ತಿಗೆ ಕಾರಣವೆಂದು ಪ್ರತಿಪಾದಿಸುತ್ತದೆ. ಈ ಸದ್ವಸ್ತುವಾದ ಚೇತನವು ಜೀವವೋ ಬ್ರಹ್ಮವೋ? ಎಂದು ಮತ್ತೆ ವಿವಾದವುಂಟಾಗುತ್ತದೆ. ಹಿರಣ್ಯಗರ್ಭ, ಇಂದ್ರ, ಅಗ್ನಿ, ಸೂರ್ಯಾದಿ ಜೀವರು ಕಾರಣರಲ್ಲವೆಂದು ಬೋಧಿಸುವುದಕ್ಕಾಗಿ **'ಬ್ರಹ್ಮ ವಾ ಇದಮೇಕ ಏವಾಗ್ರ ಆಸೀತ್'** ಎಂಬ ಶ್ರುತಿಯು ಬ್ರಹ್ಮವೇ ಕಾರಣವೆಂದು ಪ್ರತಿಪಾದಿಸುತ್ತದೆ. ಜಗತ್ಕಾರಣವಾದ ಈ ಸದ್ವಸ್ತುವೂ, ಚೇತನವೂ ಆದ ಬ್ರಹ್ಮವು ಶಿವನೇ ? ನಾರಾಯಣನೇ ? ಇತ್ಯಾದಿ ವಿವಾದವು ಪುನಃ ಉತ್ಪನ್ನವಾಗುತ್ತದೆ. ಶಿವನು ಕಾರಣನೆಂದು **''ಯದಾತಮಸ್ತನ್ನ ದಿವಾ ನ ರಾತ್ರಿಃ ನ ಸನ್ನ ಚಾಸಚ್ಛಿವ ಏವ ಕೇವಲಃ''** ಇತ್ಯಾದಿ ಶ್ರುತಿಗಳು ಹೇಳುತ್ತವೆ. **'ಏಕೋ ಹ ವೈ ನಾರಾಯಣಃ'** - (ಮಹೋಪನಿಷತ್) ಇತ್ಯಾದಿ ಶ್ರುತಿಗಳು ವಿಷ್ಣುವು ಕಾರಣವೆಂದು ಹೇಳುತ್ತವೆ. ಈಗ ಜಗತ್ಕಾರಣವಾದ ಬ್ರಹ್ಮವು ಯಾರೆಂಬುದನ್ನು ಛಾಗಪಶುನ್ಯಾಯದಿಂದ ನಿರ್ಧರಿಸಬೇಕಾಗಿದೆ. ಆ ಬ್ರಹ್ಮವು ಶಿವನೇ ? ನಾರಾಯಣನೇ ?

ಇದಕ್ಕೆ ಸಮಾಧಾನ, ಜಗತ್ಕಾರಣನು ಶಿವನೇ ? ವಿಷ್ಣುವೇ ? ಎಂದು ಕೇಳುವ ಪ್ರಶ್ನೆ ಅವರೀರ್ವರೂ ಭಿನ್ನರು ಎಂಬ ಪಕ್ಷವನ್ನಾಶ್ರಯಿಸಿಯೋ ಅಥವಾ ಅಭಿನ್ನರು ಎಂಬ ಪಕ್ಷವನ್ನಾಶ್ರಯಿಸಿಯೋ ? ಅವರೀರ್ವರೂ ಭಿನ್ನರು - ಎಂಬ ಪಕ್ಷ ಸರಿಯಲ್ಲ. ಮೊದಲನೆಯ ಪರಿಚ್ಛೇದದಲ್ಲಿ ಭೇದ-ಶಂಕೆ ಎಂಬ ಕೊಳೆಯನ್ನು ತೊಡೆದು ಹಾಕಿಬಿಟ್ಟಿರುವುದರಿಂದ ಮತ್ತೆ ಮತ್ತೆ ಭೇದವನ್ನು ಹಿಡಿದು ವಾದಿಸುವುದು ನಾಚಿಕೆಗೇಡಿನ ಪ್ರಸಂಗ. ಆದ್ದರಿಂದ ಈ ದ್ವಿತೀಯ ಪರಿಚ್ಛೇದದ ಪ್ರಾರಂಭದಲ್ಲಿ ಭೇದವನ್ನು ಪ್ರತಿಪಾದಿಸುವ ರಾಮಾನುಜ, ಮಧ್ವ, ಶ್ರೀಕಂಠಾದಿಭಾಷ್ಯಗಳು ಪ್ರಮಾಣ ರಹಿತಗಳೆಂದು ಜ್ಞಾಪಿಸುವುದಕ್ಕೋಸ್ಕರ ನಾವು ಮಂಗಳ ಶ್ಲೋಕದಲ್ಲಿ ಭಗವತ್ಪಾದ ಶ್ರೀ ಶಂಕರಾಚಾರ್ಯರ ಸಿದ್ಧಾಂತವನ್ನನುಸರಿಸಿ ಸಗುಣ ಬ್ರಹ್ಮ ನಿರ್ಣಯ-ವನ್ನು ಮಾಡುತ್ತೇವೆ - ಎಂದು ಹೇಳಿದ್ದೇವೆ.

ಇನ್ನು ಅವರೀರ್ವರೂ ಅಭಿನ್ನರು ಎಂಬ ಅಭೇದ ಪಕ್ಷವನ್ನಾಶ್ರಯಿಸಿ ಪ್ರಶ್ನೆ ಮಾಡುವುದು ಸರಿಯಲ್ಲ. ಛಾಗಪಶುನ್ಯಾಯವು ಈ ಸಂದರ್ಭದಲ್ಲಿ ಉಪಯುಕ್ತವಾಗುವುದಿಲ್ಲ. ಹೇಗೆಂದರೆ :- **'ಅಗ್ನೀಷೋಮೀಯಂ ಪಶು-ಮಾಲಭೇತ'** ಎಂಬ ಶ್ರುತಿಯಲ್ಲಿರುವ ಪಶು ಶಬ್ದವು ಆಡು, ಎತ್ತು ಮೊದಲಾದ ಪಶುಗಳಲ್ಲಿ ಸಾಧಾರಣವಾದದ್ದು. ಶಬ್ದ ಸಾಮಾನ್ಯದ ಅರ್ಥವನ್ನಿಟ್ಟುಕೊಂಡರೆ ಆಚರಣೆಯು ಸರಿಹೋಗುವುದಿಲ್ಲವಾದ್ದರಿಂದ ಪಶುವಿಶೇಷವಾವುದೆಂದು ವಿಶೇಷಾಕಾಂಕ್ಷೆ ಉದಯಿಸುತ್ತದೆ. ಆಗ **''ಅಗ್ನೀಷೋಮಾಭ್ಯಾಂ ಛಾಗಸ್ಯ ವಪಾಯಾ ಮೇದಸಃ''** ಎಂಬ ಮಂತ್ರ-ವನ್ನು ಪರ್ಯಾಲೋಚಿಸಲಾಗಿ ಸಾಮಾನ್ಯ ವಿಶೇಷ ನ್ಯಾಯವನ್ನನುಸರಿಸಿ ಪಶುಶಬ್ದವು ಛಾಗ (ಆಡು) ಪಶುವಿಶೇಷವನ್ನು ಬೋಧಿಸುತ್ತದೆಯೆಂದು ನಿರ್ಣಯವಾಗುತ್ತದೆ. ಪ್ರಕೃತದಲ್ಲಿಯಾದರೋ ಜಗತ್ಕಾರಣವಾದ ಬ್ರಹ್ಮವು ಯಾರೆಂದು ವಿಶೇಷಾಕಾಂಕ್ಷೆಯು ಉದಯಿಸುವುದಿಲ್ಲವಾದ್ದರಿಂದ ಛಾಗಪಶುನ್ಯಾಯಕ್ಕೆ ಅವಕಾಶವಿಲ್ಲ. ಬ್ರಹ್ಮವೆಂದರೆ ಯಾವ ದೇವತೆ ಎಂಬ ವಿಶೇಷ ಪ್ರಶ್ನೆ ಏಳುವುದಿಲ್ಲ. ಹೇಗೆಂದರೆ ಸತ್ಯಂ ಜ್ಞಾನಮನಂತಂ ಬ್ರಹ್ಮ ॥

ತ್ತೈ ತ್ತಿ. ೨-೧-೧ ॥ '**ಆನಂದೋ ಬ್ರಹ್ಮೇತಿ ವ್ಯಜಾನಾತ್**' ॥ ತ್ತೈತ್ತಿ. ೩-೬ ॥ ಇತ್ಯಾದಿ ಶ್ರುತಿಗಳು ಬ್ರಹ್ಮವು ಸಚ್ಚಿದಾನಂದಾತ್ಮಕವಾದ ಅಖಂಡ ಬ್ರಹ್ಮಸ್ವರೂಪವೆಂದು ಬೋಧಿಸುತ್ತವೆ. ಆ ಬ್ರಹ್ಮವಸ್ತುವು ನಿರ್ವಿಶೇಷವಾದ್ದರಿಂದ ಜಗತ್ತಿನ ಜನ್ಮ, ಸ್ಥಿತಿ, ಲಯಗಳಿಗೆ ಕಾರಣವಾಗಲಾರದು. ಆದ್ದರಿಂದ "**ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ । ಮಾಯಿನಂ ತು ಮಹೇಶ್ವರಮ್**" ॥ ಶ್ವೇತಾ. ೧-೧೦ ॥ ಇತ್ಯಾದಿ ಶ್ರುತಿಗಳು ಮಾಯೋಪಹಿತವಾದ ಬ್ರಹ್ಮವಸ್ತು ಜಗತ್ತಿನ ಜನ್ಮಾದಿಗಳಿಗೆ ಕಾರಣವೆಂದು ಪ್ರತಿಪಾದಿಸುತ್ತವೆ. ಇಂತಹ ಮಾಯೋಪಹಿತವಾದ ಬ್ರಹ್ಮವಸ್ತುವನ್ನೇ ಛಾಂದೋಗ್ಯ, ಐತರೇಯ, ತೈತ್ತಿರೀಯ ಮೊದಲಾದ ಶ್ರುತಿಗಳು 'ಸತ್' ಮೊದಲಾದ ಶಬ್ದಗಳಿಂದ ಅನುವಾದಿಸುತ್ತವೆ. ಈ ಸತ್ ಎಂಬ ಬ್ರಹ್ಮವೇ ಜಗತ್ಕಾರಣವೆಂದು ಅವು ನಿಶ್ಚಯಿಸಿವೆ. ಹೀಗಿರುವಾಗ ಬ್ರಹ್ಮವೆಂದರೆ ಯಾವ ದೇವತೆಯೆಂಬ ವಿಶೇಷಾಕಾಂಕ್ಷೆಯು ಹುಟ್ಟುವುದಿಲ್ಲವಾದ್ದರಿಂದ ಸಾಮಾನ್ಯ ವಿಶೇಷ ನ್ಯಾಯವು ಅನುಚಿತವಾಗುತ್ತದೆ. ಮತ್ತು ಅಭೇದ ಪಕ್ಷದಲ್ಲಿ ಶಿವ ವಿಷ್ಣುಗಳಿಗೆ ಭೇದ ಇಲ್ಲವಾದ್ದರಿಂದ ಶಿವನು ಜಗತ್ಕಾರಣನೋ ? ವಿಷ್ಣುವೋ ? ಎಂಬ ವಿಚಾರವೇ ಹುಟ್ಟುವುದಿಲ್ಲ. ಆದರೆ ಶಿವ ವಿಷ್ಣುಗಳಿಗೆ ವಾಸ್ತವವಾದ ಭೇದವಿಲ್ಲದಿದ್ದರೂ ಔಪಾಧಿಕವಾದ ಭೇದವನ್ನಂಗೀಕರಿಸಿ ಛಾಗ ಪಶುನ್ಯಾಯವನ್ನು ಇಲ್ಲಿ ಉಪಯೋಗಿಸಬಹುದಲ್ಲವೆ ? ಎಂದು ಯಾರಾದರೂ ಕೇಳಬಹುದು - ಇದಕ್ಕೆ ಸಮಾಧಾನವೇನೆಂದರೆ- ಉಪಾಸನಾ ಪ್ರಕರಣದಲ್ಲಿ ಶಿವ ವಿಷ್ಣುಗಳಿಗೆ ಔಪಾಧಿಕವಾಗಿಯೂ ಭೇದವಿಲ್ಲವೆಂದು ನಾವು ಬಹುವಿಧದಲ್ಲಿ ಮುಂದೆ ಹೇಳುವೆವು. ಹಾಗಾದರೆ ಅವರೀರ್ವರಲ್ಲಿ ಒಬ್ಬನು ಜೀವನೆಂದು ಅಂಗೀಕರಿಸಿ ಇನ್ನೊಬ್ಬನು ಜಗತ್ಕಾರಣನಾದ ಈಶ್ವರನೆಂದು ಏಕೆ ಹೇಳಬಾರದು ? ಇದೂ ಸರಿಯಲ್ಲ.

**ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ವಿಭಕ್ತಾ ಅಪಿ ಪಂಡಿತಾಃ ।**
**ಪರಮಾತ್ಮವಿಭಾಗಸ್ಥಾ ನ ಜೀವವ್ಯೂಹಸಂಸ್ಥಿತಾಃ ॥**

-ಸೂತ. ಯಜ್ಞ. ಉಪರಿ ೨-೫೧೫

ಇತ್ಯಾದಿ ವಿವಿಧ ಪ್ರಮಾಣಗಳಿಂದ ತ್ರಿಮೂರ್ತಿಗಳು ಈಶ್ವರ ಸ್ವರೂಪರೇ ಎಂದು ನಾವು ಮುಂದೆ ಪ್ರತಿಪಾದಿಸುತ್ತೇವೆ.

ಮತ್ತು ಬ್ರಹ್ಮ ಇತ್ಯಾದಿ ಸಾಮಾನ್ಯ ಶಬ್ದಗಳು ಪ್ರತಿಪಾದಿಸುವ ಶಿವ ಅಥವಾ ವಿಷ್ಣು ಎಂಬವರು ಸರ್ವವ್ಯಾಪಕರಾದ ವಿಭುಗಳೆಂದು ಹೇಳುತ್ತೀರೊ ? ಅಥವಾ ಪರಿಚ್ಛಿನ್ನವಾದ ಶರೀರವನ್ನು ಧರಿಸಿದವರೆಂದು ಹೇಳುತ್ತೀರೊ ? ಏಕೆಂದರೆ,

ಸರ್ವಾನನಶಿರೋಗ್ರೀವಃ ಸರ್ವಭೂತಗುಹಾಶಯಃ ।
ಸರ್ವವ್ಯಾಪೀ ಚ ಭಗವಾಂಸ್ತಸ್ಮಾತ್ ಸರ್ವಗತಃ ಶಿವಃ ॥

- ಶ್ವೇತಾ. ೩-೧೧

ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥

-ನಾರಾ. ೧೩-೨ ॥

ಇತ್ಯಾದಿ ಶ್ರುತಿಗಳು ಶಿವನಾರಾಯಣರು ವಿಭುಗಳೆಂದು ಸಾರುತ್ತವೆ. ಹಾಗೆಯೇ

ಉಮಾಸಹಾಯಂ ಪರಮೇಶ್ವರಂ ಪ್ರಭುಂ ತ್ರಿಲೋಚನಂ
ನೀಲಕಂಠಂ ಪ್ರಶಾಂತಮ್ ।
ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ ಸಮಸ್ತ
ಸಾಕ್ಷಿಂ ತಮಸಃ ಪರಸ್ತಾತ್ ॥ - ಕೈವಲ್ಯೋಪನಿಷತ್
ಅಥ ಪುನರೇವ ನಾರಾಯಣಃ ಸೋಽನ್ಯತ್ ಕಾಮಂ
ಮನಸಾಧ್ಯಾಯತ ।
ತಸ್ಯ ಧ್ಯಾನಾಂತಃಸ್ಥಸ್ಯ ಲಲಾಟಾತ್ರ್ಯಕ್ಷಃ ಶೂಲಪಾಣಿಃ
ಪುರುಷೋಽಜಾಯತ ॥ -ಮಹೋಪನಿಷತ್ ೧

ಇತ್ಯಾದಿ ಶ್ರುತಿಗಳು ಅವರು ಶರೀರಧಾರಿಗಳೆಂದು ಹೇಳುತ್ತವೆ.

ಅವರು ಸರ್ವವ್ಯಾಪಕರಾದ ವಿಭುಗಳೆಂಬ ಮೊದಲನೆಯ ಪಕ್ಷ ಸರಿಯಲ್ಲ. ಸತ್ಯಂ ಜ್ಞಾನಮನಂತಂ ಬ್ರಹ್ಮ ॥ ತೈತ್ತಿ ೨-೧-೧ ॥ ಎಂಬ

ಇನ್ನೊಂದು ಶ್ರುತಿಯಲ್ಲಿರುವ ಬ್ರಹ್ಮಪದದಿಂದ ಆಕಾಂಕ್ಷೆಯು ಪರಿಹೃತವಾಗುತ್ತದೆ. ಬ್ರಹ್ಮ, ಶಿವ, ನಾರಾಯಣ ಶಬ್ದಗಳು ವಿಭು ಎಂಬ ಅರ್ಥದಲ್ಲಿ ಪರ್ಯಾಯ ಶಬ್ದಗಳು. ಹಸ್ತ, ಕರ, ಪಾಣಿ ಶಬ್ದಗಳಿದ್ದಂತೆ. ಆದ್ದರಿಂದ ವಿಶೇಷಾಕಾಂಕ್ಷೆಯು ಹುಟ್ಟುವುದಿಲ್ಲ. ಛಾಗ ಪಶುನ್ಯಾಯಕ್ಕೆ ಅವಕಾಶವಿಲ್ಲ. ಬ್ರಹ್ಮ, ಶಿವ, ನಾರಾಯಣ ಶಬ್ದಗಳು ಪರ್ಯಾಯ-ಗಳಾಗಿದ್ದರೂ ವೇದಾಂತಿಗಳಲ್ಲಿ ಬ್ರಹ್ಮಶಬ್ದವ್ಯವಹಾರವೇ ಪ್ರಸಿದ್ಧವಾಗಿದೆ. ಬ್ರಹ್ಮವಾದಿನೋ ವದಂತಿ, ಅಥಾತೋ ಬ್ರಹ್ಮ ಜಿಜ್ಞಾಸಾ, **ಯಂ ಬ್ರಹ್ಮ ವೇದಾಂತ ವಿದೋ ವದಂತಿ** - ಇತ್ಯಾದಿ ಶ್ರುತಿ, ಸೂತ್ರ, ಪುರಾಣ ವಾಕ್ಯಗಳಲ್ಲಿ ಬ್ರಹ್ಮಶಬ್ದವೇ ಹೆಚ್ಚಾಗಿ ಪ್ರಯುಕ್ತವಾಗಿದೆ.

ಇನ್ನು ಶರೀರಧಾರಿಗಳೆಂಬ ಎರಡನೆಯ ಪಕ್ಷವೂ ಸರಿಯಲ್ಲ. ಈ ಪಕ್ಷದಲ್ಲಿ ಮೂರು ವಿಕಲ್ಪಗಳಾಗುತ್ತವೆ. ಕೇವಲ ಶರೀರವು ಜಗತ್ಕಾರಣವೇ ? ಕೇವಲ ಬ್ರಹ್ಮವೇ ಅಥವಾ ಶರೀರ ವಿಶಿಷ್ಟವಾದ ಬ್ರಹ್ಮವೇ ? ಇವುಗಳಲ್ಲಿ ಮೊದಲನೆಯ ಪಕ್ಷ ಸರಿಯಲ್ಲ. ಕೇವಲ ಶರೀರವು ಮಾಯಾ ಕಾರ್ಯವಾದ್ದರಿಂದ ಅದು ಅಚೇತನವಾಗುತ್ತದೆ. ಅದು ಜಗತ್ತಿಗೆ ನಿಮಿತ್ತಕಾರಣವಾಗಲಾರದು ಕೇವಲ ಶರೀರವು ವ್ಯಾಪಕವಲ್ಲ. ಆದ್ದರಿಂದ ಉಪಾದಾನಕಾರಣವೂ ಆಗಲಾರದು. ಇಲ್ಲಿ ಒಂದು ಶಂಕೆ ಮೂಡ-ಬಹುದು. ಸ್ಕಾಂದ ಪುರಾಣದಲ್ಲಿ-

**ಘೃತಕಾಠಿನ್ಯವದ್ವಿಪ್ರಾಃ ಕೇವಲಂ ಕೃಪಯೈವ ತು ।**
**ಆವಿರ್ಭೂತಂ ಮಹಾನಂದತಾಂಡವಂ ಕರುಣಾಲಯಮ್ ॥**

**-ಯಜ್ಞ. ೩೬-೫**

ಎಂದು ಹೇಳಲ್ಪಟ್ಟಿದೆ. ಪರಮೇಶ್ವರನು ಶರೀರಧಾರಿಯಾಗಿ ಆವಿರ್ಭವಿಸಿರುವುದನ್ನು ಘೃತಕಾಠಿಣ್ಯಕ್ಕೆ ಹೋಲಿಸಲಾಗಿದೆ. ಘೃತವು ಹೆಪ್ಪುಗಟ್ಟಿ ಕಠಿಣವಾಗುವುದು. ಘೃತವನ್ನು ಬಿಟ್ಟು ಕಾಠಿನ್ಯವು ಬೇರೆಯಲ್ಲ. ಅವೆರಡೂ ಅಭಿನ್ನವೆಂದು ಹೇಳಬೇಕು. ಹಾಗೆಯೇ ಶರೀರ ಶರೀರಿಗಳಿಗೆ

ಅಭೇದವನ್ನು ಅಂಗೀಕರಿಸಿ ಶರೀರಕ್ಕೆ ಜಗತ್ಕಾರಣತ್ತ್ವವನ್ನು ಹೇಳಿದರೆ ದೋಷವೇನು ? ಇದಕ್ಕೆ ಸಮಾಧಾನ ಹೀಗೆ ಶರೀರವು ಪರಿಮಾಣ-ವುಳ್ಳದ್ದು. ಶರೀರಿಯಾದ ಆತ್ಮನು ಪರಿಮಾಣ ರಹಿತನು. ಆದ್ದರಿಂದ ಶರೀರ ಶರೀರಿಗಳಿಗೆ ಅಭೇದವನ್ನು ಹೇಳಲು ಸಾಧ್ಯವಿಲ್ಲ. ಶರೀರವೂ ಪರಿಮಾಣ ರಹಿತವೆಂದು ಹೇಳಿಬಿಡೋಣವೆಂದರೆ, ಅದು ಅವಯವಸಹಿತ-ವಾಗಿರುವುದರಿಂದ ಪರಿಮಾಣ ರಹಿತವಾಗುವುದು ಶಕ್ಯವಲ್ಲ. ಭಾಗವತದಲ್ಲಿ ''ಸತ್ತ್ವ, ರಜಸ್ತಮಸ್ಸುಗಳು ಮಾಯೆಯ ಗುಣಗಳು. ಪರಮಾತ್ಮನು ಒಬ್ಬನೇ ಆಗಿದ್ದರೂ ಈ ಗುಣಗಳಿಂದ ಕೂಡಿದವನಾಗಿ ಸ್ಥಿತ್ಯಾದಿಕಾರ್ಯಗಳನ್ನು ನಿರ್ವಹಿಸುವುದಕ್ಕೋಸ್ಕರ ವಿಷ್ಣು, ಬ್ರಹ್ಮ, ಹರ ಎಂಬ ಸಂಜ್ಞೆಗಳನ್ನು ಧರಿಸುತ್ತಾನೆ'' ಎಂದು ಹೇಳಿದೆ. ಇದೇ ರೀತಿಯಲ್ಲಿ ಇತರ ಪುರಾಣಗಳಲ್ಲಿಯೂ ಹೇಳಿರುವುದರಿಂದ ಭಗವಂತನ ಶರೀರವು ಮಾಯಾಮಯವೆಂದು ಸಿದ್ಧವಾಗುತ್ತದೆ. ಹಾಗಾದರೆ ಶರೀರ ಶರೀರಿಗಳಿಗೆ ಅಭೇದವನ್ನು ಪ್ರತಿಪಾದಿಸುವ ಸ್ಕಾಂದ ಪುರಾಣಾದಿಗಳಲ್ಲಿರುವ ವಚನ-ಗಳಿಗೆ ಗತಿಯೇನು ? ಆ ವಚನಗಳು ಪ್ರತಿಪಾದಿಸುವ ವಿಷಯವು ಬಾಧಿತವಾಗುವುದರಿಂದ ಅವುಗಳಿಗೆ ಆ ವಿಷಯದಲ್ಲಿ ತಾತ್ಪರ್ಯವಿಲ್ಲ. ಕೇವಲ ಭಕ್ತರಿಗೆ ವಿಶ್ವಾಸವನ್ನುಂಟುಮಾಡುವುದೇ ಅವುಗಳ ಉದ್ದೇಶ.

ಇನ್ನು ಕೇವಲ ಬ್ರಹ್ಮವೇ ಜಗತ್ಕಾರಣವೆಂಬ ಎರಡನೆಯ ಪಕ್ಷವೂ ಸರಿಯಲ್ಲ. ಆ ಪಕ್ಷದಲ್ಲಿ ಮಾಯಾತೀತವಾದ ಶುದ್ಧಬ್ರಹ್ಮವು ಜಗತ್ಕಾರಣ-ವೆಂದು ಹೇಳುತ್ತೀರೋ ? ಅಥವಾ ಮಾಯಾಸಹಿತವಾದ ಬ್ರಹ್ಮವೆಂದೋ ? ಇವುಗಳಲ್ಲಿ ಮೊದಲನೆಯ ಪಕ್ಷ ಯುಕ್ತವಾದುದಲ್ಲ; **'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್,' 'ಮಾಯಿನಂ ತು ಮಹೇಶ್ವರಮ್'** ಇತ್ಯಾದಿ ಶ್ರುತಿ-ಗಳಿಂದ ಮಾಯಾಸಂಬಂಧವಿಲ್ಲದೆ ನಿರ್ವಿಶೇಷವಾದ ಬ್ರಹ್ಮವು ಜಗತ್ತಿಗೆ ಕಾರಣವಾಗಲಾರದು. ಎರಡನೆಯ ಪಕ್ಷವು ನಮಗೆ ಸಂಮತವೇ ಆಗುತ್ತದೆ. ಆದರೆ ನಿಮ್ಮ ಇಷ್ಟಕ್ಕೆ ಮಾತ್ರ ಅದು ವಿರುದ್ಧವಾಗುತ್ತದೆ. ಏಕೆಂದರೆ ಶರೀರಸಹಿತವಾದ ಬ್ರಹ್ಮವು ಜಗತ್ಕಾರಣವೆಂದು ನೀವು ಒಪ್ಪಿದ್ದೀರಿ.

ಇನ್ನು ಶರೀರ ವಿಶಿಷ್ಟವಾದ ಬ್ರಹ್ಮವು ಜಗತ್ಕಾರಣವೆಂಬ ಮೂರನೇ ಪಕ್ಷವೂ ಸರಿಯಲ್ಲ. ಅಂತಹ ಬ್ರಹ್ಮವು ನಿಮಿತ್ತ ಕಾರಣವೆಂದರೂ, ಉಪಾದಾನ ಕಾರಣವೆಂದರೂ ಸಿದ್ಧಾಂತಕ್ಕೆ ಹಾನಿಯೊದಗುವುದು. ಬ್ರಹ್ಮವು ಸತ್ತ್ವ ಪ್ರಧಾನಮಾಯೆಯಿಂದೊಡಗೂಡಿ ಜಗತ್ತಿಗೆ ನಿಮಿತ್ತಕಾರಣ-ವೆಂದೂ, ತಮಃಪ್ರಧಾನ ಮಾಯೆಯಿಂದೊಡಗೂಡಿ ಉಪಾದಾನ-ಕಾರಣವೆಂದೂ ಸಕಲ ಗ್ರಂಥಕಾರರೂ ಪ್ರತಿಪಾದಿಸಿದ್ದಾರೆ. ಶ್ರೀ ವಿದ್ಯಾರಣ್ಯರು ಪಂಚದಶಿಯಲ್ಲಿ -

**ಜಗತೋ ಯದುಪಾದಾನಂ ಮಾಯಾಮಾದಾಯ ತಾಮಸೀಮ್ ।**
**ನಿಮಿತ್ತಂ ಶುದ್ಧಸತ್ತ್ವಾಂ ತಾಮುಚ್ಯತೇ ಬ್ರಹ್ಮ ತದ್ಗಿರಾ ॥**

**-ತತ್ತ್ವ ವಿ. ೪೪**

ಎಂದು ಹೇಳಿದ್ದಾರೆ. ''ಸಚ್ಚಿದಾನಂದ ಸ್ವರೂಪವಾದ ಯಾವ ಬ್ರಹ್ಮವು ತಮೋಗುಣ ಪ್ರಧಾನವಾದ ಮಾಯೆಯನ್ನು ಸ್ವೀಕರಿಸಿ ಜಗತ್ತಿಗೆ ಉಪಾದಾನ ಕಾರಣವೂ, ಶುದ್ಧ ಸತ್ತ್ವ ಗುಣ ಪ್ರಧಾನವಾದ ಮಾಯೆಯನ್ನು ಸ್ವೀಕರಿಸಿ ನಿಮಿತ್ತಕಾರಣವೂ ಆಗುವುದೋ ಆ ಬ್ರಹ್ಮವೇ 'ತತ್ತ್ವಮಸಿ' ಎಂಬ ಮಹಾವಾಕ್ಯದಲ್ಲಿರುವ 'ತತ್' ಪದದ ಅರ್ಥ.''

ಹಾಗಾದರೆ ಪುರುಷಸೂಕ್ತ, ಕೈವಲ್ಯ, ತಾಪನೀಯ ಮೊದಲಾದ ಶ್ರುತಿಗಳಲ್ಲಿ ವಿಗ್ರಹ ವಿಶಿಷ್ಟವಾದ ಬ್ರಹ್ಮವು ಜಗತ್ಕಾರಣವೆಂದು ಪ್ರತಿ-ಪಾದಿಸಿರುವುದರಿಂದ ಅವುಗಳ ಅಭಿಪ್ರಾಯವೇನೆಂದು ಹೇಳಬೇಕು ?

ಇದಕ್ಕೆ ಸಮಾಧಾನ ಹೀಗೆ- ಮಾಯಾಸಹಿತನೂ, ಅಶರೀರಿಯೂ ಆದ ಪರಮೇಶ್ವರನಲ್ಲಿ ಜಗತ್ಕಾರಣತ್ತ್ವವು ವಾಸ್ತವವಾಗಿ ಇದೆ. ಈ ಕಾರಣತ್ತ್ವವನ್ನು ಶರೀರ ವಿಶಿಷ್ಟರಾದ ಶಿವ, ವಿಷ್ಣು ಮುಂತಾದ ದೇವತೆಗಳಲ್ಲಿ ಆ ಶ್ರುತಿಗಳು ಆರೋಪಿಸಿ ಹೇಳಿವೆ. ಭಕ್ತರ ಉಪಾಸನೆ-ಗೋಸ್ಕರ ಆರೋಪವು ಆವಶ್ಯಕವೆಂಬುದು ಆ ಶ್ರುತಿಗಳ ಅಭಿಪ್ರಾಯ. ಆದ್ದರಿಂದಲೇ ಸ್ಕಾಂದಪುರಾಣವು ಹೀಗೆ ಹೇಳುತ್ತದೆ-

“ಕೆಲವು ವೇದವಾಕ್ಯಗಳು ರುದ್ರಮೂರ್ತಿಯನ್ನು ಪುರಸ್ಕರಿಸಿ ವರ್ಣಿಸುತ್ತಾ ಪರಮ ಕಾರಣನಾದ ಶಿವನಲ್ಲಿ ಪರ್ಯವಸಾನ ಹೊಂದುತ್ತವೆ. ಕೆಲವು ವಿಷ್ಣುವನ್ನೂ, ಕೆಲವು ಬ್ರಹ್ಮನನ್ನೂ, ಕೆಲವು ಅಗ್ನಿಯನ್ನೂ, ಇನ್ನು ಕೆಲವು ಸೂರ್ಯನನ್ನೂ ಪುರಸ್ಕರಿಸಿ ಪರಮಕಾರಣನಾದ ಶಿವನಲ್ಲಿ ಪರ್ಯವಸಾನ ಹೊಂದುತ್ತವೆ. ಹತ್ತು ಪುರಾಣಗಳು ರುದ್ರನನ್ನೂ, ನಾಲ್ಕು ಪುರಾಣಗಳು ವಿಷ್ಣುವನ್ನೂ, ಎರಡು ಪುರಾಣಗಳು ಬ್ರಹ್ಮನನ್ನೂ, ಒಂದು ಪುರಾಣವು ಅಗ್ನಿಯನ್ನೂ, ಇನ್ನೊಂದು ಸೂರ್ಯನನ್ನು ಪ್ರತಿಪಾದಿಸುತ್ತದೆ. ಹೀಗೆ ಅನೇಕ ಮೂರ್ತಿಗಳ ಮೂಲಕ ಸರ್ವಮೂರ್ತಿಗಳಲ್ಲಿಯೂ ಇರುವ ಪರಮೇಶ್ವರನೇ ಪ್ರತಿಪಾದಿಸಲ್ಪಟ್ಟಿರುವನು. ಸತ್ಯಜ್ಞಾನಾನಂದ ಸ್ವರೂಪನಾದ ಶಿವನೇ ಸಾಕ್ಷಾತ್ ಸಂಸಾರಮೋಚಕನು.”

-ಸೂತ. ಶಿವ. ೮-(೪೩-೪೮)

ಈ ವಾಕ್ಯಗಳಲ್ಲಿ ‘ಪರಮಕಾರಣನಾದ ಶಿವನಲ್ಲಿ’ ಎಂಬ ಉಪಕ್ರಮದಿಂದಲೂ, ಸರ್ವಮೂರ್ತಿಗಳಲ್ಲಿಯೂ ಇರುವ ಎಂಬ ಉಪಸಂಹಾರದಿಂದಲೂ ಹಿಂದೆ ನಾವು ಹೇಳಿದ ತಾತ್ಪರ್ಯವೇ ಹೊರಡುತ್ತದೆ.

ಮತ್ತು ವಿಗ್ರಹವಿಶಿಷ್ಟನೇ ಜಗತ್ಕಾರಣನೆಂಬ ಪಕ್ಷದಲ್ಲಿ ಶಿವವಿಗ್ರಹ ವಿಶಿಷ್ಟನು ಕಾರಣನೇ, ವಿಷ್ಣುವಿಗ್ರಹವಿಶಿಷ್ಟನು ಕಾರಣನೇ ? ಎಂದು ನಿರ್ಣಯಿಸಲು ತಕ್ಕ ಪ್ರಮಾಣವಿಲ್ಲದೆ ಹೋಗುತ್ತದೆ. ಶ್ವೇತಾಶ್ವತರ, ಅಥರ್ವಶಿಖಾ ಮೊದಲಾದ ಶ್ರುತಿಗಳಿಂದ ಶಿವವಿಗ್ರಹವಿಶಿಷ್ಟನು ಕಾರಣನೆಂದು ಕೆಲವರು ಹೇಳಬಹುದು. ಆದರೆ ಮಹೋಪನಿಷತ್ ಮೊದಲಾದ ಶ್ರುತಿಗಳಿಗೆ ಅನುಸಾರವಾಗಿ ವೈಷ್ಣವಸಂಮತವಾದ ಶರೀರದಿಂದ ಯುಕ್ತನಾದ ನಾರಾಯಣನು ಕಾರಣನೇಕಾಗಬಾರದು ? ಮಹೋಪನಿಷತ್ತಿನಲ್ಲಿ ಹೀಗೆ ಹೇಳಿದೆ, “ಅನಂತರ ನಾರಾಯಣನು ಇನ್ನೊಂದು ಕಾಮನೆಯುಳ್ಳವನಾಗಿ ಮನಸ್ಸಿನಿಂದ ಧ್ಯಾನಿಸಿದನು. ಧ್ಯಾನನಿಷ್ಠನಾದ ಅವನ ಹಣೆಯಿಂದ ತ್ರಿನೇತ್ರನೂ ಶೂಲಪಾಣಿಯೂ ಆದ ಪುರಷನು ಹುಟ್ಟಿದನು.”

ಆದರೆ ''ಬ್ರಹ್ಮ, ವಿಷ್ಣು, ರುದ್ರ, ಇಂದ್ರರು ಹುಟ್ಟುತ್ತಾರೆ. ಇವರಿಗೆ ಕಾರಣನೂ ಸರ್ವೈಶ್ವರ್ಯ ಸಂಪನ್ನನೂ, ಸರ್ವೇಶ್ವರನೂ ಆದ ಶಂಭುವು ಹೃದಯಾಕಾಶದಲ್ಲಿ ಧ್ಯಾನಿಸಲ್ಪಡಬೇಕು.'' - **'ಅಥರ್ವಶಿಖೋಪನಿಷತ್'** ಎಂದು ಮೊದಲಾದ ಶ್ರುತಿಗಳಿಂದ ನಾರಾಯಣನು ಶಿವನಿಂದ ಹುಟ್ಟುತ್ತಾನೆಂದು ತಿಳಿದುಬರುವುದರಿಂದ ನಾರಾಯಣನು ಸರ್ವಕಾರಣ-ನಲ್ಲವೆಂದು ಹೇಳಬಹುದಲ್ಲವೆ? ಇಲ್ಲ. **'ನಾರಾಯಣಾದ್ರುದ್ರೋ ಜಾಯತೇ'** ಇತ್ಯಾದಿ ಶ್ರುತಿಗಳಿಂದ ಶಿವನು ನಾರಾಯಣನಿಂದ ಹುಟ್ಟುತ್ತಾನೆಂದು ತಿಳಿದುಬರುವುದರಿಂದ ನಾರಾಯಣನೇ ಸರ್ವಕಾರಣ-ನೆಂದೂ ಹೇಳಬಹುದಾಗಿದೆ. ಆದ ಕಾರಣ ಇದು ಹೀಗೆಯೇ ಎಂದು ನಿರ್ಧರಿಸಲು ಸಾಧ್ಯವಿಲ್ಲವಾದ ಪ್ರಯುಕ್ತ ನಾವು ಹೇಳಿದಂತೆ ಮಾಯೋಪಾಧಿಸಹಿತನೂ, ಶರೀರರಹಿತನೂ ಆದ ಪರಮೇಶ್ವರನೇ ಸರ್ವಕಾರಣನೆಂದು ಒಪ್ಪಿಕೊಳ್ಳಬೇಕು.

**'ಬ್ರಹ್ಮವಿಷ್ಣುರುದ್ರೇಂದ್ರಾಸ್ತೇ ಸಂಪ್ರಸೂಯಂತೇ'** ಎಂಬ ಶ್ರುತಿಯು ಬ್ರಹ್ಮಾದಿ ತ್ರಿಮೂರ್ತಿಗಳಿಗೆ ಉತ್ಪತ್ತಿಯನ್ನು ಪ್ರತಿಪಾದಿಸಿರುವುದರಿಂದ ಅವರು ಜೀವರೇ ಹೊರತು ಬ್ರಹ್ಮಸ್ವರೂಪರಲ್ಲ. ಅಂದಮೇಲೆ ಅವರು ಉಪಾಸನೆಗೆ ಯೋಗ್ಯರು ಹೇಗಾಗುವರು? - ಎಂಬ ಶಂಕೆಯೂ ಈ ಪ್ರಕಾರ ನಿರಸ್ತವಾಗುತ್ತದೆ. ಹೇಗೆಂದರೆ, ಮುಂದೆ ಉದಾಹರಿಸುವ ಬ್ರಹ್ಮೋಪನಿಷತ್ತು, ಸೂತಸಂಹಿತಾ, ವಿಷ್ಣುಪುರಾಣ ಮತ್ತು ಭಾಗವತಗಳಲ್ಲಿ ಬ್ರಹ್ಮಾದಿ ತ್ರಿಮೂರ್ತಿಗಳು ಈಶ್ವರಕೋಟಿಯಲ್ಲಿ ಸೇರಿದ್ದಾರೆಂದೂ, ಮುಮುಕ್ಷುಗಳಿಗೆ ಉಪಾಸ್ಯರೆಂದೂ, ಅವರಿಗೆ ಆವಿರ್ಭಾವತಿರೋಭಾವಗಳಿವೆಯೆಂದೂ ಪ್ರತಿಪಾದಿಸಲ್ಪಟ್ಟಿದೆ.

''ಈ ಪುರುಷನಿಗೆ ನಾಭಿ, ಹೃದಯ, ಕಂಠ, ಶಿರಸ್ಸುಗಳೆಂಬ ನಾಲ್ಕು ಸ್ಥಾನಗಳಿವೆ. ಇಲ್ಲಿ ಬ್ರಹ್ಮವು ನಾಲ್ಕು ಪಾದವುಳ್ಳದ್ದಾಗಿ ಪ್ರಕಾಶಿಸುವುದು. ಜಾಗ್ರತ್ತಿನಲ್ಲಿ ಬ್ರಹ್ಮ; ಸ್ವಪ್ನದಲ್ಲಿ ವಿಷ್ಣು; ಸುಷುಪ್ತಿಯಲ್ಲಿ ರುದ್ರ; ನಾಲ್ಕನೆಯದು ಅಕ್ಷರ'' - ಬ್ರಹ್ಮೋಪನಿಷತ್

''ಒಬ್ಬನೇ ಶಿವನು ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವುದಕ್ಕೋಸ್ಕರ ಬ್ರಹ್ಮ, ವಿಷ್ಣು, ರುದ್ರರೆಂಬ ಕಲ್ಪನೆಗಳಿಂದ ಪ್ರಕಟನಾಗಿದ್ದಾನೆ''

-ಸೂತ. ಶಿವ. ೮-೨೯

''ಬ್ರಹ್ಮ, ವಿಷ್ಣು ಮತ್ತು ರುದ್ರರು ಶಿವನಿಂದ ಆವಿರ್ಭೂತರಾದರೂ ಪರಮಾತ್ಮ ಕೋಟಿಯಲ್ಲಿ ಸೇರಿದ್ದಾರೆ. ಜೀವಕೋಟಿಯಲ್ಲಿ ಸೇರಿಲ್ಲ.''

-ಸೂತ. ಯಜ್ಞ ಉಪ. ೩-೫೧

''ಜೀವರು ಪುಣ್ಯ ಪಾಪಗಳಿಂದಲೂ, ರಾಗದ್ವೇಷಗಳೆಂಬ ಮಲಗಳಿಂದಲೂ, ಜನನ ಮರಣಗಳಿಂದಲೂ ಸಹಿತರಾಗಿದ್ದಾರೆ. ಅವರು ಸಂಸಾರಿಗಳು ಮತ್ತು ಅಸ್ವತಂತ್ರರು. ಪರಮಾತ್ಮನ ಅವತಾರಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಪುಣ್ಯಪಾಪಾದಿಗಳಿಲ್ಲ. ಪರಮಾತ್ಮನ ಆಜ್ಞೆಯಂತೆ ಪ್ರಾಣಿಗಳಿಗೆ ಹಿತವನ್ನು ಮಾಡುವುದಕ್ಕಾಗಿ ಅವರು ಅವತರಿಸುವರು. ಹಾಗೆಯೇ ಅಂತರ್ಧಾನ ಹೊಂದುವರು. ಈ ತ್ರಿಮೂರ್ತಿಗಳನ್ನೂ, ಅವರ ಅವತಾರಗಳನ್ನೂ ಸಂಸಾರಿಗಳಾದ ಜೀವರು ಇಹಪರಗಳ ಸೌಖ್ಯಕ್ಕಾಗಿ ಉಪಾಸನೆ ಮಾಡಬೇಕು.'' -ಸೂತ. ಯಜ್ಞ- ಉಪ ೬-(೧೬-೧೯)

''ಒಬ್ಬನೇ ಭಗವಂತನು ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವುದಕ್ಕೋಸ್ಕರ ಬ್ರಹ್ಮ, ವಿಷ್ಣು, ಶಿವ ಎಂಬ ಸಂಜ್ಞೆಗಳನ್ನು ಹೊಂದುತ್ತಾನೆ.'' -ವಿಷ್ಣುಪುರಾಣ

''ಸತ್ತ್ವ, ರಜಸ್ತಮಸ್ಸುಗಳು ಮಾಯೆಯ ಗುಣಗಳು. ಪರಮಾತ್ಮನು ಈ ಗುಣಗಳಿಂದ ಸಹಿತನಾಗಿ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವುದಕ್ಕೋಸ್ಕರ ಬ್ರಹ್ಮ, ವಿಷ್ಣು, ಶಿವ ಎಂಬ ಸಂಜ್ಞೆಗಳನ್ನು ಧರಿಸುತ್ತಾನೆ. ಅವರಲ್ಲಿ ಸತ್ತ್ವ ಗುಣಯುಕ್ತನಾದ ಪರಮಾತ್ಮನಿಂದ ಜನರಿಗೆ ಶ್ರೇಯಸ್ಸುಗಳಾಗುವುವು'' -ಭಾಗವತ

ಆದ್ದರಿಂದ ತ್ರಿಮೂರ್ತಿಗಳು ಜೀವರೆಂದೂ, ಉಪಾಸನೆಗೆ ಅನರ್ಹರೆಂದೂ, ಅವರಿಗೆ ಜನ್ಮ ಉಂಟೆಂದೂ ಶಂಕಿಸುವುದಕ್ಕೆ

ಅವಕಾಶವಿಲ್ಲ. ಆದಕಾರಣ ಮಾಯೋಪಾಧಿಸಹಿತನೂ, ಜಗತ್ಕಾರಣನೂ, ಅದ್ವಿತೀಯನೂ ಆದ ಪರಮಾತ್ಮನು ತನ್ನ ಮಾಯೆಯಲ್ಲಿರುವ ಸತ್ತ್ವಾದಿಗುಣಗಳಿಂದ ಕೂಡಿ ಸ್ವೇಚ್ಛೆಯಾಗಿ ಬ್ರಹ್ಮಾದಿ ತ್ರಿಮೂರ್ತಿಗಳ ರೂಪದಿಂದ ಅವತರಿಸುತ್ತಾನೆಂದು ಒಪ್ಪಿಕೊಳ್ಳಬೇಕು. 'ಬ್ರಹ್ಮ, ವಿಷ್ಣು, ರುದ್ರೇಂದ್ರಾಸ್ತೇ ಸಂಪ್ರಸೂಯಂತೇ' ಎಂಬ ಶ್ರುತಿಗೂ ಈ ಅವತಾರದಲ್ಲಿಯೇ ತಾತ್ಪರ್ಯ .

ಈಗ ಒಂದು ಶಂಕೆಯನ್ನು ಮಾಡಬಹುದು. ಏನೆಂದರೆ, ಕಾರಣಂ ತು ಧ್ಯೇಯಃ ಸರ್ವೈಶ್ವರ್ಯಸಂಪನ್ನಃ ಸರ್ವೇಶ್ವರಃ ಶಂಭುರಾಕಾಶಮಧ್ಯೇ' ॥ ಅಥರ್ವಶಿಖಾ ॥ ಎಂಬ ಶ್ರುತಿಬಲದಿಂದ ಶಿವನೇ ಸರ್ವಕಾರಣನೆಂದಾಗಲಿ, 'ನಾರಾಯಣಾದ್ರುದ್ರೋ ಜಾಯತೇ' ಇತ್ಯಾದಿ ಶ್ರುತಿಯು ತ್ರಿಮೂರ್ತಿ-ಗಳಲ್ಲಿ ಸೇರಿದ ಗುಣಮೂರ್ತಿಯಾದ ಶಿವನನ್ನು ಕುರಿತು ಪ್ರವೃತ್ತವಾಗಿದೆ-ಯೆಂದು ಹೇಳೋಣ. ಆದ್ದರಿಂದ ತ್ರಿಮೂರ್ತಿಗಳಿಗೆ ಅತಿರಿಕ್ತನಾದ ತುರೀಯ ಶಿವನು ಸರ್ವಕಾರಣನೆಂದರೆ ಬಾಧಕವೇನೂ ಇಲ್ಲವಷ್ಟೆ ?

ಇದಕ್ಕೆ ಸಮಾಧಾನ :- ತುರೀಯ ಶಿವನು ಶರೀರವೆಂಬ ಉಪಾಧಿಸಹಿತನಾಗಿ ಸರ್ವಕಾರಣನೆಂದು ಹೇಳುವಿರೋ ? ಅಥವಾ ಶರೀರೋಪಲಕ್ಷಿತನಾಗಿ ಸರ್ವಕಾರಣನೆಂದು ಹೇಳುವಿರೋ? ಮೊದಲನೆಯ ಪಕ್ಷ ಸರಿಯಲ್ಲ. ತುರೀಯ ಶರೀರವು ಅವಯವ ಸಹಿತವಾದ್ದರಿಂದ ಜನ್ಯವಾಗುತ್ತದೆ. ಆಗ ಅದಕ್ಕೆ ಶರೀರೋಪಾಧಿಸಹಿತವಾದ ಇನ್ನೊಂದು ಕಾರಣವನ್ನು ಒಪ್ಪಬೇಕಾಗುವುದು. ಹೀಗೆ ಆ ಕಾರಣಕ್ಕೆ ಇನ್ನೊಂದು ಕಾರಣವನ್ನು ಹೇಳುತ್ತಾ ಹೋದರೆ ಅನವಸ್ಥಾದೋಷ ಉಂಟಾಗುತ್ತದೆ. ತುರೀಯ ಶಿವನಿಗೆ ಅನಾದಿಯಾದ ಒಂದು ಶರೀರವಿದೆಯೆಂದೂ ಹೇಳುವಂತಿಲ್ಲ. ಏಕೆಂದರೆ, ಶರೀರವೆಲ್ಲವೂ ಮಾಯಾಜನ್ಯವಾದ್ದರಿಂದ ಅನಾದಿಯಾಗಿ ಶರೀರವಿದೆಯೆಂಬುದಕ್ಕೆ ಪ್ರಮಾಣವಿಲ್ಲ. ಮತ್ತು 'ಅಪಾಣಿಪಾದೋ ಜವನೋ ಗ್ರಹೀತಾ ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ' ॥ ಶ್ವೇತಾ. ೩-೧೯ ॥ ಇತ್ಯಾದಿ ಶ್ರುತಿಗಳೂ, ''ಏಕರಣತ್ವಾನ್ನೇತಿ

**ಚೇತ್ತದುಕ್ತಮ್''** ಇತ್ಯಾದಿ ಸೂತ್ರಗಳೂ, **ಅಕರಣಸ್ಯಾಪಿ ಬ್ರಹ್ಮಣಃ ಸರ್ವಸಾಮರ್ಥ್ಯಂ ದರ್ಶಯತಿ** ಇತ್ಯಾದಿ ಭಾಷ್ಯವೂ ಪರಮಾತ್ಮನಿಗೆ ಶರೀರವಿಲ್ಲವೆಂಬುದನ್ನು ಅಂಗೀಕರಿಸಿವೆ. ಆದ್ದರಿಂದ ಅವುಗಳಿಗೆ ವಿರೋಧವಾಗುವುದು. ಅಲ್ಲದೆ ಪರಮಾತ್ಮನು ಶರೀರ ಸಹಿತನಾಗಿ ಜಗತ್ತಿಗೆ ನಿಮಿತ್ತಕಾರಣನೂ ಅಲ್ಲ. ಉಪಾದಾನಕಾರಣವೂ ಅಲ್ಲವೆಂದು ಹಿಂದೆಯೇ ಈ ಮತವನ್ನು ನಾವು ಖಂಡಿಸಿದ್ದೇವೆ. ಇನ್ನು ಶರೀರೋಪ-ಲಕ್ಷಿತನಾಗಿ ಸರ್ವಕಾರಣನೆಂಬ ಎರಡನೆಯ ಪಕ್ಷವು ನಮಗೆ ಸಂಮತವೇ ಸರಿ. ಶರೀರೋಪಲಕ್ಷಿತನೆಂದರೆ ನಾವು ಹೇಳುವಂತೆ ಮಾಯೋಪಾಧಿ-ಸಹಿತನಾದ ಚೈತನ್ಯನೆಂದೇ ಅರ್ಥ. ''ಘಟ್ಟಕುಟೀ[೧೦] ಪ್ರಭಾತವೃತ್ತಾಂತ'' ನ್ಯಾಯದಿಂದ ನಾವು ಹೇಳುವ ಮಾತನ್ನು ನೀವು ಬಳಸಿಕೊಂಡು ಹೇಳುತ್ತಿದ್ದೀರಿ, ಅಷ್ಟೆ.

ಶಂಕೆ :- ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗಾಗಿ ತುರೀಯ ಶರೀರವನ್ನು ಅಂಗೀಕರಿಸಲು ಸಾಧ್ಯವಿಲ್ಲದಿದ್ದರೆ ಬೇಡ. ಆದರೆ 'ಕಾರಣಂ ತು ಧ್ಯೇಯಃ ಸರ್ವೈಶ್ವರ್ಯಸಂಪನ್ನಃ ಸರ್ವೇಶ್ವರಃ ಶಂಭುರಾಕಾಶಮಧ್ಯೇ' ಎಂಬ ಅಥರ್ವಶಿಖೋಪನಿಷತ್ತಿಗೆ ಅನುಸಾರವಾಗಿ ತುರೀಯನಾದ ಶಿವಮೂರ್ತಿಯನ್ನು ಮಾತ್ರ ಅಂಗೀಕರಿಸಬೇಕು. ಇದು ಉಪಾಸನೆಗೋಸ್ಕರ. ಆದ್ದರಿಂದ ಬ್ರಹ್ಮಾದಿತ್ರಿಮೂರ್ತಿಗಳಿಗಿಂತ ಅತಿರಿಕ್ತನಾದ ಈ ತುರೀಯಶಿವನಿಗೆ ಶ್ರೇಷ್ಠತೆಯೂ ಸಿದ್ಧಿಸುವುದು.

ಸಮಾಧಾನ :- ಅಥರ್ವಶಿಖೋಪನಿಷತ್ತಿನಲ್ಲಿ **'ಧ್ಯಾಯೀತೇ-ಶಾನಮ್'** ಇತ್ಯಾದಿ ವಾಕ್ಯಗಳಲ್ಲಿರುವ **'ಧ್ಯಾಯೀತೇಶಾನಮ್, ಕಾರಣಂತು**

---

೧೦. ಘಟ್ಟಕುಟಿಯೆಂದರೆ ಸುಂಕದ ಕಟ್ಟೆ. ಒಬ್ಬ ಗಾಡಿಯವನು ಸುಂಕವನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ತನ್ನ ಗಾಡಿಯನ್ನು ಸುಂಕದ ಕಟ್ಟೆಗೆ ಸ್ವಲ್ಪ ದೂರದಲ್ಲಿ ಅಡ್ಡಲಾಗಿ ಹೊಡೆದನು. ರಾತ್ರಿಯಾದ್ದರಿಂದ ಕಾಡಿನಲ್ಲೆಲ್ಲಾ ಅಲೆದು ಬೆಳಗಾಗುವ ಹೊತ್ತಿಗೆ ಸುಂಕದ ಕಟ್ಟೆಯ ಬಳಿಗೇ ಬಂದು ಸೇರಿದನು! ಅವನಿಗೆ ಸುಂಕವೇನೂ ತಪ್ಪಲಿಲ್ಲ. ರಾತ್ರಿಯೆಲ್ಲಾ ಸುತ್ತಿದುದೇ ಪ್ರಯೋಜನ.

ಧ್ಯೇಯಃ' ಎಂಬುದರಿಂದ ಈಶಾನಾದಿಶಬ್ದವಾಚ್ಯನೂ, ಜಗತ್ಕಾರಣನೂ ಆದ ಪರಮೇಶ್ವರನನ್ನು ಧ್ಯಾನಮಾಡಬೇಕೆಂದು ವಿಧಿಸಲಾಗಿದೆ. ಮಾಯೋ-ಪಾಧಿಸಹಿತವಾದ ಅಮೂರ್ತರೂಪದಿಂದಲೇ ಪರಮೇಶ್ವರನು ಜಗತ್ಕಾರಣನಾಗುತ್ತಾನೆಂದು ನಾವು ಹಿಂದೆ ಪ್ರತಿಪಾದಿಸಿದ್ದೇವೆ. ಅದಕ್ಕೆ ಅನುಸಾರವಾಗಿ **'ಶಂಭುರಾಕಾಶಮಧ್ಯೇ, ಶಿವ ಏಕೋ ಧ್ಯೇಯಃ'** ಎಂಬಲ್ಲಿಯೂ ಶಂಭು, ಶಿವ, ಶಬ್ದಗಳಿಗೆ ಅಮೂರ್ತನಾದ ಪರಶಿವನೆಂದು ಅರ್ಥ. ಅಂತಹ ಪರಶಿವನನ್ನು ಧ್ಯಾನಿಸಬೇಕೆಂದು ಅಲ್ಲಿ ವಿಧಿಸಲಾಗಿದೆ. ಅಂತೂ ಅಥರ್ವಶಿಖೋಪನಿಷತ್ತಿಗೆ ಅಶರೀರನಾದ ಪರಮೇಶ್ವರನನ್ನು ಧ್ಯಾನಿಸಬೇಕೆಂದು ಮಾತ್ರವೇ ತಾತ್ಪರ್ಯ . ಅದು ತುರೀಯ ಶಿವಮೂರ್ತಿ-ಯನ್ನು ಬೋಧಿಸುತ್ತದೆಯೆಂಬುದು ಸರಿಯಲ್ಲ.

ಶಂಕೆ :- ಕೈವಲ್ಯೋಪನಿಷತ್ತಿನಲ್ಲಿ **'ಉಮಾಸಹಾಯಂ ಪರಮೇಶ್ವರಂ ವಿಭುಂ ತ್ರಿಲೋಚನಮ್'** ಇತ್ಯಾದಿ ಸ್ಥಳಗಳಲ್ಲಿ ಉಮಾಸಹಿತನೂ, ತ್ರಿಲೋಚನನೂ, ನೀಲಕಂಠನೂ ಆದ ಪರಮೇಶ್ವರನನ್ನು ಧ್ಯಾನಿಸ-ಬೇಕೆಂದು ಹೇಳಿದೆ. ಉಮಾಸಹಿತತ್ತ್ವ ಮೊದಲಾದುವುಗಳು ಗುಣವಿಶಿಷ್ಟ-ನಾದ ಪರಮೇಶ್ವರನಲ್ಲಿಯೇ ಸಂಭವಿಸುತ್ತವೆ. ಆದ್ದರಿಂದ 'ಗುಣೋಪ ಸಂಹಾರ ನ್ಯಾಯ'ದಂತೆ ಅಥರ್ವಶಿಖೆಯಲ್ಲಿಯೂ ಗುಣವಿಶಿಷ್ಟನಾದ ಶರೀರಧಾರಿ ಶಿವನೇ ಧ್ಯೇಯನೆಂದು ಹೇಳುವುದು ಯುಕ್ತವಲ್ಲವೆ ?

ಸಮಾಧಾನ :- ತ್ರಿಮೂರ್ತಿಗಳಲ್ಲೊಬ್ಬನಾದ ಗುಣಮೂರ್ತಿ ಶಿವನನ್ನು ಧ್ಯಾನಿಸಬೇಕೆಂದಾಗಲಿ ಅಥವಾ ನಿರ್ಗುಣನಾದ ಪರಮೇಶ್ವರನಲ್ಲಿ ಆ ಗುಣಗಳನ್ನು ಉಪಾಸನೆಗೋಸ್ಕರ ಆರೋಪಿಸಿಯಾಗಲಿ ಧ್ಯಾನ ಮಾಡ-ಬೇಕೆಂದು ಆ ಉಪನಿಷತ್ತಿಗೆ ಅರ್ಥವನ್ನು ಹೇಳಬಹುದಾಗಿದೆ. ಅದಕ್ಕೋಸ್ಕರ ತುರೀಯ ಶಿವನನ್ನು ಕಲ್ಪಿಸಬೇಕಾಗಿಲ್ಲ. ಅಥವಾ **'ಧ್ಯಾಯೀತೇಶಾನಮ್'** ಎಂಬಲ್ಲಿ ತ್ರಿಮೂರ್ತಿಗಳಲ್ಲೊಬ್ಬನಾದ ಗುಣ-ಮೂರ್ತಿ ಶಿವನನ್ನೇ ಧ್ಯಾನಿಸಬೇಕೆಂದು ವಿಧಿಸಲಾಗಿದೆ. ಅದನ್ನು ನಿರ್ವಹಿಸಲು ಉಪಾಸ್ಯನಾದ ಗುಣಮೂರ್ತಿ ಶಿವನು ಪರಬ್ರಹ್ಮ

ಸ್ವರೂಪನೆಂದು ತೋರಿಸಿಕೊಡಬೇಕಾಗಿದೆ. ಅದಕ್ಕೋಸ್ಕರ 'ಕಾರಣಂ ತು ಧ್ಯೇಯಃ' ಇತ್ಯಾದಿ ವಚನಗಳಿಂದ ಅಮೂರ್ತಪರಮೇಶ್ವರನಿಗಿರುವ ಕಾರಣತ್ತ್ವ, ಸರ್ವೇಶ್ವರತ್ವಾದಿಗಳು ಅಭಿನ್ನನಾದ ಗುಣಮೂರ್ತಿ ಶಿವನಲ್ಲಿ ಪ್ರತಿಪಾದಿಸಲ್ಪಟ್ಟಿವೆ. 'ಬ್ರಹ್ಮ,, ವಿಷ್ಣು, ರುದ್ರೇಂದ್ರಾಸ್ತೇ ಸಂಪ್ರಸೂಯಂತೇ' ಎಂಬ ಶ್ರುತಿವಾಕ್ಯವು ಪರಮೇಶ್ವರನು ಸ್ವೇಚ್ಛೆಯಿಂದ ಅವತರಿಸುವನೆಂದು ಬೋಧಿಸುತ್ತದೆ. ಆದ್ದರಿಂದ ಪರಮೇಶ್ವರನು ಗುಣಮೂರ್ತಿ ಶಿವನಾಗಿ ಆವಿರ್ಭವಿಸುತ್ತಾನೆಂಬುದೂ, ಅಮೂರ್ತ-ರೂಪದಿಂದ ಜಗತ್ಕಾರಣನೆಂಬುದೂ ವಿರುದ್ಧವಲ್ಲ. ಸ್ಕಾಂದ ಮೊದಲಾದ ಶೈವ ಪುರಾಣಗಳ ತಾತ್ಪರ್ಯವೂ ಹೀಗೆಯೇ ಇದೆಯೆಂದು ತಿಳಿಯಬೇಕು. ''ಕೆಲವು ವೇದವಾಕ್ಯಗಳು ರುದ್ರಮೂರ್ತಿಯನ್ನಾಶ್ರಯಿಸಿ ಪರಮ-ಕಾರಣನಾದ ಶಿವನಲ್ಲಿ ಪರ್ಯವಸಾನ ಹೊಂದುತ್ತವೆ.'' ಮುಂತಾದ ಸ್ಕಾಂದವಚನಗಳನ್ನು ಹಿಂದೆಯೇ ಉದಾಹರಿಸಿದ್ದೇವೆ. ಇದರಿಂದ ಬ್ರಹ್ಮಾದಿ ಸಕಲ ಮೂರ್ತಿಗಳಲ್ಲಿ ಅನುಸ್ಯೂತನೂ, ಜಗತ್ಕಾರಣನೂ, ಮಾಯೋಪಾಧಿಸಹಿತನೂ, ಅಶರೀರನೂ ಆದ ಪರಮೇಶ್ವರನನ್ನು ಪರಮಶಿವ, ಮಹಾದೇವ ಮೊದಲಾದ ಶಬ್ದಗಳಿಂದ ಕರೆಯುತ್ತಾರೆಂದೂ, ಉಪಾಸನೆಗೆ ಅನುಕೂಲವಾಗುವುದಕ್ಕೋಸ್ಕರ ಬ್ರಹ್ಮ, ವಿಷ್ಣು ಮುಂತಾದ ರೂಪವನ್ನು ಧರಿಸುತ್ತಾನೆಂದೂ, ಗೊತ್ತಾಗುತ್ತದೆ. ಮತ್ತು ಕೆಲವು ಉಪನಿಷತ್ತುಗಳೂ, ಪುರಾಣಗಳೂ, ಅವನನ್ನು ರುದ್ರಮೂರ್ತಿ-ಯನ್ನಾಗಿಯೂ, ಕೆಲವು ವಿಷ್ಣುಮೂರ್ತಿಯನ್ನಾಗಿಯೂ, ಕೆಲವು ಬ್ರಹ್ಮಮೂರ್ತಿಯನ್ನಾಗಿಯೂ ಇನ್ನು ಕೆಲವು ಅಗ್ನಿಮೂರ್ತಿ-ಯನ್ನಾಗಿಯೂ, ಸೂರ್ಯಮೂರ್ತಿಯನ್ನಾಗಿಯೂ ಪ್ರತಿಪಾದಿಸುತ್ತವೆ-ಯೆಂದೂ ಗೊತ್ತಾಗುತ್ತದೆ. ಆದ್ದರಿಂದ ಶಿವಪರವೆಂದು ಪ್ರಸಿದ್ಧವಾದ ಕೈವಲ್ಯ, ಅಥರ್ವಶಿಖಾ ಮುಂತಾದ ಶ್ರುತಿಗಳೂ, ಸ್ಕಾಂದ ಶೈವಾದಿ ಪುರಾಣಗಳೂ ಮಾಯೋಪಹಿತನಾದ ಅಮೂರ್ತಪರಮೇಶ್ವರನಲ್ಲಿರುವ ಜಗತ್ಕಾರಣತ್ತ್ವ ಮೊದಲಾದವುಗಳನ್ನು ತ್ರಿಮೂರ್ತಿಗಳಲ್ಲಿ ಸೇರಿದ

ಗುಣಮೂರ್ತಿ ಶಿವನಲ್ಲಿ ಪ್ರತಿಪಾದಿಸುತ್ತವೆಯೆಂದು ಹೇಳುವುದು ಯುಕ್ತ-ವಾಗಿದೆ. ಹಾಗೆ ಪ್ರತಿಪಾದಿಸುವುದು ಕೇವಲ ಉಪಾಸನೆಗೋಸ್ಕರವೇ ಎಂಬುದಾಗಿ ಅವುಗಳ ಸ್ಪಷ್ಟವಾದ ತಾತ್ಪರ್ಯ. ಆದಕಾರಣ ಭಾಗವತದ ಚತುರ್ಥಸ್ಕಂಧದಲ್ಲಿರುವ ಅತ್ರಿಮಹರ್ಷಿ ತಪಶ್ಚರ್ಯಾ ಪ್ರಕರಣದಲ್ಲಿ ಹೀಗೆ ಉಕ್ತವಾಗಿದೆ. ''ಅತ್ರಿ ಮಹರ್ಷಿಯು ಪ್ರಾಣಾಯಾಮದಿಂದ ಮನಸ್ಸನ್ನು ನಿಗ್ರಹಿಸಿ, ಶೀತೋಷ್ಣಾದಿದ್ವಂದ್ವಗಳನ್ನು ಅಲಕ್ಷಿಸಿ, ಕೇವಲ ವಾತಾಹಾರಿ-ಯಾಗಿ ಒಂದೇ ಕಾಲಿನಲ್ಲಿ ನಿಂತು ನೂರು ವರ್ಷಗಳವರೆಗೆ ತಪಸ್ಸು ಮಾಡಿದನು. ಜಗದೀಶ್ವರನಿಗೆ ನಾನು ಶರಣಾಗತನಾಗಿದ್ದೇನೆ. ಅವನು ತನಗೆ ಸಮಾನನಾದ ಪುತ್ರನನ್ನು ನನಗೆ ಅನುಗ್ರಹಿಸಲಿ'' ಎಂದು ಚಿಂತಿಸುತ್ತಿದ್ದನು. ಅನಂತರ ತ್ರಿಮೂರ್ತಿಗಳು ಪ್ರತ್ಯಕ್ಷರಾಗಿ ಎದುರಿಗೆ ನಿಂತಿರಲು ಅತ್ರಿಮಹರ್ಷಿಯು ಹೀಗೆ ನಿವೇದಿಸಿದನು. - ''ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಅನುಗುಣವಾದ ಮಾಯಾಗುಣಗಳಿಂದ ಸಹಿತರಾಗಿ ಬೇರೆ ಬೇರೆ ದೇಹಗಳನ್ನಾಶ್ರಯಿಸಿರುವ, ಎಲೈ ಬ್ರಹ್ಮ, ವಿಷ್ಣು ಮಹೇಶ್ವರರೇ, ನಿಮಗೆ ನಮಸ್ಕಾರ ಮಾಡುತ್ತೇನೆ. ನಿಮ್ಮಲ್ಲಿ ನಾನು ತಪಸ್ಸಿನಿಂದ ಕರೆದ ಭಗವಂತನು ಯಾರು ? ನಾನು ಒಬ್ಬ ಭಗವಂತ-ನನ್ನುದ್ದೇಶಿಸಿ ಸಂತಾನಕ್ಕೋಸ್ಕರ ನಾನಾ ವಿಧದಲ್ಲಿ ಧ್ಯಾನಿಸಿರುವೆನು. ಆದರೆ ಜನರ ಮನಸ್ಸಿಗೂ ಕೂಡ ಅಗಮ್ಯರಾದ ನೀವು ಇಲ್ಲಿಗೆ ಬಂದಿದ್ದೀರಿ. ಇದೇಕೆಂಬುದನ್ನು ಅನುಗ್ರಹಮಾಡಿ ಹೇಳಿರಿ. ನನಗೆ ಬಹಳ ಆಶ್ಚರ್ಯವಾಗಿದೆ.'' ಅತ್ರಿಮುನಿಯ ಈ ಮಾತುಗಳನ್ನು ಕೇಳಿ ತ್ರಿಮೂರ್ತಿ-ಗಳು ನಕ್ಕು ಮೃದುವಾದ ಮಾತಿನಿಂದ ಹೀಗೆ ಹೇಳಿದರು- ''ಎಲೈ ಬ್ರಾಹ್ಮಣನೆ, ನಿನ್ನ ಸಂಕಲ್ಪದಂತೆ ಆಗಬೇಕಲ್ಲದೆ ಬೇರೆ ವಿಧವಾಗಿ ಆಗಲಾರದು. ನಿನ್ನ ಸತ್ಸಂಕಲ್ಪಕ್ಕೆ ಅನುಸಾರವಾಗಿ ನಾವು ಮೂವರೂ ಬಂದಿರುವೆವು. ನಮ್ಮ ಅಂಶಭೂತರಾಗಿ ಲೋಕಪ್ರಸಿದ್ಧರಾದ ಪುತ್ರರು ನಿನಗೆ ಹುಟ್ಟುವರು. ನಿನಗೆ ಒಳ್ಳೆಯದಾಗಲಿ. ಅವರು ನಿನ್ನ ಕೀರ್ತಿಯನ್ನು ಹರಡುವರು.'' ಹೀಗೆ ಆ ಮುನಿಗೆ ಬೇಕಾದ ವರವನ್ನು ಕೊಟ್ಟು ತ್ರಿಮೂರ್ತಿಗಳು ಹೊರಟುಹೋದರು.

ಈ ಮಾತುಗಳಿಂದ ಒಬ್ಬ ಜಗದೀಶ್ವರನನ್ನೇ ಉದ್ದೇಶಿಸಿ ಸಂತಾನಾರ್ಥಿಯಾಗಿ ತಪಸ್ಸುಮಾಡುತ್ತಿದ್ದ ಅತ್ರಿಮಹರ್ಷಿಗೆ ಜಗದೀಶ್ವರನು ಬ್ರಹ್ಮ, ವಿಷ್ಣು, ರುದ್ರರೆಂಬ ತ್ರಿಮೂರ್ತಿಗಳ ರೂಪದಿಂದ ಪ್ರಸನ್ನನಾಗಿ ಇಷ್ಟಾರ್ಥವನ್ನು ಅನುಗ್ರಹಿಸಿ ಹೊರಟುಹೋದನೆಂದು ಗೊತ್ತಾಗುತ್ತದೆ. ಇದರಿಂದ ತ್ರಿಮೂರ್ತಿಗಳನ್ನು ಬಿಟ್ಟರೆ ಮೂಲಭೂತವಾದ ಇನ್ನೊಂದು ಮೂರ್ತಿಯು ಪರಮೇಶ್ವರನಿಗಿಲ್ಲವೆಂದು ಸ್ಪಷ್ಟವಾಗುತ್ತದೆ.

ಶಂಕೆ :- ರೂಪರಹಿತನಾದ ಶಿವನಿಗೂ ಕೂಡ ಉಪಾಸಕರ ಧ್ಯಾನಕ್ಕಾಗಿ ಕಲ್ಪಿತವಾದ ಒಂದು ಮೂರ್ತಿ ಇದೆ. ಅದು ಉಮಾರ್ಧ ಶರೀರವೂ, ತ್ರಿಲೋಚನವೂ, ಚಂದ್ರಮೌಳಿಯೂ, ನೀಲಕಂಠವೂ ಅತ್ಯಂತಾನಂದ-ಪೂರ್ಣವೂ, ತಾಂಡವನೃತ್ಯಪ್ರಿಯವೂ ಗುಣಮೂರ್ತಿಗಳಾದ ಬ್ರಹ್ಮ,, ವಿಷ್ಣು ಶಿವರಿಂದ ಉಪಾಸ್ಯವೂ ಆಗಿದೆ. ಪರಮಾರ್ಥದಲ್ಲಿ ಸರ್ವವಿಧವಾದ ಮೂರ್ತಿರಹಿತನಾಗಿದ್ದರೂ ಪರಮಾತ್ಮನು ಮಾಯಾ ಕಲ್ಪಿತ ಸರ್ವಮೂರ್ತಿಯಾಗಿದ್ದಾನೆ. ಅಂತಹ ಪರಮಾತ್ಮನಿಗೂ ಕೂಡ ಉತ್ಕೃಷ್ಟವಾದ ಈ ಮೂರ್ತಿಯಿದೆಯೆಂದು ವೇದವು ಬೋಧಿಸುತ್ತದೆ -ಎಂದು ಸ್ಕಾಂದಪುರಾಣದಲ್ಲಿ ಹೇಳಿದೆ. - ಯಜ್ಞ, ೨೭-(೩೧-೩೩)

ಇವೇ ಮುಂತಾದ ಇತರ ವಚನಗಳೂ ಗುಣಮೂರ್ತಿಸೇವಿತನಾದ ತುರೀಯ ಶಿವಮೂರ್ತಿಯನ್ನು ಪ್ರತಿಪಾದಿಸುತ್ತವೆ. ಈ ವಚನಗಳಿಗೆ ಗತಿಯೇನು ?

ಸಮಾಧಾನ :- ಸ್ಮೃತಿ, ಪುರಾಣ ಮೊದಲಾದ ಅಷ್ಟಾದಶ ವಿದ್ಯೆಗಳಿಗೆ ವೇದವು ಮೂಲವೆಂಬುದೇನೋ ಹೌದು. ಆದರೂ ಕೆಲವು ಕಡೆಯಲ್ಲಿ ವೇದವಿರುದ್ಧವಾದ ಶೈವ, ವೈಷ್ಣವ ಮೊದಲಾದ ಆಗಮಗಳನ್ನನುಸರಿಸಿ ಅಂತಹ ಅಧಿಕಾರಿಯನ್ನೇ ಕುರಿತು ಹೇಳಿದ ವಾಕ್ಯಗಳಿವೆ. ವೈದಿಕರು ಆ ವಾಕ್ಯಗಳನ್ನು ಅಂಗೀಕರಿಸಿ ನಡೆಯಬಾರದೆಂದು ಪುರಾಣಗಳೇ ಅಲ್ಲಲ್ಲಿ ವ್ಯವಸ್ಥೆಯನ್ನು ಮಾಡಿದೆ. ಸೂತಸಂಹಿತೆಯಲ್ಲಿ ''ಪರಮಾತ್ಮನ ಜ್ಞಾನದಿಂದ

ಸಂಸಾರಬಂಧದ ಮೋಕ್ಷವಾಗುತ್ತದೆ. ಪರಮಾತ್ಮಜ್ಞಾನವು ವೇದದಿಂದಲೇ ಆಗುತ್ತದೆ. ಬೇರೆ ಮಾರ್ಗದಿಂದ ಆಗುವುದಿಲ್ಲ. ವೇದ ವಿರುದ್ಧವಾದ ಇತರ ಗ್ರಂಥಗಳಿಂದ ಆಗುವ ಜ್ಞಾನವು ನಿಜವಾದ ಜ್ಞಾನವಲ್ಲ. ಅಷ್ಟಾದಶ ವಿದ್ಯೆಗಳಲ್ಲಿ(೧೧) ವೇದಾತಿರಿಕ್ತ ವಿದ್ಯೆಗಳು ವೇದಾರ್ಥವನ್ನನುಸರಿಸಿಯೇ ಪ್ರವೃತ್ತವಾಗಿವೆ. ಆದರೂ ಅವುಗಳಲ್ಲಿ ಕೆಲವು ಅಂಶಗಳು ಶೈವಾಗಮ, ಅವುಗಳ ಪ್ರಭೇದಗಳು, ವೈಷ್ಣವಾಗಮ, ಅವುಗಳ ಪ್ರಭೇದಗಳು, ಬ್ರಹ್ಮಾಗಮ ಮತ್ತು ಅವುಗಳ ಪ್ರಭೇದಗಳನ್ನು ಅನುಸರಿಸಿವೆ. ಅಧಿಕಾರಿಭೇದದಿಂದ ಕ್ರಮಮುಕ್ತಿಯನ್ನು ಸಂಪಾದಿಸಿ ಕೊಡಲು ಈ ರೀತಿ ಆಗಮಗಳನ್ನು ಅನುಸರಿಸಿ ಹೊರಟಿವೆ. ಆಯಾ ಆಗಮಗಳಲ್ಲಿ ಯಾರು ದೀಕ್ಷೆಯನ್ನು ಹೊಂದಿರುತ್ತಾರೋ ಅವರೇ ಈ ಆಗಮೋಕ್ತವಾದ ಅಂಶವನ್ನು ಪಾಲಿಸಬೇಕಲ್ಲದೆ ವೈದಿಕರು ಅದನ್ನು ಪಾಲಿಸಕೂಡದು'' ಎಂದು ಹೇಳಲ್ಪಟ್ಟಿದೆ. -ಸೂತ. ಯಜ್ಞ. ೪೫-(೫೧-೫೭)

ಸೌರಸಂಹಿತೆಯಲ್ಲಿ ''ಸಕಲ ಪುರಾಣಗಳಲ್ಲಿಯೂ ಯಾವುದು ವೇದವಿರುದ್ಧಾಂಶವೋ ಅದನ್ನು ಸಕಲ ವೈದಿಕರೂ ಪರಿತ್ಯಜಿಸಬೇಕು. ಆಗಮಗಳನ್ನನುಸರಿಸಿ ಕೆಲವು ಪುರಾಣಗಳು ಸಾಕ್ಷಾತ್ ವೇದಕ್ಕೆ ವಿರುದ್ಧವಾದ ವಿಷಯವನ್ನು ಹೇಳುತ್ತವೆ. ಆ ವಿಷಯಗಳು ಇತರ ಅಧಿಕಾರಿಗಳಿಗೋಸ್ಕರವೇ ಹೊರತು ವೈದಿಕರಿಗೋಸ್ಕರವಲ್ಲ.'' ಎಂದು ಹೇಳಲ್ಪಟ್ಟಿದೆ.

ಅಥವಾ ತುರೀಯ ಶಿವಮೂರ್ತಿಯು ಇದ್ದರೂ ಇರಲಿ. ಆದರೆ ತ್ರಿಮೂರ್ತಿಗಳಿಗಿಂತ ಈ ತುರೀಯಮೂರ್ತಿಯು ಶ್ರೇಷ್ಠನೆಂಬುದು ಸರಿಯಲ್ಲ. ತುರೀಯಮೂರ್ತಿಯಂತೆ ಈ ಗುಣಮೂರ್ತಿಗಳೂ ಪರಮಾತ್ಮನ ಮೂರ್ತಿಗಳೇ ಸರಿ. ಈ ಮೂರ್ತಿಗಳಲ್ಲೆಲ್ಲಾ ಅನುಸ್ಯೂತ-

---

೧೧. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಆಯುರ್ವೇದ, ಧನುರ್ವೇದ, ಗಂಧರ್ವವೇದ, ನೀತಿಶಾಸ್ತ್ರ, ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರ ಮತ್ತು ಶಿಕ್ಷಾದಿ ಷಡಂಗಗಳು.

ನಾದ ಪರಮಾತ್ಮನು ಒಬ್ಬನೇ ಆದ್ದರಿಂದ ಅವುಗಳಲ್ಲಿ ತರತಮಭಾವ-ವುಂಟಾಗಲಾರದು. ಇನ್ನು ತುರೀಯ ಶಿವನು ಗುಣಮೂರ್ತಿಗಳ ಆವಿರ್ಭಾವಕ್ಕೆ ಕಾರಣನಾದ್ದರಿಂದ ಆತನಿಗೆ ಶ್ರೇಷ್ಠತೆ ಇದ್ದೇ ಇದೆಯೆಂದು ಹೇಳುವುದೂ ಸರಿಯಲ್ಲ. ಏಕೆಂದರೆ, ಪರಮಾತ್ಮನ ಎಲ್ಲಾ ಮೂರ್ತಿಗಳೂ ಆತನ ಮಾಯೋಪಾಧಿಯಿಂದ ಉಂಟಾಗಿರುವುದರಿಂದ ತುರೀಯ-ಮೂರ್ತಿಯಂತೆ ಗುಣಮೂರ್ತಿಗಳೂ ಸ್ವೇಚ್ಛೆಯಿಂದ ಕಲ್ಪಿಸಲ್ಪಟ್ಟಿವೆ. ಅಥವಾ ತುರೀಯ ಶಿವಮೂರ್ತಿಯಿಂದಲೇ ಈ ಗುಣಮೂರ್ತಿಗಳು ಆವಿರ್ಭವಿಸಿವೆಯೆಂದರೂ ತರತಮಭಾವವು ಸರಿಯಲ್ಲ. ರಾಮಾನುಜ-ಮತದಲ್ಲಿ ರಾಮ, ಕೃಷ್ಣಾದಿಗಳು ನಾರಾಯಣನ ಅವತಾರಗಳಾದರೂ ನಾರಾಯಣನಿಗಿಂತ ಅವರಿಗೆ ಅಪಕರ್ಷವೇನೂ ಇಲ್ಲ. ಹಾಗಲ್ಲದಿದ್ದರೆ 'ನಾರಾಯಣಾದ್ರುದ್ರೋ ಜಾಯತೇ' ಎಂಬ ಶ್ರುತಿಯು ನಾರಾಯಣ-ನಿಂದ ರುದ್ರನು ಆವಿರ್ಭವಿಸಿದನೆಂದು ಹೇಳುವುದರಿಂದ ಶೈವಮತದಲ್ಲಿ ನಾರಾಯಣನಿಗಿಂತ ರುದ್ರನಿಗೆ ಅಪಕರ್ಷವುಂಟಾಗುವುದು. ಅದನ್ನು ನೀವು ಒಪ್ಪಿಕೊಳ್ಳುವುದಿಲ್ಲ. ಪರಮಶಿವನನ್ನು ಪ್ರತಿಪಾದಿಸುವ ನೀವು ನಾರಾಯಣನಿಗಿಂತ ರುದ್ರನಿಗೆ ಉತ್ಕರ್ಷವನ್ನು ಅಂಗೀಕರಿಸಿದ್ದೀರಿ.

ಶಂಕೆ :- ವಿಷ್ಣು, ಶಿವರು ಈಶ್ವರಕೋಟಿಯಲ್ಲಿ ಸೇರಿದ್ದಾರೆಂದು ಒಪ್ಪಿಕೊಳ್ಳೋಣ. ಆದರೆ ಚತುರ್ಮುಖ ಬ್ರಹ್ಮನು ಜೀವಸಮಷ್ಟಿಯಲ್ಲಿ ಸೇರಿದ ಹಿರಣ್ಯಗರ್ಭನೆಂದು ಪ್ರಸಿದ್ಧಿಯಿರುವುದರಿಂದ ಅವನು ಈಶ್ವರ-ನೆಂದು ಹೇಳುವುದು ಹೇಗೆ?

ಸಮಾಧಾನ :- ಸೂತಸಂಹಿತೆಯಲ್ಲಿ ಹೀಗೆ ಉಕ್ತವಾಗಿದೆ. ''ಭೌತಿಕ ಪದಾರ್ಥಗಳಿಗಿಂತ ಪಂಚಭೂತಗಳು ಹೆಚ್ಚಿನವು. ಅವುಗಳಿಗಿಂತ ಚೇತನನಾದ ಜೀವಾತ್ಮನು ಹೆಚ್ಚಿನವನು. ಜೀವನಲ್ಲಿ ಸಮಷ್ಟಿ ಜೀವ, ವ್ಯಷ್ಟಿಜೀವರೆಂದು ಎರಡು ಭೇದವುಂಟು. ವ್ಯಷ್ಟಿಜೀವರು ಭಿನ್ನರಾಗಿದ್ದು ತಮ್ಮ ಕರ್ಮಾನುಸಾರವಾಗಿ ದೇವತೆ, ತಿರ್ಯಗ್ಜಂತು, ಮನುಷ್ಯ ಮೊದಲಾದ ಶರೀರಗಳನ್ನು ಪಡೆಯುತ್ತಾರೆ. ಇವರಲ್ಲಿ ಸಮಷ್ಟಿ ಭೂತನಾದ

ಹಿರಣ್ಯಗರ್ಭನು ಎಲ್ಲಾ ಜೀವರಿಗಿಂತ ಶ್ರೇಷ್ಠನು. ಹಿರಣ್ಯಗರ್ಭನಿಗಿಂತ ಬ್ರಹ್ಮನ ಸಂಕಲ್ಪಸಿದ್ಧಿಗಳಾದ ಅವತಾರಗಳು ಶ್ರೇಷ್ಠವಾದವು. ಆ ಅವತಾರ-ಗಳಲ್ಲಿಯೂ ತರತಮಭಾವವುಂಟು. ಬ್ರಹ್ಮನು ತನ್ನ ಆ ಅವತಾರಗಳಲ್ಲಿ ಶ್ರೇಷ್ಠನು. ಅವನಿಗಿಂತ ರುದ್ರನು ಅಧಿಕನು. ಅವನು ತನ್ನ ಅವತಾರ-ಗಳಿಗಿಂತ ಶ್ರೇಷ್ಠನು. ಈ ಬ್ರಹ್ಮ, ವಿಷ್ಣು, ರುದ್ರರು ಪರಮಾತ್ಮನ ವಿಭೂತಿಗಳು. ಬ್ರಹ್ಮ, ವಿಷ್ಣು, ರುದ್ರರಿಗಿಂತ ಮಾಯೋಪಾಧಿಕನಾಗಿ ಸರ್ವಕಾರಣನಾದ ಈಶ್ವರನು ಅಧಿಕನು. ಅವನಿಗಿಂತ ಜ್ಞಾನಾನಂದ ಸ್ವರೂಪನೂ, ಅದ್ವಿತೀಯನೂ ಆದ ಪರಮಾತ್ಮನು ಅಧಿಕನು'' (ಸೂತ. ಯಜ್ಞ- ೨೭-(೩-೯) ಇಲ್ಲಿ ದೇವ, ತಿರ್ಯಙ್ಮನುಷಾದಿ ಸಕಲ ಜೀವರಿಗೂ ಸಮಷ್ಟಿರೂಪನಾದ್ದರಿಂದ ಹಿರಣ್ಯಗರ್ಭನು ಸಮಷ್ಟಿಜೀವನೆಂದು ಹೇಳಿದ್ದಾರೆ. ಅನಂತರ ಈ ಹಿರಣ್ಯಗರ್ಭನಿಗಿಂತ ಬ್ರಹ್ಮನ ಅವತಾರಗಳೂ, ಬ್ರಹ್ಮನೂ ಶ್ರೇಷ್ಠನೆಂದು ಪ್ರತಿಪಾದಿಸಿದ್ದಾರೆ. ಇದರಿಂದ ಹಿರಣ್ಯಗರ್ಭನು ಬೇರೆ. ಬ್ರಹ್ಮನು ಬೇರೆಯೆಂದು ಸಿದ್ಧವಾಗುತ್ತದೆ. ಅನಂತರ ಬ್ರಹ್ಮ, ವಿಷ್ಣು, ರುದ್ರರು 'ಪರಮಾತ್ಮನ ವಿಭೂತಿಗಳು' ಎಂದು ಹೇಳಿರುವುದರಿಂದ ಬ್ರಹ್ಮನು ಈಶ್ವರಕೋಟಿಯಲ್ಲಿ ಸೇರಿದ್ದಾನೆಂದು ಸಿದ್ಧವಾಗುತ್ತದೆ.

ಶಂಕೆ :- ಬ್ರಹ್ಮಾದಿ ತ್ರಿಮೂರ್ತಿಗಳೂ ಈಶ್ವರರೆಂದು ಒಪ್ಪಿ-ಕೊಳ್ಳೋಣ. ಮೇಲೆ ಹೇಳಿದ ಸೂತಸಂಹಿತೆಯಿಂದ ಜೀವರಲ್ಲಿ ತಾರತಮ್ಯವಿರುವಂತೆ ತ್ರಿಮೂರ್ತಿಗಳಲ್ಲಿಯೂ ತಾರತಮ್ಯವಿದೆಯೆಂದೂ ಅವರಲ್ಲಿ ಶಿವನು ಶ್ರೇಷ್ಠನೆಂದೂ ಗೊತ್ತಾಗುತ್ತದೆ. ಆದ್ದರಿಂದ ಶಿವೋಪಾಸನೆಯೇ ಸರ್ವಶ್ರೇಷ್ಠವೆಂದಾಗಲಿ.

ಸಮಾಧಾನ :- ಶಿವೋಪಾಸನೆಯೆಂಬಲ್ಲಿ ಶಿವನೆಂದರೆ ಯಾರು ? ವಿಶೇಷಣವಾದ ಕೇವಲ ಶಿವಶರೀರವೆ ? ಆ ಶರೀರದಲ್ಲಿ ಅಂತರ್ಗತನಾದ ಶಿವನೆ ? ಅಥವಾ ಶಿವಶರೀರವಿಶಿಷ್ಟನಾದ ಶಿವನೆ ? ಇವುಗಳಲ್ಲಿ ಮೊದಲನೆಯ ಪಕ್ಷ ಸರಿಯಲ್ಲ. ಕೇವಲ ಶರೀರವು ಮಾಯಾಜನ್ಯ-ವಾದ್ದರಿಂದ ಚೇತನವಲ್ಲ. ಉಪಾಸಕರ ಅಭೀಷ್ಟವನ್ನು ಕೊಡುವ

ಸಾಮರ್ಥ್ಯ ಅದಕ್ಕಿಲ್ಲ. ಆದ್ದರಿಂದ '**ಪ್ರಯೋಜನಮನುದ್ದಿಶ್ಯ ನ ಮಂದೋಽಪಿ ಪ್ರವರ್ತತೇ**' ಎಂಬ ನ್ಯಾಯದಂತೆ ಉಪಾಸನೆಗೆ ಅದು ಅರ್ಹವಲ್ಲ. ಅನರ್ಹವಾದ ಆ ವಿಗ್ರಹವನ್ನು ಅಧಿಕವೆಂದು ಕಲ್ಪಿಸುವುದು ವ್ಯರ್ಥ. ಇನ್ನು ವಿಗ್ರಹದಲ್ಲಿ ಅಂತರ್ಗತನಾದ ಶಿವನೆಂಬ ಎರಡನೆಯ ಪಕ್ಷವೂ ಸರಿಯಲ್ಲ. ಏಕೆಂದರೆ, ಮಾಯಾತೀತನೂ, ಶುದ್ಧ ಬ್ರಹ್ಮ-ಸ್ವರೂಪನೂ ಆದ ಶಿವನು ಅಧಿಕನೋ ? ಅಥವಾ ಮಾಯೋ-ಪಾಧಿಸಹಿತನಾದ ಶಿವನೋ ? ಎಂದು ಆಗ ವಿಕಲ್ಪ ಮಾಡಬೇಕಾಗುತ್ತದೆ. ಈ ಎರಡು ವಿಕಲ್ಪಗಳೂ ಅಯುಕ್ತ. '**ಏಕಮೇವಾ ದ್ವಿತೀಯಂ**' ಎಂಬ ಶ್ರುತಿಯಿಂದ ಮಾಯಾತೀತನಾದ ಶುದ್ಧಬ್ರಹ್ಮನು ಒಬ್ಬನೇ ಎಂದು ಸಿದ್ಧವಾಗುತ್ತದೆ. ''**ಅಸ್ಮಾನ್‌ಮಾಯಿ ಸೃಜತೇ ವಿಶ್ವಮೇತತ್**'' ಇತ್ಯಾದಿ ಶೃತಿಯಿಂದ ಮಾಯೋಪಾಧಿಸಹಿತನಾದ ಶಿವನೂ ಒಬ್ಬನೇ ಎಂದು ಸಿದ್ಧವಾಗುತ್ತದೆ. ಇಬ್ಬರಿಲ್ಲದಾಗ ಅಧಿಕರು ಯಾರೆಂದು ಹೇಳಬೇಕು ? ಅದು ಗೋಡೆಯಿಲ್ಲದೆ ಚಿತ್ರವನ್ನು ಬರೆದಂತೆಯೇ ಸರಿ. ಶಿವ ವಿಗ್ರಹ-ವಿಶಿಷ್ಟನಾದ ಶಿವನೆಂಬ ಮೂರನೆಯ ಪಕ್ಷವೂ ಸರಿಯಲ್ಲ. ಆಗಲೂ ಎರಡು ವಿಕಲ್ಪಗಳಾಗುತ್ತವೆ. ವಿಶೇಷಣವಾದ ವಿಗ್ರಹವು ಬೇರೆಯಾದ್ದ-ರಿಂದ ವಿಶೇಷ್ಯನಾದ ಶಿವನಲ್ಲಿ ತಾರತಮ್ಯ ಉಂಟಾಗುವುದೆಂದು ನಿಮ್ಮ ಅಭಿಪ್ರಾಯವೋ ? ಅಥವಾ ವಿಶಿಷ್ಟವು ಅನ್ಯಪದಾರ್ಥವೆಂಬ ಭಾವನೆ-ಯಿಂದ ಉಮಾರ್ಧವಿಗ್ರಹವಿಶಿಷ್ಟನಾದ ಶಿವನು ಪೂರ್ವೋಕ್ತ ಪ್ರಮಾಣ ಬಲದಿಂದ ಶ್ರೇಷ್ಠನೆಂದು ನಿಮ್ಮ ಅಭಿಪ್ರಾಯವೊ? ಮೊದಲನೆಯ ವಿಕಲ್ಪ ಸರಿಯಲ್ಲ. ದೇವದತ್ತನೆಂಬ ಒಬ್ಬ ಮನುಷ್ಯನೇ ತಾನು ಮಾಡುವ ಕೆಲಸಕ್ಕೆ ಅನುಗುಣವಾಗಿ ಭಿಕ್ಷುಕ, ಅಡಿಗೆಯವ, ನರ್ತಕ, ವಾಚಕ, ಭಟ್ಟ ಮೊದಲಾದ ಹೆಸರುಗಳನ್ನು ಪಡೆಯುತ್ತಾನೆ. ಹೆಸರಿನಲ್ಲಿ ಭೇದವೇ ಹೊರತು ವ್ಯಕ್ತಿಯಲ್ಲಲ್ಲ. ಹೆಸರು ಬೇರೆ ಬೇರೆಯೆಂದು ವ್ಯಕ್ತಿಯಲ್ಲಿ ತಾರತಮ್ಯವುಂಟಾಗುವುದೂ ಇಲ್ಲ. ಹಾಗೆಯೇ ಮಾಯೋಪಹಿತನಾದ ಒಬ್ಬನೇ ಪರಮಾತ್ಮನು ಸತ್ತ್ವಾದಿಗುಣಗಳಿಂದ ಸಹಿತನಾಗಿ ಬ್ರಹ್ಮ, ವಿಷ್ಣು,

ಶಿವನೆಂದು ಬೇರೆ ಬೇರೆ ಹೆಸರುಗಳನ್ನು ಪಡೆಯುತ್ತಾನೆ. ಇದಕ್ಕೆ ಗುಣಗಳ ಭೇದವೇ ಕಾರಣ. ಬ್ರಹ್ಮ ಮೊದಲಾದ ಹೆಸರುಗಳು ಬೇರೆಯಾದ ಕಾರಣದಿಂದ ಪರಮಾತ್ಮನಲ್ಲಿ ಯಾವ ಭೇದವೂ ಆಗುವುದಿಲ್ಲ. ಆದ್ದರಿಂದ ತಾರತಮ್ಯವನ್ನು ಹೇಳಲೂ ಸಾಧ್ಯವಿಲ್ಲ. ಆದ್ದರಿಂದಲೇ ವಿಷ್ಣುಪುರಾಣದಲ್ಲಿ "ಒಬ್ಬನೇ ಪರಮಾತ್ಮನು ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವುದಕ್ಕೋಸ್ಕರ ಬ್ರಹ್ಮ, ವಿಷ್ಣು, ಶಿವ ಎಂಬ ಹೆಸರುಗಳನ್ನು ಪಡೆಯುತ್ತಾನೆ" ಎಂದು ಉಕ್ತವಾಗಿದೆ. ಹಾಗಲ್ಲದೆ ಉಪಾಧಿಭೇದದಿಂದ ಉಪಾಧಿವಿಶಿಷ್ಟನಿಗೂ ಭೇದವಿದೆಯೆಂದು ಅವಶ್ಯ ಒಪ್ಪಿಕೊಳ್ಳುವುದಾದರೆ ಜಗತ್ತಿಗೆ ಎರಡು ಕಾರಣಗಳನ್ನು ಒಪ್ಪಿಕೊಳ್ಳಬೇಕಾಗುವುದು. ಸತ್ತ್ವಪ್ರಧಾನಮಾಯೋ-ಪಾಧಿಯುಳ್ಳ ಒಬ್ಬನು ನಿಮಿತ್ತಕಾರಣನೆಂದೂ, ತಮಃಪ್ರಧಾನ ಮಾಯೋಪಾಧಿಯುಳ್ಳ ಇನ್ನೊಬ್ಬನು ಉಪಾದಾನಕಾರಣನೆಂದೂ ಪ್ರತ್ಯೇಕ-ವಾಗಿ ಎರಡು ಕಾರಣಗಳಾಗುತ್ತವೆ. ಆಗ ಒಬ್ಬನೇ ನಿಮಿತ್ತ ಕಾರಣನೂ, ಉಪಾದಾನಕಾರಣನೂ ಆಗುತ್ತಾನೆಂದು ಹಿಂದೆ ಹೇಳಿದ ಸಿದ್ಧಾಂತಕ್ಕೆ ವಿರೋಧವಾಗುತ್ತದೆ. ಮತ್ತು ಪರಮೇಶ್ವರನಿಗೆ ಈ ವಿಧವಾದ ಭೇದವನ್ನು ಒಪ್ಪಿ ತರತಮಭಾವವನ್ನು ಹೇಳುವುದಾದರೆ ಉತ್ತಮ, ಮಧ್ಯಮ, ಅಧಮರೆಂದು ಅನೇಕ ಈಶ್ವರರನ್ನು ಅಂಗೀಕರಿಸಬೇಕಾದೀತು. ಆಗ **'ಯತೋ ವಾ ಇಮಾನಿ ಭೂತಾನಿ ಜಾಯಂತೇ ॥ ಯೇನ ಜಾತಾನಿ ಜೀವಂತಿ'** ಎಂಬುದಾಗಿ ಒಬ್ಬನೇ ಈಶ್ವರನನ್ನು ಬೋಧಿಸುವ ಶ್ರುತಿಗಳಿಗೆ ವಿರೋಧವಾದೀತು. ಇಲ್ಲಿ ಹೀಗೆ ಶಂಕಿಸಬಹುದು - ವಿಶೇಷ್ಯನಾದ ಪರಮೇಶ್ವರನು ಒಬ್ಬನೇ ಎಂಬ ಅಭಿಪ್ರಾಯದಿಂದ ನಿಮಿತ್ತಕಾರಣನೂ ಉಪಾದಾನಕಾರಣನೂ ಒಬ್ಬನೇ ಎಂದು ಹಿಂದೆ ಹೇಳಿದೆ. ಆ ಅಭಿಪ್ರಾಯದಿಂದಲೇ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಒಬ್ಬನೇ ಮಾಡುತ್ತಾನೆಂದು ಅಂಗೀಕರಿಸಿದರೆ ಆಗ **'ಯತೋ ವಾ ಇಮಾನಿ ಭೂತಾನಿ ಜಾಯಂತೇ'** ಎಂದು ಒಬ್ಬ ಈಶ್ವರನನ್ನು ಬೋಧಿಸುವ ಶ್ರುತಿಗೆ ವಿರೋಧವಾಗುವುದಿಲ್ಲವಷ್ಟೆ ? ಈ ಶಂಕೆ ಸರಿಯಲ್ಲ. ವಿಶೇಷ್ಯನಾದ

ನಿರ್ಗುಣಬ್ರಹ್ಮನು ಮಾಯಾ ಸಂಬಂಧವಿಲ್ಲದೆ ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡಲಾರನಾದ್ದರಿಂದ ವಿಶೇಷ್ಯನೂ ಒಬ್ಬನೇ ಎಂದು ಸಾಧಿಸಿದ್ದರಿಂದ ಏನೂ ಪ್ರಯೋಜನವಿಲ್ಲ.

ಶಂಕೆ :- ಉಪಾಧಿಭೇದದಿಂದ ಉಪಾಧಿವಿಶಿಷ್ಟನಿಗೆ ಭೇದವನ್ನು ಒಪ್ಪಿಕೊಳ್ಳದೆ ಹೋದರೆ ಅತಿಪ್ರಸಂಗವಾಗುವುದು. ಉಪಾಧಿಭೇದದಿಂದ ತಾನೇ ಜೀವೇಶ್ವರರಿಗೆ ಪರಸ್ಪರ ಭೇದವನ್ನು ಹೇಳಬೇಕು. ನೀವು ಹೇಳುವಂತೆ ಜೀವೇಶ್ವರರಿಗೆ ಅಭೇದ ಉಂಟಾಗಿ ತಾರತಮ್ಯವೇ ಇಲ್ಲದೆ ಹೋಗುವುದು. ಈಶ್ವರನು ಸರ್ವಜ್ಞ, ಜೀವನು ಅಲ್ಪಜ್ಞ ಎಂಬ ವ್ಯವಸ್ಥೆಯೇ ಇಲ್ಲದೆ ಹೋಗುವುದು. ಜೀವನು ಜಗತ್ತಿನ ಕರ್ತೃವಾಗಬಹುದು; ಈಶ್ವರನು ಸಂಸಾರಿಯಾಗಬಹುದು, ಅಲ್ಲವೆ ?

ಸಮಾಧಾನ :- ಬಿಂಬದಂತೆ ಈಶ್ವರನೂ, ಪ್ರತಿಬಿಂಬದಂತೆ ಜೀವರೂ ಇದ್ದಾರೆ. ಬಿಂಬಪ್ರತಿಬಿಂಬಗಳಿಗೆ ಅಭೇದವೇನೋ ಇದೆ. ಸೂರ್ಯನ ಪ್ರತಿಬಿಂಬವು ಕನ್ನಡಿಯಲ್ಲಿ ಕಾಣುವಾಗ ಕನ್ನಡಿಯ ಹಳದಿ ಬಣ್ಣ. ಕಪ್ಪು ಬಣ್ಣ, ಚಲನೆ ಮೊದಲಾದ ಮಲಿನ ಧರ್ಮಗಳು ಪ್ರತಿಬಿಂಬಕ್ಕೆ ಮಾತ್ರ ಇರುತ್ತವೆ. ಬಿಂಬನಾದ ಸೂರ್ಯನಿಗೆ ಈ ಮಾಲಿನ್ಯದ ಲೇಶವೂ ಇರುವುದಿಲ್ಲ. ಹಾಗೆಯೇ ಜೀವರ ಸತ್ತ್ವಗುಣವು ರಜಸ್ತಮೋಗುಣಗಳಿಂದ ಅಭಿಭೂತ-ವಾಗಿ ಮಲಿನವಾಗಿರುತ್ತದೆ. ಜೀವರ ಈ ಮಲಿನಾಂತಃಕರಣಗಳು ಭಿನ್ನಭಿನ್ನವಾಗಿರುವುದರಿಂದ ಅವರಿಗೆ ಸರ್ವಜ್ಞತ್ವಾದಿಗಳಿಲ್ಲದೆ ತಾರತಮ್ಯವು ಇರುತ್ತದೆ. ಆದರೆ ರಜಸ್ತಮೋಗುಣಗಳಿಂದ ಅಭಿಭೂತವಾಗದ ಶುದ್ಧ ಸತ್ತ್ವ ಪ್ರಧಾನವಾದ ಮಾಯೆಯು ಬ್ರಹ್ಮಾದಿತ್ರಿಮೂರ್ತಿಗಳಿಗೆ ಉಪಾಧಿ-ಯಾಗಿದೆ, ಅವರು ಮೂವರೂ ಸರ್ವಜ್ಞರು; ನಿಯಾಮಕರು; ಮಾಯೆಯನ್ನು ಸ್ವಾಧೀನ ಪಡಿಸಿಕೊಂಡವರು. ಅವರ ಚೈತನ್ಯಕ್ಕೆ ಮಾಯೆಯ ಆವರಣವಿಲ್ಲ - ಇತ್ಯಾದಿ ರೀತಿಯಲ್ಲಿ ಮೂವರು ಸಮಾನರು. ಒಬ್ಬನೇ ದೇವದತ್ತನು ಕಂಬಳಿಯನ್ನು ಧರಿಸಬಹುದು, ದುಕೂಲವನ್ನೂ ಧರಿಸಬಹುದು. ಹಾಗೆಯೇ ಪರಮಾತ್ಮನು ಸತ್ತ್ವಾದಿ

ಗುಣಮೂರ್ತಿಗಳನ್ನು ಧರಿಸಬಹುದು. ಕಂಬಳಿ ಮೊದಲಾದ ವಸ್ತು-ಭೇದದಿಂದ ದೇವದತ್ತನಿಗೆ ಹೇಗೆ ತಾರತಮ್ಯವಿಲ್ಲವೋ ಹಾಗೆಯೇ ಮೂರ್ತಿಭೇದದಿಂದ ಪರಮಾತ್ಮನಿಗೆ ತಾರತಮ್ಯವುಂಟಾಗುವುದಿಲ್ಲ. ಶಾತಾತಪಸ್ಮೃತಿಯಲ್ಲಿ ''ಯಾವನು ಬ್ರಹ್ಮ ವಿಷ್ಣು ರುದ್ರರಿಗೆ ಉತ್ತಮ, ಮಧ್ಯಮ, ಕನಿಷ್ಠರೆಂಬ ಭೇದವನ್ನು ಪ್ರತಿಪಾದಿಸುತ್ತಾನೋ ಅವನಿಗೆ ಉದರವ್ಯಾಧಿ ಉಂಟಾಗುವುದು'' ಎಂದು ಹೇಳಿದೆ. ಹೀಗೆಯೇ ಇನ್ನೂ ಅನೇಕ ವಚನಗಳು ತ್ರಿಮೂರ್ತಿಗಳಲ್ಲಿ ತರತಮಭಾವವನ್ನು ನಿಂದಿಸಿವೆ.

ಅಥವಾ ವಿಶೇಷಣಗಳ ತಾರತಮ್ಯದಿಂದ ವಿಶೇಷ್ಯ ವಸ್ತುವಿಗೂ ತಾರತಮ್ಯವಿರುವುದೆಂದು ಒಪ್ಪಿದರೂ ಚಿಂತೆಯಿಲ್ಲ. ವಿಷ್ಣು ಶಿವರು ಅಧಿಕರೆಂದು ಪ್ರತಿಪಾದಿಸುವ ವಚನಗಳು ಎರಡೂ ಕಡೆಯಲ್ಲಿಯೂ ಸಮಾನವಾಗಿ ಇರುವುದರಿಂದ ಒಬ್ಬರು ಹೆಚ್ಚು ಇನ್ನೊಬ್ಬರು ಕಡಿಮೆ-ಯೆಂದು ಹೇಳಲು ಸಾಧ್ಯವಿಲ್ಲ. ಆ ವಚನಗಳನ್ನು ಮುಂದೆ ಉದಾಹರಿಸುತ್ತೇವೆ.

ಶಂಕೆ :- ಸ್ಕಾಂದಪುರಾಣವು ಹೀಗೆ ಹೇಳುವುದು- ''ತ್ರಿಮೂರ್ತಿಗಳಲ್ಲಿ ರುದ್ರನ ಶರೀರವು ಸಾತ್ತ್ವಿಕ; ಗುಣವು ಜಗತ್ ಸಂಹಾರಕ್ಕೋಸ್ಕರ ತಾಮಸವಾಗಿದೆ. ವಿಷ್ಣುವಿನ ಶರೀರವು ತಾಮಸ; ಆದರೆ ಗುಣವು ಪಾಲನೆಗೋಸ್ಕರ ಸಾತ್ತ್ವಿಕವಾಗಿದೆ, ಬ್ರಹ್ಮನ ಶರೀರವು ರಾಜಸ. ಗುಣವೂ ಸೃಷ್ಟಿಗೋಸ್ಕರ ರಾಜಸವೇ ಆಗಿದೆ. ರುದ್ರನಿಗೆ ಸತ್ತ್ವವು ಅಂತರ್ಗುಣ, ತಮಸ್ಸು ಬಹಿರ್ಗುಣ. ವಿಷ್ಣುವಿಗೆ ತಮಸ್ಸು ಅಂತರ್ಗುಣ, ಸತ್ತ್ವವು ಬಹಿರ್ಗುಣ, ಬ್ರಹ್ಮನಿಗೆ ರಜಸ್ಸು ಅಂತರ್ಗುಣವೂ ಹೌದು. ಬಹಿರ್ಗುಣವೂ ಹೌದು. ಹೀಗಿರುವಾಗ ಸತ್ತ್ವಗುಣವಿದೆಯೆಂದು ಹರಿಯು ಶ್ರೇಷ್ಠನು, ಹರನು ಶ್ರೇಷ್ಠನು ಎಂದು ಜನರು ವಾದಿಸುತ್ತಾರೆ. ಅಯ್ಯೋ, ಮೋಹದ ಪ್ರಭಾವವೇ! ಸತ್ತ್ವಗುಣವಿಲ್ಲದುದರಿಂದ ಬ್ರಹ್ಮನು ಶ್ರೇಷ್ಠನೆಂದು ಭಾವಿಸುವುದಿಲ್ಲ'' ಸೂತ. ಯಜ್ಞ - ಉಪರಿ ೨-(೧೫-೧೭)

ಆದ್ದರಿಂದ ಸತ್ತ್ವಗುಣವನ್ನು ಲಕ್ಷಿಸಿ ವಿಷ್ಣುವು ಶ್ರೇಷ್ಠನೆಂದು ಸ್ತುತಿಸುವ ವಚನಗಳು ಎಲ್ಲೆಲ್ಲಿ ದೊರೆಯುವುವೋ ಅವುಗಳೆಲ್ಲಾ ವಿಷ್ಣುವಿನ ಪಾಲನಕಾರ್ಯವನ್ನು ಉದ್ದೇಶಿಸಿ ಹೊರಟಿವೆಯೆಂದು ತಿಳಿಯಬೇಕು. ತಮೋಗುಣವನ್ನು ಲಕ್ಷಿಸಿ ಶಿವನು ಕನಿಷ್ಠನೆಂದು ಹೇಳುವ ವಚನಗಳೆಲ್ಲವೂ ಶಿವನ ಸಂಹಾರಕಾರ್ಯವನ್ನು ಉದ್ದೇಶಿಸಿ ಹೊರಟಿವೆಯೆಂದು ತಿಳಿಯಬೇಕು. ಹಿಂದೆ ಹೇಳಿದಂತೆ ಉಪಾಧಿಯ ತಾರತಮ್ಯವನ್ನು ವಿಚಾರ ಮಾಡುವುದಾದರೆ ವಿಷ್ಣುವಿನ ಉಪಾಧಿಯಾದ ತಮೋಗುಣಕ್ಕಿಂತ ಶಿವನ ಉಪಾಧಿಯಾದ ಸತ್ತ್ವಗುಣವು ಶ್ರೇಷ್ಠವಾಗುತ್ತದೆ. ಆಗ ವಿಷ್ಣುವಿಗಿಂತ ಶಿವನು ಹೆಚ್ಚಿನೆಂದು ಸಿದ್ಧವಾಗುತ್ತದೆಯಲ್ಲವೆ ?

ಸಮಾಧಾನ :- ''ಸತ್ತ್ವಂ ರಜಸ್ತಮ ಇತಿ ...ಸತ್ತ್ವತನೋರ್ನೃಣಾಂ ಸ್ಯುಃ'' ಎಂಬ ಭಾಗವತ ವಚನದಲ್ಲಿ ಪ್ರಕೃತಿಯ ಸ್ವರೂಪವಾದ ಸತ್ತ್ವರಜಸ್ತಮೋಗುಣಗಳನ್ನು ಹೇಳಿ ಒಬ್ಬನೇ ಪರಮಾತ್ಮನು ಮಾಯೋ-ಪಹಿತನಾಗಿ ಸ್ಥಿತಿ, ಸೃಷ್ಟಿ, ಸಂಹಾರಗಳೆಂಬ ವ್ಯಾಪಾರಗಳನ್ನು ನಡೆಸುವುದ-ಕ್ಕೋಸ್ಕರ ಕ್ರಮವಾಗಿ ವಿಷ್ಣು, ಬ್ರಹ್ಮ, ಶಿವ ಎಂಬ ಸಂಜ್ಞೆಗಳನ್ನು ಪಡೆಯುತ್ತಾನೆಂದು ಪ್ರತಿಪಾದಿಸಿದ್ದಾರೆ. ಅನಂತರ 'ಸತ್ತ್ವತನೋರ್ನೃಣಾಂ ಸ್ಯುಃ' ಎಂಬುವುದರಿಂದ ಸತ್ತ್ವಮಯ ಶರೀರಿಯಾದ ವಿಷ್ಣುವು ಸರ್ವೋತ್ಕೃಷ್ಟನೆಂದು ಸೂಚಿಸಿದ್ದಾರೆ. ಗುಣತ್ರಯಗಳನ್ನು ಸತ್ತ್ವರಜಸ್ತ-ಮಸ್ಸುಗಳೆಂದು ಕ್ರಮವಾಗಿ ಹೇಳುವ ಪಾಠವೇ ಹೆಚ್ಚಾಗಿರುವುದರಿಂದ ಬ್ರಹ್ಮ ಶಿವರು ರಜಸ್ತಮೋಗುಣವಿಶಿಷ್ಟರೆಂದೂ ಆದ್ದರಿಂದ ಅವರ ಉಪಾಧಿಯು ನಿಕೃಷ್ಟವಾದದ್ದೆಂದೂ ಸಿದ್ಧವಾಗುತ್ತದೆ. ಉಪಾಧಿಯು ನಿಕೃಷ್ಟವಾದ್ದರಿಂದ ಬ್ರಹ್ಮ ಶಿವರು ನಿಕೃಷ್ಟರೆಂದೂ, ವಿಷ್ಣುವಿಗೆ ಉತ್ಕೃಷ್ಟವಾದ ಸತ್ತ್ವಗುಣವು ಉಪಾಧಿಯಾದ್ದರಿಂದ ವಿಷ್ಣುವು ಅವರಿಬ್ಬರಿಗಿಂತ ಶ್ರೇಷ್ಠ-ನೆಂದೂ ಒಪ್ಪಿಕೊಳ್ಳಬೇಕಾಗುತ್ತದೆ.

ಶಂಕೆ :- ಭಾಗವತಾದಿ ಪುರಾಣಗಳು ವಿಷ್ಣುವಿನ ಶ್ರೇಷ್ಠತೆಯನ್ನು ವರ್ಣಿಸುವುದಕ್ಕಾಗಿ ಹೊರಟಿವೆ. ಆ ಸಂದರ್ಭದಲ್ಲಿ ಶಿವನು ತಾಮಸ

ವಿಗ್ರಹನೆಂದು ಹೇಳಿ ನಿಕೃಷ್ಟತೆಯನ್ನು ಪ್ರತಿಪಾದಿಸಿರಬಹುದು. ಒಂದು ಪ್ರಕರಣದಲ್ಲಿರುವ ನಿಂದೆಯು ಯಾರನ್ನೂ ನಿಂದಿಸುವುದಕ್ಕಾಗಿ ಹೊರಟಿರುವುದಿಲ್ಲ. ಅನ್ಯರನ್ನು ನಿಂದಿಸುವ ವ್ಯಾಜದಿಂದ ಸ್ತೋತ್ರಾರ್ಹ-ರನ್ನು ಸ್ತುತಿಸುವುದಕ್ಕಾಗಿ ಹೊರಟಿರುತ್ತದೆ - ಎಂಬ ನಹಿ ನಿಂದಾ ನ್ಯಾಯ-ದಂತೆ ವಿಷ್ಣುವನ್ನು ಸ್ತುತಿಸುವುದರಲ್ಲಿ ಆ ಪುರಾಣಗಳ ತಾತ್ಪರ್ಯವಿರುತ್ತದೆ. ಇದರಿಂದ ಶಿವನು ನಿಕೃಷ್ಟನೆಂದು ಸಿದ್ಧವಾಗುವುದಿಲ್ಲ.

ಸಮಾಧಾನ :- ಹಾಗಾದರೆ ಸ್ಕಾಂದಾದಿ ಪುರಾಣಗಳು ಶಿವನ ಶ್ರೇಷ್ಠತೆಯನ್ನು ಪ್ರತಿಪಾದಿಸುವುದಕ್ಕೋಸ್ಕರ ಹೊರಟಿರುವುದರಿಂದ ಆ ಪ್ರಕರಣಗಳಲ್ಲಿ ತಾಮಸವಿಗ್ರಹನೆಂದು ವಿಷ್ಣುವಿಗೆ ನಿಕರ್ಷವನ್ನು ಹೇಳಿರ-ಬಹುದು. 'ನ ಹಿ ನಿಂದಾ' ನ್ಯಾಯದಂತೆ ಶಿವನನ್ನು ಪ್ರಶಂಸೆ ಮಾಡುವು-ದರಲ್ಲಿ ಮಾತ್ರ ಅವುಗಳಿಗೆ ತಾತ್ಪರ್ಯವೇ ಹೊರತು ವಿಷ್ಣುವನ್ನು ನಿಕೃಷ್ಟ-ನೆಂದು ಹೇಳುವುದು ಅವುಗಳ ಉದ್ದೇಶವಲ್ಲವೆಂದು ಹೇಳಬಹುದು.

ಶಂಕೆ :- ಭಾಗವತಾದಿ ಪುರಾಣಗಳಲ್ಲಿ ಶಿವನು ತಾಮಸವಿಗ್ರಹ-ನೆಂಬುದಾಗಿ ನಿಕರ್ಷವನ್ನು ಪ್ರತಿಪಾದಿಸಿದ್ದರೂ ಅದು ಅವಸ್ಥಾಭೇದದಿಂದ ಶಿವನು ನೀಲವಿಗ್ರಹವನ್ನು ಧರಿಸಿದ್ದಾಗ ಹೇಳಿದ ಉಕ್ತಿಯೆಂದು ತಿಳಿಯಬೇಕು. ಹೇಗೆಂದರೆ, ಬ್ರಹ್ಮಾಂಡಪುರಾಣದಲ್ಲಿ "ಶಿವನು ಕಾಲಮೇಘ ದಂತೆ ನೀಲವರ್ಣನಾಗಿ ಕಂಥಾ, ಶೂಲ, ಕಪಾಲಗಳನ್ನು ಧರಿಸಿ ಮುಗುಳುನಗೆಯಾಡುತ್ತಾ ಅವರೆದುರಿಗೆ ಪ್ರಕಾಶನಾದನು" ಎಂದು ಹೇಳಿದೆ. ಇದರಿಂದ ಶಿವನು ಅವಸ್ಥಾಭೇದದಿಂದ ನೀಲವರ್ಣನಾಗಿದ್ದಾನೆಂದು ತಿಳಿದು ಬರುತ್ತದೆ. ಆದರೆ ಅವನ ಸ್ವಾಭಾವಿಕವಾದ ಶರೀರವು ಶ್ವೇತವರ್ಣವೇ ಸರಿ. ಆದ್ದರಿಂದ ಸ್ಕಾಂದಪುರಾಣದಲ್ಲಿ ಹೀಗೆ ಉಕ್ತವಾಗಿದೆ - "ಶುದ್ಧಸ್ಫಟಿಕದಂತೆ ಪ್ರಕಾಶಿಸುವವನೂ, ಚಂದ್ರರೇಖೆ-ಯನ್ನು ಶಿರಸ್ಸಿನಲ್ಲಿ ಧರಿಸಿದವನೂ, ತ್ರಿನೇತ್ರನೂ, ಚತುರ್ಬಾಹುವೂ, ಉತ್ತಮೋತ್ತಮನೂ ಆದ ನೀಲಕಂಠನನ್ನು 'ಸೋಽಹಂ ಭಾವದಿಂದ ಯಾವಾಗಲೂ ಧ್ಯಾನಿಸಬೇಕು." -ಸೂತ. ಜ್ಞಾನ ೧೯-(೩-೪)

ಇದನ್ನು ಪರ್ಯಾಲೋಚಿಸಿದರೆ ಶಿವನಿಗೆ ಸ್ವಾಭಾವಿಕವಾಗಿ ಶ್ವೇತವಿಗ್ರಹವಿರುವುದರಿಂದ ಶಿವನು ಉತ್ಕೃಷ್ಟನೆಂದು ಸಿದ್ಧವಾಗುತ್ತದೆ.

ಸಮಾಧಾನ :- ಸ್ಕಾಂದಾದಿ ಪುರಾಣಗಳಲ್ಲಿ ವಿಷ್ಣುವು ತಾಮಸ ವಿಗ್ರಹನೆಂಬುದಾಗಿ ನಿಕರ್ಷವನ್ನು ಪ್ರತಿಪಾದಿಸಿದ್ದರೂ, ಅದು ಸಮಯ ವಿಶೇಷದಲ್ಲಿ ವಿಷ್ಣುವು ನೀಲವಿಗ್ರಹವನ್ನು ಧರಿಸಿದಾಗ ಹೇಳಿದ ಉಕ್ತಿಯೆಂದು ತಿಳಿಯಬೇಕಾಗುವುದು. ಹೇಗೆಂದರೆ,

**ಆಲೋಲತುಲಸೀಮಾಲಮಾರೂಢವಿನತಾಸುತಮ್ ।**
**ಜ್ಯೋತಿರಿಂದೀವರಶ್ಯಾಮಮಾವಿರಸ್ತು ಮಮಾಗ್ರತಃ ॥**

''ಚಲಿಸುತ್ತಿರುವ ತುಲಸೀಮಾಲೆಯನ್ನು ಧರಿಸಿದವನೂ, ಗರುಡವಾಹನನೂ, ಇಂದೀವರದಂತೆ ಕಪ್ಪುಬಣ್ಣವುಳ್ಳವನೂ ಆದ ಜ್ಯೋತಿಃ ಸ್ವರೂಪನು ನನ್ನೆದುರಿಗೆ ಪ್ರತ್ಯಕ್ಷನಾಗಲಿ'' ಇತ್ಯಾದಿ ವಚನಗಳು ಪುರಾಣಗಳಲ್ಲಿ ದೊರೆಯುತ್ತವೆ. ಆದರೆ ವಿಷ್ಣುವಿನ ಶರೀರವು ಸ್ವಾಭಾವಿಕವಾಗಿ ಶ್ವೇತವರ್ಣವೆಂದು ಹೇಳಬಹುದು. ಏಕೆಂದರೆ, ''**ಗೋಕ್ಷೀರಾಭಂ ಪುಂಡರೀಕಾಯತಾಕ್ಷಂ ಚಕ್ರಾಬ್ಜಾಢ್ಯಂ ಭೂಷಣೈರ್ಭೂಷಿತಾಂಗಮ್ । ಶ್ರೀಭೂಮಿಭ್ಯಾಮರ್ಚಿತಂ ಯೋಗಪೀಠೇ ಧ್ಯಾಯೇದ್ದೇವಂ ಪೂಜಯೇತ್ ಪೌರುಷೇಣ ॥**'' ''ಹಸುವಿನ ಹಾಲಿನಂತೆ ಶುಭ್ರವರ್ಣನೂ, ಕಮಲದಂತೆ ವಿಶಾಲನೇತ್ರನೂ ಶಂಖಚಕ್ರಧಾರಿಯೂ, ಭೂಷಣಗಳಿಂದ ಅಲಂಕೃತನೂ ಶ್ರೀಭೂದೇವಿಯರಿಂದ ಪೂಜಿತನೂ ಆದ ದೇವನನ್ನು ಯೋಗಪೀಠದಲ್ಲಿ ಧ್ಯಾನಿಸಿ ಪುರುಷಸೂಕ್ತದಿಂದ ಪೂಜಿಸಬೇಕು'' ಇತ್ಯಾದಿ ಬಹುಪ್ರಮಾಣಗಳು ದೊರೆಯುತ್ತವೆ. ಪುರುಷಸೂಕ್ತದಲ್ಲಿ ಧ್ಯೇಯನಾದ ವಾಸುದೇವನೃಸಿಂಹಧ್ಯಾನಾದಿಗಳಲ್ಲಿ ವಿಷ್ಣುವಿನ ಶರೀರವು ಸ್ವಾಭಾವಿಕವಾಗಿ ಶ್ವೇತವರ್ಣವೆಂದು ಗೊತ್ತಾಗುವುದರಿಂದ ವಿಷ್ಣುವು ಉತ್ಕೃಷ್ಟನೆಂದು ಅದರಂತೆಯೇ ಹೇಳಬಹುದು. ಅಷ್ಟೇ ಅಲ್ಲ. ಸ್ಕಾಂದಪುರಾಣ ಮತ್ತು ಭಾಗವತಗಳ ತಾತ್ಪರ್ಯವನ್ನು ಪರಿಶೀಲಿಸಿದರೆ ಶಿವನ ಅಂತರ್ಗುಣವು

ಸತ್ತ್ವವೆಂದೂ, ಬಹಿರ್ಗುಣವು ತಮಸ್ಸೆಂದೂ ಗೊತ್ತಾಗುತ್ತದೆ. ಆದರೆ ವಿಷ್ಣುವಿಗೆ ಬಾಹ್ಯಾಭ್ಯಂತರಗಳೆರಡೂ ಸತ್ತ್ವಗುಣವೆಂದೇ ಗೊತ್ತಾಗುತ್ತದೆ. ಆದಕಾರಣ ಶಿವನಿಗಿಂತ ವಿಷ್ಣುವೇ ಅಧಿಕನೆಂದು ತಿಳಿದುಬರುತ್ತದೆ.

ಶಂಕೆ :- ಅಗಸ್ತ್ಯ ಮಹರ್ಷಿಗಳು ಶಿವರಹಸ್ಯದಲ್ಲಿ

'ಅಷ್ಟಮೂರ್ತಿರನೇಕಾತ್ಮಾ ಸಾತ್ತ್ವಿಕಃ ಶುದ್ಧವಿಗ್ರಹಃ'

ಎಂದು ಹೇಳಿದ್ದಾರೆ. ಆದ್ದರಿಂದ ಶಿವನಿಗೂ ಸತ್ತ್ವವೇ ಬಾಹ್ಯಾಭ್ಯಂತರ ಗುಣಗಳೆಂದು ಹೇಳಬಹುದು.

ಸಮಾಧಾನ :- ಹಾಗಾದರೆ ಶಿವವಿಷ್ಣುಗಳಿಗೆ ತಾರತಮ್ಯವನ್ನು ಹೇಳುವ ವಚನಗಳು ಎರಡು ಕಡೆಯಲ್ಲಿಯೂ ಸಮಾನವಾಗಿದೆ. ಆದ್ದರಿಂದ ಅವರಿಬ್ಬರೂ ಸಮಾನರೆಂದೇ ಫಲಿಸುವುದರಿಂದ ನಮ್ಮ ಇಷ್ಟಾರ್ಥವೇ ಸಿದ್ಧಿಸುತ್ತದೆ.

ಶಂಕೆ :- ಅವರೀರ್ವರಿಗೂ ಸತ್ತ್ವಗುಣವೇ ಉಪಾಧಿಯಾದರೆ ಉಪಾಧಿಯೂ ಏಕರೂಪವಾಯಿತು. ಉಪಾಧಿ ವಿಶಿಷ್ಟನಂತೂ ಒಬ್ಬನೇ ಈಶ್ವರನು. ಆಗ ಶಿವ ವಿಷ್ಣು ಮೊದಲಾದ ಭೇದವ್ಯವಹಾರವು ಹೇಗೆ ಸರಿಹೋಗುತ್ತದೆ ?

ಸಮಾಧಾನ :- ಪಾರ್ವತೀಪತಿತ್ತ್ವ, ಲಕ್ಷ್ಮೀಪತಿತ್ತ್ವ ಮೊದಲಾದ ಧರ್ಮಗಳನ್ನು ಅವರ ಶರೀರಗಳಿಗೆ ಹೇಳಬಹುದು. ಅಥವಾ ಸಂಹಾರ, ಸೃಷ್ಟಿ ಮುಂತಾದ ಕ್ರಿಯೆಗಳನ್ನು ಅವರಿಗೆ ಬೇರೆ ಬೇರೆಯಾಗಿ ಹೇಳಬಹುದು. ಇದರಿಂದ ಭೇದವ್ಯವಹಾರಕ್ಕೆ ಬಾಧವೇನೂ ಇಲ್ಲ.

ಶಂಕೆ :- ಆಗಲಿ; ಇದರಿಂದ ಹರಿ, ಹರರಿಗೆ ಬಾಹ್ಯಾಭ್ಯಂತರಗಳೆರಡರಲ್ಲಿಯೂ ಸತ್ತ್ವಗುಣವೇ ಉಪಾಧಿಯೆಂದು ನಿರ್ಣಯವಾಗುವುದು. ಆದರೆ ಬ್ರಹ್ಮನಿಗೆ ಅಂತರ್ಗುಣ ಬಹಿರ್ಗುಣಗಳೆರಡೂ ರಜೋಗುಣವೆಂದು ಹಿಂದೆ ಪ್ರತಿಪಾದಿಸಿದ್ದೀರಿ. ಅವನಿಗೆ ಸತ್ತ್ವಗುಣದ

ಸಂಬಂಧವೇ ಇಲ್ಲ. ಆದ್ದರಿಂದ ಹರಿಹರರಿಗಿಂತ ಬ್ರಹ್ಮನು ಕನಿಷ್ಠನಾಗುವ ಪ್ರಸಂಗ ಒದಗುವುದಲ್ಲವೆ ?

ಸಮಾಧಾನ :- ಗುಣಪ್ರಯುಕ್ತವಾಗಿ ತಾರತಮ್ಯವನ್ನು ಹೇಳುವುದಾದರೆ, ನಿಮ್ಮ ತುರೀಯ ಶಿವನೂ ನಿಕೃಷ್ಟನೆಂದು ಹೇಳಬೇಕಾಗುತ್ತದೆ. ಹೇಗೆಂದರೆ, ತುರೀಯ ಶಿವನಿಗೆ ತ್ರಿಗುಣಾತ್ಮಕವಾದ ಮಾಯೆಯು ಉಪಾಧಿಯಾಗಿದೆ. ಅದರಲ್ಲಿ ಮೂರು ಗುಣಗಳೂ ಸಾಮ್ಯಾವಸ್ಥೆಯಿಂದ ಇವೆ. ಹರಿಹರರಂತೆ ಅವನಿಗೆ ಕೇವಲ ಸತ್ತ್ವಗುಣವು ಉಪಾಧಿಯಾಗಿಲ್ಲ. ರಜಸ್ತಮೋಗುಣಗಳಿಂದ ಮಿಶ್ರವಾದ ಸತ್ತ್ವಗುಣವು ಉಪಾಧಿಯಾಗಿರುವುದರಿಂದ ಅವನು ನಿಕೃಷ್ಟನೆನ್ನುವುದು ಅನಿವಾರ್ಯವಾದೀತು. ಆದರೆ ಬ್ರಹ್ಮನಿಗಿಂತ ನಿಕೃಷ್ಟನಾಗುವುದಿಲ್ಲ. ಬ್ರಹ್ಮನು ಕೇವಲ ರಜೋಮೂರ್ತಿ. ಸತ್ತ್ವಗುಣದ ಲೇಶವೂ ಅವನಲ್ಲಿ ಇಲ್ಲ. ತುರೀಯ ಶಿವನಲ್ಲಿ ಸತ್ತ್ವಗುಣವೂ ಇರುವುದರಿಂದ ಬ್ರಹ್ಮನಿಗಿಂತ ಅವನು ಅಧಿಕನು ಎಂದೂ ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ತುರೀಯ ಶಿವನಲ್ಲಿ ತಮೋಗುಣವು ಇರುವುದರಿಂದ ಅದರ ನಿಕೃಷ್ಟತೆಯು ಇರಲೇಬೇಕು. ಬ್ರಹ್ಮನಿಗೆ ತಮೋಗುಣದ ಮಾಲಿನ್ಯವಿಲ್ಲದಿರುವುದರಿಂದ ಬ್ರಹ್ಮನೂ ತುರೀಯ ಶಿವನಿಗಿಂತ ಉತ್ಕೃಷ್ಟನೇ ಆಗುವನು. ಈ ಅಂಶವನ್ನು ನೀವು ಒಪ್ಪುವುದಿಲ್ಲ. ಏಕೆಂದರೆ ತ್ರಿಮೂರ್ತಿಗಳಿಗೆ ವ್ಯಷ್ಟಿಗುಣಗಳು ಉಪಾಧಿಯಾದ್ದರಿಂದ ಅವರಿಗಿಂತಲೂ ಗುಣತ್ರಯಸಮಷ್ಟಿಯು ಉಪಾಧಿಯಾಗಿರುವ ತುರೀಯಶಿವನೇ ಅಧಿಕನೆಂದು ನಿಮ್ಮ ಸಿದ್ಧಾಂತವಿದೆ. ಆದ್ದರಿಂದ ವಿಶೇಷಣವಾದ ಉಪಾಧಿಯಲ್ಲಿ ತಾರತಮ್ಯವನ್ನು ಅಂಗೀಕರಿಸಲಿ ಅಥವಾ ಅಂಗೀಕರಿಸದೆ ಇರಲಿ, ಅವೆರಡೂ ಪಕ್ಷಗಳಲ್ಲಿಯೂ ತ್ರಿಮೂರ್ತಿಗಳಿಗೆ ತಾರತಮ್ಯವನ್ನು ಕಲ್ಪಿಸುವುದು ಸರ್ವಥಾ ಸರಿಯಲ್ಲ. ಆ ಮೂವರೂ ಈಶ್ವರಕೋಟಿಯಲ್ಲಿ ಸೇರಿದವರು; ಮಾಯೆಯನ್ನು ವಶಪಡಿಸಿಕೊಂಡವರು; ಅವರ ಚೈತನ್ಯವು ಆವರಣರಹಿತವಾದುದು. ಆದ್ದರಿಂದ, ಮೂವರೂ ಸಮಾನರು.

ಈ ರೀತಿಯಲ್ಲಿ ಬ್ರಹ್ಮಾದಿಗಳಿಗೆ ತಾರತಮ್ಯಭಾವವು ಬಾಧಿತ-ವಾಗುವುದರಿಂದ ಹಿಂದೆ ಹೇಳಿದ ಸ್ಕಾಂದಪುರಾಣದ ವಚನಗಳಿಗೆ ತ್ರಿಮೂರ್ತಿಗಳಲ್ಲಿ ತಾರತಮ್ಯವನ್ನು ಹೇಳುವುದು ಅಭಿಮತವಲ್ಲ. ಆ ಪ್ರಕರಣದಲ್ಲಿ **ಅಥಾತಃ ಸಂಪ್ರವಕ್ಷ್ಯಾಮಿ ಪರಾತ್ ಪರತರಂ ಪದಮ್ ॥** ಸೂತ. ಯಜ್ಞ ೨೭-೧ ॥ ಎಂದು ಉಪಕ್ರಮವನ್ನು ಮಾಡಿದ್ದಾರೆ. ''ಶಕ್ತಿ ತತ್ತ್ವೋಪಾಧಿಕನಿಗಿಂತ ಶಿವತತ್ತ್ವೋಪಾಧಿಕನಾದ ಈಶ್ವರನು ಪರನು. ಅವನಿಗಿಂತ ಶ್ರೇಷ್ಠವಾದ ನಿರುಪಾಧಿಕ ಪರತತ್ತ್ವ ಸ್ವರೂಪವನ್ನು ಇನ್ನು ಮುಂದೆ ಹೇಳುವೆನು.'' ಅನಂತರ ಉಪಸಂಹಾರವು ಹೀಗಿದೆ :-
**''ತತೋಽಧಿಕಂ ಪರಂ ತತ್ತ್ವಂ ಜ್ಞಾನಮಾನಂದಮದ್ವಯಮ್''**

ಸೂತ. ಯಜ್ಞ ೨೭-೯.

''ಜಗತ್ಕಾರಣನಾದ ಈಶ್ವರನಿಗಿಂತಲೂ ಅದ್ವಿತೀಯವೂ ಜ್ಞಾನಾನಂದ ಸ್ವರೂಪವೂ ಆದ ಪರತತ್ತ್ವವು ಶ್ರೇಷ್ಠವಾದದ್ದು''

ಈ ಉಪಕ್ರಮೋಪಸಂಹಾರಗಳನ್ನು ಪರ್ಯಾಲೋಚಿಸಿದರೆ ನಿರ್ವಿಶೇಷ ಬ್ರಹ್ಮವಸ್ತುವನ್ನು ಸರ್ವೋತ್ಕೃಷ್ಟವೆಂದು ಪ್ರತಿಪಾದಿಸುವುದೇ ಅಭಿಮತ-ವೆಂದು ನಿಶ್ಚಯಿಸಬಹುದಾಗಿದೆ.

ಇನ್ನು ವಿಶಿಷ್ಟವು ಅನ್ಯಪದಾರ್ಥವೆಂದು ಭಾವಿಸಿ ಉಮಾರ್ಧ ವಿಗ್ರಹವಿಶಿಷ್ಟನಾದ ಶಿವನಿಗೆ ಪ್ರಮಾಣಬಲದಿಂದ ಶ್ರೇಷ್ಠತೆಯನ್ನು ಹೇಳುತ್ತೇವೆ ಎಂಬುದೂ ಸರಿಯಲ್ಲ. ಹರಿಹರರನ್ನು ವರ್ಣಿಸುವ ಎಲ್ಲಾ ಶ್ರುತಿ, ಸ್ಮೃತಿ, ಪುರಾಣಗಳಲ್ಲಿಯೂ ಇಬ್ಬರೂ ಮುಮುಕ್ಷುಗಳಿಗೆ ಉಪಾಸ್ಯ-ರೆಂದೂ, ಜ್ಞಾನಪ್ರದರೆಂದೂ ಪ್ರತಿಪಾದಿಸಿರುವುದರಿಂದ ಅವರಲ್ಲಿ ತಾರತಮ್ಯವನ್ನು ಕಲ್ಪಿಸುವುದು ಅಯುಕ್ತವಾಗುವುದು. ಹಾಗೆ ಪ್ರತಿ-ಪಾದಿಸುವ ವಚನಗಳನ್ನು ಮುಂದೆ ಬರೆಯುತ್ತೇನೆ.

ಶಂಕೆ :- ಆದರೂ '**ಯೋ ಬ್ರಹ್ಮಾಣಂ ವಿದಧಾತಿ ಪೂರ್ವಮ್... ಪ್ರಪದ್ಯೇ**' '**ಉಮಾಸಹಾಯಂ... ಪರಸ್ತಾತ್**' ಇತ್ಯಾದಿ ಶ್ರುತಿಗಳಲ್ಲಿ

ಪರಶಿವನು ಮುಮುಕ್ಷುಗಳಿಗೆ ಉಪಾಸ್ಯನೆಂದು ಹೇಳಿರುವುದರಿಂದ ಅವನು ಮೋಕ್ಷಪ್ರದನಾಗುತ್ತಾನೆ. ಆದ್ದರಿಂದ ಪರಶಿವನೇ ಉತ್ಕೃಷ್ಟ-ನಾಗುತ್ತಾನಲ್ಲವೆ?

ಸಮಾಧಾನ :- ನಿಜ; ನೃಸಿಂಹತಾಪನೀಯೋಪನಿಷತ್ತು ಮೊದಲಾದವು-ಗಳಲ್ಲಿ ವಿಷ್ಣುವು ಮುಮುಕ್ಷುಗಳಿಗೆ ಉಪಾಸ್ಯನೆಂದು ಹೇಳಿರುವುದರಿಂದ ವಿಷ್ಣುವು ಮೋಕ್ಷಪ್ರದನೆಂದು ಸಿದ್ಧವಾಗುತ್ತದೆ. ಹೇಗೆಂದರೆ -

**'ಕ್ಷೀರೋದಾರ್ಣವಶಾಯಿನಂ... ಸೋಽಮೃತತ್ತ್ವಂ ಚ ಗಚ್ಛತಿ ॥'**

''ಕ್ಷೀರಸಾಗರ ಶಾಯಿಯೂ, ನರಸಿಂಹ ಶರೀರವುಳ್ಳದ್ದೂ, ಯೋಗಿ-ಗಳಿಗೆ ಧ್ಯೇಯವೂ, ಪರಮ ಪದವೂ ಆದ ಸಾಮವನ್ನು ಯಾವನು ತಿಳಿಯುತ್ತಾನೋ ಅವನು ಮುಕ್ತನಾಗುತ್ತಾನೆ''

''ನೃಸಿಂಹ ಪೂರ್ವತಾಪನೀಯ'' ೧-೫

**'ಅಥ ಕಸ್ಮಾದುಚ್ಯತೇ ನಮಾಮೀತಿ... ಬ್ರಹ್ಮವಾದಿನಶ್ಚ'**

**''ಉಗ್ರಂ ವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋಮುಖಮ್ ।**
**ನೃಸಿಂಹಂ ಭೀಷಣಂ ಭದ್ರಂ ಮೃತ್ಯುಮೃತ್ಯುಂ ನಮಾಮ್ಯಹಮ್''**

ಎಂಬುದು ನಾರಸಿಂಹಮಂತ್ರ. ಇದರಲ್ಲಿ ನಮಾಮಿ - ನಮಸ್ಕರಿಸುತ್ತೇನೆ ಎಂದು ಏಕೆ ಹೇಳಬೇಕೆಂದರೆ - ಸರ್ವದೇವತೆಗಳೂ, ಮುಮುಕ್ಷುಗಳಾದ ವೇದಾಂತಿಗಳೂ ನರಸಿಂಹನನ್ನು ನಮಸ್ಕರಿಸುತ್ತಾರೆ. ಆದ್ದರಿಂದ 'ನಮಾಮಿ' ಎಂದು ಹೇಳಬೇಕು - ನೃಸಿಂಹ ಪೂರ್ವತಾಪನೀಯ ೨-೪

**ಆತ್ಮೈವ ನೃಸಿಂಹೋ ದೇವೋ ಬ್ರಹ್ಮ ಭವತಿ...**
**ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ**

''ಆತ್ಮಸ್ವರೂಪನಾದ ನರಸಿಂಹದೇವನೇ ಬ್ರಹ್ಮನಾಗಿದ್ದಾನೆ. ಹೀಗೆಂದು ಯಾವನು ತಿಳಿಯುತ್ತಾನೆಯೋ ಅವನು ಅಕಾಮನೂ, ನಿಷ್ಕಾಮನೂ, ಆಪ್ತಕಾಮನೂ, ಆತ್ಮಕಾಮನೂ ಆಗಿರುತ್ತಾನೆ. ಅವನ ಪ್ರಾಣಗಳು

ಉತ್ಕ್ರಮಿಸುವುದಿಲ್ಲ. ಇಲ್ಲಿಯೇ ಲೀನವಾಗುತ್ತವೆ. ಮೊದಲು ಬ್ರಹ್ಮನಾಗಿಯೇ ಇದ್ದು ಪುನಃ ಬ್ರಹ್ಮಸ್ವರೂಪವನ್ನು ತಳೆಯುತ್ತಾನೆ''

**॥ ನೃಸಿಂಹೋತ್ತರತಾಪನೀಯ ॥ ಖಂಡ ೫**

**''ಸದಾ ರಾಮೋಽಹಮಿತ್ಯೇವ ತತ್ತ್ವತಃ ಪ್ರವದಂತಿ ಯೇ... ಸರ್ವೇ ದೇವಾ ಮುಮುಕ್ಷವಃ''** ''ಪರಮಾರ್ಥದಿಂದ ನಾನೇ ರಾಮನೆಂದು ಯಾರು ಹೇಳುತ್ತಾರೆಯೋ ಅವರು ಸಂಸಾರಿಗಳಲ್ಲ; ಅವರು ನಿಜವಾಗಿಯೂ ರಾಮಸ್ವರೂಪವೇ ಸರಿ; ಸಂದೇಹವಿಲ್ಲ.''

'ಓಂ ರಾಮಾಯ ನಮಃ' ಎಂಬಲ್ಲಿ ರಾಮನೆಂದರೆ ಸಚ್ಚಿದಾನಂದ ಸ್ವರೂಪನೆಂದು ತಿಳಿಯಬೇಕು. 'ನಮಃ' ಎಂಬ ಪದವು ಪೂರ್ಣಾನಂದ-ಸ್ವರೂಪನೆಂದು ತಿಳಿಯಬೇಕು. ಎಲ್ಲಾ ದೇವತೆಗಳೂ ಮುಮುಕ್ಷುಗಳೂ ರಾಮನಿಗೆ ಮನಸ್ಸಿನಲ್ಲಿ ನಮಸ್ಕರಿಸುತ್ತಾರೆ.'' **॥ ರಾಮೋತ್ತರ ತಾಪನೀಯೋಪನಿಷತ್ ॥**

**''ಸತ್ಪುಂಡರೀಕನಯನಂ... ಸ ಬ್ರಹ್ಮವಿದ್ಭವತಿ.''**

''ಅರಳಿದ ಕಮಲದಂತೆ ನೇತ್ರವುಳ್ಳವನೂ, ಮೇಘಶ್ಯಾಮನೂ ಪೀತಾಂಬರನೂ, ಎರಡು ಭುಜಗಳನ್ನುಳ್ಳವನೂ, ವೇಣುಮುದ್ರೆಯನ್ನು ಧರಿಸಿದವನೂ, ವನಮಾಲಾಧರನೂ, ಈಶ್ವರನೂ, ಗೋಪ ಗೋಪಿಕೆಯರಿಂದ ಪರಿವೃತನೂ, ತಮಾಲ ವೃಕ್ಷವನ್ನಾಶ್ರಯಿಸಿದವನೂ, ದಿವ್ಯಾಲಂಕಾರಭೂಷಿತನೂ, ರಕ್ತಕಮಲಮಧ್ಯಸ್ಥನೂ, ಯಮುನಾನದಿಯ ಅಲೆಗಳ ಮೇಲೆ ಬೀಸುವ ವಾಯುವಿನಿಂದ ಸೇವಿತನೂ ಆದ ಕೃಷ್ಣನನ್ನು ಧ್ಯಾನಿಸತಕ್ಕವನು ಸಂಸಾರದಿಂದ ಮುಕ್ತನಾಗುತ್ತಾನೆ. ತಾನು ಒಬ್ಬನೇ ಆಗಿದ್ದರೂ ಬಹುರೂಪನಾಗಿ ತೋರುವ ಕೃಷ್ಣನನ್ನು ವೈಷ್ಣವ ಪೀಠ ಮಧ್ಯದಲ್ಲಿ ಯಾವ ಧೀರರು ಧ್ಯಾನಮಾಡುತ್ತಾರೋ ಅವರಿಗೆ ಶಾಶ್ವತವಾದ ಸುಖವು ದೊರೆಯುತ್ತದೆ. ಇತರರಿಗೆ ದೊರೆಯುವುದಿಲ್ಲ. ನಿತ್ಯವೆಂದು ಹೇಳುವ ಆಕಾಶಾದಿಗಳಿಗಿಂತ, ನಿತ್ಯನೂ ಚೇತನರಾದ

ಜಂತುಗಳಿಗೆ ಚೈತನ್ಯವನ್ನು ಕೊಡತಕ್ಕವನೂ, ತಾನು ಒಬ್ಬನೇ ಆಗಿದ್ದರೂ ಬಹುಜನರ ಇಷ್ಟಾರ್ಥಗಳನ್ನು ಸಂಪಾದಿಸಿಕೊಡತಕ್ಕವನೂ ಆದ ಕೃಷ್ಣನನ್ನು ವೈಷ್ಣವಪೀಠಮಧ್ಯದಲ್ಲಿ ಯಾರು ಧ್ಯಾನಿಸುತ್ತಾರೆಯೋ ಅವರಿಗೆ ಶಾಶ್ವತವಾದ ಮೋಕ್ಷವು ದೊರಕುವುದು; ಇತರರಿಗೆ ದೊರೆಯುವುದಿಲ್ಲ. ಯಾವನು ಸೃಷ್ಟಿಗೆ ಪೂರ್ವದಲ್ಲಿ ಬ್ರಹ್ಮವನ್ನು ಸೃಷ್ಟಿಸುತ್ತಾನೆಯೋ, ಆ ಬ್ರಹ್ಮನಿಗೆ ವೇದ ವಿದ್ಯೆಗಳನ್ನು ಕಲಿಸುತ್ತಾನೆಯೋ ಅಂತಹ ಆತ್ಮ ಬುದ್ಧಿ ಪ್ರಕಾಶನಾದ ಕೃಷ್ಣನನ್ನು ಮುಮುಕ್ಷವು ಶರಣು ಹೊಂದಬೇಕು. ನಾನೇ ಪರಮಾರ್ಥದಲ್ಲಿ ಕೃಷ್ಣನೆಂದು ತಿಳಿಯುವವನು ಮೋಕ್ಷವನ್ನು ಹೊಂದುತ್ತಾನೆ; ಅವನು ಬ್ರಹ್ಮ ಸ್ವರೂಪವನ್ನು ಪಡೆಯುತ್ತಾನೆ; ಅವನು ಬ್ರಹ್ಮಜ್ಞಾನಿಯಾಗುತ್ತಾನೆ'' - ಗೋಪಾಲ ತಾಪನೀಯೋಪನಿಷತ್

**''ಶುದ್ಧೋದೇವ ಏಕೋ ನಾರಾಯಣಃ... ಸ ವಿಷ್ಣುರೇವಭವತಿ ॥**

''ಶುದ್ಧನೂ ಅದ್ವಿತೀಯನೂ ಆದ ನಾರಾಯಣನೆಂಬ ದೇವನೊಬ್ಬನೇ ಇದ್ದಾನೆ. ಇನ್ನೊಬ್ಬನಿಲ್ಲ ಎಂದು ಯಾವನು ತಿಳಿಯುತ್ತಾನೋ ಅವನು ವಿಷ್ಣುವೇ ಆಗುತ್ತಾನೆ.''- ನಾರಾಯಣೋಪನಿಷತ್

''ಸಕಲ ಭೂತಗಳಿಗೂ ಮಹೇಶ್ವರನೆನಿಸಿದ ನನ್ನ ಪರಮ ಸ್ವರೂಪವನ್ನು ಅರಿಯದ ಮೂಢರು ಮನುಷ್ಯದೇಹವನ್ನು ಧರಿಸಿ ನನ್ನನ್ನು ಅವಮಾನಿಸುತ್ತಾರೆ. ಅಂತಹವರ ಆಸೆಗಳು, ಕರ್ಮಗಳೂ, ಜ್ಞಾನವೂ ವ್ಯರ್ಥ. ಅವರ ಮನಸ್ಸು ವಿಕೃತವಾಗಿರುವುದು, ಅವರು ರಾಕ್ಷಸರಿಗೂ, ಅಸುರರಿಗೂ ಯೋಗ್ಯವಾದ ಮೋಹವನ್ನುಂಟು ಮಾಡುವ ಸ್ವಭಾವವನ್ನು ಹೊಂದಿರುತ್ತಾರೆ. ಆದರೆ ಅರ್ಜುನ, ದೈವೀಪ್ರಕೃತಿಯನ್ನಾಶ್ರಯಿಸಿದ ಮಹಾತ್ಮರು ನನ್ನನ್ನು ಅವ್ಯಯನೆಂದೂ, ಸಕಲ ಭೂತಗಳಿಗೂ ಆದಿಕಾರಣನೆಂದು ತಿಳಿದು ಅನನ್ಯ ಭಾವದಿಂದ ಭಜಿಸುತ್ತಾರೆ. ಆ ಭಕ್ತರು ಯಾವಾಗಲೂ ನನ್ನನ್ನು ಸ್ತೋತ್ರ ಮಾಡುತ್ತಾ ಯತ್ನಶೀಲರೂ, ದೃಢವ್ರತರೂ ಆಗಿ ನನ್ನನ್ನು ನಮಸ್ಕರಿಸುತ್ತಾ ನಿತ್ಯಯೋಗ ನಿಷ್ಠರಾಗಿ ಉಪಾಸನೆ ಮಾಡುತ್ತಾರೆ '' - ಭಗವದ್ಗೀತಾ - ೯. ೧೧-೧೪

ಈ ವಚನಗಳಿಂದ ಮುಮುಕ್ಷುಗಳು ವಿಷ್ಣುವನ್ನು ಉಪಾಸನೆ ಮಾಡುತ್ತಾರೆಂದೂ ವಿಷ್ಣುವು ಮೋಕ್ಷಪ್ರದನೆಂದೂ ಸಿದ್ಧವಾಗುತ್ತದೆ.

ಶಂಕೆ :- ಸ್ಕಾಂದಪುರಾಣದಲ್ಲಿ ''ಸಂಸಾರದಿಂದ ಸಾಕ್ಷಾತ್ ಮೋಕ್ಷವನ್ನು ಕೊಡುವವನು ಶಿವನೇ ಸರಿ. ಅನ್ಯನಲ್ಲ. ಇತರ ಎಲ್ಲಾ ದೇವತೆಗಳೂ ಪರಂಪರೆಯಿಂದ ಮೋಕ್ಷವನ್ನು ಕೊಡುತ್ತಾರೆ.'' ಎಂದು ಹೇಳಿದೆ. - ಸೂತ. ಯಜ್ಞ ೨೩-(೧೪-೧೫) ಆದ್ದರಿಂದ ಶಿವೋಪಾಸನೆಯು ಸಾಕ್ಷಾತ್ ಮೋಕ್ಷಕಾರಕ. ವಿಷ್ಣೂಪಾಸನೆಯು ಪರಂಪರೆಯಿಂದ ಮೋಕ್ಷಕಾರವಾಗುತ್ತದೆಯಲ್ಲವೆ ?

ಸಮಾಧಾನ :- ಮುಂದೆ ಹೇಳುವ ಭಗವದ್ಗೀತಾವಚನಗಳಿಂದ ವಿಷ್ಣೂಪಾಸನೆಯೇ ಸಾಕ್ಷಾತ್ ಮೋಕ್ಷಕಾರಕವೆಂದು ಸಿದ್ಧವಾಗುತ್ತದೆ.

''ಈ ತ್ರಿಗುಣಾತ್ಮಕವಾದ ನನ್ನ ದೈವೀಮಾಯೆಯು ಮೀರಲಸಾಧ್ಯ-ವಾದದ್ದು. ನನ್ನನ್ನೇ ಯಾರು ಶರಣು ಹೊಂದುವರೋ ಅವರು ಈ ಮಾಯೆಯನ್ನು ದಾಟುವರು. ಪಾಪಿಗಳೂ ಮೂಢರೂ ಆದ ನರಾಧಮರು ಮಾಯೆಯಿಂದ ಜ್ಞಾನವನ್ನು ಕಳೆದುಕೊಂಡು ಆಸುರ-ಭಾವವನ್ನು ಹೊಂದಿ ನನ್ನನ್ನು ಭಜಿಸುವುದಿಲ್ಲ.'' - ಭಗವದ್ಗೀತಾ ೭-೧೪-೧೫

''ತಮ್ಮ ತಮ್ಮ ಕಾಮವಾಸನೆಗಳಿಂದ ಮರುಳುಗೊಂಡ ಜನರು ಇತರ ದೇವತೆಗಳನ್ನು ಭಜಿಸುತ್ತಾರೆ.'' - ಭಗವದ್ಗೀತಾ ॥ (೭-೨೦)

ಮದ್ಭಕ್ತಾ ಯಾಂತಿ ಮಾಮಪಿ ॥ ಭ. ಗೀ. (೭-೨೩)

''ನನ್ನ ಭಕ್ತರು ನನ್ನನ್ನೇ ಸೇರುವರು''

'ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ ।
ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಮ್ ॥

ಭ. ಗೀ. (೮-೧೩)

"ಓಂ ಎಂಬ ಏಕಾಕ್ಷರ ಬ್ರಹ್ಮವನ್ನು ಉಚ್ಚರಿಸುತ್ತಾ, ನನ್ನನ್ನು ಸ್ಮರಿಸುತ್ತಾ ಯಾವನು ದೇಹವನ್ನು ತ್ಯಜಿಸಿ ಹೋಗುವನೋ ಅವನು ಮೋಕ್ಷವನ್ನು ಹೊಂದುವನು"

**'ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ'' ॥**

ಭ. ಗೀ. (೮-೧೬)

"ಅರ್ಜುನ, ನನ್ನನ್ನು ಹೊಂದಿದ ಬಳಿಕ ಪುನರ್ಜನ್ಮವಿಲ್ಲ." ಮತ್ತು **'ಬ್ರಹ್ಮವಿದಾಪ್ನೋತಿ ಪರಮ್', 'ಬ್ರಹ್ಮವಿದ್ಬ್ರಹ್ಮೈವ ಭವತಿ', 'ನಾನ್ಯಃ ಪಂಥಾ ವಿದ್ಯತೇಽಯನಾಯ'** ಇತ್ಯಾದಿಶ್ರುತಿಗಳು ಬ್ರಹ್ಮಜ್ಞಾನವು ಮಾತ್ರ ಸಾಕ್ಷಾತ್ ಮೋಕ್ಷ ಸಾಧನವೆಂದು ಘೋಷಿಸುತ್ತವೆ. ಶ್ರುತಿಯು ಪುರಾಣಾದಿ-ಗ್ರಂಥಗಳಿಗಿಂತ ಪ್ರಬಲವಾದದ್ದು. ಆದ್ದರಿಂದ ಎಲ್ಲಾ ಬಗೆಯ ಉಪಾಸನೆಯೂ ಪರಂಪರೆಯಿಂದಲೇ ವೈರಾಗ್ಯಾದಿಗಳನ್ನುಂಟು ಮಾಡಿ ಮೋಕ್ಷಸಾಧನವಾಗುತ್ತದೆ. ಆದಕಾರಣ ಶಿವೋಪಾಸನೆಯು ಸಾಕ್ಷಾತ್ ಮೋಕ್ಷಕ್ಕೆ ಸಾಧನವೆಂಬುದು ಸರಿಯಲ್ಲ.

ಶಂಕೆ :- ಸ್ಕಾಂದ ಪುರಾಣದಲ್ಲಿ ಹೀಗೆ ಉಕ್ತವಾಗಿದೆ. "ಬ್ರಹ್ಮಭಾವನೆಯಿಂದ ಯಾವ ಯಾವ ಮೂರ್ತಿಯನ್ನು ಜನರು ಪೂಜಿಸಿದರೂ ಕ್ರಮೇಣ ಶಿವನ ಸ್ವರೂಪವನ್ನು ಅವರು ತಿಳಿಯುವರು. ಶಿವಮೂರ್ತಿಯನ್ನು ಪೂಜಿಸುವವರು ಆತನ ಅನುಗ್ರಹದಿಂದ ಶ್ರಮವಿಲ್ಲದೆಯೇ ಸಾಕ್ಷಾತ್ತಾಗಿ ಸರ್ವತ್ರ ನೆಲೆಸಿರುವ ಶಿವನನ್ನು ತಿಳಿಯುವರು." - ಸೂತ. ಶಿ. ೮-(೩೯-೪೦)

ಆದ್ದರಿಂದ ಶಿವೋಪಾಸನೆಯು ಸಾಕ್ಷಾತ್ ಜ್ಞಾನಕ್ಕೆ ಸಾಧನವಾಗಿದೆ. ವಿಷ್ಣೂಪಾಸನೆಯು ಶಿವೋಪಾಸನೆಯ ಮೂಲಕ ಜ್ಞಾನಸಾಧನ-ವಾಗುತ್ತದೆಯೆಂದು ಹೇಳಬೇಕಲ್ಲವೆ ?

ಸಮಾಧಾನ :- ಮುಂದೆ ಹೇಳುವ ಉಕ್ತಿಗಳಿಂದ ವಿಷ್ಣೂಪಾಸನೆಯೇ ಸಾಕ್ಷಾತ್ ಜ್ಞಾನಸಾಧನವೆಂದೂ, ಶಿವಾದ್ಯುಪಾಸನೆಯು ವಿಷ್ಣೂಪಾಸನೆಯ ಮೂಲಕ ಜ್ಞಾನಸಾಧನವೆಂದೂ ಹೇಳಬಹುದಾಗಿದೆ.

''ಯಾರು ಪಾಪವನ್ನು ಕಳೆದುಕೊಂಡು ಪುಣ್ಯಕರ್ಮಿಗಳಾಗಿರುವರೋ, ಅವರು ದ್ವಂದ್ವಮೋಹನಿರ್ಮುಕ್ತರಾಗಿ ದೃಢವ್ರತವನ್ನು ಕೈಕೊಂಡು ನನ್ನನ್ನು ಭಜಿಸುತ್ತಾರೆ. ನನ್ನನ್ನು ಆಶ್ರಯಿಸಿ ಜರಾಮರಣಗಳನ್ನು ತಪ್ಪಿಸಿ-ಕೊಳ್ಳುವುದಕ್ಕಾಗಿ ಯತ್ನಮಾಡತಕ್ಕವರು ಬ್ರಹ್ಮವನ್ನೂ ಸಂಪೂರ್ಣವಾದ ಅಧ್ಯಾತ್ಮವನ್ನೂ, ಅಖಿಲಕರ್ಮವನ್ನೂ ತಿಳಿದವರಾಗುತ್ತಾರೆ.''

ಭ.ಗೀ. ೭-(೨೮-೨೯)

''ಅರ್ಜುನ, ಅನ್ಯದೇವತಾಭಕ್ತರಾಗಿ ಶ್ರದ್ಧೆಯಿಂದ ಪೂಜಿಸತಕ್ಕವರೂ ವಿಧಿಪೂರ್ವಕವಾಗಿ ಅಲ್ಲದಿದ್ದರೂ (ಪರ್ಯಾಯದಿಂದ) ನನ್ನನ್ನೇ ಪೂಜಿಸುವರು. ಏಕೆಂದರೆ, ನಾನೇ ಸಕಲ ಯಜ್ಞಗಳ ಸ್ವಾಮಿಯೂ, ಭೋಕ್ತೃವೂ ಆಗಿರುವೆನು. ಆದರೆ ಅವರಿಗೆ ನನ್ನ ವಿಷಯದಲ್ಲಿ ತತ್ತ್ವ-ಜ್ಞಾನವಿರುವುದಿಲ್ಲ. ಆದ್ದರಿಂದ ಮೋಕ್ಷಮಾರ್ಗದಿಂದ ಜಾರುತ್ತಾರೆ.'' ಭ.ಗೀ. ೯-(೨೩-೨೪)

''ಶ್ರುತಿ, ಯುಕ್ತಿ, ಪ್ರಮಾಣಗಳಿಂದ ಭೇದವು ನಿರಾಕೃತವಾಗಿದೆ. ಅನೇಕ ಚಂದ್ರರೂ, ದಶದಿಕ್ಕುಗಳೂ ಹೇಗೆ ಭ್ರಮೆಯಿಂದ ತೋರುವುವೋ ಹಾಗೆಯೇ ಭೇದವು ಭ್ರಮೆಯಿಂದಲೇ ಸರಿ. ಇಡೀ ವಿಶ್ವವು ನನ್ನ ಸ್ವರೂಪವೇ ಎಂಬ ಜ್ಞಾನವುಂಟಾಗುವವರೆಗೆ ನನ್ನನ್ನು ಆರಾಧಿಸುತ್ತಾ ಇರಬೇಕು. ಶ್ರದ್ಧಾಳುವೂ, ಮಹಾಭಕ್ತನೂ ಆದವನಿಗೆ ನಾನು ಅವನ ಹೃದಯದಲ್ಲಿ ಸರ್ವದಾ ಕಾಣಿಸಿಕೊಳ್ಳುತ್ತೇನೆ. ಇದು ವೇದಾಂತದ ಸಾರವಾದ ಭಾಗ, ರಹಸ್ಯವಾದ ಈ ವಿಷಯವನ್ನು ಪ್ರಿಯನಾದ್ದರಿಂದ ನಿನಗೆ ಹೇಳಿದ್ದೇನೆ.'' (ಅಧ್ಯಾತ್ಮ ರಾಮಾಯಣ - ಉ.ಕಾಂಡ)

''ಏಳು ಜನ್ಮಗಳಲ್ಲಿ ಸೂರ್ಯನ ಭಕ್ತನಾದವನಿಗೆ ಸೂರ್ಯಾನುಗ್ರಹದಿಂದ ಶಿವನಲ್ಲಿ ಭಕ್ತಿಯುಂಟಾಗುವುದು. ಏಳು ಜನ್ಮಗಳಲ್ಲಿ ಶಿವನ ಭಕ್ತನಾದ-ವನಿಗೆ ಶಿವನ ಅನುಗ್ರಹದಿಂದ ವಿಷ್ಣುವಿನಲ್ಲಿ ಭಕ್ತಿಯುಂಟಾಗುವುದು. ಏಳು ಜನ್ಮಗಳಲ್ಲಿ ವಿಷ್ಣುವಿನ ಭಕ್ತನಾದವನು ವಿಷ್ಣುವಿನ ಅನುಗ್ರಹದಿಂದ ವಿಷ್ಣುವಿನಲ್ಲಿ ಲೀನನಾಗುವನು.'' - ವಾಮನಪುರಾಣ

ಆದ್ದರಿಂದ ವಿಷ್ಣೂಪಾಸನೆಯೇ ಸಾಕ್ಷಾತ್ ಜ್ಞಾನಸಾಧನವೆಂದು ಹೇಳಬಹುದಾಗಿದೆ.

ಶಂಕೆ :- ''ನೀನು ದೇವತೆಗಳಲ್ಲಿ ಬ್ರಾಹ್ಮಣನು; ನಾನು ಮನುಷ್ಯರಲ್ಲಿ ಬ್ರಾಹ್ಮಣನು, ಬ್ರಾಹ್ಮಣನು ಬ್ರಾಹ್ಮಣನ ಬಳಿಗೆ ಹೋಗಿ ಸೇರುವನು. ನಾನು ನಿನ್ನನ್ನು ಸೇರುವೆನು.'' ಎಂಬ ಶ್ರುತಿಯು ಬ್ರಾಹ್ಮಣರಿಗೆ ಶಿವನೇ ಉಪಾಸ್ಯನೆಂದು ಪ್ರತಿಪಾದಿಸುತ್ತದೆ.

ಸಮಾಧಾನ :- ಹಿಂದೆ ಹೇಳಿದ ನೃಸಿಂಹತಾಪನೀಯ, ಗೋಪಾಲ-ತಾಪನೀಯ ಮೊದಲಾದ ಶ್ರುತಿಗಳೂ, **'ಕಿಂಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ'** ಇತ್ಯಾದಿ ಭಗವದ್ಗೀತಾವಚನಗಳೂ (ಭ.ಗೀ. ೯-೩೩) ಬ್ರಾಹ್ಮಣರಿಗೆ ವಿಷ್ಣುವು ಉಪಾಸ್ಯನೆಂದು ಬೋಧಿಸುತ್ತವೆ. ಆದ್ದರಿಂದ ತುರೀಯ ಶಿವಮೂರ್ತಿಯನ್ನು ಒಪ್ಪಿಕೊಂಡರೂ ಈ ಮೂರ್ತಿಗಳಲ್ಲಿ ತರತಮಭಾವವನ್ನು ಹೇಳುವುದು ಯುಕ್ತವಲ್ಲ. ಈ ಮೂರ್ತಿಗಳೆಲ್ಲವನ್ನೂ ಪರಮಾತ್ಮನು ಸ್ವೇಚ್ಛೆಯಿಂದ ಕಲ್ಪಿಸಿಕೊಂಡಿದ್ದಾನೆ. ತಾನು ಅನಾವೃತಚೈತನ್ಯನೂ, ಮುಮುಕ್ಷುಗಳಿಗೆ ಉಪಾಸ್ಯನೂ, ಜ್ಞಾನಪ್ರದನೂ ಆಗಿ ಎಲ್ಲಾ ಮೂರ್ತಿಗಳಲ್ಲಿಯೂ ಒಂದೇ ಬಗೆಯಲ್ಲಿ ಅನುಸ್ಯೂತನಾಗಿದ್ದಾನೆ.

ಅಷ್ಟೇ ಅಲ್ಲ. ಪ್ರಮಾಣಬಲದಿಂದ ಶಿವನಿಗೆ ತುರೀಯ-ಮೂರ್ತಿಯನ್ನು ಅಂಗೀಕರಿಸುವಂತೆ ವಿಷ್ಣುವಿಗೂ ತುರೀಯ ಮೂರ್ತಿ-ಯನ್ನು ಅಂಗೀಕರಿಸಲು ಶಕ್ಯವಿದೆ. ಕೆಳಗೆ ಹೇಳುವ ಪ್ರಮಾಣಗಳು ವಿಷ್ಣುವಿಗೆ ತುರೀಯಮೂರ್ತಿ ಇದೆಯೆಂಬುದನ್ನು ಪ್ರತಿಪಾದಿಸುತ್ತವೆ.

''ಪ್ರಥಮದಲ್ಲಿ ಒಬ್ಬನೇ ನಾರಾಯಣನಿದ್ದನು. ಆವನಿಂದ ಹಿರಣ್ಯ-ಗರ್ಭ, ಅಗ್ನಿ, ಯಮ, ವರುಣ, ವಿಷ್ಣು, ರುದ್ರ, ಇಂದ್ರರೆಲ್ಲರೂ ಉತ್ಪನ್ನರಾದರು.'' - ಪೈಂಗಿರಹಸ್ಯಬ್ರಾಹ್ಮಣ

**''ನಾರಾಯಣಂ ಕಾರಣಪೂರುಷಮ್...''** **(ನಾರಾಯಣೋಪನಿಷತ್)**

''ನಾರಾಯಣನು ತ್ರಿಮೂರ್ತಿಗಳಿಗೆ ಕಾರಣ ಪುರುಷನು''

''ಜಾಗ್ರತ್ತಿನಲ್ಲಿ ಬ್ರಹ್ಮನೂ, ಸ್ವಪ್ನದಲ್ಲಿ ವಿಷ್ಣುವೂ, ಸುಷುಪ್ತಿಯಲ್ಲಿ ರುದ್ರನೂ ಇರುವರು. ತುರೀಯವೇ ಅಕ್ಷರವಾದ ವಸ್ತು. ಅದು ಆದಿತ್ಯನೂ, ವಿಷ್ಣುವೂ, ಶಿವನೂ ಆಗಿದೆ.'' - ಬ್ರಹ್ಮೋಪನಿಷತ್

''ಯಾವ ಭಗವಂತನಾದ ನೃಸಿಂಹನು ಬ್ರಹ್ಮನೂ, ವಿಷ್ಣುವೂ, ಮಹೇಶ್ವರನೂ ಆಗಿರುವನೋ ಆತನಿಗೆ ನಮಸ್ಕಾರ. ನಮಸ್ಕಾರ'' -

ನೃಸಿಂಹತಾಪನೀಯ

''ಭಗವಂತನೂ, ಅದ್ವೈತಪರಮಾನಂದ ಸ್ವರೂಪನೂ ಆದ ಯಾವ ಶ್ರೀರಾಮಚಂದ್ರನು ಬ್ರಹ್ಮ, ವಿಷ್ಣು, ಈಶ್ವರನೂ ಆಗಿರುವನೋ ಆತನಿಗೆ ನಮಸ್ಕಾರ, ನಮಸ್ಕಾರ.'' - ರಾಮತಾಪನೀಯ

''ಕೃಷ್ಣನು 'ಓಂ'ಕಾರದಲ್ಲಿರುವ ಅರ್ಧಮಾತ್ರಾ ಸ್ವರೂಪನು. ಅವನಲ್ಲಿ ವಿಶ್ವವು ಪ್ರತಿಷ್ಠಿತವಾಗಿದೆ. ರುಕ್ಮಿಣಿಯು ಕೃಷ್ಣಾತ್ಮಕಳೂ, ಜಗತ್ ಕರ್ತ್ರಿಯೂ, ಮೂಲಪ್ರಕೃತಿಯೂ ಆಗಿದ್ದಾಳೆ.''

- ಗೋಪಾಲೋತ್ತರತಾಪನೀ - ೧೨

ಈ ಮೇಲ್ಕಂಡ ಶ್ರುತಿಗಳು ತುರೀಯರಾದ ನಾರಾಯಣ, ನೃಸಿಂಹ, ಶ್ರೀರಾಮ, ಗೋಪಾಲರೂ ಇದ್ದಾರೆಂದು ಪ್ರತಿಪಾದಿಸುತ್ತವೆ.

ಶಂಕೆ :- ನೀವು ಹೇಳಿದ ಪೈಂಗಿರಹಸ್ಯಬ್ರಾಹ್ಮಣಾದಿಗಳಲ್ಲಿ ನಾರಾಯಣ ಮೊದಲಾದವರಿಗೂ, ಮಾಯೋಪಹಿತವಾದ ಬ್ರಹ್ಮಕ್ಕೂ ಅಭೇದಭಾವನೆ-ಯನ್ನಿಟ್ಟುಕೊಂಡು 'ಬ್ರಹ್ಮ' ಎಂಬ ಅರ್ಥದಲ್ಲಿ ನಾರಾಯಣಾದಿ ಶಬ್ದಗಳು ಪ್ರಯೋಗಿಸಲ್ಪಟ್ಟಿವೆ. ಇದರಿಂದ ತುರೀಯವಿಷ್ಣುವನ್ನು ಪ್ರತಿಪಾದಿಸಿದಂತೆ ಆಗುವುದಿಲ್ಲ.

ಸಮಾಧಾನ :- ಹಾಗಾದರೆ ಅಥರ್ವಶಿಖಾ ಮೊದಲಾದವುಗಳಲ್ಲಿಯೂ ಶಿವ ಮತ್ತು ಮಾಯೋಪಹಿತ ಬ್ರಹ್ಮವಸ್ತುಗಳಿಗೆ ಅಭೇದಭಾವನೆ-ಯನ್ನಿಟ್ಟುಕೊಂಡು 'ಬ್ರಹ್ಮ' ಎಂಬ ಅರ್ಥದಲ್ಲಿ ಶಿವ, ಶಂಭು ಮೊದಲಾದ

ಶಬ್ದಗಳು ಪ್ರಯೋಗಿಸಲ್ಪಟ್ಟಿವೆಯೆಂದು ಹೇಳಬಹುದು. ಇನ್ನು ''ಅಥರ್ವಶಿಖಾ ಮೊದಲಾದವುಗಳಲ್ಲಿ ಜಗತ್ಕಾರಣವಾದ ಬ್ರಹ್ಮ ವಸ್ತು-ವನ್ನು ಉಪಾಸನೆ ಮಾಡುವುದಕ್ಕಾಗಿ ಶಿವ, ಶಂಭು ಮೊದಲಾದ ಶಬ್ದಗಳಿಂದ ತುರೀಯ ಶಿವಮೂರ್ತಿಯನ್ನು ಪ್ರತಿಪಾದಿಸಿದ್ದಾರೆಂದು ಹೇಳೋಣ. ಇದರಲ್ಲಿ ವಿರೋಧವೇನೂ ಇಲ್ಲ.'' ಎಂದು ಹೇಳುವುದಾದರೆ, ಪ್ರಕೃತದಲ್ಲಿ ಪೈಂಗಿರಹಸ್ಯಬ್ರಾಹ್ಮಣಾದಿಗಳಲ್ಲಿಯೂ ಹಾಗೆಯೇ ಉಪಾಸನೆ-ಗೋಸ್ಕರ ತುರೀಯ ವಿಷ್ಣುಮೂರ್ತಿಯನ್ನು ಪ್ರತಿಪಾದಿಸಿದ್ದಾರೆಂದು ಹೇಳಬಹುದಷ್ಟೆ. ಆದ್ದರಿಂದ ಹಿಂದೆ ಹೇಳಿದ ಸಕಲ ಪ್ರಮಾಣಗಳಿಗೂ ವಿರೋಧವಿಲ್ಲದಂತೆ ಸಮನ್ವಯ ಮಾಡಬೇಕೆಂಬ ನಿರ್ಮಲ ಮನೋಭಾವದ ಜನರು ಮಾತ್ಸರ್ಯವನ್ನು ಬಿಟ್ಟು ಬಿಡಬೇಕು. ಅವರು ಸಕಲ ವೈದಿಕರಿಗೂ ಸಂಮತವೆನಿಸಿದ ಭಗವತ್ಪಾದ ಶ್ರೀಶಂಕರಾಚಾರ್ಯರ ಅದ್ವೈತ-ಮಾರ್ಗವನ್ನು ಅವಲಂಬಿಸಬೇಕು. ಮತ್ತು ವಿಷ್ಣುವಿನ ಉತ್ಕರ್ಷವನ್ನೂ, ಶಿವನ ಉತ್ಕರ್ಷವನ್ನೂ ಪ್ರತಿಪಾದಿಸುವ ಸಕಲ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಾದಿಗಳಿಗೆ ಪರಸ್ಪರ ವಿರೋಧವಿಲ್ಲವೆಂಬುದನ್ನು ಸಮರ್ಥಿಸ-ಬೇಕು. ಹೇಗೆಂದರೆ -

''ಚೇತನ ವಸ್ತುಗಳಿಗೂ, ಜಡವಸ್ತುಗಳಿಗೂ ದ್ರಷ್ಟೃವಾಗಿ ಜ್ಞಾನ ಸ್ವರೂಪನೂ, ಅವಿನಾಶಿಯೂ ಆದವನೇ ಶಿವನು; ಅವನೇ ವಿಷ್ಣು.''

''ಯಾವನು ನಿನ್ನನ್ನು ದ್ವೇಷಿಸುವನೋ ಅವನು ನನ್ನನ್ನು ದ್ವೇಷಿಸಿ-ದಂತೆಯೇ ಸರಿ. ಜಗತ್ಪತಿಯಾದ ವಿಷ್ಣುವೇ, ನಮ್ಮಿಬ್ಬರಿಗೂ ಶಬ್ದದಿಂದಾಗಲಿ ಅರ್ಥದಿಂದಾಗಲಿ ಭೇದವಿಲ್ಲ. ಹೇ ಗೋವಿಂದ, ಲೋಕದಲ್ಲಿ ಮಹತ್ತ್ವ-ವನ್ನು ಪಡೆದ ನಿನ್ನ ಹೆಸರುಗಳೇ ನನ್ನ ಹೆಸರುಗಳು. ಈ ವಿಷಯದಲ್ಲಿ ವಿಚಾರಿಸಬೇಕಾದುದೇನೂ ಇಲ್ಲ.''

''ವಿಷ್ಣುರೂಪನಾದ ಶಿವನಿಗೂ, ಶಿವರೂಪನಾದ ವಿಷ್ಣುವಿಗೂ ಯಾವ ಭೇದವನ್ನೂ ಕಾಣದಂತೆ ಒಳ್ಳೆಯಭಾವನೆಯು ನನ್ನ ಜೀವನದಲ್ಲಿ

ಇರಲಿ.'' ಎಂಬುದಾಗಿ ಶ್ರುತಿ, ಭಾರತ, ಸ್ಕಾಂದಪುರಾಣ ಮೊದಲಾದವುಗಳಲ್ಲಿ ಹರಿಹರರಿಗೆ ಅಭೇದವನ್ನು ಪ್ರತಿಪಾದಿಸುವ ಬಹಳ ಪ್ರಮಾಣಗಳು ದೊರೆಯುತ್ತವೆ. ಆದ್ದರಿಂದ ತುರೀಯ ಮೂರ್ತಿಯನ್ನು ಒಪ್ಪದಿರುವ ಪಕ್ಷದಲ್ಲಿ ಬ್ರಹ್ಮ, ವಿಷ್ಣು, ರುದ್ರ ಮೊದಲಾದ ಗುಣಮೂರ್ತಿಗಳಲ್ಲಿ ಅನುಸ್ಯೂತನಾದ ಪರಮೇಶ್ವರನು ಒಬ್ಬನೇ ಆದ್ದರಿಂದ ಈ ಉಪಾಸ್ಯದೇವತೆಗಳಲ್ಲಿ ತಾರತಮ್ಯವನ್ನು ಕಲ್ಪಿಸುವುದು ಯುಕ್ತವಲ್ಲ. ಹಾಗಿಲ್ಲದೆ ತಾರತಮ್ಯವನ್ನು ಹೇಳುವುದಾದರೆ, ಅನೇಕ ಈಶ್ವರರಿದ್ದಾರೆಂದು ಒಪ್ಪಬೇಕಾಗುವುದು. ಆಗ '**ಯತೋ ವಾ ಇಮಾನಿ ಭೂತಾನಿ ಜಾಯಂತೇ**' ಇತ್ಯಾದಿ ಶ್ರುತಿಗಳಿಗೆ ವಿರೋಧವುಂಟಾಗುವು-ದೆಂದು ಹಿಂದೆಯೇ ಹೇಳಿದ್ದೇವೆ.

ಅಷ್ಟೇ ಅಲ್ಲ. ಮಂತ್ರಶಾಸ್ತ್ರದಲ್ಲಿ ಬ್ರಹ್ಮ, ರುದ್ರ, ವಿಷ್ಣು, ಗೌರೀ, ಸರಸ್ವತೀ, ಲಕ್ಷ್ಮೀ ಮೊದಲಾದ ದೇವತೆಗಳಿಗೆ ಈಶ್ವರತ್ತ್ವವನ್ನು ವರ್ಣಿಸಿದ್ದಾರೆ. ಅವರವರ ಭಕ್ತಿಗೆ ಅನುಸಾರವಾಗಿ ಈ ದೇವತೆಗಳಲ್ಲಿ ಯಾರನ್ನಾದರೂ ಪ್ರಧಾನರೆಂದು ಭಾವಿಸಿ ಉಪಾಸನೆ ಮಾಡಬೇಕೆಂದು ವಿಧಿಸಿದ್ದಾರೆ. ಆದ್ದರಿಂದ ನೀವು ಹೇಳುವುದು ಮಂತ್ರಶಾಸ್ತ್ರಕ್ಕೂ ವಿರುದ್ಧ-ವಾಗುವುದು. ಮಂತ್ರಶಾಸ್ತ್ರದಲ್ಲಿ ಹೀಗೆ ಹೇಳಿದೆ - ''ಒಂದೇ ಆಕಾಶವು ಘಟಾಕಾಶ, ಮಠಾಕಾಶವೆಂಬ ಭೇದದಿಂದ ಹೇಗೆ ಭಿನ್ನವಾಗಿರುವಂತೆ ಭ್ರಮೆಯಿಂದ ತೋರುವುದೋ ಹಾಗೆಯೇ ಒಬ್ಬನೇ ಜಗದೀಶ್ವರನು ಸದಾ ಭಿನ್ನವಾಗಿರುವಂತೆ ಭ್ರಮೆಯಿಂದ ತೋರುತ್ತಾನೆ. ಭೋಗ, ಮೋಕ್ಷಗಳನ್ನು ಕೊಡುವ ಪರಮಾತ್ಮನು ಜಗದ್ವ್ಯಾಪಿಯಾಗಿದ್ದಾನೆ. ಆನಂದಸ್ವರೂಪನಾದ ಅವನನ್ನೇ ಯೋಗೀಶ್ವರರು ನಾನಾ ವಿಧವಾಗಿ ಉಪಾಸನೆ ಮಾಡುತ್ತಾರೆ. ಆ ಪುರುಷನು ಮಹಾದೇವ, ವಾಸುದೇವ, ಶಿವ, ವಿಷ್ಣು, ಹರ, ಹರಿ, ರುದ್ರ, ಬ್ರಹ್ಮ, ದೇವೇಂದ್ರ - ಇತ್ಯಾದಿ ಶಬ್ದಗಳಿಂದ ಕರೆಯಲ್ಪಡುತ್ತಾನೆ. ಒಬ್ಬಳೇ ಪ್ರಕೃತಿ ದೇವತೆಯು ಮೋಹಿನೀ, ವಿದ್ಯಾ, ದಕ್ಷಕನ್ಯಾ, ಪಾರ್ವತೀ, ರಮಾ, ವಾಣೀ, ರುದ್ರಾ, ಅಂಗಿರಾ, ಕಾಲೀ, ಗೀಃ,

ತಾರಾ, ಜಗಜ್ಜನನೀ, ಗಾಯತ್ರೀ, ಬ್ರಹ್ಮವಿದ್ಯೆ ಎಂದು ಕರೆಯಲ್ಪಡುತ್ತಾಳೆ. ಒಂದೇ ಪರಬ್ರಹ್ಮವಸ್ತುವು ಸ್ತ್ರೀಪುರುಷರೂಪಗಳಿಂದ ಎರಡು ವಿಧವಾಗಿದೆ. ಅವುಗಳಲ್ಲೊಂದನ್ನು ಉಪಾಸನೆ ಮಾಡಿ ಸುಖವನ್ನು ಪಡೆಯಬೇಕು.''

ಶಂಕೆ :- ಬ್ರಹ್ಮ, ವಿಷ್ಣು ರುದ್ರರು, ಈಶ್ವರಕೋಟಿಯಲ್ಲಿ ಸೇರುವುದಾದರೆ ಆಗ ಅವರಲ್ಲಿ ಒಬ್ಬನು ಉಪಾಸ್ಯನೆಂದೂ, ಇತರರು ಉಪಾಸಕರೆಂದೂ ಪ್ರತಿಪಾದಿಸುವ ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಾದಿಗಳ ಗತಿಯೇನು ?

ಸಮಾಧಾನ :- ಭಗವಂತನು ಅರ್ಜುನನನ್ನು ಕುರಿತು ಮೋಕ್ಷ ಧರ್ಮಪರ್ವದಲ್ಲಿ ಹೀಗೆ ಹೇಳುತ್ತಾನೆ. ''ಅರ್ಜುನ, ನಾನು ಮಾಡಿ ತೋರಿಸಿದ ಪ್ರಮಾಣವನ್ನು ಜನರು ಅನುಸರಿಸುತ್ತಾರೆ. ನನಗೆ ಇತರರು ವರವನ್ನು ಕೊಡಬೇಕಾದುದೇನೂ ಇಲ್ಲ. ಹೀಗೆಂದು ಯೋಚಿಸಿ ನನ್ನ ಆತ್ಮ ಸ್ವರೂಪನಾದ ಈಶ್ವರನನ್ನು ಪುತ್ರಾರ್ಥಿಯಾಗಿ ನಾನೇ ಆರಾಧಿಸಿದೆನು.''

-ಶಾಂತಿಪರ್ವ; ಮೋಕ್ಷಧರ್ಮ

ಈ ಮಾತಿನಿಂದ ಸಕಲಕಾಮಗಳನ್ನೂ ಪಡೆದಿರುವ ಶ್ರೀಕೃಷ್ಣನು ಕೇವಲ ಲೋಕಾನುಗ್ರಹಕ್ಕೋಸ್ಕರ ಶಿವನನ್ನು ಉಪಾಸನೆ ಮಾಡಿರುವನೆಂದು ಗೊತ್ತಾಗುತ್ತದೆ. ಇದೇ ನ್ಯಾಯದಿಂದ ಶಿವನು ಕೆಲವು ವೇಳೆ ವಿಷ್ಣುವನ್ನು ಉಪಾಸನೆ ಮಾಡಿರುವುದೂ ಲೋಕಾನುಗ್ರಹಕ್ಕಾಗಿಯೇ ಎಂದು ಸಿದ್ಧ-ವಾಗುತ್ತದೆ. ಒಟ್ಟಿನಲ್ಲಿ ಶಿವ, ವಿಷ್ಣು ಮೊದಲಾದವರು ಪರಸ್ಪರವಾಗಿ ಒಬ್ಬರನ್ನೊಬ್ಬರು ಉಪಾಸನೆಮಾಡಿದ್ದಾರೆಂದು ಹೇಳುವ ವಚನಗಳ ತಾತ್ಪರ್ಯವೇನೆಂದರೆ, ಶಿವಾದಿ ದೇವತೆಗಳೇ ಮೂರ್ತ್ಯುಪಾಸನೆ ಮಾಡಿರುವುದರಿಂದ ಆಯಾ ಮೂರ್ತಿಗಳ ಉಪಾಸನೆಯನ್ನು ಜನರು ಅವಶ್ಯ ಮಾಡಲೇಬೇಕು ಎಂದು. ಹಾಗಲ್ಲದೆ ಈಶ್ವರ ಕೋಟಿಯಲ್ಲಿ ಸೇರಿದ ಬ್ರಹ್ಮಾದಿಗಳು ತಮ್ಮ ತಮ್ಮ ಪ್ರಯೋಜನಕ್ಕೋಸ್ಕರ ಉಪಾಸನೆ

ಮಾಡಿದ್ದಾರೆಂದು ಒಪ್ಪಿಕೊಂಡರೆ, ಪರಮೇಶ್ವರನು ನಿತ್ಯಮುಕ್ತ-ನೆಂಬುದೂ, ಪಾಪರಹಿತನೆಂಬುದೂ ವಿರುದ್ಧವಾಗುವುದು.

ಶಂಕೆ :- ಹಾಗಾದರೆ ಶಿವತತ್ತ್ವವಿವೇಕ, ಬ್ರಹ್ಮತರ್ಕಸ್ತವ ಮೊದಲಾದ ಗ್ರಂಥಗಳಿಗೆ ವಿರೋಧವಾಗುವುದು. ಅವುಗಳಲ್ಲಿ ಶಿವನಿಗಿಂತ ವಿಷ್ಣುವು ನಿಕೃಷ್ಟನೆಂದು ಅಪ್ಪಯ್ಯದೀಕ್ಷಿತರು ಪ್ರತಿಪಾದಿಸಿದ್ದಾರೆ. ರಾಮಾದ್ಯವತಾರ-ಗಳಲ್ಲಿ ವಿಷ್ಣುವಿಗೆ ಕೌಸಲ್ಯೆ ಮೊದಲಾದವರ ಗರ್ಭದಲ್ಲಿ ವಾಸಮಾಡಿದುದು, ದುಃಖ, ಮೋಹ ಇತ್ಯಾದಿ ಜೀವಲಕ್ಷಣಗಳು ಕಂಡು ಬರುವುದರಿಂದ ವಿಷ್ಣುವು ಜೀವಕೋಟಿಯಲ್ಲಿ ಸೇರಿದ್ದಾನೆಂಬುದೇ ಆ ಗ್ರಂಥಕರ್ತೃಗಳ ಅಭಿಮತವೆಂದು ತಿಳಿದು ಬರುತ್ತದೆ.

ಸಮಾಧಾನ :- ಆ ಗ್ರಂಥಗಳನ್ನು ರಚಿಸಿದ ಶ್ರೀಮದಪ್ಪಯ್ಯ ದೀಕ್ಷಿತರು ಪ್ರತಿವಾದಿಗಳ ಮತವನ್ನು ಖಂಡಿಸುವುದಕ್ಕಾಗಿ ಶಿವನಿಗಿಂತ ವಿಷ್ಣುವು ನಿಕೃಷ್ಟನೆಂದು ಸಾಧಿಸಿದ್ದಾರೆ. ವಸ್ತುತಃ ಅದು ಅವರಿಗೆ ಸಂಮತವಲ್ಲ. **'ನ ಹಿ ನಿಂದಾ'** ನ್ಯಾಯದಂತೆ ಶಿವೋಪಾಸನೆಯನ್ನು ಅವಶ್ಯವಾಗಿ ಮಾಡಬೇಕೆಂದು ಬೋಧಿಸುವುದೇ ಅವರ ಉದ್ದೇಶ. ಆದ್ದರಿಂದಲೇ ಅವರು 'ಮಧ್ವಮತ ವಿಧ್ವಂಸನ'ದಲ್ಲಿ ಹೀಗೆ ಹೇಳಿದ್ದಾರೆ. 'ವೇದಾಂತಶಾಸ್ತ್ರವು ಶಿವನನ್ನು ಪ್ರತಿಪಾದಿಸುತ್ತದೆಯೆಂದೂ, ವಿಷ್ಣುವನ್ನು ಪ್ರತಿಪಾದಿಸುತ್ತದೆಯೆಂದೂ ಕೆಲವರು ಹೇಳುತ್ತಾರೆ. ಅದು ನಮಗೆ ಇಷ್ಟವೇ. ಉಪಾಸನೆಗೋಸ್ಕರ ಸಗುಣಬ್ರಹ್ಮವನ್ನು ಒಪ್ಪಿಕೊಂಡಿರುವ ನಮಗೆ ಅದು ಗ್ರಾಹ್ಯವೂ ಹೌದು. ನಿರ್ಗುಣವಾದ ಬ್ರಹ್ಮವಸ್ತುವನ್ನು ಸಗುಣವೆಂದೂ, ಶಿವನೆಂದೂ, ವಿಷ್ಣುವೆಂದೂ ಹೇಳಿದರೆ, **'ನ ಹಿ ನಿಂದಾ'** ನ್ಯಾಯವನ್ನು ಬಲ್ಲವರಿಗೆ ಹೆಚ್ಚಿನ ವಿರೋಧವೂ ತೋರುವುದಿಲ್ಲ. ಬ್ರಹ್ಮಸೂತ್ರಗಳಿಗೆ ಉಚಿತವಾದ ರೀತಿಯಲ್ಲಿ ಬೇರೆ ಬೇರೆ ಅರ್ಥವನ್ನು ಹೇಳಿದರೆ ಅದು ತಪ್ಪಲ್ಲ.''

ಶಿವಕರ್ಣಾಮೃತದಲ್ಲಿ ದೀಕ್ಷಿತರೇ ಹೀಗೆ ಹೇಳಿದ್ದಾರೆ - ''ನಾರಾಯಣನು ಪರಬ್ರಹ್ಮನೆಂದು ಹೇಳುವ **'ನಾರಾಯಣಃ ಪರಂಬ್ರಹ್ಮ'**

ಎಂಬುದೂ ನಾರಾಯಣನು ಶಿವನಿಗೆ ಅಭಿನ್ನನೆಂಬ ಪಕ್ಷದಲ್ಲಿ ವಿರುದ್ಧವಲ್ಲ. ಭಿನ್ನನೆಂಬ ಪಕ್ಷದಲ್ಲಿ ಹೀಗೆ ಅಭಿಪ್ರಾಯವನ್ನು ಹೇಳಬೇಕು. ನಾರಾಯಣನು 'ನಾನು ಪರಬ್ರಹ್ಮನು' ಎಂಬ ಭಾವನೆಯಿಂದ ಪರಬ್ರಹ್ಮಸ್ವರೂಪವನ್ನು ಸಾಧಿಸಿಕೊಂಡಿದ್ದಾನೆ.'' ಅದರ ವರ್ಣನೆ ಇದು.

ಸಿದ್ಧಾಂತ ಲೇಶಸಂಗ್ರಹದಲ್ಲಿ ಹೀಗೆ ಹೇಳಿದ್ದಾರೆ - ''ಪರಮೇಶ್ವರನು ಶ್ರೀರಾಮಾದ್ಯವತಾರಗಳನ್ನು ಮಾಡಿದಾಗ ತಪಸ್ಸುಮಾಡಿದನೆಂದೂ, ದುಃಖವನ್ನು ಅನುಭವಿಸಿದನೆಂದೂ ಕೇಳಿದ್ದೇವೆ. ಆದ್ದರಿಂದ ಮುಕ್ತರು ಪರಮೇಶ್ವರ ಭಾವವನ್ನು ಹೊಂದಿದರೂ ಪುನಃ ಸಂಸಾರ ಬಂಧನದಲ್ಲಿ ಸಿಲುಕಿಕೊಳ್ಳುವರೆಂದು ಶಂಕಿಸಬಾರದು. ಏಕೆಂದರೆ, ಬ್ರಾಹ್ಮಣಶಾಪವು ವ್ಯರ್ಥವಾಗಕೂಡದೆಂಬುದು ಈಶ್ವರನು ಗೊತ್ತು ಮಾಡಿದ ಒಂದು ಮರ್ಯಾದೆ. ಅದನ್ನು ಪರಿಪಾಲಿಸುವುದಕ್ಕೋಸ್ಕರ ಭೃಗುಮುನಿಯ ಶಾಪವನ್ನು ಸಾರ್ಥಕ ಮಾಡುವುದಕ್ಕಾಗಿ ಮನುಷ್ಯನಂತೆ ಈಶ್ವರನು ಕೇವಲ ಅಭಿನಯಿಸಿರುವನು. ಇಲ್ಲದಿದ್ದರೆ ಅವನು ನಿತ್ಯಮುಕ್ತನೆಂದೂ, ಸ್ವತಂತ್ರನೆಂದೂ, ಅವನಿಗೆ ಸಮಾನರೂ, ಅಧಿಕರೂ ಇಲ್ಲವೆಂದೂ ಮುಂತಾಗಿ ಹೇಳುವ ಶ್ರುತಿಗಳಿಗೆ ವಿರೋಧವಾಗುವುದು.''

ಆದ್ದರಿಂದ ವ್ಯಾಸಸಂಮತ ಕೇವಲಾದ್ವೈತಸ್ವರೂಪನೂ, ಸಚ್ಚಿದಾನಂದನೂ, ಅಖಂಡನೂ, ನಿರ್ವಿಶೇಷನೂ ಆದ ಪರಬ್ರಹ್ಮನೇ ಮಾಯೋಪಹಿತವಾದ ಅಮೂರ್ತರೂಪದಿಂದಲೂ, ಜಗತ್ತಿನ ಜನ್ಮ, ಸ್ಥಿತಿ, ಲಯಗಳಿಗೆ ಕಾರಣರೂಪದಿಂದಲೂ, ಬ್ರಹ್ಮ, ವಿಷ್ಣು, ಶಿವ, ರಾಮ, ಕೃಷ್ಣ ಇತ್ಯಾದಿ ರೂಪದಿಂದಲೂ ಮುಮುಕ್ಷುಗಳಿಗೆ ಉಪಾಸ್ಯನಾಗಿದ್ದಾನೆಂದೂ, ಆತನ ಅನುಗ್ರಹದಿಂದಲೇ ಬ್ರಹ್ಮಜ್ಞಾನವು ಲಭಿಸುವುದೆಂದೂ ಸಿದ್ಧವಾಗುವುದರಿಂದ ಸರ್ವವೂ ರಮಣೀಯವಾಗಿಯೇ ಇದೆ.

ವೇದವ್ಯಾಸಮಹಾಮುನಿ
ಯಾದರದಿಂ ಪೇಳ್ದ ವೇದಮತನಿರ್ಣಯಮಮ್ ।
ಬೋಧಿಪ್ಪೀ ಚಂದ್ರಿಕೆಯಂ
ಸ್ವಾದಿಸುಗುಂ ಸತ್ಯಕಾಂಕ್ಷಿ ಹೃದಯಚಕೋರಮ್ ॥
ನಿಗಮಾರ್ಥವಿನ್ಮಹಾಂತಂ
ಭಗವಂತಂ ಬಾದರಾಯಣಂ ಮಂಡಿಸಿದಾ ।
ಸುಗಮಾದ್ವೈತದ ದುಂದುಭಿ
ಮಿಗೆ ಮೊಳಗುಗೆ ಭೇದವಾದಿಹೃದ್ಭೇದಕರಮ್ ॥

*ದ್ವಿತೀಯ ಪರಿಚ್ಛೇದ ಸಂಪೂರ್ಣ*

ಶ್ರೀಮದಯ್ಯಣ್ಣದೀಕ್ಷಿತರಿಂದ ವಿರಚಿತವಾದ
ವ್ಯಾಸತಾತ್ಪರ್ಯನಿರ್ಣಯವು
ಸಮಾಪ್ತವಾಯಿತು.

# ಅನುಬಂಧ

ಕಪಿಲಮುನಿಸಂಮತವಾದ ಸಾಂಖ್ಯಶಾಸ್ತ್ರದಲ್ಲಿ ೬ ಅಧ್ಯಾಯಗಳೂ ೫೩೭ ಸೂತ್ರಗಳೂ ಇವೆ. ವಿಜ್ಞಾನ ಭಿಕ್ಷುವೆಂಬ ವಿದ್ವಾಂಸನು ಇವುಗಳಿಗೆ ಸಾಂಖ್ಯ ಪ್ರವಚನ ಭಾಷ್ಯವನ್ನು ರಚಿಸಿದ್ದಾನೆ. ಈ ಸಾಂಖ್ಯಸೂತ್ರಗಳನ್ನು ಕಪಿಲಮುನಿಗಳು ರಚಿಸಿದ್ದಾರೆಂದು ಆತನು ಸ್ಪಷ್ಟವಾಗಿ ಹೇಳಿದ್ದಾನೆ. ಸರಿಯಾದ ವ್ಯಾಖ್ಯಾನವಿಲ್ಲದೆ ಈ ಸೂತ್ರಗಳು ನಷ್ಟಪ್ರಾಯವಾಗಿ 'ಕಾಲಾರ್ಕಭಕ್ಷಿತ'ವಾಗಿದ್ದವೆಂದೂ ತಾನು ಭಾಷ್ಯವನ್ನು ಬರೆದು ಇವನ್ನು ಉಜ್ಜೀವಿಸುತ್ತಿರುವುದಾಗಿಯೂ ವಿಜ್ಞಾನಭಿಕ್ಷು ಹೇಳಿದ್ದಾನೆ.

**ಕಾಲಾರ್ಕಭಕ್ಷಿತಂ ಸಾಂಖ್ಯಶಾಸ್ತ್ರಂ ಜ್ಞಾನಸುಧಾಕರಮ್ ।**
**ಕಲಾವಶಿಷ್ಟಂ ಭೂಯೋಽಪಿ ಪೂರಯಿಷ್ಯೇ ವಚೋಽಮೃತೈಃ ॥**

ವಿಜ್ಞಾನಭಿಕ್ಷುವು ಬ್ರಹ್ಮಸೂತ್ರಗಳ ಮೇಲೆ 'ವಿಜ್ಞಾನಾಮೃತಭಾಷ್ಯ'ವನ್ನು ಬರೆದಿದ್ದಾನೆ. ದ್ವೈತವಾದಿಯಾದ ಇವನ ಸಿದ್ಧಾಂತಕ್ಕೆ **'ಅವಿಭಾಗಾದ್ವೈತ'** ಎಂಬ ಹೆಸರಿದೆ. ಶ್ರೀ ಶಂಕರಾಚಾರ್ಯರ ಕೇವಲಾದ್ವೈತವನ್ನು ಕಟುವಾಗಿ ದೂಷಿಸುತ್ತಾನೆ.

ಈ ವ್ಯಾಸತಾತ್ಪರ್ಯನಿರ್ಣಯದಲ್ಲಿ ಗ್ರಂಥಕರ್ತರು ಕೆಲವು ಸಾಂಖ್ಯಸೂತ್ರಗಳನ್ನು ಉದಾಹರಿಸಿದ್ದಾರೆ. ಅವುಗಳಲ್ಲಿ ವೇದಾಂತಿಗಳ ಪೂರ್ವಪಕ್ಷಗಳನ್ನು ಅನುವಾದಿಸಿ ಸಾಂಖ್ಯಮತದಂತೆ ಉತ್ತರವನ್ನು ಹೇಳಿದ್ದಾರೆ ಎಂದು ತಿಳಿಸಿದ್ದಾರೆ. ಆ ಸೂತ್ರಗಳ ಅರ್ಥವನ್ನು ಬರೆದಿಲ್ಲ. ವಾಚಕರ ಸೌಕರ್ಯಕ್ಕಾಗಿ ಆ ಸೂತ್ರಗಳ ಅರ್ಥವನ್ನು, ವಿಜ್ಞಾನಭಿಕ್ಷುವಿನ ವ್ಯಾಖ್ಯಾನವನ್ನನುಸರಿಸಿ, ಸಂಕ್ಷೇಪವಾಗಿ ಬರೆದಿದ್ದೇನೆ. ವಿಜ್ಞಾನ ಭಿಕ್ಷುವಾದರೋ ಈ ಸೂತ್ರಗಳಲ್ಲಿರುವ ಪೂರ್ವಪಕ್ಷಗಳಲ್ಲಿ ಕೆಲವು ವಿಜ್ಞಾನ ವಾದಿಗಳಾದ ಬೌದ್ಧರದೆಂದೂ ಕೆಲವು ಶಂಕರಾಚಾರ್ಯರದೆಂದೂ ಉಳಿದವು ಅದ್ವೈತವಾದಿಯಾಗಿದ್ದ ಯಾವನೋ ಒಬ್ಬನು ಊಹೆಯಿಂದ ಕಲ್ಪಿಸಿಕೊಂಡ ಸಂಭಾವಿತ ಯುಕ್ತಿಗಳಿರುವ ಆಕ್ಷೇಪ-

ಗಳೆಂದೂ ಹೇಳುತ್ತಾನೆ! ಎಲ್ಲವೂ ಅದ್ವೈತಿಗಳ ಪೂರ್ವಪಕ್ಷಗಳೇ ಆಗಬಹುದಾದ್ದರಿಂದ, ವಿವರಣ ಸೌಲಭ್ಯಕ್ಕಾಗಿ ಹಾಗೆಯೇ ವಿಂಗಡಿಸಿಕೊಂಡು, ಕೆಳಗೆ ಸೂತ್ರಾರ್ಥವನ್ನು ತಿಳಿಸಲಾಗಿದೆ.

**೧. ನಾವಿದ್ಯಾತೋಽಪ್ಯವಸ್ತುನಾ ಬಂಧಾಯೋಗಾತ್ ॥ ೧-೨೦**

ಅವಿದ್ಯೆಯಿಂದಲೂ ಸಹ ಪುರುಷನಿಗೆ (ಆತ್ಮನಿಗೆ) ಸಂಸಾರ ಬಂಧನವಾಗುವುದಿಲ್ಲ. ಏಕೆಂದರೆ, ಅದ್ವೈತಿಯಾದ ನಿನ್ನ ಮತದಲ್ಲಿ ಅವಿದ್ಯೆಯು 'ಅವಸ್ತು'. ಅಸತ್ಯವಾದದ್ದು ಪರಮಾರ್ಥದಲ್ಲಿ ಇಲ್ಲ. ಕನಸಿನಲ್ಲಿ ಕಂಡ ಸುಳ್ಳು ಹಗ್ಗದಿಂದ ಯಾರನ್ನೂ ಕಟ್ಟಲು ಸಾಧ್ಯವಿಲ್ಲವಷ್ಟೆ?

ಹಿಂದಿನ ಸೂತ್ರಗಳಲ್ಲಿ ಕಾಲ, ದೇಶಾದಿಗಳಿಂದ ಬಂಧನವಾಗುವುದಿಲ್ಲ ಎಂದು ಹೇಳಿದೆ. ಅವುಗಳ ಸಮುಚ್ಚಯಕ್ಕಾಗಿ ಈ ಸೂತ್ರದಲ್ಲಿ 'ಅಪಿ' ಶಬ್ದವು ಬಂದಿದೆ.

**೨. ವಸ್ತುತ್ವೇ ಸಿದ್ಧಾಂತಹಾನಿಃ ॥ ೧-೨೧**

'ಅವಿದ್ಯೆಯು ಸತ್ಯ. ಅದು ಪರಮಾರ್ಥ ವಸ್ತು' ಎಂದು ಹೇಳಿದರೆ ಅದ್ವೈತಿಗಳಾದ ನಿಮ್ಮ ಸಿದ್ಧಾಂತಕ್ಕೆ ಭಂಗವಾಗುತ್ತದೆ.

**೩. ವಿಜಾತೀಯದ್ವೈತಾಪತ್ತಿಶ್ಚ ॥ ೧-೨೨**

ಅವಿದ್ಯೆಯು ಸತ್ಯವಸ್ತುವಾದರೆ, ಚಿದ್ರೂಪರಾದ ಜೀವಾತ್ಮಪರಮಾತ್ಮರ ದ್ವೈತವು ಮಾತ್ರವಲ್ಲ, ಅಚಿದ್ರೂಪವಾದ ವಿಜಾತೀಯ ವಸ್ತು ಅವಿದ್ಯೆಯಿರುವುದೆಂಬ ಇನ್ನೊಂದು ಬಗೆಯ ದ್ವೈತವೂ ಗಂಟು ಬೀಳುತ್ತದೆ.

**೪. ವಿರುದ್ಧೋಭಯರೂಪಾ ಚೇತ್ ॥ ೧-೨೩**

ಅದ್ವೈತಿ :- ಅವಿದ್ಯೆಯು ಕೇವಲ ಸತ್ ಅಲ್ಲ, ಅಸತ್ ಕೂಡ ಅಲ್ಲ - ಇವುಗಳಿಗೆ ವಿರುದ್ಧವಾದ ಸದಸದ್ರೂಪವೆನ್ನುತ್ತೇವೆ. ಸತ್ ಆದ್ದರಿಂದ

ಸಂಸಾರಬಂಧವಾಗಬಹುದು. ಅಸತ್ ಆದ್ದರಿಂದ ಅದ್ವೈತಕ್ಕೆ ಚ್ಯುತಿ ಇಲ್ಲ. ಆಗ ದೋಷವೇನು?

**೫. ನ, ತಾದೃಕ್‌ಪದಾರ್ಥಾಽಪ್ರತೀತೇಃ ॥ ೧-೨೪**

ಸಾಂಖ್ಯ :- ಹಾಗೆ ಹೇಳಲು ಸಾಧ್ಯವಿಲ್ಲ. ವಸ್ತುವು ಘಟದಂತೆ ಸತ್ ಆಗಬೇಕು ಅಥವಾ ಗಗನಕುಸುಮದಂತೆ ಅಸತ್ ಆಗಬೇಕು. ಉಭಯ-ರೂಪವಾದ ವಸ್ತು ಲೋಕದಲ್ಲಿ ಪ್ರತೀತವಾಗಿಯೇ ಇಲ್ಲ.

**೬. ಉಪಾಧಿಭೇದೇಽಪ್ಯೇಕಸ್ಯ ನಾನಾಯೋಗಃ ಆಕಾಶಸ್ಯೇವ ಘಟಾದಿಭಿಃ ॥ ೧-೧೫೦**

ಒಬ್ಬನೇ ಆತ್ಮನೆಂಬ ಅದ್ವೈತಿಗಳ ಪಕ್ಷದಲ್ಲಿ ಹುಟ್ಟು-ಸಾವು, ಬಂಧ-ಮೋಕ್ಷ ಮುಂತಾದ ವ್ಯವಸ್ಥೆಗಳು ಕೂಡುವುದಿಲ್ಲ. ಶರೀರಾದ್ಯುಪಾಧಿ-ಭೇದಗಳಿಂದ ಈ ವ್ಯವಸ್ಥೆಯಾಗುತ್ತದೆಯೆಂದು ಅವರು ಹೇಳುವುದು ಸರಿಯಲ್ಲ. ಉಪಾಧಿಗಳು ಬೇರೆಯಾದರೂ ಒಬ್ಬ ಆತ್ಮನಿಗೇ ಸರಿಯಷ್ಟೆ. ಒಂದೇ ಆಕಾಶಕ್ಕೆ ಘಟ, ಮಠಾದಿಗಳೆಂಬ ಉಪಾಧಿಗಳು ಭಿನ್ನವಾದರೂ, ಒಂದು ಘಟವು ಒಡೆದು ಹೋದರೆ ಆಕಾಶಕ್ಕೆ ಇನ್ನೊಂದು ಘಟದ ಸಂಬಂಧವಿದ್ದೇ ಇರುತ್ತದೆ. ಹಾಗೆಯೇ ಒಬ್ಬನು ಮೃತನಾದರೆ ಇನ್ನೊಂದು ದೇಹದ ಸಂಬಂಧವಿದ್ದೇ ಇರುವುದರಿಂದ ಅವನಿಗೆ ಶರೀರವಿಯೋಗ-ವಾಯಿತೆಂದೂ ಸತ್ತನೆಂದೂ ಹೇಳಲಾಗುವುದಿಲ್ಲ. ಅಂತೆಯೇ ಒಬ್ಬನು ಮುಕ್ತನಾದರೆ ಎಲ್ಲರಿಗೂ ಮೋಕ್ಷವಾಯಿತೆನ್ನಬೇಕಾಗುತ್ತದೆ.

**೭. ಉಪಾಧಿರ್ಭಿದ್ಯತೇ ನ ತು ತದ್ವಾನ್ ॥ ೧-೧೫೧**

ಉಪಾಧಿಭೇದದಿಂದ ವ್ಯಕ್ತಿಭೇದವಾಗುತ್ತದೆಯಾದ್ದರಿಂದ ಹಿಂದೆ ಹೇಳಿದ ದೋಷವು ಘಟಿಸುವುದಿಲ್ಲ - ಎಂದೂ ಅದ್ವೈತಿಯು ಹೇಳಲಾಗುವುದಿಲ್ಲ. ಏಕೆಂದರೆ ಘಟ, ಮಠಾದ್ಯುಪಾಧಿಗಳು ಭಿನ್ನವಾಗ-ಬಹುದೇ ಹೊರತು ಉಪಾಧಿಗಳಿಂದ ಕೂಡಿದ ಆಕಾಶವು ಬೇರೆ ಬೇರೆಯಾಗುವುದಿಲ್ಲ. ಆತ್ಮನು ಒಬ್ಬನೇ ಆದ್ದರಿಂದ ನೀವು ವ್ಯಕ್ತಿ-ಭೇದವನ್ನು ಹೇಳಲಾಗುವುದಿಲ್ಲ.

**೮. ಏವಮೇಕತ್ತ್ವೇನ ಪರಿವರ್ತಮಾನಸ್ಯ ನ ವಿರುದ್ಧ ಧರ್ಮಾಧ್ಯಾಸಃ ॥** ೧-೧೫೨

ಹೀಗೆ ಅದ್ವಿತೀಯನಾಗಿ ಸರ್ವತ್ರ ಇರತಕ್ಕ ಏಕಾತ್ಮನಲ್ಲಿ ಹುಟ್ಟು-ಸಾವು, ಬಂಧ-ಮೋಕ್ಷ, ಪುಣ್ಯ-ಪಾಪ ಮೊದಲಾದ ವಿರುದ್ಧ ಧರ್ಮಗಳನ್ನು ಆರೋಪಿಸಲಾಗುವುದಿಲ್ಲ.

ಈ ಸೂತ್ರದಲ್ಲಿ 'ಏಕತ್ವೇ' ಎಂಬುದು ಪ್ರತ್ಯೇಕಪದವೆಂದೂ ವ್ಯಾಖ್ಯಾನ ಮಾಡಬಹುದು. ಆಗ ಸೂತ್ರಾರ್ಥವು ಈ ಪ್ರಕಾರವಾಗುತ್ತದೆ. ಆತ್ಮನಿಗೆ ಏಕತ್ವವನ್ನೊಪ್ಪಿಸಿದರೆ ಸರ್ವೋಪಾಧಿಗಳಿಂದ ಕೂಡಿದ ಆತ್ಮನಲ್ಲಿ ವಿರುದ್ಧ ಧರ್ಮಗಳ ಸಾಂಕರ್ಯವು ಬರದೆ ಇರುವುದಿಲ್ಲ. (ಇಲ್ಲಿ ನ + ನ + ಎಂದು ಎರಡು ನಕಾರಗಳಾಗುತ್ತವೆ.) ಎರಡು ಅರ್ಥಗಳಲ್ಲಿಯೂ ತಾತ್ಪರ್ಯ ಒಂದೇ.

**೯. ಅನ್ಯಧರ್ಮತ್ವೇಽಪಿ ನಾರೋಪಾತ್ ತತ್ಸಿದ್ಧಿರೇಕತ್ವಾತ್ ॥** ೧-೧೫೩

ಅಲ್ಲದೆ ವಿರುದ್ಧಧರ್ಮಗಳಾದ ಸುಖದುಃಖಾದಿಗಳು ಉಪಾಧಿ ಧರ್ಮಗಳೆಂದೂ ಅವನ್ನು ಆತ್ಮನಲ್ಲಿ ಆರೋಪಿಸುವುದರಿಂದ ಹಿಂದೆ ಹೇಳಿದ ವ್ಯವಸ್ಥೆಯು ಸಿದ್ಧಿಸುತ್ತದೆ ಎನ್ನುವುದೂ ಸರಿಯಲ್ಲ, ಆತ್ಮನು ಅದ್ವೈತಿಗಳ ಮತದಲ್ಲಿ ಒಬ್ಬನೇ ಆದ್ದರಿಂದ. ಘಟವು ನಷ್ಟವಾದಾಗ ಘಟಾಕಾಶವೂ ನಾಶವಾಯಿತೆಂದು ಹೇಳಬಹುದು. ಆದರೆ ಒಬ್ಬನು ಸತ್ತರೆ, ಜೀವಾತ್ಮನು ಸತ್ತನೆಂದು ಹೇಳಲಾಗುವುದಿಲ್ಲ. ಜೀವಾತ್ಮನು ನಿತ್ಯನೆಂದು ಶ್ರುತಿಯು ಪ್ರತಿಪಾದಿಸುತ್ತದೆ. ಅದೇ ಜೀವನೇ ಮತ್ತೆ ಹುಟ್ಟಿ ಸುಖದುಃಖಾದಿಗಳನ್ನು ಅನುಭವಿಸುತ್ತಾನೆ. ಅದ್ವೈತಿಗಳ ಮತದಲ್ಲಿ ಜೀವನು ಪ್ರತ್ಯೇಕವಾಗಿ ಇಲ್ಲವಾದ್ದರಿಂದ ಈ ವ್ಯವಸ್ಥೆ ಸಿದ್ಧಿಸುವುದಿಲ್ಲ.

**೧೦. ನಾದ್ವೈತಶ್ರುತಿವಿರೋಧೋ ಜಾತಿಪರತ್ವಾತ್ ॥** ೧-೧೫೪

ಹಾಗಾದರೆ, **'ಆತ್ಮಾ ವಾ ಇದಮೇಕ ಏವಾಗ್ರ ಆಸೀತ್'**, **'ಏಕಮೇವಾದ್ವಿತೀಯಂ'** ಇವೇ ಮೊದಲಾದ ಅದ್ವೈತ ಶ್ರುತಿಗಳಿಗೆ

ವಿರೋಧವು ಬರುತ್ತದೆಯಲ್ಲವೆ ? ಇಲ್ಲ. ಅವೆಲ್ಲವೂ ಜಾತಿಪರ-ವಾದವುಗಳು, ಆತ್ಮರೆಲ್ಲರೂ ಚಿದ್ರೂಪರು. ಎಲ್ಲರೂ ಏಕರೂಪರೆಂದು ಶ್ರುತಿಯ ತಾತ್ಪರ್ಯ. ಚಿದ್ರೂಪತ್ವ ಎಂಬ ಜಾತಿಯು ಒಂದೇ ಆದ್ದರಿಂದ ಶ್ರುತಿ ವಿರೋಧವಿಲ್ಲ. ಎಲ್ಲ ಗಡಿಗೆಗಳೂ ಮಣ್ಣಿನಿಂದಾದ್ದರಿಂದ ಗಡಿಗೆಗಳೆಲ್ಲವೂ ಒಂದೇ - ಎಂದು ಹೇಳಿದ ಹಾಗೆ ಇದು.

**೧೧. ವಿದಿತಬಂಧಕಾರಣಸ್ಯ ದೃಷ್ಟ್ಯಾಽತದ್ರೂಪಮ್ ॥ ೧-೧೫೫**

ಒಬ್ಬೊಬ್ಬ ಜೀವನಲ್ಲಿಯೂ ಪಾಪ ಪುಣ್ಯಾದಿಕರ್ಮಸಂಸ್ಕಾರಗಳು ಬೇರೆ ಬೇರೆಯಾಗಿರುತ್ತವೆ. ಹೀಗಿರುವಾಗ ಎಲ್ಲ ಆತ್ಮರೂ ಏಕರೂಪರೆಂದು ಹೇಗೆ ಹೇಳುತ್ತೀರಿ ? ಎಂಬ ಶಂಕೆಗೆ ಉತ್ತರವಿದು - ಬಂಧಕಾರಣಗಳಾದ ಪಾಪ ಪುಣ್ಯಾದಿಗಳನ್ನು ಮಾತ್ರ ತಿಳಿದುಕೊಂಡವರ ದೃಷ್ಟಿಯಲ್ಲಿ ಜೀವಾತ್ಮರಲ್ಲಿರುವ ಏಕರೂಪತೆ ಕಾಣುವುದಿಲ್ಲ. ಅವರು ಬೇರೆ ಬೇರೆ ಸ್ವರೂಪದವರೆಂದು ತಪ್ಪಾಗಿ ತಿಳಿದುಕೊಳ್ಳುತ್ತಾರೆ.

**೧೨. ನಾಂಧಾದೃಷ್ಟ್ಯಾ ಚಕ್ಷುಷ್ಮತಾಮನುಪಲಂಭಃ ॥ ೧-೧೫೬**

ಕುರುಡರಿಗೆ ಕಾಣಿಸದಿದ್ದರೆ ಕಣ್ಣಿದ್ದವರಿಗೂ ಕಾಣಿಸದೆ ಹೋದೀತೆ ? ಚಿನ್ನದ ಪಾತ್ರೆಗಳಿಗೆ ಕೊಳೆಯು ಅಂಟಿದರೆ ಅವು ಬೇರೆ ಪಾತ್ರೆ-ಗಳಾಗುತ್ತವೆಯೆ ? ಇವೆಲ್ಲವೂ ಚಿನ್ನದ ಪಾತ್ರೆಗಳಾದ್ದರಿಂದ ಏಕರೂಪ-ವಾದವು - ಎಂದು ಹೇಳಲು ಅಡ್ಡಿಯೇನು? ಹಾಗೆಯೇ ಚಿದ್ರೂಪತೆ-ಯೆಂಬ ಜಾತಿಯಿಂದ ಎಲ್ಲ ಆತ್ಮರೂ ಒಂದೇ - ಎಂದು ವೇದದ ಅಭಿಪ್ರಾಯ.

**೧೩. ವಾಮದೇವಾದಿರ್ಮುಕ್ತೋ ನಾದ್ವೈತಮ್ ॥ ೧-೧೫೭**

ವಾಮದೇವನೇ ಮೊದಲಾದ ಜ್ಞಾನಿಗಳು ಮುಕ್ತರಾಗಿದ್ದಾರೆಂದು ಶಾಸ್ತ್ರಸಿದ್ಧವಾಗಿದೆ. ಆದರೂ ಅನ್ಯರು ಮುಕ್ತರಾಗದೇ ಬಂಧನದಲ್ಲಿಯೇ ಇದ್ದಾರೆ. ಆದ್ದರಿಂದ ಅದ್ವೈತವು ಸರಿಯಲ್ಲ.

**೧೪. ಅನಾದಾವದ್ಯ ಯಾವದಭಾವಾದ್ ಭವಿಷ್ಯದಪ್ಯೇವಮ್ ॥**

೧-೧೫೮

ವಾಮದೇವಾದಿಗಳಿಗೆ ಪರಮ ಮೋಕ್ಷವಾಗಿಲ್ಲವೆಂದರೆ, ಅನಾದಿಯಿಂದ ಇದುವರೆಗೆ ಯಾರಿಗೂ ಮೋಕ್ಷವು ಇಲ್ಲವೆಂದಾಗುತ್ತದೆ. ಹಾಗಾದರೆ ಭವಿಷ್ಯತ್ಕಾಲದಲ್ಲಿಯೂ ಯಾರಿಗೂ ಮೋಕ್ಷವಾಗುವುದಿಲ್ಲವೆಂದೇ ಹೇಳಬೇಕಾದೀತು. ಆಗ ಮೋಕ್ಷಶಾಸ್ತ್ರವೇ ಸುಳ್ಳಾಗಿ ಬಿಡುತ್ತದೆ. ಹೇಗೆಂದರೆ -

**೧೫. ಇದಾನೀಮಿವ ಸರ್ವತ್ರ ನಾತ್ಯಂತೋಚ್ಛೇದಃ ॥** ೧-೧೫೯

ಈಗ ಯಾರಿಗೂ ಸಂಸಾರಬಂಧದ ಅತ್ಯಂತೋಚ್ಛೇದವಾಗಿ ಹೇಗೆ ಪರಮಮೋಕ್ಷವಾಗಿಲ್ಲವೋ ಹಾಗೆ ಭವಿಷ್ಯತ್ತಿನಲ್ಲಿಯೂ ಮೋಕ್ಷವಾಗುವುದಿಲ್ಲ - ಎಂದು ಊಹಿಸಬಹುದು.

**೧೬. ನಾವಿದ್ಯಾಶಕ್ತಿಯೋಗೋ ನಿಃಸಂಗಸ್ಯ ॥** ೫-೧೩

ಅದ್ವೈತಿ :- ಪ್ರಧಾನವೆಂಬ ಸ್ವತಂತ್ರ ಪದಾರ್ಥವೇ ಇಲ್ಲ. ಅನಾದಿಯಾದ ಅವಿದ್ಯೆಯೆಂಬ ಶಕ್ತಿಯು ಚೇತನನಾದ ಆತ್ಮನಲ್ಲಿರುತ್ತದೆ. ಅದು ಜ್ಞಾನದಿಂದ ನಾಶವಾಗುತ್ತದೆ. ಈ ಶಕ್ತಿಯಿಂದ ಸೃಷ್ಟಿ - ಮೊದಲಾದದ್ದು ನಡೆಯುತ್ತದೆ.

ಸಾಂಖ್ಯ :- ನಿಮ್ಮ ಮತದಲ್ಲಿ ಆತ್ಮನು ನಿಃಸಂಗನಾದವನು ಅದನ್ನು ನಾವೂ ಒಪ್ಪುತ್ತೇವೆ. ಆದರೆ ನಿಃಸಂಗನಿಗೆ ಅವಿದ್ಯೆಯ ಸಂಗವಾಗಲು ಶಕ್ಯವಿಲ್ಲ.

**೧೭. ತದ್ಯೋಗೇ ತತ್ಸಿದ್ಧಾವನ್ಯೋನ್ಯಾಶ್ರಯತ್ವಮ್ ॥** ೫-೧೪

ಅದ್ವೈತಿ :- ಆತ್ಮನಿಗೆ ಸಂಸಾರ ಬಂಧವಾಗಿರುವುದರಿಂದ ಅವನಲ್ಲಿ ಅವಿದ್ಯೆ ಇದೆಯೆಂದು ಸಿದ್ಧವಾಗುತ್ತದೆ.

ಸಾಂಖ್ಯ :- ಬಂಧದಿಂದ ಅವಿದ್ಯಾಸಿದ್ಧಿ, ಅವಿದ್ಯಾಸಿದ್ಧಿಯಾದರೆ ಬಂಧ ಎಂದಾಯಿತು. ಇದು ಅನ್ಯೋನ್ಯಾಶ್ರಯವೆಂಬ ದೋಷವೇ ಸರಿ.

೧೮. ನ ಬೀಜಾಂಕುರವತ್, ಸಾದಿಸಂಸಾರಶ್ರುತೇಃ ॥ ೫-೧೫

ಅದ್ವೈತಿ :- ಬೀಜಾಂಕುರ ನ್ಯಾಯದಂತೆ ಸಂಸಾರವು ಅನಾದಿ-ಯಾದ್ದರಿಂದ ಅನ್ಯೋನ್ಯಾಶ್ರಯದೋಷವಿಲ್ಲ. ಬೀಜವಿದ್ದರೆ ಅಂಕುರ, ಅಂಕುರವಿದ್ದರೆ ಬೀಜ. ಇಲ್ಲಿ ಅನ್ಯೋನ್ಯಾಶ್ರಯವಿದ್ದರೂ ಹೇಗೆ ದೋಷವಿಲ್ಲವೋ ಹಾಗೆಯೇ ಇದು.

ಸಾಂಖ್ಯ :- ಹಾಗಲ್ಲ. ಸಂಸಾರಕ್ಕೆ ಆದಿ ಇದೆಯೆಂದೂ ಶ್ರುತಿಯಿಂದ ಗೊತ್ತಾಗುತ್ತದೆ. ಸುಷುಪ್ತಿಯಲ್ಲಿಯೂ ಪ್ರಳಯಕಾಲದಲ್ಲಿಯೂ ಸಂಸಾರವಿಲ್ಲ. ಅನಂತರ ಸಂಸಾರವು ಅಂಟಿಕೊಳ್ಳುತ್ತದೆಯೆಂದು ಶಾಸ್ತ್ರವು ಹೇಳಿದೆ.

೧೯. ವಿದ್ಯಾತೋಽನ್ಯತ್ವೇ ಬ್ರಹ್ಮಬಾಧಪ್ರಸಂಗಃ ॥ ೫-೧೬

ಅದ್ವೈತಿ :- ಸುಷುಪ್ತಿಯಲ್ಲಿಯೂ ಪ್ರಳಯ ಕಾಲದಲ್ಲಿಯೂ ಅವಿದ್ಯೆ ಇದ್ದೇ ಇರುತ್ತದೆ. ಅದು ಮಿಥ್ಯಾಜ್ಞಾನರೂಪವಲ್ಲ. ಅವಿದ್ಯೆಯೆನ್ನುವುದು ಪಾರಿಭಾಷಿಕ ಶಬ್ದ. ವಿದ್ಯೆಗಿಂತ ಭಿನ್ನವಾದ ಅನಾದಿವಸ್ತು.

ಸಾಂಖ್ಯ :- ಅದು ಪಾರಿಭಾಷಿಕವಾದ ಇನ್ನೊಂದು ಪದಾರ್ಥವಾದರೆ, ಬ್ರಹ್ಮವು ಅದ್ವೈತವಾಗಿದೆ ಎಂಬ ನಿಮ್ಮ ಸಿದ್ಧಾಂತವೇ ಬಾಧಿತವಾಗುವ ಪ್ರಸಂಗ ಬರುತ್ತದೆ.

೨೦. ಅಬಾಧೇ ನೈಷ್ಫಲ್ಯಮ್ ॥ ೫-೧೭

ಅವಿದ್ಯೆಯು ಮಿಥ್ಯಾಜ್ಞಾನವಾದರೆ ಮಾತ್ರ ಸಮ್ಯಗ್‌ಜ್ಞಾನದಿಂದ ಬಾಧಿತವಾಗುತ್ತದೆ ಎಂದು ಹೇಳಬಹುದು. ಅದು ಬೇರೆ ಪದಾರ್ಥವಾದರೆ ಜ್ಞಾನವು ಅದನ್ನು ಬಾಧಿಸಲಾರದು. ಆಗ ಜ್ಞಾನವೇ ನಿಷ್ಫಲವಾದೀತು.

೨೧. ವಿದ್ಯಾಬಾಧ್ಯತ್ವೇ ಜಗತೋಽಪ್ಯೇವಮ್ ॥ ೫-೧೮

ಅವಿದ್ಯೆಯು ಪ್ರತ್ಯೇಕ ಪದಾರ್ಥವಾದರೂ ವಿದ್ಯೆಯಿಂದ (ಜ್ಞಾನದಿಂದ) ಬಾಧಿತವಾಗುತ್ತದೆಯೆಂದಾದರೆ, ಜಗತ್ತೂ ಬಾಧಿತವಾಗ-

ಬೇಕಾಗುತ್ತದೆ. ಒಬ್ಬನಿಗೆ ಜ್ಞಾನವಾದರೆ ಜಗತ್ತೆಲ್ಲವೂ ನಾಶವಾಗಿ ಯಾರೂ ಬದ್ಧರಿಲ್ಲವೆಂದಾಗಿ ಬಿಟ್ಟೀತು!

**೨೨. ತದ್ರೂಪತ್ವೇ ಸಾದಿತ್ವಮ್ ॥ ೫-೧೯**

ಒಂದು ವೇಳೆ ವಿದ್ಯೆಯಿಂದ ಬಾಧಿತವಾಗುವುದೇ ಅವಿದ್ಯೆಯ ಲಕ್ಷಣವೆಂದು ಹೇಳಿದರೂ ಅವಿದ್ಯೆಯು ಸಾದಿಯೆಂದೇ ಸಿದ್ಧವಾಗುತ್ತದೆ. ಏಕೆಂದರೆ, ಆತ್ಮನು ವಿಜ್ಞಾನ ಘನನೆಂದು ಶ್ರುತಿಯು ಹೇಳುವುದರಿಂದ ನಡುವೆ ಯಾವಾಗಲೋ ಅವಿದ್ಯೆ ಹುಟ್ಟಿತೆಂದು ಹೇಳಬೇಕಾಗುತ್ತದೆ. ಅದು ಸಾದಿಯೆಂದಾದರೆ, ಹಿಂದೆ ಹೇಳಿದಂತೆ ಅನ್ಯೋನ್ಯಾಶ್ರಯ ದೋಷವು ತಪ್ಪುವುದಿಲ್ಲ.

**೨೩. ನಾನಿರ್ವಚನೀಯಸ್ಯ ತದಭಾವಾತ್ ॥ ೫-೫೪**

ಜಗತ್ತು ಅನಿರ್ವಚನೀಯವೆಂದು ಅದ್ವೈತಿಗಳು ಹೇಳುತ್ತಾರೆ. ಅನಿರ್ವಚನೀಯದ ಜ್ಞಾನವು ನಮಗಾಗುತ್ತದೆ ಎನ್ನುವುದು ಸರಿಯಲ್ಲ. ಅನಿರ್ವಚನೀಯವೆಂಬುದೇ ಇಲ್ಲ. ಯಾವುದೇ ವಸ್ತು ಸತ್ ಆಗಿರುತ್ತದೆ, ಅಥವಾ ಅಸತ್ ಆಗುತ್ತದೆ. ಇವೆರಡೂ ಅಲ್ಲದ ವಸ್ತು ಅನುಭವಕ್ಕೆ ಬರುವುದಿಲ್ಲ.

**೨೪. ನಾದ್ವೈತಮಾತ್ಮನೋ ಲಿಂಗಾತ್ ತದ್ಭೇದಪ್ರತೀತೇಃ ॥ ೫-೬೧**

ಆತ್ಮನು ಅದ್ವೈತನಾಗಿದ್ದಾನೆ, ಆತ್ಮನಿಗಿಂತ ಇನ್ನೊಂದು ವಸ್ತುವೇ ಇಲ್ಲ - ಎಂಬ ಮಾತು ಸರಿಯಲ್ಲ. 'ಅಜಾಮೇಕಾಂ ಲೋಹಿತ ಶುಕ್ಲಕೃಷ್ಣಾಂ' ಎಂಬ ಶ್ರುತಿಯಲ್ಲಿ ಆತ್ಮನು ಪ್ರಕೃತಿಯನ್ನು ತ್ಯಜಿಸುತ್ತಾನೆಂದು ಹೇಳಿದೆ. ತ್ಯಜಿಸಬೇಕಾದರೆ ಪ್ರಕೃತಿಯೆಂಬುದು ಇದ್ದೇ ಇರಬೇಕಷ್ಟೆ. ತ್ಯಾಗವೆಂಬ ಈ ಲಿಂಗದಿಂದಲೇ ಆತ್ಮನಿಗಿಂತ ಅತಿರಿಕ್ತವಾದ ಪ್ರಕೃತಿಯಿದೆಯೆಂದು ಸಿದ್ಧವಾಗುತ್ತದೆ.

**೨೫. ನಾನಾತ್ಮನಾಽಪಿ, ಪ್ರತ್ಯಕ್ಷಬಾಧಾತ್ ॥ ೫-೬೨**

ಅನಾತ್ಮವಾದ ಭೋಗ್ಯಪ್ರಪಂಚದೊಡನೆ ಆತ್ಮನಿಗೆ ಅಭೇದವನ್ನು ಒಪ್ಪುವುದರಿಂದ ಅದ್ವೈತವು ಸಿದ್ಧಿಸುತ್ತದೆ ಎಂದು ಹೇಳುವುದು ಸರಿಯಲ್ಲ. ಏಕೆಂದರೆ, ಇದು ಪ್ರತ್ಯಕ್ಷವಾಗಿ ಬಾಧಿತವಾದದ್ದು. ನಿಮ್ಮ ಪಕ್ಷದಲ್ಲಿ ಘಟಾಭಿನ್ನವಾದ ಆತ್ಮವೂ ಪಟಾಭಿನ್ನವಾದ ಆತ್ಮವೂ ಒಂದೇ ಆಗುವುದರಿಂದ ಘಟಪಟಗಳೂ ಅಭಿನ್ನವೆಂದು ಹೇಳುವ ಪ್ರಸಂಗ ಬರುತ್ತದೆ.

**೨೬. ನೋಭಾಭ್ಯಾಂ ತೇನೈವ ॥ ೫-೬೩**

ಆತ್ಮ-ಅನಾತ್ಮಗಳೊಡನೆ ಇನ್ನೊಂದು ಅನಾತ್ಮಕ್ಕೆ ಅಭೇದವನ್ನು ಹೇಳಲೂ ಆಗುವುದಿಲ್ಲ. ಏಕೆಂದರೆ, ಅನಾತ್ಮವನ್ನೊಪ್ಪಿದಾಗ ಅದ್ವೈತವು ಸಿದ್ಧಿಸುವುದಿಲ್ಲ. ಅಲ್ಲದೆ ಈ ಪಕ್ಷದಲ್ಲಿಯೂ ಘಟಪಟಗಳಿಗೆ ಅಭೇದದ ಪ್ರಸಂಗ ಇದ್ದೇ ಇದೆ.

**೨೭. ಅನ್ಯಪರತ್ವಮವಿವೇಕಾನಾಂ ತತ್ರ ॥ ೫-೬೪**

ಅದ್ವೈತ ಶ್ರುತಿಯು ಬೇರೊಂದು ಅಭಿಪ್ರಾಯದಿಂದ ಹೊರಟಿದೆ. ಚಿತ್ತಶುದ್ಧಿಗಾಗಿ ಉಪಾಸನೆಯನ್ನೂ ಅಜ್ಞಾನಿಗಳು ಮಾಡಬೇಕಾಗುತ್ತದೆ. ದೇಹಾತ್ಮಗಳು ಒಂದೇ ಎಂದು ತಿಳಿದಿರುವ ಅವಿವೇಕಿಗಳಾದ ಜನರು 'ಸೋಽಹಂ' ಭಾವದಿಂದ ಉಪಾಸನೆ ಮಾಡಲೆಂಬುದೇ ಅದ್ವೈತಶ್ರುತಿಗಳ ಅಭಿಪ್ರಾಯ.

**೨೮. ನಾತ್ಮಾವಿದ್ಯಾ ನೋಭಯಂ ಜಗದುಪಾದನಕಾರಣಂ ನಿಃಸಂಗತ್ವಾತ್ ॥ ೫-೬೫**

ಆತ್ಮನು ಅಸಂಗನಾಗಿರುವುದರಿಂದ ಕೇವಲಾತ್ಮನಾಗಲಿ, ಅವಿದ್ಯೆಯಾಗಲಿ, ಇವೆರಡು ಸೇರಿಯಾಗಲಿ ಜಗತ್ತಿಗೆ ಉಪಾದಾನಕಾರಣವಲ್ಲ. ಇನ್ನೊಂದು ವಸ್ತುವಿನೊಡನೆ ಸಂಯೋಗವಾದಾಗಲೇ ಅದರಲ್ಲಿ ವಿಕಾರವುಂಟಾಗಿ ಬೇರೆ ವಸ್ತುವಾಗುತ್ತದೆ. ಆದ್ದರಿಂದ ಕೇವಲಾತ್ಮನು ಉಪಾದಾನವಲ್ಲ. ಅವಿದ್ಯೆಯೊಡನೆ ಅಸಂಗನಿಗೆ ಸಂಯೋಗವಾಗುವುದೇ

ಇಲ್ಲ. ಅಸಂಗನಾದ್ದರಿಂದಲೇ ಉಭಯವೂ ಸೇರಿ ಉಪಾದಾನ-ವಾಗುವುದಿಲ್ಲ. ಆದ್ದರಿಂದ ಆತ್ಮನು ಜಗತ್ತಿಗೆ ಉಪಾದಾನಕಾರಣನೆಂಬ ಅದ್ವೈತಿಗಳ ಹೇಳಿಕೆ ಅಸಂಗತವಾದದ್ದು.

**೨೯. ನೈಕಸ್ಯ ಆನಂದಚಿದ್ರೂಪತ್ವೇ ದ್ವಯೋರ್ಭೇದಾತ್ ॥ ೫-೬೬**

ಆತ್ಮನು ಒಟ್ಟಿಗೆ ಆನಂದಸ್ವರೂಪನೂ ಜ್ಞಾನಸ್ವರೂಪನೂ ಆಗಿದ್ದಾನೆ ಎಂಬುದು ಯುಕ್ತವಲ್ಲ. ಆನಂದವೇ ಬೇರೆ, ಜ್ಞಾನವೇ ಬೇರೆ. ಜ್ಞಾನ-ದಿಂದಲ್ಲವೇ ಆನಂದವನ್ನು ತಿಳಿಯುವುದು ? ಆತ್ಮನಿಗೆ ದುಃಖವಾದರೂ ಸಹ ಜ್ಞಾನದಿಂದಲೇ ತಿಳಿಯಬೇಕು. ಆತ್ಮನಲ್ಲಿ ಆನಂದ, ಜ್ಞಾನ-ಎಂಬ ಎರಡು ಅಂಶಗಳಿಲ್ಲ.

**೩೦. ನಾನಂದಾಭಿವ್ಯಕ್ತಿರ್ಮುಕ್ತಿಃ ನಿರ್ಧರ್ಮತ್ವಾತ್ ॥ ೫-೭೪**

ಆತ್ಮನಲ್ಲಿ ಆನಂದದ ಅಭಿವ್ಯಕ್ತಿಯೇ ಮುಕ್ತಿ ಎನ್ನುವುದು ತಪ್ಪು. ಏಕೆಂದರೆ, ಆತ್ಮನು ನಿರ್ಗುಣನಾದ್ದರಿಂದ ಆನಂದವೆಂಬ ಧರ್ಮವು ಅವನಲ್ಲಿ ಎಂದಿಗೂ ತೋರದು. ಧರ್ಮವೆಂದರೆ ಗುಣ.

**೩೧. ಉಪಾಧಿಶ್ಚೇತ್ ತತ್ಸಿದ್ಧೌ ಪುನರ್ದ್ವೈತಮ್ ॥ ೬-೪೬**

ಏಕಾತ್ಮನಾದರೆ ಬಂಧ-ಮೋಕ್ಷ ವ್ಯವಸ್ಥೆಯು ಉಪಾಧಿಯನ್ನೊಪ್ಪಿ-ದರೂ ಸಿದ್ಧಿಸುವುದಿಲ್ಲವೆಂದು ಹಿಂದೆ ಹೇಳಿದ್ದಾಗಿದೆ. ಅಲ್ಲದೆ ಉಪಾಧಿಯನ್ನೊಪ್ಪಿಸಿದರೆ ನಿಮಗೆ ಅದ್ವೈತವೇ ಸಿದ್ಧಿಸುವುದಿಲ್ಲ. ದ್ವೈತವೇ ಪ್ರಾಪ್ತವಾಗುತ್ತದೆ.

**೩೨. ದ್ವಾಭ್ಯಾಮಪಿ ಪ್ರಮಾಣವಿರೋಧಃ ॥ ೬-೪೭**

ಉಪಾಧಿಗಳೆಲ್ಲವೂ ಅವಿದ್ಯಾಕಲ್ಪಿತಗಳಾದ್ದರಿಂದ ಅದ್ವೈತಕ್ಕೆ ಚ್ಯುತಿಯಿಲ್ಲ-ವೆನ್ನುವುದೂ ಸರಿಯಲ್ಲ. ಆಗ ಅವಿದ್ಯೆಯನ್ನೊಪ್ಪಬೇಕಾಗುವುದರಿಂದ ಆತ್ಮ, ಅವಿದ್ಯೆ - ಎಂಬ ಎರಡು ಪದಾರ್ಥಗಳಾಗುತ್ತದೆ. ಆಗ ಅದ್ವೈತ ಶ್ರುತಿಗೆ ವಿರೋಧವೇ ಘಟಿಸುತ್ತದೆ.

೩೩. ದ್ವಾಭ್ಯಾಮಪ್ಯವಿರೋಧಾನ್ನ ಪೂರ್ವಮುತ್ತರಂ ಚ ಸಾಧಕಾಭಾವಾತ್ ॥ ೬-೪೮

ಆತ್ಮ, ಅವಿದ್ಯೆಗಳೆರಡನ್ನೊಪ್ಪಿದರೆ ಸಾಂಖ್ಯರಾದ ನಮಗೂ ನಿಮಗೂ ವಿರೋಧವೇ ಇಲ್ಲ. ನಾವೂ ಪುರುಷ, ಪ್ರಕೃತಿ - ಎಂಬ ಎರಡು ಪದಾರ್ಥಗಳನ್ನೊಪ್ಪಿದ್ದೇವೆ. ಆದ್ದರಿಂದ ನಿಮ್ಮ ಪೂರ್ವ ಪಕ್ಷವು ನಿಲ್ಲದು. ಸಾಂಖ್ಯರು ಅನೇಕ ಪುರುಷರನ್ನು ಒಪ್ಪಿದರೆ, ನಾವು ಅದನ್ನೊಪ್ಪುವುದಿಲ್ಲ-ವೆಂದು ನೀವು ಉತ್ತರವನ್ನು ಹೇಳಿದರೆ, ಅದು ನಿಲ್ಲುವುದಿಲ್ಲ. ಆತ್ಮನಿದ್ದಾನೆಂಬುದಕ್ಕೆ ವೇದಾಂತಿಗಳಿಗೆ ಪ್ರಮಾಣವೇನು ? ಶ್ರುತಿಯೆಂದು ಹೇಳುತ್ತೀರಿ. ಅದು ನಿಮಗೆ ಸಾಧಕವಲ್ಲ. ನಿಮ್ಮ ಮತದಲ್ಲಿ ಶ್ರುತಿಯೇ ಇಲ್ಲವಷ್ಟೆ ! ಶ್ರುತಿಯನ್ನೊಪ್ಪಿದರೆ ಅದ್ವೈತಹಾನಿ !

೩೪. ಪ್ರಕಾಶತಸ್ತತ್‌ಸಿದ್ಧೌ ಕರ್ಮಕರ್ತೃವಿರೋಧಃ ॥ ೪-೪೯

ಆತ್ಮನು ಪ್ರಕಾಶವಾಗಿ ನಮಗೆ ತೋರುತ್ತಾನೆ. ಅದಕ್ಕೆ ಶ್ರುತಿಯು ಬೇಕಾಗಿಲ್ಲ - ಎಂದರೆ ಆತ್ಮನು ಪ್ರಕಾಶ್ಯನೆಂದಾಯಿತು. ಆಗ ಪ್ರಕಾಶಕವು ಯಾವುದು ? ಆತ್ಮನು ಸ್ವಯಂ ಪ್ರಕಾಶನೆನ್ನುವುದು ಅಯುಕ್ತ. ಒಬ್ಬನೇ ಪ್ರಕಾಶ್ಯನೂ ಪ್ರಕಾಶಕನೂ ಆಗುವುದಿಲ್ಲ. ಒಬ್ಬನೇ ಕರ್ಮವೂ ಹೌದು ಕರ್ತೃವೂ ಹೌದು ಎನ್ನುವುದು ಶಾಸ್ತ್ರ ವಿರುದ್ಧ.

೩೫. ಜಡವ್ಯಾವೃತ್ತೋ ಜಡಂ ಪ್ರಕಾಶಯತಿ ಚಿದ್ರೂಪಃ ॥ ೬-೫೦

ಅದ್ವೈತಿ :- ಸೂರ್ಯನಲ್ಲಿರುವ ಪ್ರಕಾಶವು ಸೂರ್ಯನನ್ನು ಪ್ರಕಾಶಗೊಳಿಸುತ್ತದೆ. ಆತ್ಮನಲ್ಲಿರುವ ಜ್ಞಾನವು ಆತ್ಮನನ್ನು ವಿಷಯೀ-ಕರಿಸುತ್ತದೆ ಎಂದು ವೈಶೇಷಿಕರು ಒಪ್ಪಿದ್ದಾರೆ. ಹಾಗೆಯೇ ಆತ್ಮನಲ್ಲಿರುವ ಪ್ರಕಾಶವು ಆತ್ಮನನ್ನು ಪ್ರಕಾಶಿಸುತ್ತದೆ ಎಂದರೆ ತಪ್ಪೇನು?

ಸಾಂಖ್ಯ :- ಹಾಗಲ್ಲ. ಆತ್ಮನಲ್ಲಿ ಪ್ರಕಾಶವೆಂಬ ಯಾವ ಧರ್ಮವೂ ಇಲ್ಲ. ಅವನೇ ಸ್ವತಃ ಚಿದ್ರೂಪ (ಪ್ರಕಾಶರೂಪ)ನಾಗಿದ್ದಾನೆ. ಅವನು ಜಡ-ವಸ್ತುವನ್ನು ಪ್ರಕಾಶಗೊಳಿಸುತ್ತಾನೆ. ಆದ್ದರಿಂದ ಚಿದ್ರೂಪನೆನಿಸುತ್ತಾನೆ.

**೩೬. ನ ಶ್ರುತಿವಿರೋಧೋ ರಾಗಿಣಾಂ ವೈರಾಗ್ಯಾಯ ತತ್ಸಿದ್ಧೇಃ ॥**

೬-೫೧

ಅದ್ವೈತಿ :- ಪುರುಷ, ಪ್ರಕೃತಿಗಳೆರಡನ್ನೂ ಅಂಗೀಕರಿಸಿದರೆ ದ್ವೈತವಾಗುತ್ತದೆ. ಆಗ 'ನೇಹ ನಾನಾಸ್ತಿ ಕಿಂಚನ', 'ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ' ಇತ್ಯಾದಿ ಶ್ರುತಿಗಳಿಗೆ ವಿರೋಧ ಬರುತ್ತದೆ.

ಸಾಂಖ್ಯ :- ಇಲ್ಲ; ಆ ಶ್ರುತಿಗಳು ಉಪಾಸಕನಿಗೆ ವೈರಾಗ್ಯ-ವನ್ನುಂಟುಮಾಡುವುದಕ್ಕಾಗಿ ಬಂದಿವೆ. 'ವಿಷಯ ಭೋಗಕ್ಕಾಗಿ ಆಸೆ ಪಡಬಾರದು. ಏಕೆಂದರೆ, ವಿಷಯಗಳೇ ಇಲ್ಲ. ಅವು ಭ್ರಾಂತಿಯಿಂದ ಕಾಣತಕ್ಕವು' ಎಂದು ಬೋಧಿಸಿ ವೈರಾಗ್ಯವನ್ನುಂಟುಮಾಡುವುದಕ್ಕಾಗಿ ಅದ್ವೈತ ಶ್ರುತಿಗಳು ಸಿದ್ಧವಾಗಿರುತ್ತದೆ. ಅದ್ವೈತಜ್ಞಾನದಿಂದ ಬೇರೆ ಫಲವಿದೆಯೆಂದು ವೇದವು ಹೇಳಿಯೂ ಇಲ್ಲ.

**೩೭. ಜಗತ್‌ಸತ್ಯತ್ವಮದುಷ್ಟಕಾರಣಜನ್ಯತ್ವಾತ್ ಬಾಧಕಾಭಾವಾತ್॥**

೬-೫೨

ಅದ್ವೈತಿ :- ಸ್ವಪ್ನದಲ್ಲಿ ಕಾಣುವ ವಸ್ತು ಹೇಗೆ ಮಿಥ್ಯೆಯೋ ಹಾಗೆ ಈ ಜಗತ್ತು ಮಿಥ್ಯೆಯೇ ಸರಿ. ಅದ್ವೈತ ಶ್ರುತಿಗಳಿಂದ ಜಗತ್ತು ಮಿಥ್ಯೆಯೆಂದು ಗೊತ್ತಾಗುತ್ತದೆ.

ಸಾಂಖ್ಯ :- ಇಲ್ಲ, ಸ್ವಪ್ನಕ್ಕೆ ಕಾರಣವಾದ ನಿದ್ರೆಯು ತಮೋಗುಣದ ದೋಷದಿಂದ ಆದದ್ದು. ಈ ದುಷ್ಟ ಕಾರಣದಿಂದ ಕಂಡ ಕನಸಿನ ವಸ್ತು ಮಿಥ್ಯೆ ಎನ್ನುವುದು ಸರಿ. ಮತ್ತು ಎಚ್ಚರವಾದ ಮೇಲೆ ಅದೆಲ್ಲವೂ ಬಾಧಿತವಾಗುತ್ತದೆ. ಜಗತ್ತು ಹಾಗಲ್ಲ. ಇದು ಪ್ರಕೃತಿಯಿಂದ ಹುಟ್ಟಿದ್ದು. ಕಾರಣವು ದುಷ್ಟವಾದ್ದಲ್ಲ. ಅಲ್ಲದೆ ಈ ಜಗತ್ತು ಸ್ವಪ್ನದ ವಸ್ತುವಿನಂತೆ ಬಾಧಿತವಾಗುವುದು ಇಲ್ಲ. ಆದ್ದರಿಂದ ಜಗತ್ತು ಸತ್ಯವೇ ಸರಿ.

ಮೇಲ್ಕಂಡ ಸಾಂಖ್ಯ ಸೂತ್ರಗಳಲ್ಲಿ ಅನುವಾದಿಸಿರುವ ವಿಷಯ-ಗಳೆಲ್ಲವೂ ಅದ್ವೈತ ಸಿದ್ಧಾಂತಕ್ಕೆ ಸಂಬಂಧಿಸಿದವೆಂಬುದು ಸ್ಫುಟವಾಗಿದೆ. ಇಲ್ಲಿ ಸಾಂಖ್ಯರು ಹೇಳುವ ಉತ್ತರಗಳಲ್ಲೊಂದೂ ನಿಲ್ಲುವುದಿಲ್ಲ. ಅವೆಲ್ಲವನ್ನೂ ವೇದಾಂತ ಗ್ರಂಥಗಳಲ್ಲಿ ಖಂಡಿಸಿದ್ದಾರೆ.

ಶ್ರೀ

# ವ್ಯಾಸಾಷ್ಟಕಮ್

ನಮೋ ಜ್ಞಾನಾನಲಶಿಖಾ-ಪುಂಜಪಿಂಜಜಟಾಭೃತೇ ।
ಕೃಷ್ಣಾಯಾಕೃಷ್ಣಮಹಸೇ ಕೃಷ್ಣದ್ವೈಪಾಯನಾಯ ತೇ ॥ ೧

ನಮಸ್ತೇಜೋಮಯಶ್ಮಶ್ರು-ಪ್ರಭಾಶಬಲಿತತ್ವಿಷೇ ।
ವಕ್ತ್ರವಾಗೀಶ್ವರೀಪದ್ಮ-ರಜಸೇವೋದಿತಶ್ರಿಯೇ ॥ ೨

ನಮಃ ಸಂಧ್ಯಾಸಮಾಧಾನ-ನಿಷ್ಪೀತರವಿತೇಜಸೇ ।
ತ್ರೈಲೋಕ್ಯತಿಮಿರೋಚ್ಛೇದ-ದೀಪಪ್ರತಿಮಚಕ್ಷುಷೇ ॥ ೩

ನಮಃ ಸಹಸ್ರಶಾಖಾಯ ಧರ್ಮೋಪವನಶಾಖಿನೇ ।
ಸತ್ತ್ವಪ್ರತಿಷ್ಠಾಪುಷ್ಪಾಯ ನಿರ್ವಾಣಫಲಶಾಲಿನೇ ॥ ೪

ನಮಃ ಕೃಷ್ಣಾಜಿನಜುಷೇ ಬೋಧನಂದನವಾಸಿನೇ ।
ವ್ಯಾಪ್ತಾಯೇವಾಲಿಜಾಲೇನ ಪುಣ್ಯಸೌರಭಲಿಪ್ಸಯಾ ॥ ೫

ನಮಃ ಶಶಿಕಲಾಕಾರ-ಬ್ರಹ್ಮಸೂತ್ರಾಂಶುಶೋಭಿನೇ ।
ಶ್ರಿತಾಯ ಹಂಸಕಾಂತ್ಯೇವ ಸಂಪರ್ಕಾತ್ ಕಮಲೌಕಸಃ ॥ ೬

ನಮೋ ವಿದ್ಯಾನದೀಪೂರ್ಣ-ಶಾಸ್ತ್ರಾಬ್ಧಿಸಕಲೇಂದವೇ ।
ಪೀಯೂಷರಸಸಾರಾಯ ಕವಿವ್ಯಾಪಾರವೇಧಸೇ ॥ ೭

ನಮಃ ಸತ್ಯನಿವಾಸಾಯ ಸ್ವವಿಕಾಶವಿಲಾಸಿನೇ ।
ವ್ಯಾಸಾಯ ಧಾಮ್ನೇ ತಪಸಾಂ ಸಂಸಾರಾಯಾಸಹಾರಿಣೇ ॥ ೮

✡

ಇತಿ ವ್ಯಾಸಾಷ್ಟಕಂ ಕೃತ್ವಾ ಮಹಾಭಾರತಮಂಜರೀಮ್ ।
ಸ ಚಕ್ರೇ ವಿಬುಧಾನಂದ-ಸುಧಾಸ್ಯಂದತರಂಗಿಣೀಮ್ ॥

-ಕ್ಷೇಮೇಂದ್ರ



## ವಿದ್ವಾನ್ ಎನ್. ರಂಗನಾಥಶರ್ಮಾ

ಶಿವಮೊಗ್ಗಜಿಲ್ಲೆಯ ಸೊರಬದ ಸಮೀಪದಲ್ಲಿರುವ ನಡಹಳ್ಳಿಯಲ್ಲಿ ತಾ. 7-4-1916ರಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವಾದ ಮೇಲೆ ಬೆಂಗಳೂರಿಗೆ ಬಂದು ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅಧ್ಯಯನಮಾಡಿ ವ್ಯಾಕರಣಶಾಸ್ತ್ರ, ಅಲಂಕಾರಶಾಸ್ತ್ರಗಳಲ್ಲಿ ವಿದ್ವತ್‌ಪದವಿಯನ್ನು ಗಳಿಸಿದರು. ಮಾಧ್ಯಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಕೆಲವು ಕಾಲ ಸಂಸ್ಕೃತದ ಉಪಾಧ್ಯಾಯರಾಗಿದ್ದು, ಅನಂತರ ಮೇಲ್ಕಂಡ ಸಂಸ್ಕೃತಮಹಾಪಾಠಶಾಲೆಯಲ್ಲಿಯೇ ವ್ಯಾಕರಣಶಾಸ್ತ್ರದ ಅಧ್ಯಾಪಕರಾಗಿ ನಿಯುಕ್ತರಾದರು. ವ್ಯಾಕರಣ ಶಾಸ್ತ್ರದಲ್ಲಿಯೇ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

ಶ್ರೀರಂಗನಾಥಶರ್ಮರು ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿದ್ವಾನ್ ಮತ್ತು ಮೈಸೂರಿನ ಕನ್ನಡ ಪಂಡಿತಪರೀಕ್ಷೆಗಳನ್ನು ಮಾಡಿಕೊಂಡಿದ್ದಾರೆ. ವಾಲ್ಮೀಕಿ ರಾಮಾಯಣ, ಶ್ರೀ ವಿಷ್ಣುಪುರಾಣ, ಭಾಗವತದ 10- 11- 12ನೆಯ ಸ್ಕಂಧಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಸಂಸ್ಕೃತ ಮತ್ತು ಕನ್ನಡದಲ್ಲಿ ಸುಮಾರು 45 ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯಪರಿಷತ್ತಿನಲ್ಲಿ ಹಳಗನ್ನಡ ಕಾವ್ಯಗಳ ಅನುವಾದಕ ಮಂಡಲಿಯ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ನೂರಾರು ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಸಂಸ್ಕೃತ ವಿದ್ವಾಂಸರ ವಿವಿಧ ವಾಕ್ಯಾರ್ಥ ಸಭೆಗಳಲ್ಲಿ ಭಾಗವಹಿಸಿದ್ದಾರೆ. ಸಂಸ್ಕೃತ ಅಧ್ಯಾಪಕರಿಗೆ ಸಲ್ಲುವ ರಾಷ್ಟ್ರಪ್ರಶಸ್ತಿಯನ್ನೂ ಸಂಸ್ಕೃತವಿದ್ವಾಂಸರಿಗೆ ಸಲ್ಲುವ ರಾಷ್ಟ್ರಪತಿಪ್ರಶಸ್ತಿಯನ್ನೂ ಪಡೆದಿದ್ದಾರೆ. ಅಲ್ಲದೆ ಸಂಸ್ಕೃತ ಪಂಡಿತರಿಗೆ ಕೊಡುವ ರಾಜ್ಯಪ್ರಶಸ್ತಿಯೂ ಸಾಹಿತ್ಯಸೇವೆಗಾಗಿ ಕೊಡುವ ರಾಜ್ಯೋತ್ಸವ ಪ್ರಶಸ್ತಿಯನ್ನೂ ಇವರಿಗೆ ಸಂದಿವೆ.

ಈ ''ವ್ಯಾಸತಾತ್ಪರ್ಯನಿರ್ಣಯ''ದ ಕನ್ನಡ ಅನುವಾದಕ್ಕೆ ಪಶ್ಚಿಮಾಮ್ನಾಯ ದ್ವಾರಕಾಪೀಠದ ಹಿಂದಿನ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ಸಚ್ಚಿದಾನಂದ ತೀರ್ಥಮಹಾಸ್ವಾಮಿಗಳಿಂದ ಪಾರಿತೋಷಿಕ ಲಭಿಸಿದೆ.

Price : Rs. 45/- ಬೆಲೆ . ರೂ. ೪೫/-